# ಯೋಜನಾ

ವಿಶೇಷ ಸಂಚಿಕೆ

ಜುಲೈ 2023 ಅಭಿವೃದ್ಧಿ ಮಾಸಪತ್ರಿಕೆ ₹ 30















## ಸಹಕಾರದ ಮೂಲಕ ಸಮೃದ್ಧಿ

**ಪ್ರಧಾನ ಲೇಖನ**
**ಸಹಕಾರದಿಂದ ಸಮೃದ್ಧಿ ಯೋಜನೆಯಿಂದ ಸಾಕಾರದವರೆಗೆ**
ಅಮಿತ್ ಶಾ

**ಕೇಂದ್ರ ಪ್ರಜ್ಞೆ**
**ಸಹಕಾರ ಸಂಘಗಳ ಕಾರ್ಯತಂತ್ರದ ವೈವಿಧ್ಯೀಕರಣ**
ಡಾ. ಮನೀಶಾ ಪಾಲಿವಾಲ


**ವಿಶೇಷ ಲೇಖನ**
**ಡಿಜಿಟಲೀಕರಣದ ಮೂಲಕ ಸಶಕ್ತೀಕರಣ**
ಅಂಶು ಸಿಂಗ್

Scanned with ACE Scanner

# ರಾಷ್ಟ್ರೀಯ ನೀತಿ ವಾಹಕಗಳಾಗಲು ಸಹಕಾರಿಗಳಿಗೆ ಪ್ರಧಾನ ಮಂತ್ರಿ ಕರೆ

**ಪ್ರಧಾನ ಮಂತ್ರಿಯವರ ಭಾಷಣದ ಕನ್ನಡಾನುವಾದದ ಆಯ್ದ ಅವತರಣಿಕೆ**

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಜುಲೈ 1 ರಂದು ಅಂತಾರಾಷ್ಟ್ರೀಯ ಸಹಕಾರಿ ದಿನಾಚರಣೆಯ ಸಂದರ್ಭದಲ್ಲಿ ನವದೆಹಲಿಯ ಪ್ರಗತಿ ಮೈದಾನದಲ್ಲಿ 17ನೇ ಭಾರತೀಯ ಸಹಕಾರಿ ಕಾಂಗ್ರೆಸ್ ಅನ್ನು ಉದ್ದೇಶಿಸಿ ಮಾತನಾಡಿದರು.



ಪ್ರಧಾನ ಮಂತ್ರಿಗಳು ಇದೇ ಸಂದರ್ಭದಲ್ಲಿ 17 ನೇ ಭಾರತೀಯ ಸಹಕಾರಿ ಕಾಂಗ್ರೆಸ್‌ನ ಸಹಕಾರಿ ಮಾರ್ಕೆಟಿಂಗ್ ಮತ್ತು ಸಹಕಾರ ವಿಸ್ತರಣೆ ಮತ್ತು ಸಲಹಾ ಸೇವೆಗಳ ಪೋರ್ಟಲ್‌ಲಾಗಿ ಇ-ಕಾಮರ್ಸ್ ವೆಬ್‌ಸೈಟ್‌ನ ಇ-ಪೋರ್ಟಲ್‌ಗಳಿಗೂ ಚಾಲನೆ ನೀಡಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಯವರು ಎಲ್ಲರಿಗೂ ಸಹಕಾರಿ ದಿನದ ಅಭಿನಂದನೆ ಸಲ್ಲಿಸಿದರು ಮತ್ತು ದೇಶವು ವಿಕಸಿತ ಮತ್ತು ಆತ್ಮನಿರ್ಭರ ಭಾರತ' ಗುರಿಯತ್ತ ಕೆಲಸ ಮಾಡುತ್ತಿದೆ ಎಂದು ಹೇಳಿದರು. ದೇಶದ ಅನೇಕ ಭಾಗಗಳಲ್ಲಿ ಸಣ್ಣ ರೈತರಿಗೆ ಸಹಕಾರಿ ಸಂಘಗಳು ದೊಡ್ಡ ಬೆಂಬಲ ವ್ಯವಸ್ಥೆಯಾಗಿ ಮಾರ್ಪಟ್ಟಿವೆ. ಹೈನುಗಾರಿಕೆ ಕ್ಷೇತ್ರದಲ್ಲಿ ಮಹಿಳೆಯರ ಕೊಡುಗೆ ಸರಿಸುಮಾರು 60 ಪ್ರತಿಶತವಾಗಿದೆ, ಆದ್ದರಿಂದ, ವಿಕಸಿತ ಭಾರತದ ಗುರಿಗಳನ್ನು ಸಾಧಿಸಲು ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಸರ್ಕಾರ ನಿರ್ಧರಿಸಿದೆ ಎಂದು ಪ್ರಧಾನಿ ಹೇಳಿದರು. ಇದೇ ಮೊದಲ ಬಾರಿಗೆ ಪ್ರತ್ಯೇಕ ಸಚಿವಾಲಯವನ್ನು ರಚಿಸಿ ಸಹಕಾರಿ ಸಂಸ್ಥೆಗಳಿಗೆ ಬಜೆಟ್ ಮೀಸಲಿಟ್ಟಿದ್ದು, ಇದರ ಫಲವಾಗಿ ಕಾರ್ಪೊರೇಟ್ ವಲಯದಂತೆಯೇ ಸಹಕಾರಿ ಸಂಸ್ಥೆಗಳಿಗೂ ವೇದಿಕೆ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಅಮೃತ ಕಾಲದ ಸಂದರ್ಭದಲ್ಲಿ ಹಳ್ಳಿಗಳು ಮತ್ತು ರೈತರ ಬೆಳವಣಿಗೆಯಲ್ಲಿ ಸಹಕಾರಿ ಕ್ಷೇತ್ರದ ಪಾತ್ರ ದೊಡ್ಡದಾಗಿದೆ. "ಸರ್ಕಾರ್ ಮತ್ತು ಸಹಕಾರ್ [illegible] ಮತ್ತು ಸಹಕಾರಿ) ಒಟ್ಟಾಗಿ ವಿಕಸಿತ ಭಾರತದ [illegible] ಶಕ್ತಿಯನ್ನು ನೀಡುತ್ತವೆ". ಡಿಜಿಟಲ್ [illegible] ಮೂಲಕ ಸರ್ಕಾರವು ಪಾರದ[illegible] ಮತ್ತು ಫಲಾನುಭವಿಗಳಿಗೆ [illegible]ಸಿದೆ ಎಂದು ಅವರು ವಿವರಿಸಿದರು.

"ಭಾರತವು ತನ್ನ ಡಿಜಿಟಲ್ ವಹಿವಾಟುಗಳಿಗೆ ವಿಶ್ವದಲ್ಲೇ ಹೆಸರುವಾಸಿಯಾಗಿದೆ, ಡಿಜಿಟಲ್ ವಹಿವಾಟುಗಳಿಗೆ



ಜುಲೈ 2023 | ಸಂಚಿಕೆ–12 Issue-12 | ಸಂಪುಟ–38 Volume-38

# ಯೋಜನಾ
YOJANA Kannada

ಮುಖ್ಯ ಸಂಪಾದಕರು
**ಮನೋಗ್ಯಾನ್ ರಾಣಿಪಾಲ್**

ಹಿರಿಯ ಸಂಪಾದಕ
**ಯಶವಂತ್ ಶಹನಾಯಿ**

ನಮ್ಮ ಪ್ರತಿನಿಧಿಗಳು
ಅಹಮದಾಬಾದ್ : ಸುಮನ್‌ಬೆನ್ ಎ. ಮಚ್ಚರ್,
ಬೆಂಗಳೂರು : ಯಶವಂತ್ ಶಹನಾಯಿ
ಭುವನೇಶ್ವರ : ಇತಿಶ್ರೀ ಸಿಂಗ್ ರಾಥೂರ್
ಚೆನ್ನೈ : ಸಂಜಯ್ ಘೋಷ್
ಗುವಾಹತಿ : ಮಾರೂಫ್ ಆಲಂ
ಹೈದರಾಬಾದ್ : ಕೃಷ್ಣ ವಂದನಾ ಪಿ
ಜಲಂಧರ್ : ಗಗನ್‌ದೀಪ್ ಕೌರ್ ದೇವಗನ್
ಕೋಲ್ಕತ್ತಾ: ಸುಮಿತಾ ಚಕ್ರವರ್ತಿ
ಮುಂಬಯಿ : ಸಂಗೀತಾ ಗೋಡ್ಬೋಲೆ
ತಿರುವನಂತಪುರಂ : ಸುಧಾ ಎಸ್. ನಂಬೂದ್ರಿ

ಜಂಟಿ ನಿರ್ದೇಶಕರು (ಮುದ್ರಣ)
**ಡಿ.ಕೆ.ಸಿ. ಹೃದಯ್‌ನಾಥ್**

ಮುಖಪುಟ ವಿನ್ಯಾಸ
**ಬಿಂದೂ ವರ್ಮಾ**

ಯೋಜನೆಯ ಸಂದೇಶವನ್ನು ಎಲ್ಲ ಜನರಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಳಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in
www.publicationsdivision.nic.in

## ಈ ಸಂಚಿಕೆಯಲ್ಲಿ..........

ಸಂಪಾದಕೀಯ 2

ಸಹಕಾರದಿಂದ ಸಮೃದ್ಧಿ ಯೋಜನೆಯಿಂದ ಸಾಕಾರದವರೆಗೆ 3
* ಅಮಿತ್ ಶಾ

ಸಹಕಾರ ಸಂಘಗಳ ಕಾರ್ಯತಂತ್ರದ ವೈವಿಧ್ಯೀಕರಣ 15
* ಡಾ. ಮನೀಶಾ ಪಾಲಿವಾಲ

ಡಿಜಿಟಲೀಕರಣದ ಮೂಲಕ ಸಶಕ್ತೀಕರಣ 21
* ಅಂಶು ಸಿಂಗ್

ಭವಿಷ್ಯಕ್ಕಾಗಿ ಸಹಕಾರಿ ಸಂಸ್ಥೆಗಳ ಸನ್ನದ್ಧತೆ 27
* ಪ್ರೊ. ಹರೇಕೃಷ್ಣ ಮಿಶ್ರಾ

ಸಹಕಾರ ಸಂಸ್ಥೆಗಳಿಂದ ಆತ್ಮನಿರ್ಭರ್ ಭಾರತ್ 32
* ದೀನಾನಾಥ್ ಠಾಕೂರ್

ಅಮೇರಿಕ ಸಂಸತ್ತಿನ (ಕಾಂಗ್ರೆಸ್) ಜಂಟಿ ಅಧಿವೇಶನ ಉದ್ದೇಶಿಸಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಭಾಷಣ 35

ವಿಶ್ವಸಂಸ್ಥೆಯಲ್ಲಿ 9ನೇ ಯೋಗ ದಿನಾಚರಣೆ 36

ಸಹಕಾರಿ ಉದ್ಯಮಶೀಲತೆಯ ಬಲವರ್ಧನೆ 39
* ಸಾಗರ್ ಕಿಶನ್ ವಾಡ್ಕರ್

ಮೀನುಗಾರಿಕೆ; ಆರ್ಥಿಕ ವಿಕಾಸಕ್ಕೆ ಅವಕಾಶ 45
* ಬಿ. ಕೆ. ಮಿಶ್ರಾ

ಪ್ರಾಥಮಿಕ ಕೃಷಿ ಸಾಲ ಸಂಘಗಳಿಗೆ ಡ್ರೋನ್ 51
* ಸಚಿನ್ ಕುಮಾರ್

ಮರುಪೂರಣ ಕೃಷಿ ಸರಬರಾಜು ವ್ಯವಸ್ಥೆಯ ಸರಪಳಿ 55
* ಸ್ನೇಹಾ ಕುಮಾರಿ

ಸಾಲೇತರ ಸಹಕಾರಿಗಳಿಗಾಗಿ ಅಭಿವೃದ್ಧಿ ಮಾರ್ಗ 59
* ಡಾ. ಇಶಿತಾ ಜಿ. ತ್ರಿಪಾಠಿ ** ನಿತಿಶಾ ಮಾನ್

ಮನದ ಮಾತು 64

ಅಭಿವೃದ್ಧಿ ಮಾರ್ಗಸೂಚಿ 71

ನಿಮಗೆ ತಿಳಿದಿದೆಯೇ? 72

**ಯೋಜನಾ ಚಂದಾ ವಿವರ**
ಒಂದು ವರ್ಷಕ್ಕೆ 230.00
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.

ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್
Log on to
http://publicationsdivision.nic.in/,
in collaboration with bharatkosh.gov.in

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.

@ DPD_India @publicationsdivision @dpd_india

Scanned with ACE Scanner

ಸಂಪಾದಕೀಯ

# ಸಹಕಾರ ಸಂಘಗಳ ಪೋಷಣೆ




**ಹಳ್ಳಿಗಳ ಸ್ವಾವಲಂಬನೆಗೆ ಸಹಕಾರವು ಬಹುದೊಡ್ಡ ಮಾಧ್ಯಮವಾಗಿದೆ.**
**ಅದಕ್ಕೆ ಆತ್ಮ ನಿರ್ಭರ ಭಾರತದ ಶಕ್ತಿ ಇದೆ.**
**– ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ**

ಈ ಹಿಂದೆ 1976ರಲ್ಲಿ ಬಿಡುಗಡೆಯಾದ ಜನಸಮುದಾಯದ ಹಿಂದಿ ಚಲನಚಿತ್ರ ಮಂಥನ್, ಸಹಕಾರಿ ಶಕ್ತಿಯನ್ನು ಬೆಳ್ಳಿ ತೆರೆಯ ಮೇಲೆ ಬಹುಶಃ ಮೊಟ್ಟ ಮೊದಲ ಬಾರಿ ಪ್ರದರ್ಶಿಸಿದ ಚಲನಚಿತ್ರ. ರೈತಾಪಿ ಸಮಾಜದ ಹೈನು ಸಹಕಾರಿಗಳೇ ಈ ಚಿತ್ರದ ಕೇಂದ್ರ ಬಿಂದು. ಆ ಕಾಲದಲ್ಲಿ ಖಾದಿ, ಶ್ರೀ ಮಹಿಳಾ ಗೃಹ ಉದ್ಯೋಗ ಮೊದಲಾದ ಜನಪ್ರಿಯ ಸಹಕಾರಿಗಳು ಮನೆಮನೆಯನ್ನು ತಲುಪಿದ್ದವು ಹಾಗೂ ಮಹಿಳೆಯರನ್ನು ಸಶಕ್ತವಾಗಿಸಿದ್ದವು. ಸಹಕಾರಿ ಸಂಘಗಳು ಸಮಾಜದ ಸಾರ್ವಜನಿಕ ಹಿತಾಸಕ್ತಿ ಕಾಪಾಡಲು ರೂಪುಗೊಂಡ ಜನತಾಂತ್ರಿಕ ಆಡಳಿತದ ಅಡಿಪಾಯ ಮಟ್ಟದ ಸಂಸ್ಥೆಗಳಾಗಿವೆ. ಸಮುದಾಯದ ಸಾಮಾಜಿಕ ಆರ್ಥಿಕ ಉನ್ನತಿ ಇವುಗಳ ಮೂಲ ಉದ್ದೇಶವಾಗಿದ್ದು, ಇವು ಸಮುದಾಯದ ಜನರ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುತ್ತವೆ. ಇವು ಸಹಕಾರ, ಒಕ್ಕೂಟ ಲಾಭ ಮತ್ತು ಸಾಮಾಜಿಕ ಬಂಡವಾಳ ನಿರ್ಮಿತಿಯ ನೈಜ ಮಾದರಿಗಳಾಗಿವೆ. ಸಹಕಾರಿ ಸಂಸ್ಥೆಗಳು ಒಂದು ನೂರು ವರ್ಷಗಳಿಗೂ ಮೊದಲೇ ಅಸ್ತಿತ್ವಕ್ಕೆ ಬಂದು ಸತತವಾಗಿ ಕಾರ್ಯನಿರ್ವಹಿಸುತ್ತಿದ್ದರೂ ಕೂಡ ಒಟ್ಟಾರೆ ಚಿತ್ರಣ ನಿರ್ದಿಷ್ಟವಾಗಿ ಆಕರ್ಷಕವಾಗಿರಲಿಲ್ಲ. 'ಸಹಕಾರದಿಂದ ಸಮೃದ್ಧಿ' ಸಾಧಿಸುವ ಗುರಿಯೊಂದಿಗೆ ಕೇಂದ್ರಸರ್ಕಾರ ಪ್ರತ್ಯೇಕ 'ಸಹಕಾರ ಸಚಿವಾಲಯ'ವನ್ನು ಅಸ್ತಿತ್ವಕ್ಕೆ ತಂದಿತು. ಇದು ಸಹಕಾರಿ ಸಂಸ್ಥೆಗಳನ್ನು – ತಳಮಟ್ಟದವರೆಗೂ ತಲುಪುವಂತೆ ನೈಜ ಜನಾಧರಿತ ಆಂದೋಲವನ್ನಾಗಿ ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡ ಐತಿಹಾಸಿಕ ನಿರ್ಣಯವೆಂದು ಪರಿಗಣಿಸಲ್ಪಟ್ಟಿದೆ. ದೇಶದ ಸಹಕಾರಿ ಆಂದೋಲನವನ್ನು ಸದೃಢಗೊಳಿಸುವ ಬೃಹತ್ ಹೆಜ್ಜೆಯು ಇದಾಗಿದೆ. ಜನರನ್ನು ಬಂಡವಾಳದ ಸಮ್ಮುಖದಲ್ಲಿ ತರುವ, ಜನಕೇಂದ್ರಿತ ವ್ಯಾಪಾರವಾಗಿ ಕಾರ್ಯನಿರ್ವಹಿಸುವ, ತನ್ಮೂಲಕ ಸಹಕಾರಿ ಸಂಘಟನೆಗಳ ಶಕ್ತಿಯನ್ನು ಗುರುತಿಸುವ ಕ್ರಮವೂ ಇದೆನಿಸಿದೆ. ಸಹಕಾರ ಸಂಸ್ಥೆಗಳ ಉನ್ನತಿಗಾಗಿ ಪ್ರತ್ಯೇಕ ಆಡಳಿತಾತ್ಮಕ, ಕಾನೂನು ಹಾಗೂ ನೀತಿ ಚೌಕಟ್ಟನ್ನು ಒದಗಿಸುವ ಮೂಲಕ ಸಚಿವಾಲಯ ಇವುಗಳನ್ನು ಹೆಚ್ಚು ಸ್ಪರ್ಧಾತ್ಮಕಗೊಳಿಸಲಿದೆ. ಪ್ರಸ್ತುತ ಸಾಮಾಜಿಕ ಆರ್ಥಿಕ ಪರಿಸರದಲ್ಲಿ ಸಹಕಾರ ಸಂಸ್ಥೆಗಳನ್ನು ಲಾಭದಾಯಕವನ್ನಾಗಿ ಪರಿವರ್ತಿಸಲು ಇಂತಹ ವಿನ್ಯಾಸ ಬದಲಾವಣೆ ಅತ್ಯಗತ್ಯವೆನಿಸಿದೆ. ಜೆಮ್ ವೇದಿಕೆಗೆ ಸಹಕಾರಿ ಸೊಸೈಟಿಗಳಿಗೆ ಅವಕಾಶ, ಪ್ರಾಥಮಿಕ ಕೃಷಿ ಪತ್ತಿನ ಸೊಸೈಟಿ (ಪಿಎಸಿಎಸ್) ಗಳ ಕಂಪ್ಯೂಟರೀಕರಣ, ಬಹುರಾಜ್ಯ ಸಹಕಾರಿ ಸೊಸೈಟಿಗಳ ಬಲವರ್ಧನೆ – ಹೀಗೆ ವಿವಿಧ ಪ್ರಮುಖ ನೀತಿ – ಉಪಕ್ರಮಗಳಿಗೆ ಅನುಮೋದನೆ ಪಡೆಯುವಲ್ಲಿ ಸಚಿವಾಲಯ ಯಶ ಕಂಡಿದೆ.

ಇದಲ್ಲದೆ ಸಹಕಾರಿ ರಂಗಕ್ಕೆ ವ್ಯಾಪಾರ ಪರಿಸರ ಅಭಿವೃದ್ಧಿಪಡಿಸುವ ಮತ್ತು 'ಸುಲಭ ವ್ಯಾಪಾರ ನಿರ್ವಹಣೆ' ಯ ಪ್ರಕ್ರಿಯೆಯನ್ನು ಸಜ್ಜುಗೊಳಿಸಲು ಹಾಗೂ ವಿವಿಧ ಸಮಸ್ಯೆ, ಅಡೆತಡೆಗಳನ್ನು ಗುರುತಿಸಿ, ಸಂಕಲಿಸಿ, ವಿಶ್ಲೇಷಿಸಿ ಪರಿಹಾರಗಳನ್ನು ಒದಗಿಸುವಲ್ಲಿ ಸಹಕಾರ ಸಚಿವಾಲಯ ಸಕ್ರಿಯವಾಗಿ ಸಂಬಂಧಪಟ್ಟವರಿಗೆ ಸಹಯೋಗ ನೀಡುತ್ತಿದೆ. ಸಹಕಾರಿ ಕ್ಷೇತ್ರವನ್ನು ಇನ್ನಷ್ಟು ಸದೃಢಗೊಳಿಸಲು ಬಲವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿವಿಧ ಯೋಜನೆಗಳನ್ನು ಸಮಗ್ರಗೊಳಿಸಿ, ಸಹಕಾರಿ ರಂಗದಲ್ಲಿ ವಿಶ್ವದ ಅತಿದೊಡ್ಡ ಆಹಾರ ಧಾನ್ಯ ಸಂಗ್ರಹ ಯೋಜನೆ ಯೋಜಿಸಲಾಗುತ್ತಿದೆ. ಬೀಜ, ಸಾವಯವ ಮತ್ತು ರಫ್ತು ಹೀಗೆ ಮೂರು ಬಹುರಾಜ್ಯ ಸೊಸೈಟಿಗಳನ್ನು ರಚಿಸುವ ನಿರ್ಧಾರ, ಸಹಕಾರಿ ಕ್ಷೇತ್ರಕ್ಕೆ ನವಸಂಚಲನೆ ನೀಡಲಿದೆ. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನು – ಹೀಗೆ ವಿವಿಧ ಸಚಿವಾಲಯಗಳ ವಿವಿಧ ಯೋಜನೆಗಳನ್ನು ಒಗ್ಗೂಡಿಸಿ 'ಸಂಪೂರ್ಣ ಸರ್ಕಾರ' ದ ಕ್ರಮವಾಗಿ ಸದ್ಯ ವ್ಯಾಪ್ತಿಗೊಳಪಟ್ಟಿರದ ಪ್ರತಿ ಗ್ರಾಮ/ ಪಂಚಾಯತ್‌ನಲ್ಲಿ ಕಾರ್ಯಸಾಧು – ಪ್ರಾಥಮಿಕ ಕೃಷಿ ಪತ್ತಿನ ಸೊಸೈಟಿ, ಡೇರಿ ಸಹಕಾರ ಸಂಘ, ಕರಾವಳಿ ಪ್ರದೇಶಗಳಲ್ಲಿ ಹಾಗೂ ಜಲಮೂಲದ ಪ್ರದೇಶಗಳಲ್ಲಿ ಮೀನುಗಾರಿಕೆ ಸಹಕಾರ ಸೊಸೈಟಿ ಸ್ಥಾಪಿಸಲು ಯೋಜಿಸಲಾಗಿದೆ.

ಗ್ರಾಮೀಣ ಅಭಿವೃದ್ಧಿಗೆ ಆರ್ಥಿಕ ಮಾದರಿಯೊಂದನ್ನು ರೂಪಿಸುವಲ್ಲಿ ಸಹಕಾರಿಗಳ ಪಾತ್ರ ಮಹತ್ವದ್ದಾಗಿದೆ. ಸಹಕಾರಿ ಸಂಘಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ರಚಿಸಿರುವ ಸಹಕಾರ ಸಚಿವಾಲಯದ ಉಪಕ್ರಮದಿಂದ ಪಾರದರ್ಶಕತೆ ಬರಲಿದೆ ಹಾಗೂ ಸಹಕಾರ ಸಂಘಗಳ ವ್ಯಾಪ್ತಿ ಖಂಡಿತವಾಗಿ ದೇಶದ ತಳಮಟ್ಟಕ್ಕೂ ಪಸರಿಸಲಿದೆ. ಪ್ರಸ್ತುತ ಯೋಜನಾ ಸಂಚಿಕೆ, ಸಹಕಾರ ಕ್ಷೇತ್ರದಲ್ಲಿ ನಡೆದಿರುವ ಈ ಕ್ರಾಂತಿ ಹಾಗೂ ದೇಶದ ಅಭಿವೃದ್ಧಿಯಲ್ಲಿ ಸಹಕಾರಿ ರಂಗದ ಅನಿವಾರ್ಯ, ಅಗತ್ಯ ಪಾತ್ರ ಕುರಿತಾದ ವ್ಯಾಪಕ ಚರ್ಚೆಯ ಒಂದು ಭಾಗವಾಗಲು ಉದ್ದೇಶಿಸಿದೆ. ಸಂಚಿಕೆಯಲ್ಲಿ ತಜ್ಞರು ಪ್ರಸ್ತುತಪಡಿಸಿರುವ ಒಳನೋಟಗಳು ಸ್ವಾವಲಂಬನೆಯನ್ನು ಪ್ರವರ್ತಿಸುವ / ಉತ್ತೇಜಿಸುವ ಜೊತೆಗೆ ಸಮುದಾಯಗಳನ್ನು ಒಟ್ಟಿಗೆ ತರುವ ಸಹಕಾರಿ ಕ್ಷೇತ್ರದ ಸಾಮರ್ಥ್ಯ ಕುರಿತಾದ ನಮ್ಮ ಓದುಗರ ತಿಳವಳಿಕೆಯನ್ನು ವಿಸ್ತರಿಸುತ್ತವೆ ಎಂದು ಆಶಿಸಲಾಗಿದೆ.




Scanned with ACE Scanner

# ಸಹಕಾರದಿಂದ ಸಮೃದ್ಧಿ ಯೋಜನೆಯಿಂದ ಸಾಕಾರದವರೆಗೆ

* ಅಮಿತ್ ಶಾ

**ಭಾರತವು 'ಸ್ವಾತಂತ್ರ್ಯದ ಅಮೃತ ಕಾಲ'ದಲ್ಲಿ ಸಹಕಾರದ ಕಾರ್ಯ-ವಿಧಾನದ ಮೂಲಕ ವಿಶ್ವದ ಮುಂಚೂಣಿ ಆರ್ಥಿಕತೆಗಳಲ್ಲಿ ಒಂದಾಗಿ ಹೊರಹೊಮ್ಮಬೇಕಿದೆ. ಇದಕ್ಕಾಗಿ 'ಸ್ವಾತಂತ್ರ್ಯದ ಅಮೃತ ಮಹೋತ್ಸವ'ವನ್ನು ಸಂಭ್ರಮಿಸುತ್ತಿರುವ ಈ ಹೊತ್ತಿನಲ್ಲಿ ನಾವೆಲ್ಲರೂ ನಮ್ಮನ್ನು ನಾವು ಭವಿಷ್ಯಕ್ಕೆ ಸಜ್ಜುಗೊಳಿಸಿಕೊಳ್ಳಬೇಕಿದೆ. ಸಹಕಾರ ತತ್ವದಿಂದ ಮುನ್ನಡೆಸಲ್ಪಡುವ ಆರ್ಥಿಕತೆಯು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುವುದಲ್ಲದೆ, ಜಾಗತಿಕವಾಗಿ ಯೋಚಿಸುವಂತೆ ಸ್ಥಳೀಯ ಉದ್ಯಮಿಗಳನ್ನು ಪ್ರೇರೇಪಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ನಿಟ್ಟಿನಲ್ಲಿ ಸಹಕಾರ ಸಚಿವಾಲಯವು ಪ್ರಧಾನಿಯವರ 'ಸಹಕಾರ ಸೆ ಸಮೃದ್ಧಿ' (ಸಹಕಾರದಿಂದ ಸಮೃದ್ಧಿ) ಕನಸನ್ನು ನನಸಾಗಿಸಲು ಬದ್ಧವಾಗಿದೆ. 'ಪರಿಪೂರ್ಣ ಸರ್ಕಾರ'ದ ಕಾರ್ಯವಿಧಾನದ ಮೂಲಕ, ಸರ್ಕಾರದ ಉಪಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಏಕೀಕೃತ ಮತ್ತು ಸಂಘಟಿತ ಕಾರ್ಯವಿಧಾನ ಅನುಸರಿಸಲು ಸಚಿವಾಲಯವು ಸಂಕಲ್ಪ ತೊಟ್ಟಿದೆ.**




'ಸಹಕಾರ' ಎಂಬ ಪದವು ತಂಡದ 'ಧರ್ಮದರ್ಶಿತ್ವ' ಅಥವಾ 'ನ್ಯಾಸಧಾರಿತ್ವ'ವನ್ನು ಸೂಚಿಸುತ್ತದೆ. ಇದು 'ಸಹ' ಮತ್ತು 'ಕಾರ್ಯ' ಎಂಬ ಎರಡು ಪಾರಿಭಾಷಿಕ ಪ್ರತಿಪಾದನೆಗಳ ಮೂಲಕ 'ಒಟ್ಟಿಗೆ ಕೆಲಸ ಮಾಡುವುದು' ಎಂಬ ಅರ್ಥವನ್ನು ಧ್ವನಿಸುತ್ತದೆ. ಮಾನವ ಜೀವನದ ಹೆಚ್ಚುತ್ತಿರುವ ಸಂಕೀರ್ಣತೆಗಳು, ಈಡೇರದ ಆಧುನಿಕ ಸಾರ್ವಜನಿಕ ಆದ್ಯತೆಗಳು ಮತ್ತು ಆಕಾಂಕ್ಷೆಗಳು, ನಿರಂತರ ಪ್ರಗತಿ ಮತ್ತು ಸಮೃದ್ಧಿಯ ತುಡಿತ-ಅಗತ್ಯಗಳು ಹಾಗೂ ವಿವಿಧ ರೀತಿಯಲ್ಲಿ ಸೂಕ್ತ ಸಹಕಾರದ ಅಗತ್ಯವನ್ನು ಮನಗಂಡ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು, 2021ರ ಜುಲೈ 6ರಂದು ಸಹಕಾರಕ್ಕೆ ಪ್ರತ್ಯೇಕ ಆಡಳಿತ ಸಚಿವಾಲಯ – 'ಸಹಕಾರ ಸಚಿವಾಲಯ' (ಎಂಓಸಿ) ರಚಿಸಿದರು. 'ಸಹಕಾರದಿಂದ ಸಮೃದ್ಧಿ' ಎಂಬ ಪ್ರಧಾನ ಮಂತ್ರಿಯವರ ಕರೆಯು ಸರ್ಕಾರದ ಕಾರ್ಯವಿಧಾನಗಳು ಮತ್ತು ಗುರಿಗಳನ್ನು ತೀಕ್ಷ್ಣಗೊಳಿಸಲು ಒತ್ತು ನೀಡಿತು. ಸಮುದಾಯ ನೇತೃತ್ವದ ಮತ್ತು ಸಮುದಾಯ ಒಡೆತನದ ಉದ್ಯಮಶೀಲ ಪ್ರಯತ್ನಗಳ ಮೂಲಕ ಆರ್ಥಿಕ ಸ್ವಾತಂತ್ರ್ಯ, ಸ್ವಾವಲಂಬನೆ ಹಾಗೂ ಸಾಮಾಜಿಕ

* ಕೇಂದ್ರ ಗೃಹ ವ್ಯವಹಾರ ಮತ್ತು ಸಹಕಾರ ಸಚಿವರು, ಭಾರತ ಸರ್ಕಾರ. ಇಮೇಲ್: minister-coop@gov.in



Scanned with ACE Scanner

ಕೋಷ್ಟಕ-1

# ಸಹಕಾರ ಚಳವಳಿಯ ಪಕ್ಷಿ ನೋಟ (2016-17)

## ಎ. ಸಹಕಾರಿಗಳ ವಿಧ

| | ವ್ಯಾಪ್ತಿ (ಸಂಖ್ಯೆ) |
|---|---|
| ◊ ಸಾಲ ಸಹಕಾರಿ ಸಂಘಗಳು | 1.77 ಲಕ್ಷ |
| ◊ ಸಾಲೇತರ ಸಹಕಾರಿ ಸಂಘಗಳು | 6.76 ಲಕ್ಷ |
| ◊ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು | 97,961 |
| ◊ ಸಹಕಾರಿ ಸಂಘಗಳ ಒಟ್ಟು ಸದಸ್ಯತ್ವ | 29 ಕೋಟಿ |
| ◊ ರಾಷ್ಟ್ರೀಯ ಮಟ್ಟದ ಸಹಕಾರಿ ಒಕ್ಕೂಟಗಳು | 17 |
| ◊ ರಾಜ್ಯ ಮಟ್ಟದ ಸಹಕಾರಿ ಒಕ್ಕೂಟಗಳು | 390 |
| ◊ ಜಿಲ್ಲಾ ಮಟ್ಟದ ಸಹಕಾರಿ ಒಕ್ಕೂಟಗಳು | 2,705 |
| ◊ ಬಹು-ರಾಜ್ಯ ಸಹಕಾರಿ ಸೊಸೈಟಿಗಳು | 1,435 |



## ಬಿ. ಸಹಕಾರಿಗಳ ಕಾರ್ಯಕ್ಷಮತೆ

| | ವ್ಯಾಪ್ತಿ(%) |
|---|---|
| ♦ ಸಹಕಾರಿ ಸಂಘಗಳಿಂದ ವಿತರಿಸಲಾದ ಕೃಷಿ ಸಾಲ | 13.4% |
| ♦ ಗ್ರಾಮೀಣ ಭಾಗದಲ್ಲಿ ಸಹಕಾರಿ ಸಂಘಗಳ ವ್ಯಾಪನೆ | 98% |
| ♦ ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು(ಪಿಎಸಿಎಸ್) ಇರುವ ಗ್ರಾಮಗಳು | 90.8% |
| ♦ ಸಹಕಾರಿ ಕ್ಷೇತ್ರದಲ್ಲಿ ಗೊಬ್ಬರ ಉತ್ಪಾದನೆ | 28.8% |
| ♦ ಸಹಕಾರಿ ಸಂಘಗಳಿಂದ ಗೊಬ್ಬರ ವಿತರಣೆ | 35% |
| ♦ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮೂಲಕ ಸಕ್ಕರೆ ಉತ್ಪಾದನೆ | 30.6% |
| ♦ ಸಂಗ್ರಹಾಗಾರ ಸೌಲಭ್ಯ ಹೊಂದಿರುವ 'ಪಿಎಸಿಎಸ್'ಗಳ ಸಂಖ್ಯೆ | 55.5% |



ಮೂಲ : ಸಹಕಾರಿಗಳ ಅಂಕಿ-ಅಂಶ ಮಾಹಿತಿ ಎನ್‌ಸಿಯುಐ, 2018



Scanned with ACE Scanner

**ಕೋಷ್ಟಕ 2**

## ಸಹಕಾರದ ತತ್ವಗಳು



### ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ

ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ.

### ಸದಸ್ಯರ ಆರ್ಥಿಕ ಸಹಭಾಗಿತ್ವ

ಸದಸ್ಯರು ಸಮಾನವಾಗಿ ಕೊಡುಗೆ ನೀಡುತ್ತಾರೆ ಮತ್ತು ತಮ್ಮ ಸಹಕಾರ ಸಂಘದ ಬಂಡವಾಳವನ್ನು ನಿಯಂತ್ರಿಸಿ, ಬಳಕೆ ಮಾಡುವ ಮೂಲಕ ತಮ್ಮ ಆರ್ಥಿಕ ಚಟುವಟಿಕೆಯನ್ನು ಪರಸ್ಪರ ಬೆಂಬಲಿಸುತ್ತಾರೆ.

### ಸ್ವಾಯತತ್ತೆ ಮತ್ತು ಸ್ವಾತಂತ್ರ್ಯ

ಸಹಕಾರ ಸಂಘಗಳು ಪ್ರಜಾಸತಾತ್ಮಕ ನಿಯಂತ್ರಣಗಳನ್ನು ಹೊಂದಿರುವ, ಸ್ವ-ಸಹಾಯದಲ್ಲಿ ನಂಬಿಕೆ ಹೊಂದಿರುವ ಸ್ವಾಯತ್ತ ವ್ಯವಹಾರ ಸಂಸ್ಥೆಗಳಾಗಿವೆ.

### ಸದಸ್ಯರ ಪ್ರಜಾಸತಾತ್ಮಕ ನಿಯಂತ್ರಣ

ಇವುಗಳು ಸದಸ್ಯರಿಂದ ಮುನ್ನಡೆಸಲ್ಪಡುವ, ಸದಸ್ಯರಿಂದ ನಿಯಂತ್ರಿಸಲ್ಪಡುವ ಪ್ರಜಾಸತ್ತಾತ್ಮಕ ಘಟಕಗಳು. ಸದಸ್ಯರು ನಿರ್ಧಾರ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಸದಸ್ಯರು ಸಮಾನವಾದ ಮತದಾನ ಹಕ್ಕು ಹೊಂದಿರುತ್ತಾರೆ( ಒಬ್ಬ ಸದಸ್ಯರಿಗೆ ಒಂದು ಮತ).

### ಶಿಕ್ಷಣ, ತರಬೇತಿ ಮತ್ತು ಮಾಹಿತಿ

ಸಹಕಾರ ಸಂಘಗಳ ಸದಸ್ಯರ ಶಿಕ್ಷಣ, ತರಬೇತಿ ಅವಕಾಶವಿದೆ. ಜೊತೆಗೆ ಚುನಾಯಿತ ಸದಸ್ಯರು, ವ್ಯವಸ್ಥಾಪಕರು ಮತ್ತು ಸಿಬ್ಬಂದಿಯ ತರಬೇತಿಗೂ ಅವಕಾಶವಿದೆ.

### ಸಮುದಾಯದ ಕಾಳಜಿ

ಸೂಕ್ತ ನೀತಿ ಕ್ರಮವನ್ನು ಅಳವಡಿಸಿಕೊಳ್ಳುವ ಮೂಲಕ ಮತ್ತು ಸಮುದಾಯ ಸಮಸ್ಯೆಗಳನ್ನು ಪರಿಗಣಿಸುವ ಮೂಲಕ ಸುಸ್ಥಿರ ಸಮುದಾಯ ಅಭಿವೃದ್ಧಿಗೆ ಸಹಕಾರ ಸಂಘಗಳು ನೆರವಾಗುತ್ತವೆ.

### ಸಹಕಾರ ಸಂಘಗಳ ನಡುವೆ ಸಹಕಾರ

ಒಟ್ಟಾಗಿ ಕೆಲಸ ಮಾಡುವ ಮೂಲಕ ಸಹಕಾರ ಚಳವಳಿಯನ್ನು ಬಲಪಡಿಸುವುದು.

ಮೂಲ : ಅಂತಾರಾಷ್ಟ್ರೀಯ ಸಹಕಾರ ಒಕ್ಕೂಟ
[https://www.ica.coop/en/cooperatives/cooperative-identity ನಲ್ಲಿ ಲಭ್ಯವಿದೆ]


ನ್ಯಾಯವನ್ನು ಸಾಧಿಸುವ ಸಾಧನವಾಗಿ ಸಹಕಾರದ ಸ್ಪಷ್ಟ ಸಂದೇಶವನ್ನು ಸಾರಿತು. ಸಹಕಾರಿ ಸಂಸ್ಥೆಗಳು ಸಮುದಾಯ ಮಟ್ಟದ ವ್ಯಾವಹಾರಿಕ ಸಂಸ್ಥೆಗಳಾಗಿವೆ. ಸಾಮಾಜಿಕ ಬಂಡವಾಳವನ್ನು ಹುಟ್ಟುಹಾಕುವ ಮತ್ತು ಸೆಳೆದುಕೊಳ್ಳುವ ಇವುಗಳ ಸಾಮರ್ಥ್ಯ ಅನನ್ಯವಾದುದು. ಅನಾದಿ ಕಾಲದಿಂದಲೂ 'ವಸುಧೈವ ಕುಟುಂಬಕಂ' ತತ್ವವನ್ನು ಪ್ರತಿಪಾದಿಸುವ ಭಾರತದಲ್ಲಿ, 'ಸಹಕಾರ'ವು ನಮ್ಮ ಜೀವನ ವಿಧಾನವಾಗಿದೆ ಎಂದು ಸಾರಲು ಹಾಗೂ ಸಾಬೀತುಪಡಿಸುವ ನಿಟ್ಟಿನಲ್ಲಿ ನಮ್ಮ ಪೂರ್ವಜರು ಪ್ರತಿಯೊಬ್ಬ ನಾಗರಿಕರಲ್ಲಿ ಸಹಕಾರದ ಮನೋಭಾವವನ್ನು ತುಂಬಲು ಮತ್ತು ಪೋಷಿಸಲು ಪ್ರಯತ್ನಿಸಿದ್ದಾರೆ. 1904ರಲ್ಲಿ 'ಸಹಕಾರಿ ಸಾಲ ಸಂಘಗಳ ಕಾಯ್ದೆ'ಯನ್ನು ಘೋಷಿಸಿದಾಗಿನಿಂದ ಹಿಡಿದು 1912ರಲ್ಲಿ ಅದರ ತಿದ್ದುಪಡಿಯವರೆಗೆ, ಸಹಕಾರಿ ಚಳವಳಿಯು ಒಂದು ಪರಿಹಾರಾತ್ಮಕ ಆಂದೋಲನವಾಗಿತ್ತು. ಜೊತೆಗೆ, ಅದರ ಗಮನವು ಹೆಚ್ಚಾಗಿ ಗ್ರಾಮೀಣ ಸಾಲ ಕ್ರೋಢೀಕರಣ ಮತ್ತು ರೈತರಿಗೆ ಸಾಲ ವಿತರಣೆಯ ಮೇಲೆ ಕೇಂದ್ರೀಕೃತವಾಗಿತ್ತು. ಭಾರತದಲ್ಲಿ ಸಹಕಾರ ಕುರಿತ 'ಮ್ಯಾಕ್ಲಾಗನ್ ಸಮಿತಿ'ಯ (1914-15) ಶಿಫಾರಸುಗಳನ್ನು ಪಾಲಿಸಿದ ಬಳಿಕ ಈ ಚಳವಳಿಯು ಕೇವಲ ಪ್ರಾಥಮಿಕವಾಗಿ ಪರಿಹಾರವನ್ನು ಒದಗಿಸುವ ಗುರಿಗೆ ಸೀಮಿತಗೊಳ್ಳದೆ, ಸಾಮಾಜಿಕ-ಆರ್ಥಿಕ ಏಳಿಗೆಯ ಗುರಿಯನ್ನು ಹೊಂದಿರುವ ಒಂದು ಆಂದೋಲನವಾಗಿ ಪರಿವರ್ತನೆಗೊಂಡಿತು. ಸ್ವಾತಂತ್ರ್ಯಾನಂತರದ ಭಾರತದಲ್ಲಿ, ಸಹಕಾರಿ ಸಂಸ್ಥೆಗಳು ಭಾರತ ಸರ್ಕಾರದ ಯೋಜನೆಗಳಲ್ಲಿ ಸೂಕ್ತ ಮಾನ್ಯತೆ

ಪಡೆದಿದ್ದರಿಂದ, ಗಮನಾರ್ಹ ಬದಲಾವಣೆಗೆ ಸಾಕ್ಷಿಯಾದವು. ಭಾರತವು ಸಹಕಾರಿ ಸಂಘಗಳ ಶ್ರೀಮಂತ ಇತಿಹಾಸವನ್ನು ಹೊಂದಿದ್ದು, 8.54 ಲಕ್ಷ ಸಹಕಾರಿಗಳಿಗೆ ದೇಶವು ನೆಲೆಯಾಗಿದೆ. ಈ ಪೈಕಿ 80% ಸಾಲೇತರ ಸಹಕಾರಿಗಳು ಮತ್ತು 20% ಪತ್ತಿನ ಸಹಕಾರ ಸಂಘಗಳಾಗಿವೆ. ಇಂದು, ಸಹಕಾರಿ ಸಂಘಗಳು 98% ಹಳ್ಳಿಗಳಲ್ಲಿ ಅಸ್ತಿತ್ವವನ್ನು ಹೊಂದಿದ್ದು, ಇವುಗಳ ಒಟ್ಟು ಸದಸ್ಯರ ಸಂಖ್ಯೆ 29 ಕೋಟಿಯಷ್ಟಿದೆ. ಕೋಷ್ಟಕ–1 ಭಾರತದಲ್ಲಿ ಸಹಕಾರ ಚಳವಳಿಯ ಅವಲೋಕನವನ್ನು ಒದಗಿಸುತ್ತದೆ. ಭಾರತವು ಈಗ ತನ್ನ ಹಿಂದಿನ ಅದ್ಭುತ ಸಾಧನೆಗಳನ್ನು ಸಂಭ್ರಮಿಸುತ್ತಿದೆ. ಇದೇ ವೇಳೆ, ಅಭಾವ ಮುಕ್ತ ಹಾಗೂ ಸಾಮಾಜಿಕ–ಆರ್ಥಿಕವಾಗಿ ಸಮೃದ್ಧ ವಾತಾವರಣವನ್ನು ನಿರ್ಮಿಸುವ ಮಾರ್ಗಗಳನ್ನು ಅನ್ವೇಷಿಸುತ್ತಿದೆ. ಭಾರತವು 'ಸ್ವಾತಂತ್ರ್ಯದ ಅಮೃತ ಕಾಲ'ದಲ್ಲಿ (2023–2047) ಸಹಕಾರದ ಕಾರ್ಯವಿಧಾನದ ಮೂಲಕ ವಿಶ್ವದ ಮುಂಚೂಣಿ ಆರ್ಥಿಕತೆಗಳಲ್ಲಿ ಒಂದಾಗಿ ಹೊರಹೊಮ್ಮಬೇಕಿದೆ. ಇದಕ್ಕಾಗಿ 'ಸ್ವಾತಂತ್ರ್ಯದ ಅಮೃತ ಮಹೋತ್ಸವ'ವನ್ನು ಸಂಭ್ರಮಿಸುತ್ತಿರುವ ಈ ಹೊತ್ತಿನಲ್ಲಿ ನಾವೆಲ್ಲರೂ ನಮ್ಮನ್ನು ನಾವು ಭವಿಷ್ಯಕ್ಕೆ ಸಜ್ಜುಗೊಳಿಸಿಕೊಳ್ಳಬೇಕಿದೆ.



### ಸಹಕಾರಿ ತತ್ವಗಳನ್ನು ಗೌರವಿಸುವುದು

ಬಂಡವಾಳಕ್ಕಿಂತ ಹೆಚ್ಚಾಗಿ ಜನರಿಗೆ ಆದ್ಯತೆ ನೀಡುವ ಮತ್ತು ಜನ ಕೇಂದ್ರಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ನಮ್ಮ ಸಹಕಾರಿ ಸಂಸ್ಥೆಗಳ ಶಕ್ತಿ ಮತ್ತು ಉದ್ದೇಶ ಪ್ರಶಂಸನೀಯ ಮತ್ತು ಮತ್ತು ಸಮ್ಮತಾರ್ಹ. ಇವು ಸಹಕಾರದ ಏಳು ಸುವರ್ಣ ತತ್ವಗಳಿಗೆ (ಕೋಷ್ಟಕ 2) ಬದ್ಧವಾಗಿರುವ ಮೂಲಕ ಸಾಮೂಹಿಕ ಒಗ್ಗಟ್ಟು, ಸಮುದಾಯ ವ್ಯವಹಾರ ಪ್ರಜ್ಞೆ ಮತ್ತು ಸಾಮಾಜಿಕ ಸಂಬಂಧ ವರ್ಧನೆಯನ್ನು ಮೂಡಿಸುತ್ತವೆ. ಸರ್ವರನ್ನೂ ಒಳಗೊಂಡ ಆರ್ಥಿಕ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ಸಹಕಾರವು ಅಗಾಧ ಸಾಮರ್ಥ್ಯಗಳನ್ನು ಹೊಂದಿದೆ. ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್‌ಜಿ ಅವರು ತ್ರಿಭುವನ್ ದಾಸ್ ಪಟೇಲ್ ಅವರ ಮೂಲಕ 'ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್' (ಅಮುಲ್) ಬೀಜಗಳನ್ನು ಬಿತ್ತಿದರು. ಸಾಮೂಹಿಕ ಪ್ರಯತ್ನಗಳಿಂದ ಹಾಲಿನ ಉತ್ಪಾದನೆ ಮತ್ತು ಮಾರಾಟಕ್ಕಾಗಿ ರೈತ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಮೂಲಕ ಈ ಪ್ರಯತ್ನ ಮಾಡಿದರು. ಅವರು ಬಿತ್ತಿದ ಸಣ್ಣ ಬೀಜವು ಈಗ ಜಾಗತಿಕ ಡೈರಿ ಬ್ರಾಂಡ್ ಆಗಿ ಮಾರ್ಪಟ್ಟಿರುವುದಲ್ಲದೆ 'ಸಹಜೀವನ್' (ಸಾಮರಸ್ಯದಿಂದ ಬದುಕುವುದು), ಸ್ವದೇಶಿ (ಮೇಕ್ ಇನ್ ಇಂಡಿಯಾ), ಸ್ವನಿರ್ಭರ (ಸ್ವಾವಲಂಬನೆ) ಮತ್ತು ಸಮೃದ್ಧಿ (ಸಮೃದ್ಧಿ) ಎಂಬ ಭಾರತೀಯ ಸಹಕಾರಿ ಸಂಸ್ಥೆಗಳ ಅಮರ ತತ್ವಗಳನ್ನು ಜಗತ್ತಿಗೆ ಸಾರುತ್ತಿದೆ.





ಸಹಕಾರಿ ಸಂಸ್ಥೆಗಳು ವಿಶಿಷ್ಟ ಅಸ್ಮಿತೆಗಳನ್ನು ಹೊಂದಿವೆ. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಗುರಿಯನ್ನು ಸಾಧಿಸಲು ಸಹಕಾರಿ ವ್ಯವಹಾರ ಮಾದರಿಯ ನೈಜ ಶಕ್ತಿಯನ್ನು ಪೂರ್ಣವಾಗಿ ಬಳಸಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಸಹಕಾರಿ ಸಂಸ್ಥೆಗಳು ದೇಶದ ಅಭಿವೃದ್ಧಿ ಉಪಕ್ರಮಗಳ ಮೇಲೆ 'ವೇಗವರ್ಧನೆ'ಯ ಪರಿಣಾಮ ಬೀರುವ ಹಿನ್ನೆಲೆಯಲ್ಲಿ ಬಲವಾದ ಅಡಿಪಾಯದ ಮೇಲೆ ಸದೃಢ ಹಾಗೂ ಸ್ಥಿತಿಸ್ಥಾಪಕ ಸಹಕಾರಿ ಕ್ಷೇತ್ರವನ್ನು ನಿರ್ಮಿಸುವ ಅವಶ್ಯಕತೆಯಿದೆ. ಎಲ್ಲಾ ಅಡೆತಡೆಗಳು ಮತ್ತು ಅಡಚಣೆಗಳನ್ನು ಸೂಕ್ತ ನೀತಿ ಮತ್ತು ಸೂಕ್ತ ಸರ್ಕಾರದ ಮಧ್ಯಸ್ಥಿಕೆಗಳ ಮೂಲಕ ಪರಿಹರಿಸಬೇಕಾಗಿದೆ. 'ಸಹಕಾರದಿಂದ ಸಮೃದ್ಧಿ' ಸಾಧಿಸಲು ಪ್ರಮುಖ ನೀತಿ ನಿಯತಾಂಕಗಳು [4 'ಪಿ'ಗಳು + 4 'ಇ'ಗಳು] ಕೋಷ್ಟಕ–3ರಲ್ಲಿವೆ.



Scanned with ACE Scanner

ಕೋಷ್ಟಕ–4




### ಸಹಕಾರ ಚಳವಳಿಗೆ ಬದ್ಧತೆ

ಸಹಕಾರ ತತ್ವದಿಂದ ಮುನ್ನಡೆಸಲ್ಪಡುವ ಆರ್ಥಿಕ ಮಾದರಿಯು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುವುದರ ಜೊತೆಗೆ ಜಾಗತಿಕವಾಗಿ ಯೋಚಿಸುವಂತೆ ಸ್ಥಳೀಯ ಉದ್ಯಮಿಗಳನ್ನು ಪ್ರೇರೇಪಿಸುವ ಸಾಮರ್ಥ್ಯವನ್ನು ಹೊಂದಿದೆ. ನಮ್ಮ ಸಹಕಾರಿ ಸಂಸ್ಥೆಗಳಿಗಾಗಿ ಯೋಜಿಸಲು, ಆದ್ಯತೆ ನೀಡಲು ಮತ್ತು ಹೊಸ ಉದಯೋನ್ಮುಖ ಕ್ಷೇತ್ರಗಳನ್ನು ಅನ್ವೇಷಿಸಲು ನಾವು ನಿರ್ಧರಿಸಿದ್ದೇವೆ. ಅಲ್ಲದೆ, ಸಹಕಾರಿ 'ಸ್ಕ್ವಾಡ್' (ಎಸ್‌ಕ್ಯೂಯುಎಡಿ) ಸದಸ್ಯರಾಗುವ ಮೂಲಕ ಸಾಮೂಹಿಕವಾಗಿ ಶ್ರಮಿಸಲು ಸಾಧ್ಯವಾಗುತ್ತದೆ. 'ಸ್ಕ್ವಾಡ್' (ಎಸ್‌ಕ್ಯೂಯುಎಡಿ) ನಲ್ಲಿ 'ಎಸ್' ಎಂದರೆ 'ಸ್ವಾವಲಂಬನೆ (ಆತ್ಮನಿರ್ಭರ)', 'ಕ್ಯೂ' ಎಂದರೆ 'ಗುಣಮಟ್ಟದ ಕಾರ್ಯಕ್ಷಮತೆ', 'ಯು' ಎಂದರೆ 'ಅಚಲ ಸಹಕಾರ ಚಳವಳಿ', 'ಎ' ಎಂದರೆ 'ಆಡಳಿತದಲ್ಲಿ ಉತ್ತರದಾಯಿತ್ವ' ಮತ್ತು 'ಡಿ' ಎಂದರೆ 'ಆಧುನಿಕ ತಂತ್ರಜ್ಞಾನದ ಮೂಲಕ ಅಭಿವೃದ್ಧಿ'. (ಕೋಷ್ಟಕ–4).

ಅವಕಾಶಗಳನ್ನು ಗುರುತಿಸುವ ಮೂಲಕ, ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಪರಿಹರಿಸುವ ಮೂಲಕ, ಶಾಸನಾತ್ಮಕ ನಿಯಂತ್ರಣ ಹಾಗೂ ಸಹಕಾರಿ ಸಂಸ್ಥೆಗಳ ಪ್ರಚಾರದ ನಡುವೆ ಉತ್ತಮ ಸಮತೋಲನ ಸಾಧನೆ ಮೂಲಕ ಸಹಕಾರಿ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸುವುದು ಅತ್ಯಗತ್ಯವೆಂಬ ಬಲವಾದ ಅನಿಸಿಕೆ ಇತ್ತು. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಹಾಗೂ ಕೇಂದ್ರ ಸರ್ಕಾರಗಳು ಒಟ್ಟಾರೆ ಪ್ರಯತ್ನದ ಮೂಲಕ ಸಮಗ್ರ ಸಹಕಾರಿ ಅಭಿವೃದ್ಧಿಗೆ ಏಕರೂಪದ ಕಾನೂನು ಮತ್ತು ಕಾರ್ಯಾಚರಣೆ ಚೌಕಟ್ಟು ಖಾತರಿಪಡಿಸಲು ಸಜ್ಜಾಗಿವೆ. ನಮ್ಮ ಸರ್ಕಾರವು ಏಕರೂಪದ ಸಹಕಾರ ಚಳವಳಿಗಾಗಿ ಎಲ್ಲರನ್ನೂ ಒಳಗೊಳ್ಳುವ ನೀತಿಯನ್ನು ರೂಪಿಸಲು ಬದ್ಧವಾಗಿದೆ. ರಾಷ್ಟ್ರೀಯ ಸಹಕಾರ ನೀತಿಯನ್ನು ಸಮಿತಿಯು ಅಂತಿಮಗೊಳಿಸುತ್ತಿದೆ [ಅಧ್ಯಕ್ಷರು: ಶ್ರೀ ಸುರೇಶ್ ಪ್ರಭು]. ಈ ನೀತಿ ದಾಖಲೆಯು ಸಹಕಾರಿ ಆಂದೋಲನವನ್ನು ಬಲಪಡಿಸಲು ಮತ್ತು ನೆಲೆಯೂರಲು ಮಾತ್ರವಲ್ಲದೆ ಸ್ವಾವಲಂಬನೆ ಸಾಧಿಸಲು ಸಹಕಾರಿ ಆಧರಿತ ಸರ್ವರನ್ನೂ ಒಳಗೊಂಡ ಆರ್ಥಿಕ ಅಭಿವೃದ್ಧಿ ಮಾದರಿಯ ಉತ್ತೇಜನ ಹಾಗೂ ಪ್ರಚಾರಕ್ಕೆ ನೆರವಾಗಲಿದೆ. ಜೊತೆಗೆ, ಈ ಸಂಬಂಧ ಸಮರ್ಥನೀಯ ಮಾರ್ಗಸೂಚಿಗಳನ್ನು ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಜುಲೈ 2021 ಮತ್ತು ಮೇ 2023ರ ಅವಧಿಯಲ್ಲಿ, ಸಹಕಾರಿ ಅಭಿವೃದ್ಧಿ ಉಪಕ್ರಮಗಳಿಗೆ ದೊಡ್ಡ ಉತ್ತೇಜನ ನೀಡುವ ಉದ್ದೇಶದಿಂದ ಎಂಟು ಪ್ರಮುಖ ನೀತಿ ವಿಷಯಗಳಿಗೆ (ಕೋಷ್ಟಕ–5) ಅನುಮೋದನೆಗಳನ್ನು ಪಡೆಯುವಲ್ಲಿ ಸಚಿವಾಲಯವು ಯಶಸ್ವಿಯಾಯಿತು.



Scanned with ACE Scanner

## ಕೋಷ್ಟಕ–5: ಸಚಿವಾಲಯದ ಪ್ರಮುಖ ನೀತಿ ನಿರ್ಧಾರಗಳು ಮತ್ತು ನಿರೀಕ್ಷಿತ ಪ್ರಯೋಜನಗಳು (ಜುಲೈ 2021–ಮೇ 2023)

# ಕಾಲಸೂಚಿ




### ಜೂನ್ 01, 2022

ಸರ್ಕಾರಿ ಇ–ಮಾರುಕಟ್ಟೆ ವೇದಿಕೆಯಲ್ಲಿ (ಜೆಮ್) ಸಹಕಾರಿ ಸಂಘಗಳನ್ನು ನೊಂದಾಯಿತ ಮಾರಾಟಗಾರರು/ ಖರೀದಿದಾರ ಸಂಸ್ಥೆಗಳಾಗಿಸುವುದು

**ಪ್ರಯೋಜನಗಳು**

- ಸಹಕಾರಿ ಸಂಘಗಳಿಗೆ ಪಾರದರ್ಶಕ ಮತ್ತು ಸ್ಪರ್ಧಾತ್ಮಕ ಮಾರುಕಟ್ಟೆ ದೊರೆಯುತ್ತದೆ. ಜೊತೆಗೆ ಸ್ಪರ್ಧಾತ್ಮಕ ದರದಲ್ಲಿ ಸರಕು–ಸೇವೆಗಳು ಲಭ್ಯವಾಗುತ್ತವೆ.
- ಖರೀದಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯು ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ

### ಜೂನ್ 29, 2022

63,000 ಸಕ್ರಿಯ ಸಹಕಾರಿಗಳ ಗಣಕೀಕರಣ

**ಪ್ರಯೋಜನಗಳು**

- ಸಹಕಾರಿ ಸಾಲ ಪ್ರಕ್ರಿಯೆಯ ಸಂಪೂರ್ಣ ಡಿಜಿಟಲೀಕರಣ
- ಎಲ್ಲಾ ಹಂತಗಳಲ್ಲಿನ ಸಾಲ ಸಹಕಾರ ಸಂಘಗಳನ್ನು 'ನಬಾರ್ಡ್' ಜೊತೆ ಸಂಪರ್ಕಿಸುವ ಏಕರೀತಿಯ ಮತ್ತು ಒಂದೇ ತಂತ್ರಾಂಶ
- ವ್ಯಾಪಾರ ಲಾಭವನ್ನು ವೈವಿಧ್ಯಮಯಗೊಳಿಸುವ ಮತ್ತು ಹೆಚ್ಚಿಸುವ ಅವಕಾಶ
- ಕಾರ್ಯಾಚರಣೆ, ಆಡಳಿತ, ಹಣಕಾಸು ಪೂರೈಕೆ, ಮರು ಹಣಕಾಸು ಪೂರೈಕೆಯಲ್ಲಿ ಪಾರದರ್ಶಕತೆ

### ಅಕ್ಟೋಬರ್ 12, 2022

ಸಂವಿಧಾನದ 97ನೇ ತಿದ್ದುಪಡಿಗೆ ಅನುಗುಣವಾಗಿಸಲು 'ಬಹು ರಾಜ್ಯ ಸಹಕಾರ ಸಂಘಗಳ ವಿಧೇಯಕ'ಕ್ಕೆ ತಿದ್ದುಪಡಿ

**ಪ್ರಯೋಜನಗಳು**

- ಸಹಕಾರ ಚಳವಳಿಯನ್ನು ಬಲಗೊಳಿಸುವುದು ಮತ್ತು ವಿಸ್ತರಿಸುವುದು
- ಚುನಾವಣೆ, ಲೆಕ್ಕಪರಿಶೋಧನೆಯಲ್ಲಿ ಸುಧಾರಣೆ ಜಾರಿಗೊಳಿಸುವುದು; ಆಡಳಿತ ಮತ್ತು ಕಾರ್ಯಾಚರಣೆಯಲ್ಲಿ ಪಾರದರ್ಶಕತೆ; ಸಹಕಾರಿ ಸಂಘಗಳಲ್ಲಿ ವೃತ್ತಿಪರತೆ ಹೆಚ್ಚಳ; ಸಹಕಾರಿ ಚಿದ್ಯಮಿಕ ಚಟುವಟಿಕೆಗಳಲ್ಲಿ ಹೆಚ್ಚುವರಿ ಹೂಡಿಕೆ; ಬಹು–ರಾಜ್ಯ ಸಹಕಾರಿ ಸಂಘಗಳ ಸದೃಢ ಪ್ರಗತಿಗಾಗಿ ಬಲಿಷ್ಠ ವ್ಯವಸ್ಥೆ; ಸಹಕಾರಿ ವ್ಯವಹಾರದಲ್ಲಿ ಸುಗಮತೆ

### ಜನವರಿ 11,2023

ಸಾವಯವ ಉತ್ಪನ್ನಗಳ ಉತ್ತೇಜನಕ್ಕಾಗಿ 'ರಾಷ್ಟ್ರೀಯ ಸಾವಯವ ಸಹಕಾರ ಸಂಘ ಸ್ಥಾಪನೆ'

**ಪ್ರಯೋಜನಗಳು**

- ಸಾವಯವ ಉತ್ಪನ್ನಗಳ ಪ್ರಮಾಣೀಕರಣ, ಪರೀಕ್ಷೆ, ಖರೀದಿ, ದಾಸ್ತಾನು, ಸಂಸ್ಕರಣೆ, ಬ್ರ್ಯಾಂಡಿಂಗ್, ಲೇಬಲಿಂಗ್, ಪ್ಯಾಕೇಜಿಂಗ್, ಸಾಗಣೆ, ಮಾರ್ಕೆಟಿಂಗ್‌ಗಾಗಿ ಸಾಂಸ್ಥಿಕ ಬೆಂಬಲದ ಖಾತರಿ. ಜೊತೆಗೆ ಸಾವಯವ ರೈತರಿಗೆ ಹಣಕಾಸು ವ್ಯವಸ್ಥೆ.
- ಸದಸ್ಯ ಸಹಕಾರಿ ಸಂಘಗಳ ಸಂಪೂರ್ಣ ಸಾವಯವ ಪೂರೈಕೆ ಜಾಲದ ನಿರ್ವಹಣೆ; ಸಾವಯವ ಸಂಶೋಧನೆ, ಉತ್ತೇಜನ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯತೆ.
- ಸ್ವಾವಲಂಬನೆಯ ಖಾತರಿ ಮತ್ತು ರೈತರ ಆದಾಯ ಹೆಚ್ಚಳ

### ಜನವರಿ 11, 2023

ರಾಷ್ಟ್ರೀಯ ರಫ್ತು ಸಹಕಾರ ಸಂಘದ ಸ್ಥಾಪನೆ, ರಫ್ತು ಹೆಚ್ಚಳಕ್ಕೆ ಉತ್ತೇಜನ

**ಪ್ರಯೋಜನಗಳು**

- ಜಾಗತಿಕ ಮಾರುಕಟ್ಟೆಯಲ್ಲಿ ಸಹಕಾರ ಸಂಘಗಳ ರಫ್ತು ಸಾಮರ್ಥ್ಯದ ಅನ್ವೇಷಣೆ
- ಸಂಬಂಧಪಟ್ಟ ಸದಸ್ಯರಿಗೆ ಜಾಗತಿಕ ಮಾರುಕಟ್ಟೆಗೆ ಪ್ರವೇಶ ಸುಗಮಗೊಳಿಸುವುದು
- ಉತ್ಪನ್ನ ನಿರ್ದಿಷ್ಟತೆಗಳನ್ನು ನಿಗದಿಪಡಿಸುವುದು ಹಾಗೂ ಸಮುದಾಯ ಕ್ರಿಯೆ ಮೂಲಕ ರಫ್ತು ಉತ್ತೇಜನಕ್ಕೆ ಪರೀಕ್ಷೆ ಮತ್ತು ಪ್ರಮಾಣೀಕರಣ ಸೇರಿದಂತೆ ಇತರೆ ಸೇವೆಗಳ ಒದಗಣೆ

### ಜನವರಿ 11,2023

ರಾಷ್ಟ್ರೀಯ ಬೀಜ ಸಹಕಾರ ಸಂಘದ ಸ್ಥಾಪನೆ; ಸಹಕಾರ ಸಂಘಗಳ ಮೂಲಕ ಗುಣಮಟ್ಟದ ಬೀಜಗಳ ಉತ್ಪಾದನೆ, ಸಂರಕ್ಷಣೆ, ಪ್ರಮಾಣೀಕರಣ ಮತ್ತು ವಿತರಣೆಗೆ ಉತ್ತೇಜನ

**ಪ್ರಯೋಜನಗಳು**


- ಕೃಷಿ ಬೀಜ ವ್ಯವಹಾರ ಅವಕಾಶವನ್ನು ಹೆಚ್ಚಿಸುವುದು
- ಗುಣಮಟ್ಟದ ಬೀಜ ಉತ್ಪಾದನೆ ಹಾಗೂ ಬೀಜ ಪ್ರಯೋಗಗಳಲ್ಲಿ ರೈತರ ಪಾತ್ರವನ್ನು ಹೆಚ್ಚಿಸುವುದು; ಒಂದೇ ಬ್ರ್ಯಾಂಡ್ ಹೆಸರಲ್ಲಿ ಪ್ರಮಾಣೀಕೃತ ಬೀಜ ಉತ್ಪಾದನೆ ಮತ್ತು ವಿತರಣೆಯಲ್ಲಿ ರೈತರ ಪಾತ್ರ ಹೆಚ್ಚಿಸುವುದು
- ಗುಣಮಟ್ಟದ ಬೀಜಗಳ ಉತ್ಪಾದನೆ ಮತ್ತು ವಿತರಣೆ ಮೂಲಕ ಹಾಗೂ ದೇಶೀಯ ಸಾಂಪ್ರದಾಯಿಕ ಬೀಜಗಳನ್ನು ಸಂರಕ್ಷಿಸುವ ಮೂಲಕ ಕೃಷಿಕ ಸಮುದಾಯದ ಆರ್ಥಿಕ ಮತ್ತು ತಾಂತ್ರಿಕ ಸುಧಾರಣೆ

### ಫೆಬ್ರವರಿ 15, 2023

ಎರಡು ಲಕ್ಷ ಬಹು–ಉದ್ದೇಶದ 'ಪಿಎಸಿಎಸ್'ಗಳ ಅಥವಾ ಪಶುಸಂಗೋಪನೆ/ಮತ್ಸ್ಯ ಸಹಕಾರ ಸಂಘಗಳ ಸ್ಥಾಪನೆ ಮೂಲಕ ಎಲ್ಲಾ 2,54,000 ಪಂಚಾಯತ್‌ಗಳ ವ್ಯಾಪ್ತಿಗೆ ವಿಸ್ತರಣೆ

**ಪ್ರಯೋಜನಗಳು**

- ಪ್ರಸ್ತುತ ಅಂತಹ ಸಹಕಾರ ಸಂಘ ಇಲ್ಲದ ಕಡೆ 'ಪಿಎಸಿಎಸ್'/ಪಶುಸಂಗೋಪನೆ/ಮತ್ಸ್ಯ ಸಹಕಾರ ಸಂಘಗಳ ಸ್ಥಾಪನೆ ಮತ್ತು ಈಗಾಗಲೇ ಇರುವ ಅಂತಹ ಸಹಕಾರ ಸಂಘಗಳ [illegible]
- 'ಪಿಎಸಿಎಸ್'/ಪಶುಸಂಗೋಪನೆ/ಮತ್ಸ್ಯ ಸಹಕಾರ ಸಂಘಗಳನ್ನು ಸಂಬಂಧಪಟ್ಟ [illegible] ಮಟ್ಟದ ಸಂಘಟನೆಗಳ ಜೊತೆ ಜೋಡಿಸುವುದು
- 'ಪಿಎಸಿಎಸ್'/ಪಶುಸಂಗೋಪನೆ/ಮತ್ಸ್ಯ ಸಹಕಾರ ಸಂಘಗಳಿಗೆ ಗ್ರಾಮ ಮಟ್ಟದ [illegible] ವೈವಿಧ್ಯೀಕರಣಕ್ಕೆ, ಆದಾಯ ಹೆಚ್ಚಳಕ್ಕೆ, ಮಾರ್ಕೆಟಿಂಗ್ ಮತ್ತು ಸಾಲ ಸೌಲಭ್ಯಗಳು [illegible] ಇತರೆ ಸೇವೆಗಳನ್ನು ಪಡೆಯಲು ನೆರವಾಗುವುದು; ಈ ಮೂಲಕ ಸುಧಾರಿತ ಪ್ರಾದೇಶಿಕ ಪ್ರಗತಿ ದಾರಿ ಮಾಡುವುದು



### ಮೇ 31, 2023

'ಪಿಎಸಿಎಸ್'ಗಳ ಮೂಲಕ ವಿಶ್ವದಲ್ಲೇ ಅತಿದೊಡ್ಡ ಆಹಾರಧಾನ್ಯ ಸಂಗ್ರಹ ಚಳವಳಿ

**ಪ್ರಯೋಜನಗಳು**

- ಸುಧಾರಿತ ಸಂಗ್ರಹ ಸಾಮರ್ಥ್ಯವು ಉತ್ಪನ್ನ ವ್ಯರ್ಥವಾಗುವುದನ್ನು ತಡೆಯುತ್ತದೆ ಮತ್ತು ಕಡಿಮೆ ಬೆಲೆಗೆ ಮಾರಾಟವನ್ನು ತಪ್ಪಿಸುತ್ತದೆ.
- ಸಾಗಣೆ ವೆಚ್ಚ ಇಳಿಕೆ, ಆಹಾರ ಭದ್ರತೆ ಹೆಚ್ಚಳಕ್ಕೆ ನೆರವು ಜೊತೆಗೆ ಪಡಿತರ ವಿತರಣಾ ವ್ಯವಸ್ಥೆಯನ್ನು ಬಲಿಷ್ಠಗೊಳಿಸಲು ಸಹಾಯಕ
- ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಪಡೆಯಲು ಅನುಕೂಲ





Scanned with ACE Scanner

ಪ್ರಾರಂಭದಿಂದಲೂ, ಸಹಕಾರ ಕ್ಷೇತ್ರದ ವ್ಯವಹಾರ ವಾತಾವರಣವನ್ನು ಸುಗಮಗೊಳಿಸಲು ವಿವಿಧ ಸಮಸ್ಯೆಗಳು ಮತ್ತು ಸವಾಲುಗಳನ್ನು ಪತ್ತೆ ಮಾಡುವಲ್ಲಿ, ಅವುಗಳನ್ನು ಒಟ್ಟುಗೂಡಿಸಿ ವಿಶ್ಲೇಷಿಸುವಲ್ಲಿ ಮತ್ತು ಪರಿಹರಿಸುವಲ್ಲಿ ಸಹಕಾರ ಸಚಿವಾಲಯವು ಮಧ್ಯಸ್ಥಗಾರರೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಧನಾತ್ಮಕ ಫಲಿತಾಂಶಗಳನ್ನು ನೀಡಿದ ಇತ್ತೀಚಿನ ಉಪಕ್ರಮಗಳು ಮತ್ತು ಪ್ರಯತ್ನಗಳನ್ನು ಕೋಷ್ಟಕ-6 ರಲ್ಲಿ ಉಲ್ಲೇಖಿಸಲಾಗಿದೆ.




### ಮಾದರಿ ಬೈ-ಲಾಗಳು: ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳನ್ನು ಸದೃಢಗೊಳಿಸುವತ್ತ

ತಳಮಟ್ಟದಲ್ಲಿ ಸದೃಢ ಮತ್ತು ಬಲವಾದ ವಿವಿಧೋದ್ದೇಶ ಮತ್ತು ಬಹು ಆಯಾಮದ ಸಹಕಾರಿ ಸಂಸ್ಕೃತಿಯನ್ನು ಬೆಳೆಸುವ ಸಲುವಾಗಿ 'ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘ'ಗಳಲ್ಲಿ ಅನುಷ್ಠಾನಕ್ಕಾಗಿ ಮಾದರಿ 'ಬೈ-ಲಾ'ಗಳನ್ನು (ಉಪವಿಧಿಗಳು) ರೂಪಿಸಲಾಗಿದ್ದು, ಅವುಗಳನ್ನು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಿಗೆ ತಲುಪಿಸಲಾಗಿದೆ. ಇಲ್ಲಿಯವರೆಗೆ, 22 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಮೀನುಗಾರಿಕೆ, ಹೈನುಗಾರಿಕೆ, ಸಂಗ್ರಹಣೆ, ಗೋದಾಮುಗಳು, ಸಾಮಾನ್ಯ ಸೇವಾ ಕೇಂದ್ರಗಳು ('ಸಿಎಸ್ಸಿ'), ಬ್ಯಾಂಕಿಂಗ್ ಪತ್ರವ್ಯವಹಾರ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನಕ್ಕೆ ಸಂಬಂಧಿಸಿದ ಚಟುವಟಿಕೆಗಳು ಹಾಗೂ ಇತರೆ ಹಲವು ಉದಯೋನ್ಮುಖ ಕ್ಷೇತ್ರಗಳಲ್ಲಿ 25ಕ್ಕೂ ಹೆಚ್ಚು ವ್ಯವಹಾರ ಚಟುವಟಿಕೆಗಳನ್ನು ಖಾತರಿಪಡಿಸಲು ಈ ಮಾದರಿ 'ಬೈ-ಲಾ'ಗಳನ್ನು ಅಳವಡಿಸಿಕೊಂಡಿವೆ. ಸಾಮೂಹಿಕ ಸಮುದಾಯ ಅಭಿವೃದ್ಧಿಯ ನಿಟ್ಟಿನಲ್ಲಿ ಕಾರ್ಯಾಚರಣೆಯ ದಕ್ಷತೆ, ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಮಾದರಿ 'ಬೈ-ಲಾ'ಗಳು ಹೊಂದಿವೆ.



### ಸಾಮಾನ್ಯ ಸೇವಾ ಕೇಂದ್ರಗಳಾಗಿ ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು ('ಸಿಎಸ್ಸಿ'ಗಳು)

ಸಾಮಾನ್ಯ ನಾಗರಿಕರಿಗೆ 300ಕ್ಕೂ ಹೆಚ್ಚು ಇ-ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ 'ಪ್ರಾಥಮಿಕ ಕೃಷಿ ಸಹಕಾರ ಸಾಲ ಸಂಘಗಳು(ಪಿಎಸಿಎಸ್)/ 'ಲಾರ್ಜ್ ಏರಿಯಾ ಮಲ್ಟಿಪರ್ಪಸ್ ಸೊಸೈಟಿ'ಗಳನ್ನು (ಲ್ಯಾಂಪ್ಸ್) ನೊಂದಾಯಿಸಲು ಹಾಗೂ ಡಿಜಿಟಲೀಕರಣಗೊಳಿಸಲು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಸಹಕಾರ ಸಚಿವಾಲಯ, ನಬಾರ್ಡ್ ಮತ್ತು ಸಾಮಾನ್ಯ ಸೇವಾ ಕೇಂದ್ರಗಳು ತಿಳಿವಳಿಕಾ ಒಡಂಬಡಿಕೆಗೆ ಸಹಿ ಹಾಕಿವೆ. ಈ ಸೇವೆಗಳಲ್ಲಿ ಬ್ಯಾಂಕಿಂಗ್, ವಿಮೆ, ಆಧಾರ್ ನೊಂದಣಿ / ನವೀಕರಣ, ಕಾನೂನು ಸೇವೆಗಳು, ಕೃಷಿ ಇನ್ಪುಟ್ ನಿರ್ವಹಣೆ, ಪ್ಯಾನ್ ಕಾರ್ಡ್, ಬಸ್ / ವಿಮಾನ / ರೈಲು ಟಿಕೆಟ್ ಸೇವೆಗಳು ಇತ್ಯಾದಿಗಳು ಸೇರಿವೆ. ಮೊದಲ ಹಂತದಲ್ಲಿ ದೇಶದ ಆಯ್ದ 75 ಜಿಲ್ಲೆಗಳಲ್ಲಿ 'ಪಿಎಸಿಎಸ್'



Scanned with ACE Scanner

ಮೂಲಕ ಎಲ್ಲಾ ಇ–ಸೇವೆಗಳನ್ನು ಒದಗಿಸಲು ಯೋಜಿಸಲಾಗಿದೆ. ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು ಸ್ವಯಂ ಸುಸ್ಥಿರತೆಗಾಗಿ 'ಸಾಮಾನ್ಯ ಸೇವಾ ಕೇಂದ್ರ'ಗಳಾಗಿ ವೈವಿಧ್ಯಮಯ ವ್ಯವಹಾರ/ ಸೇವೆಗಳನ್ನು ಒದಗಿಸುತ್ತಿವೆ.





### 'ರೈತ ಉತ್ಪನ್ನ ಸಂಸ್ಥೆ'ಗಳ (ಎಫ್‌ಪಿಒ) ಜೊತೆ ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳ ಸಂಯೋಜನೆ

'ರೈತ ಉತ್ಪಾದಕ ಸಂಸ್ಥೆ'ಗಳನ್ನು (ಎಫ್‌ಪಿಒ) ಉತ್ತೇಜಿಸಲು ಸಹಕಾರಿ ಸಂಸ್ಥೆಗಳು ಸಿದ್ಧವಾಗಿವೆ. ಈಗಾಗಲೇ ಅಸ್ತಿತ್ವದಲ್ಲಿರುವ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ 'ಎಫ್‌ಪಿಒ ಯೋಜನೆ' ಅಡಿಯಲ್ಲಿ 'ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಸಂಸ್ಥೆ'ಗೆ (ಎನ್‌ಸಿಡಿಸಿ) ಹೆಚ್ಚುವರಿಯಾಗಿ 1,100 'ಎಫ್‌ಪಿಒ'ಗಳನ್ನು ಹಂಚಿಕೆ ಮಾಡಲು ಭಾರತ ಸರ್ಕಾರ ನಿರ್ಧರಿಸಿದೆ.

ಸಹಕಾರಿ ಸಂಸ್ಥೆಗಳೊಂದಿಗೆ 'ಎಫ್‌ಪಿಒ ಯೋಜನೆ'ಯ ಏಕೀಕರಣದಿಂದಾಗಿ ಕೃಷಿ ಉತ್ಪಾದನೆ, ಒಳಸುರಿ ನಿರ್ವಹಣೆ, ಕೃಷಿ ಉಪಕರಣಗಳು, ಸಂಸ್ಕರಣೆ, ಪ್ಯಾಕೇಜಿಂಗ್, ಸಂಗ್ರಹಣೆ ಮತ್ತು ಸಾರಿಗೆ ಇತ್ಯಾದಿಗಳಲ್ಲಿ ತಮ್ಮ ಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಿಸಲು ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳಿಗೆ ಸಹಾಯಕವಾಗುತ್ತದೆ. ಈ ಏಕೀಕರಣವು ಜೇನು ಸಾಕಾಣಿಕೆ, ಅಣಬೆ ಕೃಷಿ ಮುಂತಾದ ಹೆಚ್ಚಿನ ಆದಾಯದ ಉದ್ಯಮಗಳನ್ನು ಕೈಗೊಳ್ಳಲು ಸಹ 'ಪಿಎಸಿಎಸ್'ಗಳಿಗೆ ಅನುವು ಮಾಡಿಕೊಡುತ್ತದೆ.

### ತೈಲ ಮತ್ತು ಇಂಧನ ವ್ಯವಹಾರದಲ್ಲಿ 'ಪಿಎಸಿಎಸ್'ಗಳನ್ನು ತೊಡಗಿಸಿಕೊಳ್ಳುವುದು

ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು (ಪಿಎಸಿಎಸ್) ಈಗ ಪೆಟ್ರೋಲ್ / ಡೀಸೆಲ್ ಡೀಲರ್‌ಶಿಪ್ ಮತ್ತು ಎಲ್‌ಪಿಜಿ ವಿತರಣೆ ಪರವಾನಗಿ ಪಡೆಯಲು ಅರ್ಹವಾಗಿವೆ. ಅಸ್ತಿತ್ವದಲ್ಲಿರುವ 'ಪಿಎಸಿಎಸ್'ಗಳಿಗೆ ತಮ್ಮ ಬೃಹತ್ ಗ್ರಾಹಕ ಪೆಟ್ರೋಲ್ / ಡೀಸೆಲ್ ದಾಸ್ತಾನನ್ನು ಚಿಲ್ಲರೆ ಮಳಿಗೆಗಳಾಗಿ ಪರಿವರ್ತಿಸಲು ಒಂದು ಬಾರಿಯ ಆಯ್ಕೆಯನ್ನು ಚಲಾಯಿಸಲು ಅವಕಾಶ ನೀಡಲಾಗುವುದು. ಇದಕ್ಕಾಗಿ ನಿಯಮಗಳನ್ನು ಸಡಿಲಿಸಲಾಗಿದೆ. ಈ ಸಕಾರಾತ್ಮಕ ಉಪಕ್ರಮಗಳು ವ್ಯಾಪಾರ ವೈವಿಧ್ಯೀಕರಣವನ್ನು ಖಚಿತಪಡಿಸುವುದಲ್ಲದೆ, ಆದಾಯ ಮತ್ತು ಉದ್ಯೋಗವನ್ನು ಸೃಷ್ಟಿಸುತ್ತವೆ. ಇಂಧನ ಭದ್ರತಾ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳಲು 'ಪಿಎಸಿಎಸ್'ಗಳು ಸಜ್ಜಾಗಿವೆ. ಅವುಗಳು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ (ಎಂಎನ್‌ಆರ್‌ಇ) ವಿವಿಧ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಸಕ್ರಿಯ ಪಾಲುದಾರರಾಗಲಿವೆ. 'ಎಂಎನ್‌ಆರ್‌ಇ'ಯ ಅಸ್ತಿತ್ವದಲ್ಲಿರುವ 'ಪಿಎಂಕುಸುಮ್' ಯೋಜನೆಯು 'ಪಿಎಸಿಎಸ್'ಗಳ ರೈತ ಸದಸ್ಯರಿಗೆ ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅವರ ಕೃಷಿಭೂಮಿಯ






Scanned with ACE Scanner

ಅಂಚಿನಲ್ಲಿ ಫೋಟೋವೋಲ್ಟಾಯಿಕ್ ಮಾಡ್ಯೂಲ್‌ಗಳನ್ನು ಸ್ಥಾಪಿಸುವ ಮೂಲಕ ಹೆಚ್ಚುವರಿ ಆದಾಯವನ್ನು ಖಾತರಿಪಡಿಸಲು ಅನುವು ಮಾಡಿಕೊಡುತ್ತದೆ.

**ರಾಷ್ಟ್ರೀಯ ದತ್ತಾಂಶ ಭಂಡಾರ (ಡೇಟಾಬೇಸ್) ಅಭಿವೃದ್ಧಿ**

ವಲಯ – ನಿರ್ದಿಷ್ಟವಾದ, ವೈವಿಧ್ಯಮಯ ಸಹಕಾರಿ ಸಂಸ್ಥೆಗಳನ್ನು ಪಟ್ಟಿ ಮಾಡುವ ನಿಟ್ಟಿನಲ್ಲಿ ವ್ಯವಸ್ಥಿತ ಹಾಗೂ ಸಂಘಟಿತ ಮಾಹಿತಿಯನ್ನು ಸಂಗ್ರಹಿಸಲು ಸಹಕಾರ ಸಚಿವಾಲಯವು ಸಮಗ್ರ ಸಹಕಾರಿ ದತ್ತಾಂಶ ಭಂಡಾರವನ್ನು ಅನ್ನು ಅಭಿವೃದ್ಧಿಪಡಿಸುತ್ತಿದೆ. ಹಂತಹಂತವಾಗಿ ರಾಷ್ಟ್ರೀಯ ದತ್ತಾಂಶ ಭಂಡಾರವನ್ನು ವಿನ್ಯಾಸಗೊಳಿಸಲು ಮತ್ತು ಅಭಿವೃದ್ಧಿಪಡಿಸಲು ಅಗಾಧ ಮಟ್ಟದ ಕಾರ್ಯಾಚರಣೆ ನಡೆಸಬೇಕಾಯಿತು. ಈ ದತ್ತಾಂಶ ಭಂಡಾರವು ಎಲ್ಲಾ ಕ್ಷೇತ್ರಗಳ ಸಹಕಾರಿ ಸಂಸ್ಥೆಗಳ ಬಗ್ಗೆ ಅಧಿಕೃತ ಮತ್ತು ನವೀಕರಿಸಿದ ದತ್ತಾಂಶವನ್ನು ಸಂಗ್ರಹಿಸುತ್ತದೆ ಮತ್ತು ಆ ಮೂಲಕ ದತ್ತಾಂಶ ವಿಶ್ಲೇಷಣೆ ನಡೆಸಲು, ಸಮಸ್ಯೆಗಳನ್ನು ಕಂಡುಹಿಡಿಯಲು ಮತ್ತು ನೀತಿ ರಚನೆಯನ್ನು ಬೆಂಬಲಿಸಲು ಮಧ್ಯಸ್ಥಗಾರರಿಗೆ ಸಹಾಯ ಮಾಡುತ್ತದೆ.




**ಸಹಕಾರಿ ಸಾಲದ ಕ್ರೋಢೀಕರಣ**

ಸುಮಾರು 13 ಕೋಟಿ ರೈತರು 'ಪಿಎಸಿಎಸ್'ಗಳ ಮೂಲಕ ನೇರವಾಗಿ ಸಹಕಾರಿ ಸಂಘಗಳೊಂದಿಗೆ ಸಂಪರ್ಕ ಹೊಂದಿದ್ದಾರೆ. ವೈವಿಧ್ಯಮಯ ಸಾಲದ ಅಗತ್ಯಗಳಿಗಾಗಿ ಪರಿಣಾಮಕಾರಿ ಹಣಕಾಸು ಮತ್ತು ಮರುಹಣಕಾಸು ಯೋಜನೆಗಳನ್ನು ಸೂಕ್ಷ್ಮ ರೀತಿಯಲ್ಲಿ ರೂಪಿಸುವ ಅಗತ್ಯವಿದೆ. ಸಹಕಾರಿ ಸಾಲ ವ್ಯವಸ್ಥೆಯ ಅಸ್ತಿತ್ವದಲ್ಲಿರುವ ಮೂರು ಹಂತದ ರಚನೆಯನ್ನು ಸಂರಕ್ಷಿಸಲು ಸರ್ಕಾರ ಬದ್ಧವಾಗಿದೆ, ಏಕೆಂದರೆ ಯಾವುದೇ ರಚನಾತ್ಮಕ ದುರ್ಬಲತೆಯು ಸಹಕಾರಿಗಳ ಸಾಲ ಕ್ರೋಢೀಕರಣ, ವಿತರಣೆ, ಹಣಕಾಸು ಮತ್ತು ಮರುಹಣಕಾಸು ವ್ಯವಸ್ಥೆಯನ್ನು ದುರ್ಬಲಗೊಳಿಸಬಹುದು. ಸಹಕಾರ ಸಾಲ ರಚನೆಗಳ ಮೂಲಕ ಅಂದರೆ ರಾಜ್ಯ ಮಟ್ಟದ ಸಾಲ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಂದ (ಡಿಸಿಸಿಬಿ) ಹಿಡಿದು ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳವರೆಗೆ (ಪಿಎಸಿಎಸ್) ಸಾಲದ ಹರಿವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಸಹಕಾರ ಸಚಿವಾಲಯ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಸಾಲ ರಚನೆಯ ಮಧ್ಯವರ್ತಿಯಾದ 'ಡಿಸಿಸಿಬಿ'ಗಳನ್ನು ಬಲಪಡಿಸುವ ಅಗತ್ಯವೂ ಇದೆ. ದೀರ್ಘಾವಧಿ (ಎಲ್‌ಟಿ) ಸಹಕಾರಿ ಸಾಲ ರಚನೆಯನ್ನು ಬಲಪಡಿಸಲು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ (ಎಆರ್‌ಡಿಬಿ) ಗಣಕೀಕರಣಕ್ಕಾಗಿ ಸಚಿವಾಲಯವು ಯೋಜನೆ ರೂಪಿಸುತ್ತಿದೆ. 'ಪಿಸಿಎಆರ್‌ಡಿಬಿ'ಗಳು ಮತ್ತು ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ (ಎಆರ್‌ಡಿಬಿ) ಯೋಜಿತ ಹಾಗೂ ಸಮರ್ಪಕ ಗಣಕೀಕರಣದಿಂದ ಅವುಗಳ ಕಾರ್ಯಾಚರಣೆ ಮತ್ತು ಲಾಭದಾಯಕತೆಯಲ್ಲಿನ ಸಮಸ್ಯೆಗಳು, ಅಸಮರ್ಪಕತೆಗಳು ಮತ್ತು ಅಸಮರ್ಥತೆಗಳನ್ನು ತೊಡೆದುಹಾಕಬಹುದು.

**ಸಹಕಾರಿ ಶಿಕ್ಷಣ ಮತ್ತು ತರಬೇತಿ ಸುಧಾರಣೆ**

ಸಹಕಾರಿ ಸಂಘಗಳ ವ್ಯಾಪ್ತಿ ಹೆಚ್ಚಳ ಮತ್ತು ಬೆಳವಣಿಗೆಗಾಗಿ ಕೇಂದ್ರ ಸರ್ಕಾರ

## 'ಪಿಎಸಿಎಸ್'ಗಳ ಗಣಕೀಕರಣ





Scanned with ACE Scanner

**ಕೋಷ್ಟಕ 6 : ಸಹಕಾರ ಸಂಸ್ಥೆಗಳಿಗೆ ನೀಡಲಾಗುವ ಉಪಕ್ರಮ / ಪರಿಹಾರ ಮತ್ತು ಪ್ರಯೋಜನ**

(ಜುಲೈ 2021 – ಏಪ್ರಿಲ್ 2023)


| ಕ್ರಮ ಸಂಖ್ಯೆ | ಪರಿಹಾರ / ಉಪಕ್ರಮಗಳು | ನಿಬಂಧನೆ | ಪ್ರಯೋಜನಗಳು |
|---|---|---|---|
| 1 | ಆದಾಯ ತೆರಿಗೆ (ಐಟಿ) ಮೇಲಿನ ಸರ್ಚಾರ್ಜ್ | 1 ಕೋಟಿಯಿಂದ 10 ಕೋಟಿ ರೂ.ವರೆಗಿನ ವಾರ್ಷಿಕ ಆದಾಯ ಹೊಂದಿರುವ ಸಹಕಾರಿ ಸಂಸ್ಥೆಗಳಿಗೆ ಸರ್ಚಾರ್ಜ್ ಅನ್ನು ಶೇ.12ರಿಂದ ಶೇ.7ಕ್ಕೆ ಇಳಿಸಲಾಗಿದೆ. | ತೆರಿಗೆ ಹೊರೆ ಇಳಿಕೆ<br>ವ್ಯಾಪಾರ ಚಟುವಟಿಕೆಗಳಿಗೆ ಹೆಚ್ಚಿನ ಬಂಡವಾಳ ಲಭ್ಯತೆ |
| 2 | ಕನಿಷ್ಠ ಪರ್ಯಾಯ ತೆರಿಗೆ (ಎಂಎಟಿ) | ಸಹಕಾರಿ ಸಂಸ್ಥೆಗಳಿಗೆ ಕನಿಷ್ಠ ಪರ್ಯಾಯ ತೆರಿಗೆ ಶೇ.18.5ರಿಂದ ಶೇ.15ಕ್ಕೆ ಇಳಿಕೆ | ಕಂಪನಿಗಳೊಂದಿಗೆ ಸಮಾನತೆಯನ್ನು ಸಾಧಿಸಲಾಗಿದೆ.<br>ಬಲವಾದ ಸಹಕಾರ ವ್ಯಾಪನೆ |
| 3 | 'ಪಿಎಸಿಎಸ್'ಮತ್ತು 'ಪಿ.ಸಿ.ಎ.ಆರ್.ಡಿ.ಬಿ'ಗಳ ನಗದು ಠೇವಣಿ ಮತ್ತು ಅವು ನೀಡುವ ನಗದು ಸಾಲಗಳ ಮಿತಿ ಹೆಚ್ಚಳ | 'ಪಿಎಸಿಎಸ್' ಮತ್ತು 'ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ(ಪಿ.ಸಿ.ಎ.ಆರ್.ಡಿ.ಬಿ.) ನಗದು ಠೇವಣಿ ಮತ್ತು ಅವು ನೀಡುವ ನಗದು ಸಾಲಗಳ ಮಿತಿಯನ್ನು ಪ್ರತಿ ಸದಸ್ಯರಿಗೆ 20,000 ರೂ.ಗಳಿಂದ 2 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. | ಹೆಚ್ಚು ಸಮುದಾಯ ಆರ್ಥಿಕ ಚಟುವಟಿಕೆಗಳು ಹೆಚ್ಚಿದ ಗ್ರಾಮೀಣ ವ್ಯಾಪಾರ ಅವಕಾಶಗಳು |
| 4 | ಹೊಸ ಉತ್ಪಾದನಾ ಸಹಕಾರಿ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ | ಮಾರ್ಚ್ 31, 2024 ರೊಳಗೆ ಉತ್ಪಾದನೆ-ಯನ್ನು ಪ್ರಾರಂಭಿಸುವ ಹೊಸ ಸಹಕಾರಿ ಸಂಸ್ಥೆಗಳ ಮೇಲೆ (30% ವ್ಯತಿರಿಕ್ತವಾಗಿ) 15% ಫ್ಲಾಟ್ ತೆರಿಗೆ ದರ ಘೋಷಿಸಲಾಗಿದೆ | ಸಹಕಾರಿ ಸಂಸ್ಥೆಗಳು ಮತ್ತು ಕಂಪನಿಗಳ ನಡುವಿನ ಸಮಾನತೆ ಬಲವಾದ ಅಡಿಪಾಯ ಮತ್ತು ಸಹಕಾರದ ವ್ಯಾಪಿಸುವಿಕೆ |
| 5 | ಮೂಲದಲ್ಲೇ ತೆರಿಗೆ ಕಡಿತದ (ಟಿಡಿಎಸ್) ಮಿತಿಯಲ್ಲಿ ಹೆಚ್ಚಳ | ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸದೆ (ಟಿಡಿಎಸ್) ನಗದು ಹಿಂಪಡೆಯುವ ಮಿತಿಯನ್ನು ವರ್ಷಕ್ಕೆ 1 ಕೋಟಿ ರೂ.ಗಳಿಂದ 3 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. | ಸಹಕಾರಿ ಸಂಘಗಳಿಗೆ ವ್ಯವಹಾರವನ್ನು ಸುಲಭಗೊಳಿಸಲು ತೊಂದರೆ ರಹಿತ ತೆರಿಗೆ ಅನುಸರಣೆ |
| 6 | ಐಟಿ ಕಾಯ್ದೆಯ ಸೆಕ್ಷನ್ 269 'ಎಸ್.ಟಿ'ಅಡಿಯಲ್ಲಿ ಪರಿಹಾರ | ಸಹಕಾರಿ ಸಂಘಗಳು ನಡೆಸುವ ನಗದು ವಹಿವಾಟಿನ ತೊಂದರೆಗಳನ್ನು ನಿವಾರಿಸಲು ಐಟಿ ಕಾಯ್ದೆಯ ಸೆಕ್ಷನ್ 269 'ಎಸ್.ಟಿ' ಅಡಿಯಲ್ಲಿ ಸ್ಪಷ್ಟೀಕರಣವನ್ನು ನೀಡಲಾಗಿದೆ. | |
| 7 | ಸಹಕಾರಿ ಸಕ್ಕರೆ ಕಾರ್ಖಾನೆ-ಗಳಿಗೆ ತೆರಿಗೆ ವಿನಾಯಿತಿ | ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆ ಅಥವಾ ಸರ್ಕಾರವು ಸೂಚಿಸುವ/ ನಿಗದಿಪಡಿಸುವ ಬೆಲೆವರೆಗಿನ ಪಾವತಿಗೆ ಹೆಚ್ಚುವರಿ ಐಟಿ ಪಾವತಿಸಬೇಕಾಗಿಲ್ಲ. | ರೈತರಿಗೆ ಹೆಚ್ಚಿನ ದರ ಸಂದಾಯ ಹೆಚ್ಚಿನ ಬೆಲೆಯನ್ನು ವೆಚ್ಚ ಎಂದು ವರ್ಗೀಕರಿಸುವ ಮೂಲಕ ತೆರಿಗೆ ಕಡಿತ ಮತ್ತು ಸುಧಾರಿತ ತೆರಿಗೆ ಆಡಳಿತ.<br>ಸಹಕಾರಿ ಸಕ್ಕರೆ ಕೈಗಾರಿಕೆಗಳ ಮೇಲಿನ ತೆರಿಗೆ ಹೊರೆ ಇಳಿಕೆ |
| 8 | ಸಹಕಾರಿ ಸಕ್ಕರೆ ಕೈಗಾರಿಕೆಗಳ ದೀರ್ಘಕಾಲದಿಂದ ಬಾಕಿ ಇರುವ ಸಮಸ್ಯೆಗಳ ಪರಿಹಾರ | ಸಹಕಾರಿ ಸಕ್ಕರೆ ಕಾರ್ಖಾನೆಗಳು 2016-17 ರ ಮೌಲ್ಯಮಾಪನ ವರ್ಷಕ್ಕಿಂತ ಮೊದಲು ಕಬ್ಬು ಬೆಳೆಗಾರರಿಗೆ ಮಾಡಿದ ಪಾವತಿಗಳನ್ನು ಈಗ ವೆಚ್ಚವಾಗಿ ಕ್ಲೈಮ್ ಮಾಡಲಾಗುತ್ತದೆ | ಅಂದಾಜು ಒಟ್ಟು 10,000 ಕೋಟಿ ರೂ. ಪರಿಹಾರ. ದಶಕಗಳಷ್ಟು ಹಳೆಯದಾದ ಐಟಿ ಬಾಕಿ ಮತ್ತು ಸಂಬಂಧಿತ ದಂಡಗಳಿಂದ ಮುಕ್ತಿ.<br>ಬಲವಾದ ಬಂಡವಾಳ ನೆಲೆ |



Scanned with ACE Scanner

| | | | |
|---|---|---|---|
| 9 | ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (ಎನ್.ಸಿ.ಡಿ.ಸಿ.) ಮೂಲಕ 10,000 ಕೋಟಿ ರೂ. | ಸಹಕಾರ ಸಕ್ಕರೆ ಕಾರ್ಖಾನೆಗಳ ಬಲವರ್ಧನೆಗಾಗಿ ಎನ್.ಸಿ.ಡಿ.ಸಿ.ಗೆ 'ಅನುದಾನ ನೆರವು' ಒದಗಿಸುವ 1000 ಕೋಟಿ ರೂ. ಯೋಜನೆ ಸಹಕಾರ ಸಚಿವಾಲಯದಿಂದ ಆರಂಭ | ಎಥೆನಾಲ್ ಘಟಕ, ಸಹ-ಉತ್ಪಾದನಾ ಘಟಕವನ್ನು ಸ್ಥಾಪಿಸಲು ಅಥವಾ ದುಡಿಯುವ ಬಂಡವಾಳದ ಅಗತ್ಯಗಳನ್ನು ಪೂರೈಸಲು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಮಂಜೂರು |
| 10 | 'ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್'ನಲ್ಲಿ ಸಹಕಾರಿ ಬ್ಯಾಂಕುಗಳನ್ನು ಸದಸ್ಯ ಸಾಲ ನೀಡುವ ಸಂಸ್ಥೆಗಳಾಗಿ ಗುರುತಿಸುವುದು | ಅನುಸೂಚಿತವಲ್ಲದ ನಗರ ಸಹಕಾರಿ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು (ಎಸ್‌ಟಿಸಿಬಿ) ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ (ಡಿಸಿಸಿಬಿ) 'ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್'. 'ಸಿಜಿಟಿಎಂಎಸ್‌ಇ'ಅನ್ನು ಸದಸ್ಯ ಸಾಲ ನೀಡುವ ಸಂಸ್ಥೆಯಾಗಿ (ಎಂಎಲ್‌ಸಿ) ಅಧಿಸೂಚಿಸಲಾಗಿದೆ. | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಸಾಲ ನೀಡುವಲ್ಲಿ ಸಹಕಾರಿ ಸಂಸ್ಥೆಗಳ ಪಾಲನ್ನು ಹೆಚ್ಚಿಸುವುದು. ಸಹಕಾರಿ ಹಣಕಾಸು ಸಂಸ್ಥೆಗಳ ಮೂಲಕ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ 85% ವರೆಗೆ ಸಾಲ ಖಾತರಿ |
| 11 | ಸಹಕಾರಿ ಬ್ಯಾಂಕುಗಳಲ್ಲಿನ ತೊಂದರೆಗಳ ಪರಿಹಾರ | ವಾಣಿಜ್ಯ ರಿಯಲ್ ಎಸ್ಟೇಟ್ ವಸತಿ ಸಾಲಗಳನ್ನು ನೀಡಲು 'ಡಿಸಿಸಿಬಿ'ಗಳು ಮತ್ತು 'ಎಸ್‌ಟಿಸಿಬಿ'ಗಳಿಗೆ 'ಆರ್‌ಬಿಐ'ನಿಂದ ಅನುಮತಿ | ವೈಯಕ್ತಿಕ ಗೃಹ ಸಾಲದ ಮಿತಿ ದುಪ್ಪಟ್ಟು ಮನೆ ಬಾಗಿಲ್ಲಲ್ಲೇ ಬ್ಯಾಂಕಿಂಗ್‌ಗೆ ಅನುಮತಿಸಲಾಗಿದೆ |

ಕೈಗೊಂಡಿರುವ ಹೊಸ ಉಪಕ್ರಮಗಳ ಬಗ್ಗೆ ಪ್ರಾಥಮಿಕ ಸದಸ್ಯರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ನಾವು ಶಿಕ್ಷಣ ಮತ್ತು ತರಬೇತಿಗಾಗಿ ಹೆಚ್ಚಿನ ಒತ್ತು ನೀಡುತ್ತಿದ್ದೇವೆ. ಉಪಕ್ರಮಗಳ ಪ್ರಯೋಜನಗಳ ಬಗ್ಗೆ ಜಾಗೃತಿಯನ್ನು ಸ್ಥಳೀಯ ಮತ್ತು ಸುಲಭವಾಗಿ ಅರ್ಥವಾಗುವ ಭಾಷೆಗಳಲ್ಲಿ ಪರಿಣಾಮಕಾರಿಯಾಗಿ ತಲುಪಿಸಲು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಪ್ಯಾನ್-ಇಂಡಿಯಾ ಕಾರ್ಯಚಟುವಟಿಕೆಗಳೊಂದಿಗೆ 'ರಾಷ್ಟ್ರೀಯ ಸಹಕಾರಿ ವಿಶ್ವವಿದ್ಯಾಲಯ'ವನ್ನು ಸ್ಥಾಪಿಸುವ ಬದ್ಧತೆಯನ್ನು ನಾವು ವ್ಯಕ್ತಪಡಿಸಿದ್ದೇವೆ. ಸುಧಾರಿತ ಮತ್ತು ಕಾಲಾತೀತ ಸಹಕಾರಿ ಬೋಧನೆ, ತರಬೇತಿ, ಸಲಹೆ, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಈ ವಿಶ್ವವಿದ್ಯಾಲಯದ ಸ್ಥಾಪನೆಯ ಉದ್ದೇಶವಾಗಿದೆ. ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ, ಸಹಕಾರಿ ಬೋಧನೆ ಮತ್ತು ತರಬೇತಿಗಾಗಿ ಸಮಗ್ರ, ಸಂಯೋಜಿತ ಮತ್ತು ಪ್ರಮಾಣೀಕೃತ ರಚನೆಯನ್ನು ರೂಪಿಸಲಾಗುವುದು. ನುರಿತ ಸ್ಥಳೀಯ, ಸಮರ್ಪಕ ಮತ್ತು ಗುಣಮಟ್ಟದ ಸಿಬ್ಬಂದಿವರ್ಗವನ್ನು ಒದಗಿಸುವುದರ ಜೊತೆಗೆ, ಅಸ್ತಿತ್ವದಲ್ಲಿರುವ ಸಿಬ್ಬಂದಿಯ ಸಾಮರ್ಥ್ಯ ವರ್ಧನೆಯ ಬೇಡಿಕೆಯನ್ನೂ ವಿಶ್ವವಿದ್ಯಾಲಯವು ಪೂರೈಸುತ್ತದೆ.




**ಉಪಸಂಹಾರ ಮತ್ತು ಮುಂದಿನ ಹಾದಿ**

ಪ್ರಧಾನಿಯವರ 'ಸಹಕಾರ್ ಸೆ ಸಮೃದ್ಧಿ' (ಸಹಕಾರದಿಂದ ಸಮೃದ್ಧಿ) ಕನಸನ್ನು ನನಸಾಗಿಸಲು ಸಹಕಾರ ಸಚಿವಾಲಯವು ಬದ್ಧವಾಗಿದೆ. 'ಪರಿಪೂರ್ಣ ಸರ್ಕಾರ'ದ ಕಾರ್ಯವಿಧಾನದ ಮೂಲಕ, ಸರ್ಕಾರದ ಉಪಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಏಕೀಕೃತ ಮತ್ತು ಸಂಘಟಿತ ಕಾರ್ಯವಿಧಾನ ಅನುಸರಿಸಲು ಸಚಿವಾಲಯವು ಸಂಕಲ್ಪತೊಟ್ಟಿದೆ. ಐದು ಟ್ರಿಲಿಯನ್ ಡಾಲರ್ ಭಾರತೀಯ ಆರ್ಥಿಕತೆ ಗುರಿ ಸಾಧನೆ ಮತ್ತು ರೈತರ ಆದಾಯವನ್ನು ಹೆಚ್ಚಿಸುವ ನಮ್ಮ ಪ್ರಧಾನಿಯವರ ಆಶಯದ ಮೇಲೆ ಸಹಕಾರಿ ಸಂಸ್ಥೆಗಳ ಕೊಡುಗೆ ಬಹುಪಟ್ಟು ಸಕಾರಾತ್ಮಕ ಪರಿಣಾಮ ಬೀರುತ್ತದೆ. ಇದನ್ನು ಸಾಧಿಸಲು, ನಾವು ಸಮುದಾಯ ಮಟ್ಟದಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳನ್ನು ಆದ್ಯತೆಯಿಂದ ಸಕ್ರಿಯವಾಗಿ ಸಬಲೀಕರಣಗೊಳಿಸಬೇಕು ಮತ್ತು ಪುನರುಜ್ಜೀವನಗೊಳಿಸಬೇಕು. 'ಪಿಎಸಿಎಸ್'ಗಳನ್ನು ಸಕ್ರಿಯ ಮತ್ತು ಸದೃಢಗೊಳಿಸಲು, ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಒಮ್ಮತದ ಕಾರ್ಯವಿಧಾನ ಅನುಸರಿಸಬೇಕು. ಮತ್ತು 'ಪಿಎಸಿಎಸ್'ಗಳ ಸಬಲೀಕರಣಕ್ಕೆ ಮೀಸಲಾದ ಸಚಿವಾಲಯದ ಉಪಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪರಸ್ಪರ ನೆರವಾಗಬೇಕು.




Scanned with ACE Scanner



ಸಹಕಾರಿ ಸಂಸ್ಥೆಗಳ ಸುಗಮ ಮತ್ತು ಸುಸ್ಥಿರ ಪ್ರಗತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಿವಿಧ ಸಮಸ್ಯೆಗಳನ್ನು ಗುರುತಿಸುವ ಮತ್ತು ಪರಿಹರಿಸುವ ಅವಶ್ಯಕತೆಯಿದೆ. ತಕ್ಷಣವೇ ಗಮನ ಹರಿಸಬೇಕಾದ ಕೆಲವು ಪ್ರಮುಖ ವಿಷಯಗಳೆಂದರೆ – (ಎ) ಸಹಕಾರಿ ಸಂಘಗಳ ವ್ಯಾಪ್ತಿಯಲ್ಲಿ ಪ್ರಾದೇಶಿಕ ಮತ್ತು ವಲಯ ಅಸಮತೋಲನವನ್ನು ಕಡಿಮೆ ಮಾಡುವುದು; (ಬಿ) ನಿಯಂತ್ರಣ ಸಂಕೀರ್ಣತೆಗಳನ್ನು ಪೂರೈಸುವುದು; (ಸಿ) ಆಡಳಿತ, ನಾಯಕತ್ವ ಮತ್ತು ಕಾರ್ಯಾಚರಣೆ ವ್ಯವಸ್ಥೆಗಳನ್ನು ಸುಧಾರಿಸುವುದು; (ಡಿ) ವೃತ್ತಿಪರ ನಿರ್ವಹಣೆಯನ್ನು ಖಚಿತಪಡಿಸುವುದು; (ಇ) ಕಾಲಾತೀತವಾದ ರಚನಾತ್ಮಕ ಸುಧಾರಣಾ ಕ್ರಮಗಳನ್ನು ಪ್ರಾರಂಭಿಸುವುದು, ಇತ್ಯಾದಿ. ಗಂಭೀರವಾಗಿ ಹಾಗೂ ಸಕ್ರಿಯವಾಗಿ ಗಮನ ಹರಿಸಬೇಕಾದ ಸಹಕಾರಿ ಚಳವಳಿಯ ಇತರ ನಿರ್ಣಾಯಕ ಆಯಾಮಗಳೂ ಇವೆ. ಅವುಗಳಲ್ಲಿ – ಕೇಂದ್ರ ರಿಜಿಸ್ಟ್ರಾರ್ ಮತ್ತು ಸಹಕಾರಿಗಳ ರಾಜ್ಯ ರಿಜಿಸ್ಟ್ರಾರ್‌ಗಳ ನಡುವೆ ಪರಿಣಾಮಕಾರಿ ಸಂವಾದ ಮತ್ತು ಸಮನ್ವಯ ಕಾರ್ಯವಿಧಾನ ಸೃಷ್ಟಿಸುವುದು; ಸಹಕಾರಿ ತತ್ವಗಳು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳು, ಪಾರದರ್ಶಕತೆಯ ಕಾರ್ಯವಿಧಾನಗಳು, ಸಮಾನತೆ ರಚನೆ ಮತ್ತು ವೈವಿಧ್ಯೀಕರಣ ಸೇರಿದಂತೆ ಮೂಲಭೂತ ಮೂಲಸೌಕರ್ಯಗಳನ್ನು ಬಲಪಡಿಸುವುದು; ಉದ್ಯಮಶೀಲತೆ, ಬ್ರ್ಯಾಂಡಿಂಗ್, ಮಾರ್ಕೆಟಿಂಗ್ ಉತ್ತೇಜಿಸುವುದು ಮತ್ತು ತಂತ್ರಜ್ಞಾನ ಅಳವಡಿಕೆ, ತರಬೇತಿ, ಶಿಕ್ಷಣದ ವಿನಿಮಯ ಮತ್ತು ಸದಸ್ಯರ ತರಬೇತಿ; ಹೊಸ ಸಹಕಾರಿ ಸಂಘಗಳ ರಚನೆ ಮತ್ತು ಉತ್ತೇಜನ; ಮತ್ತು ಸಾಮಾಜಿಕ ಸಹಕಾರಿ ಸಂಘಗಳ ಉತ್ತೇಜನ ಸೇರಿವೆ.

ಗ್ರಾಮ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಪರಿಣಾಮಕಾರಿ, ಸಮಗ್ರ ಬಹುಮುಖಿ, ಸದೃಢ ಸಹಕಾರಿ ವಾತಾವರಣವನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಎಲ್ಲಾ ಮಧ್ಯಸ್ಥಗಾರರೊಡನೆ ಸೇರಿ ಒಂದು ತಂಡವಾಗಿ ಕೆಲಸ ಮಾಡುವ ಪರಿಕಲ್ಪನೆಯನ್ನು ಸಚಿವಾಲಯದ ಉಪಕ್ರಮಗಳು ಹೊಂದಿವೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಾದ್ಯಂತ




ಸಹಕಾರಿ ಸಂಸ್ಥೆಗಳ ಏಕರೂಪದ ಮತ್ತು ತ್ವರಿತ ವ್ಯಾಪಿಸುವಿಕೆಗಾಗಿ ಸಾಮೂಹಿಕ ಪ್ರಯತ್ನಗಳನ್ನು ಖಚಿತಪಡಿಸುವುದು ಇದರ ಉದ್ದೇಶವಾಗಿದೆ. ಈ ಕಾರ್ಯವು ಕಷ್ಟಕರವೆಂದು ತೋರಬಹುದು, ಆದರೆ ಅಸಾಧ್ಯವೇನಲ್ಲ. ಇದು ಸಹಕಾರಿ ಚಳವಳಿಯ ನಾಯಕರು ಮತ್ತು ಸರ್ಕಾರಗಳ ಮುಖ್ಯಸ್ಥರ ದೃಢ ಮತ್ತು ಸಾಮೂಹಿಕ ಪ್ರಯತ್ನಗಳನ್ನು ಬಯಸುತ್ತದೆ. ಸಹಕಾರಿ ವ್ಯವಸ್ಥೆಯ ಸದಸ್ಯರಲ್ಲಿ ಪ್ರಗತಿಯ ಭರವಸೆಯನ್ನು ತುಂಬಲು ಸಾಮೂಹಿಕ ಪ್ರಯತ್ನವನ್ನು ವಿಸ್ತರಿಸುವುದು ಈಗಿನ ತುರ್ತು ಅಗತ್ಯವಾಗಿದೆ. ನಮ್ಮ ಸಮುದಾಯ ವ್ಯಾಪಾರ ಘಟಕಗಳು ಸಹಕಾರ ಆಧರಿತ ಸಾಮಾಜಿಕ-ಆರ್ಥಿಕ ಪ್ರಗತಿಯ ಮೂಲ ತತ್ವಕ್ಕೆ ಅನುಗುಣವಾಗಿ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದರೆ ಹಾಗೂ ಜನರ ಸಾಮೂಹಿಕ ಕ್ರಿಯೆಯ ಸುಪ್ತ ಸಾಮರ್ಥ್ಯವನ್ನು ಸೂಕ್ತವಾಗಿ ಬಳಸಿಕೊಂಡರೆ 'ಸಹಕಾರದಿಂದ ಸಮೃದ್ಧಿ' ಆಶಯವು ನೈಜ ಅರ್ಥದಲ್ಲಿ ಸಾಕಾರಗೊಳ್ಳುತ್ತದೆ.



# ಸಹಕಾರ ಸಂಘಗಳ ಕಾರ್ಯತಂತ್ರದ ವೈವಿಧ್ಯೀಕರಣ

* ಡಾ. ಮನೀಶಾ ಪಾಲಿವಾಲ

ಹತ್ತೊಂಭತ್ತನೇ ಶತಮಾನದ ಕೊನೆಯ ವರ್ಷಗಳಲ್ಲಿ ತನ್ನ ಮೂಲವನ್ನು ಹೊಂದಿರುವ ಭಾರತದ ಸಹಕಾರ ಆಂದೋಲನವು 1970ರವರೆಗೆ ಸುಲಲಿತವಾಗಿ ಮುನ್ನಡೆಯಿತು ಮತ್ತು ಗಮನಾರ್ಹವಾದ ಪ್ರಗತಿಯನ್ನು ದಾಖಲಿಸಿತು. ನಂತರ ಕೆಲವು ವಿಷಯಗಳು ಇಡೀ ಆಂದೋಲನವನ್ನು ಕುಂಠಿತಗೊಳಿಸಲಾರಂಭಿಸಿದವು ಮತ್ತು ಕಾರ್ಯನೀತಿ ಯೋಜಕರು ಹಾಗೂ ಯೋಜನಾಕರ್ತೃಗಳು ಕಾಲಕ್ರಮೇಣ ಸಹಕಾರ ಆಧರಿತ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಬಗ್ಗೆ ತಮ್ಮ ಲಕ್ಷ್ಯವನ್ನು ಕಡಿಮೆಗೊಳಿಸಿದರು. ಸಹಕಾರ ಕ್ಷೇತ್ರದ ಬೆಳವಣಿಗೆಯ ಅಂತರ್ಗತ ಸಾಮರ್ಥ್ಯದ ಪುನಶ್ಚೇತನಕ್ಕೆ ತಕ್ಷಣದ ಹಾಗೂ ತುರ್ತು ಕಾರ್ಯನೀತಿಯ ಅಗತ್ಯವಿತ್ತು. ಈ ಹಂತದಲ್ಲಿ ಸಹಕಾರ ಕ್ರಿಯೆಗಳ ಮೂಲಕ ಆಂದೋಲನವನ್ನು ಬೇರು ಮಟ್ಟಕ್ಕೆ ಕೊಂಡೊಯ್ಯುವ, ಪುನಶ್ಚೇತನವನ್ನು ಲಕ್ಷ್ಯವಾಗುಳ್ಳ 'ಸಹಕಾರದಿಂದ ಸಮೃದ್ಧಿ'ಗಾಗಿ ಸಹಕಾರ ಸಚಿವಾಲಯವನ್ನು ರಚಿಸಲಾಯಿತು. ಇದು ಆತ್ಮನಿರ್ಭರ ಭಾರತದ ಕನಸನ್ನು ನನಸು ಮಾಡುವುದನ್ನು ತನ್ನ ಗುರಿಯಾಗಿರಿಸಿಕೊಂಡಿತು ಮತ್ತು ಸಹಕಾರ ಸಂಘಗಳ ಸದಸ್ಯರು ಹೊರಗಿನವರ ಭಯ ಅಥವಾ ಪ್ರಭಾವವಿಲ್ಲದೆ ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳಲು ಸಬಲರನ್ನಾಗಿಸುವ ಗುರಿಯನ್ನು ಹೊಂದಿತು. ಆಂದೋಲನವು ದೇಶದಲ್ಲಿ 29 ಕೋಟಿ ಸದಸ್ಯರಿರುವ 8.54 ಲಕ್ಷ ಸಹಕಾರ ಸಂಘಗಳ ನೊಂದಣಿಗೆ ಸಾಕ್ಷಿಯಾಯಿತು. ಸಹಕಾರ ಸಂಘಗಳನ್ನು ಕಾರ್ಪೊರೇಟ್ ಕಂಪನಿಗಳೊಟ್ಟಿಗೆ ಸರಿಸಮಾನವಾಗಿ ಸ್ಪರ್ಧಿಸುವಂತೆ ಸಜ್ಜುಗೊಳಿಸುವುದು ಈ ಕಾಲದ ಅಗತ್ಯವಾಗಿದೆ. ಭಾರತದ ಸಹಕಾರ ಕ್ಷೇತ್ರದ ಪ್ರಗತಿಪರ ಆರ್ಥಿಕ ಮಾದರಿಯು ಉತ್ತರದಾಯಿತ್ವದ ಕೊರತೆ ಮತ್ತು ನಿರ್ವಹಣೆ ಸಂಗತಿಗಳು, ಸಂಘಗಳಲ್ಲೇ ಇರುವ ದುಷ್ಟ ಹಿತಾಸಕ್ತಿಗಳು, ಸಹಯೋಗದ ಕೊರತೆ, ರಾಜಕೀಯ ಮಧ್ಯಪ್ರವೇಶ ಮತ್ತು ವೈವಿಧ್ಯೀಕರಣದ ಕೊರತೆ ಮತ್ತಿತರ ಸಮಸ್ಯೆಗಳಿಂದ ಸಂಕಷ್ಟಕ್ಕೀಡಾಯಿತು.



**ಭಾರತದ ತಾತ್ವಿಕತೆಯಲ್ಲಿ 'ಸಹಕಾರ' ಎನ್ನುವುದು ಹಾಸುಹೊಕ್ಕಾಗಿದೆ. ಪ್ರಧಾನ ಮಂತ್ರಿಯವರ 'ಸಹಕಾರದಿಂದ ಸಮೃದ್ಧಿ' ಹೇಳಿಕೆಯು ಸಹಕಾರ ಸಂಘಗಳ ಆಧುನೀಕರಣ, ಮರುಸಂಘಟನೆ, ಪುನಶ್ಚೇತನಕ್ಕೆ ಬೇಕಾದ ಆಡಳಿತಾತ್ಮಕ, ಶಾಸನಾತ್ಮಕ ಮತ್ತು ಕಾರ್ಯನೀತಿಯ ವಿಶಿಷ್ಟ ಕಾರ್ಯಸೂಚಿಯನ್ನು ನೀಡಿತಲ್ಲದೆ, ಜುಲೈ 6,2021ರಂದು ಸಹಕಾರ ಸಚಿವಾಲಯದ ಸೃಷ್ಟಿಗೆ ಸಾಕ್ಷಿಯಾಯಿತು. ಸಹಕಾರ ಸಂಘಗಳನ್ನು ಕಾರ್ಪೊರೇಟ್ ವ್ಯಾಪಾರ ಸಂಸ್ಥೆಗಳೊಂದಿಗೆ ಸ್ಪರ್ಧಿಸುವಂತೆ ಸಮುದಾಯದ ಹಂತದಿಂದ ರಾಷ್ಟ್ರೀಯ ಹಂತದವರೆಗೆ ಸ್ಪರ್ಧಾತ್ಮಕವಾಗಿಸಲು ಮತ್ತು ಪ್ರಸ್ತುತವಾಗಿರುವಂತೆ ಸಬಲಗೊಳಿಸಲು ಅವುಗಳ ವಹಿವಾಟನ್ನು ವೈವಿಧ್ಯೀಕರಿಸುವುದು ಪ್ರಸ್ತುತದ ಅಗತ್ಯವಾಗಿರಲಿದೆ.**

* ಪ್ರಾಧ್ಯಾಪಕರು, ಶ್ರೀ ಬಾಲಾಜಿ ವಿಶ್ವವಿದ್ಯಾನಿಲಯ, ಪುಣೆ, ಮಹಾರಾಷ್ಟ್ರ. ಇಮೇಲ್: mnpaliwal@gmail.com



Scanned with ACE Scanner

## ವ್ಯವಹಾರ ವೈವಿಧ್ಯೀಕರಣದಿಂದ ಲಾಭ ಹೆಚ್ಚಳ:

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಬುಡಕಟ್ಟು ಗ್ರಾಮವಾದ ಸಿಟ್ಟಿಲಿಂಗಿಯ 500ಕ್ಕೂ ಅಧಿಕ ಗ್ರಾಮಸ್ಥರು ಕೈಜೋಡಿಸಿ, 2004ರಲ್ಲಿ ಸಿಟ್ಟಿಲಿಂಗಿ ಸಾವಯವ ರೈತರ ಸಂಘ (ಸೊಫಾ-ಎಸ್‌ಓಎಫ್‌ಎ) ಹೆಸರಿನ ಸಹಕಾರ ಸೊಸೈಟಿ ರಚಿಸಿದರು. ಪ್ರತಿಯೊಬ್ಬರೂ ಕನಿಷ್ಠ 2.5 ಎಕರೆ ಭೂಮಿಯಲ್ಲಿ ರಾಗಿ, ಜೋಳ, ನವಣೆ ಮತ್ತು ಸಜ್ಜೆ ಹಾಗೂ ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ಅರಿಶಿಣ, ನೆಲಗಡಲೆ ಮತ್ತು ತರಕಾರಿಗಳನ್ನು ಬೆಳೆದರು. 'ಸೊಫಾ' ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಬೆಳೆ ಇಡಲು ಸಲಹೆ ನೀಡಿ, ಎಲ್ಲರೂ ಒಂದೇ ಬೆಳೆ ಬೆಳೆಯದಂತೆ ನೋಡಿಕೊಂಡು ಸದಸ್ಯರ ಆರ್ಥಿಕ ಮತ್ತು ಹಣಕಾಸು ಸ್ಥಿತಿಯನ್ನು ಖಾತ್ರಿಗೊಳಿಸುತ್ತದೆ ಮತ್ತು ಗ್ರಾಹಕರಿಗೆ ವೈವಿಧ್ಯಮಯ ಉತ್ಪನ್ನಗಳನ್ನು ಪೂರೈಸುತ್ತದೆ. ಸದಸ್ಯರು ಸಿರಿಧಾನ್ಯ ಆಧರಿತ ಬಿಸ್ಕತ್, ಆರೋಗ್ಯ ಮಿಶ್ರಣಗಳು, ಹಪ್ಪಳ ಇತ್ಯಾದಿಯ ಉತ್ಪಾದನೆ ಮತ್ತು ಮಾರುಕಟ್ಟೆ ಮಾಡುತ್ತಿದ್ದಾರೆ. 40ಕ್ಕೂ ಅಧಿಕ ಮಳಿಗೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿಯೊಂದೂ ಮಾಸಿಕ 50,000 ರೂ. ವಹಿವಾಟು ನಡೆಸುತ್ತಿವೆ. 'ಸೊಫಾ' ಕೃಷಿ ವಹಿವಾಟಿಗೂ ಮುಂದಾಗಿದ್ದು, ಸಾವಯವ ಗೊಬ್ಬರ ಉತ್ಪಾದನೆಯಲ್ಲದೆ, ನರ್ಸರಿಗಳು ಮತ್ತು ಜೈವಿಕ ಗೊಬ್ಬರ ಘಟಕಗಳನ್ನು ನಿರ್ವಹಿಸುತ್ತಿದೆ. ಇವು ವಾರ್ಷಿಕ 25 ಲಕ್ಷ ರೂ. ವಹಿವಾಟು ನಡೆಸುತ್ತಿವೆ.






### ವ್ಯವಹಾರದ ವೈವಿಧ್ಯೀಕರಣದ ಅಗತ್ಯ

ಯಾವುದೇ ವ್ಯವಹಾರ ಆರ್ಥಿಕ-ವಾಗಿ ಲಾಭದಾಯಕವಾಗಿ ಇರಬೇಕೆಂದರೆ, ಅದು ಪ್ರಾಥಮಿಕ ಗ್ರಾಹಕರು ಹಾಗೂ ಮಾರುಕಟ್ಟೆಯಾಚೆಗೆ ದೃಷ್ಟಿ ಹರಿಸಬೇಕಾಗುತ್ತದೆ. ಹೊಸ ಉತ್ಪನ್ನಗಳು ಹಾಗೂ ಸೇವೆಗಳಿಗೆ ಸಂಭಾವ್ಯ ಮಾರುಕಟ್ಟೆಯನ್ನು ಶೋಧಿಸಬೇಕಾಗುತ್ತದೆ.

ವೈವಿಧ್ಯೀಕರಣವಿಲ್ಲದಿದ್ದರೆ ಜಡತ್ವ ತಲೆದೋರಿ, ಭವಿಷ್ಯದ ಬೆಳವಣಿಗೆಗೆ ತಡೆಯೊಡ್ಡುತ್ತದೆ. ಅಷ್ಟಲ್ಲದೆ, ಕಾರ್ಯತಂತ್ರ ವೈವಿಧ್ಯೀಕರಣವು ಉದ್ಯಮವೊಂದು ಸಂಶೋಧನೆ ಮತ್ತು ಅಭಿವೃದ್ಧಿ, ಮಾರುಕಟ್ಟೆ, ಉತ್ಪನ್ನಗಳ ಅಭಿವೃದ್ಧಿ ಇತ್ಯಾದಿಗೆ ಬಂಡವಾಳ ಹೂಡುವ ಮೂಲಕ ಮಾರುಕಟ್ಟೆಯಲ್ಲಿ ತನ್ನ ಪ್ರಸ್ತುತತೆಯನ್ನು ಖಾತ್ರಿಗೊಳಿಸಲು ನೆರವಾಗುತ್ತದೆ ಮತ್ತು ಅಗತ್ಯಗಳನ್ನು ಇನ್ನೂ ಪೂರೈಸಿಕೊಳ್ಳದ ಗ್ರಾಹಕರನ್ನು ಗುರುತಿಸಲು ಹಾಗೂ ಹೊರಗೆ ಮಾರುಕಟ್ಟೆಯನ್ನು ಕಂಡುಕೊಳ್ಳಲು ನೆರವಾಗುವ ಮೂಲಕ ದೀರ್ಘಾವಧಿಯಲ್ಲಿ ಲಾಭ ಗಳಿಕೆ ಹಾಗೂ ಸಂಪತ್ತು ಸೃಷ್ಟಿಸಲು ಸಬಲಗೊಳಿಸುತ್ತದೆ.








### ಸಹಕಾರ ಸಂಘಗಳ ವ್ಯಾಪಾರ ವೈವಿಧ್ಯೀಕರಣ:


ಸಂಸ್ಥೆಯೊಂದು ಲಾಭ ಮಾಡುವ ಉದ್ದೇಶದಿಂದ ವಾಣಿಜ್ಯಿಕ, ಕೈಗಾರಿಕಾ ಅಥವಾ ವೃತ್ತಿಪರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೆ, ಅದು ವ್ಯವಹಾರ ಮಾಡುತ್ತಿದೆ ಎಂದು ಹೇಳಬಹುದು. ಸಹಕಾರ ಸಂಸ್ಥೆಯು ಶಾಸನಬದ್ಧವಾಗಿ ರಚನೆಯಾದ ಘಟಕವಾಗಿದ್ದು, ಸಹಕಾರದ ತತ್ವಗಳನ್ನು ಅನುಸರಿಸುತ್ತದೆ ಹಾಗೂ ತನ್ನ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸಲು ಕೆಲಸ ಮಾಡುತ್ತದೆ. ವ್ಯಾಪಾರದ ಉದ್ದೇಶವನ್ನು

**ಸಹಕಾರದ ಮೂಲಕ ಮಹಿಳಾ ಸಬಲೀಕರಣ:**




ಮಹಾರಾಷ್ಟ್ರದ ಮಸ್ವಾಡ್‌ನಲ್ಲಿ ಮುಖ್ಯ ಕಚೇರಿ ಇರುವ ಮಹಿಳಾ ಕೇಂದ್ರಿತ ಸೂಕ್ಷ್ಮ ವ್ಯವಹಾರ ಸಹಕಾರ ಸಂಸ್ಥೆ ಮನ್‌ದೇಶಿಯನ್ನು 1997ರಲ್ಲಿ ಸ್ಥಾಪಿಸಲಾಯಿತು. ಗ್ರಾಮೀಣ ಮಹಿಳೆಯರನ್ನು ಸಾಮಾಜಿಕವಾಗಿ ಸಂಘಟಿಸುವ ಮೂಲಕ ಆರ್ಥಿಕ ಸಾಕ್ಷರತೆ, ವ್ಯವಹಾರ ಕೌಶಲ ಅಭಿವೃದ್ಧಿ ಮತ್ತು ಸಮಯಕ್ಕೆ ಸರಿಯಾಗಿ, ಸಾಲುವಷ್ಟು ಹಾಗೂ ಕೈಗೆಟಕುವ ದರದಲ್ಲಿ ಹಣಕಾಸು ಸೇವೆಯನ್ನು ಒದಗಿಸುವುದು ಅದರ ಉದ್ದೇಶ. ಈವರೆಗೆ ಸಂಘ 2,000 ಕೋಟಿ ರೂ.ನಷ್ಟು ಸಾಲ ನೀಡಿದೆ ಮತ್ತು ಗ್ರಾಮೀಣ ಮಹಾರಾಷ್ಟ್ರದ 4 ಲಕ್ಷಕ್ಕೂ ಹೆಚ್ಚು ಉದ್ಯಮಿಗಳಿಗೆ ತರಬೇತಿ ನೀಡಿದೆ. ಮೊಬೈಲ್ ಎಟಿಎಂಗಳ ಮೂಲಕ 300ಕ್ಕೂ ಅಧಿಕ ಗ್ರಾಮಗಳು ಸಾಲ ಪಡೆದುಕೊಳ್ಳುತ್ತಿವೆ. ಮಹಿಳಾ ಉದ್ಯಮಿಗಳಿಗೆ ಬೆಂಬಲ ನೀಡಲು ಹಲವು ಕಾರ್ಯಕ್ರಮಗಳು ಹಾಗೂ ಸೇವೆಗಳನ್ನು ಒದಗಿಸುತ್ತಿದೆ; ಸೂಕ್ಷ್ಮ ಸಾಲ, ವೃತ್ತಿಪರ ತರಬೇತಿ, ವ್ಯವಹಾರ ಅಭಿವೃದ್ಧಿ ಮತ್ತು ಮಾರುಕಟ್ಟೆ ಜೋಡಣೆ. ಬ್ಯಾಂಕಿಂಗ್ ಹೊರತಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು, 250ಕ್ಕೂ ಅಧಿಕ ಗ್ರಾಮೀಣ ಮಹಿಳೆಯರಿರುವ ಗ್ರಾಮೀಣ ಬಿಪಿಒ, 4 ದಶಲಕ್ಷ ಕೇಳುಗರಿರುವ ಸಮುದಾಯ ರೇಡಿಯೊ ಮತ್ತು 50 ಬಿಸಿನೆಸ್ ಶಾಲೆಗಳು ಹಾಗೂ ತರಬೇತಿ ಕೇಂದ್ರಗಳನ್ನು ಆರಂಭಿಸಿದೆ. ಮನ್‌ದೇಶಿ ಪ್ರಭಾವ ಆರ್ಥಿಕ ಸಬಲೀಕರಣವನ್ನು ಮೀರಿದ್ದು, ಅದು ತನ್ನ ಸದಸ್ಯರ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿದೆ, ಶಿಕ್ಷಣ ಹಾಗೂ ಆರೋಗ್ಯ ಸೇವೆಗಳಿಗೆ ಪ್ರವೇಶಾವಕಾಶವನ್ನು ಸುಧಾರಿಸಿದೆ. ದೇಶದ ಗ್ರಾಮೀಣ ಮಹಿಳೆಯರು ಯಶಸ್ವಿ ಉದ್ಯಮಿಗಳಾಗಲು ಹಾಗೂ ತಮ್ಮ ಸಮುದಾಯದ ಮುಖಂಡರಾಗಲು ನೆರವಾಗುವ ಮೂಲಕ ಅವರ ಬದುಕನ್ನು ಸ್ಥಿತ್ಯಂತರಗೊಳಿಸಿದ ಮಾರ್ಗದರ್ಶಕ ಸಂಘಟನೆಯಾಗಿದೆ.

ಮೂಲ: ಮನ್‌ದೇಶಿ ಬ್ಯಾಂಕ್ ಮತ್ತು ಪ್ರತಿಷ್ಠಾನ, https://manndeshifoundation.org








ಇಟ್ಟುಕೊಂಡಿರುವ ಸಹಕಾರ ಸಂಘಗಳು ಲಾಭವನ್ನು ಹಂಚಿಕೊಳ್ಳುವ ಇಲ್ಲವೇ ಲಾಭರಹಿತವಾದ ಕಾರಣಗಳನ್ನು ಹೊಂದಿರಬಹುದು. ಅವು ತಮ್ಮ ಸದಸ್ಯರಿಗೆ ಲಭ್ಯವಿಲ್ಲದ ಅಥವಾ ವ್ಯಕ್ತಿಯೊಬ್ಬ ಪಡೆದುಕೊಳ್ಳಲು ದುಬಾರಿಯಾದ ಸರಕುಗಳು ಹಾಗೂ ಸೇವೆಗಳನ್ನು ಒದಗಿಸುವ ಮೂಲಕ ತನ್ನ ಸದಸ್ಯರಿಗೆ ಸೇವೆ ಸಲ್ಲಿಸುತ್ತವೆ. ಸಹಕಾರ ಸಂಘಗಳ ಕಾರ್ಯನಿರ್ವಹಣೆಗೆ ಬಂಡವಾಳ ಬೇಕಾಗುತ್ತದೆ. ಅವು ತಮ್ಮ ಚಟುವಟಿಕೆಗಳಿಗೆ ಹಣ ಹೊಂದಿಸಿಕೊಳ್ಳಲು ದಾರಿಗಳು ಹಾಗೂ ವಿಧಾನಗಳನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಸಂಘಗಳನ್ನು ಚೈತನ್ಯಶೀಲವಾಗಿಸಲು ಹಾಗೂ ವಾಣಿಜ್ಯಿಕವಾಗಿ ಲಾಭದಾಯಕಗೊಳಿಸಲು, ಕಾರ್ಯತಂತ್ರ ವೈವಿಧ್ಯೀಕರಣ ಖಂಡಿತವಾಗಿಯೂ ಅಗತ್ಯವಿದೆ. ಕಾರ್ಪೊರೇಟ್ ಸಂಸ್ಥೆಗಳ ಪ್ರಕಾರ, 'ಕಾರ್ಯತಂತ್ರ' ಎಂದರೆ ಅದರ ಘೋಷಿತ 'ಮುನ್ನೋಟಗಳು' ಮತ್ತು 'ಮಿಷನ್‌ಗಳು'. ಕಾರ್ಯತಂತ್ರದ ನಿರ್ಧಾರಗಳು ಸಾಮಾನ್ಯವಾಗಿ ಸಂಸ್ಥೆಯ ಮುನ್ನೋಟ ಹಾಗೂ ಮಿಷನ್‌ಗೆ ಅನುಗುಣವಾಗಿರುತ್ತವೆ ಹಾಗೂ ಸಂಸ್ಥೆಯ ಬುನಾದಿ ಹಂತದವರೆಗೆ ಕೆಳಮುಖವಾಗಿ ಹರಿಯುತ್ತವೆ. ಆದ್ದರಿಂದ, ಸಹಕಾರ



Scanned with ACE Scanner




ಚಿತ್ರ 1 : ಕಾರ್ಯತಂತ್ರ ನಿರ್ವಹಣೆಯ ಐದು ಅಂಶಗಳು

ಸಂಘಗಳು ಪ್ರಸ್ತುತವಾಗಿರಬೇಕೆಂದಿದ್ದರೆ ಹಾಗೂ ಸ್ಪರ್ಧಾತ್ಮಕವಾಗಿರ ಬೇಕಿದ್ದರೆ, ಸಮುದಾಯದ ಹಂತದಿಂದ ರಾಷ್ಟ್ರ ಮಟ್ಟದವರೆಗೆ ವ್ಯವಹಾರವನ್ನು ವೈವಿಧ್ಯೀಕರಿಸಬೇಕಾಗುತ್ತದೆ.


**ಸಮರ್ಥ ಸಹಕಾರ ವ್ಯಾಪಾರ ಕಾರ್ಯತಂತ್ರಗಳು**

ಸಹಕಾರ ಸಂಘಗಳು ಎಲ್ಲ ಕ್ಷೇತ್ರಗಳಲ್ಲೂ ವಹಿವಾಟು ನಡೆಸುತ್ತವೆ. ಅವು ತಮ್ಮ ಮುನ್ನೋಟವನ್ನು ಹಾಗೂ ... ಹೇಳಿಕೆಯನ್ನು ಸದೃಢಗೊಳಿಸಬೇಕು ... ತಮ್ಮ ಉದ್ದೇಶ ಮತ್ತು ಗುರಿಗಳ... ಎಂಬುದನ್ನು ಸ್ಪಷ್ಟಪಡಿಸಿಕೊಳ್ಳ... ಈ ಮಾಹಿತಿಯು ಅವುಗಳ ವ್ಯಾಪಾರ... ವೈವಿಧ್ಯೀಕರಣಕ್ಕೆ ಕೌಶಲಗಳ... ಅಭಿವೃದ್ಧಿಪಡಿಸಿಕೊಳ್ಳಲು ನೆರವಾಗುತ್ತ... ಕಾರ್ಯತಂತ್ರ ನಿರ್ವಹಣೆಯ... ಐದು ಅಂಶಗಳನ್ನು ವಿಶ್ಲೇಷಿಸು... ಮೂಲಕ ಸಹಕಾರ ಸಂಸ್ಥೆಗಳು ... ವೈವಿಧ್ಯೀಕರಣಗೊಳ್ಳಬಹುದು ಎಂಬುದ... ಚಿತ್ರ 1 ಪರಿಶೀಲಿಸುತ್ತದೆ.

* ಮೊದಲು, ಸಹಕಾರ ಸಂಸ್ಥೆಯು ... ಗುರಿಗಳೇನು, ಅವುಗಳ ... ಉದ್ದೇಶಗಳೇನು ಮತ್ತು ಗುರಿಗಳನ್ನು ಸಾಧಿಸಲು ಏನು ಮಾಡಬೇಕು ಎಂಬುದರ ಸ್ಪಷ್ಟ ರೂಪರೇಷೆಯನ್ನು ನಿರ್ಧರಿಸಬೇಕು

* ಗುರಿಗಳನ್ನು ನಿರ್ಧರಿಸಲು ಸ್ಥಳೀಯ ಪರಿಸ್ಥಿತಿಯ ಅರಿವಿನ ಅಗತ್ಯವಿದೆ. ಆನಂತರ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿಯ ಪರಾಮರ್ಶನ... ಸಾಮರ್ಥ್ಯ, ದೌರ್ಬಲ್ಯ, ಅವಕಾಶ ಮತ್ತು ಅಪಾಯ(ಸ್ವಾಟ್)ದ ವಿಶ್ಲೇಷಣೆಯನ್ನು ಮಾಡಬೇಕಾಗುತ್ತದೆ

* ನಂತರದ ಹೆಜ್ಜೆಯೆಂದರೆ, ಪ್ರತಿಫಲನ, ಆದ್ಯತೆ ನೀಡುವಿಕೆ ಮತ್ತು ನಿರ್ಧಾರ




ಚಿತ್ರ 2: ಕಾರ್ಯಾತ್ಮಕ ವೈವಿಧ್ಯೀಕರಣದ ಮೂಲಕ ಸ್ಪರ್ಧಾತ್ಮಕ ಅನುಕೂಲ



Scanned with ACE Scanner

| ಕೋಷ್ಟಕ 1 : ಸಹಕಾರ ಸಂಘಗಳ ವೈವಿಧ್ಯೀಕರಣ ನಿರ್ಧಾರಗಳು | |
|---|---|
| **ನಮೂನೆಗಳು** | **ವೈವಿಧ್ಯೀಕರಣದ ಮಾರ್ಗಗಳು** |
| ಉತ್ಪನ್ನ ವೈವಿಧ್ಯೀಕರಣ | ಸಹಕಾರ ಸಂಘಗಳು ಹೊಸ ಮಾರುಕಟ್ಟೆಗೆ ಅಥವಾ ಗ್ರಾಹಕರ ಆದ್ಯತೆಗಳು ಹಾಗೂ ಅಭಿರುಚಿಗಳು ಬದಲಾದಂತೆ, ತಮ್ಮ ಉತ್ಪನ್ನ/ಸೇವೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಬದಲಿಸುವುದು. ಉದಾಹರಣೆಗೆ, ದೇಶದ ಅತ್ಯಂತ ದೊಡ್ಡ ಹಾಗೂ ಅತಿ ಯಶಸ್ವಿ ಹೈನುಗಾರಿಕಾ ಸಹಕಾರ ಸಂಸ್ಥೆಯಾದ ಅಮುಲ್ ತನ್ನ ವಹಿವಾಟು ವಿಸ್ತರಿಸಲು ಐಸ್‌ಕ್ರೀಮ್ ಹಾಗೂ ಇನ್ನಿತರ ಘನೀಕೃತ ಹಾಲಿನ ಉತ್ಪನ್ನಗಳನ್ನು 1996ರಲ್ಲಿ ಪರಿಚಯಿಸಿತು. |
| ಭೌಗೋಳಿಕ ವೈವಿಧ್ಯೀಕರಣ | ಸಹಕಾರ ಸಂಸ್ಥೆಗಳು ಹೊಸ ಮಾರುಕಟ್ಟೆಗಳಿಗೆ ಹಾಗೂ ಗ್ರಾಹಕರ ಅಗತ್ಯಗಳನ್ನು ಪೂರೈಸಲು ವೈವಿಧ್ಯಮಯ ಉತ್ಪನ್ನಗಳನ್ನು ಒದಗಿಸುವುದು. ಉದಾಹರಣೆಗೆ, ಕರ್ನಾಟಕ ಹಾಲು ಒಕ್ಕೂಟದ ಉತ್ಪನ್ನವಾದ 'ನಂದಿನಿ ಗುಡ್‌ಲೈಫ್' ಹಾಲನ್ನು ದೇಶದೆಲ್ಲೆಡೆ ಲಭ್ಯವಿರುವಂತೆ ಮಾಡುವ ಕಾರ್ಯತಂತ್ರದನ್ವಯ ವಿವಿಧ ರಾಜ್ಯಗಳ ಪ್ರಮುಖ ಮಳಿಗೆಗಳಲ್ಲಿ ಅಸ್ತಿತ್ವದಲ್ಲಿ ಇರುವಂತೆ ಮಾಡಲಾಗಿದೆ. |
| ಸೇವೆಗಳ ವೈವಿಧ್ಯೀಕರಣ | ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರು ಹಾಗೂ ಗ್ರಾಹಕರ ಅಗತ್ಯಗಳನ್ನು ಪೂರೈಸಲು ತಮ್ಮ ಪ್ರಾಥಮಿಕ ಉತ್ಪನ್ನಗಳು ಹಾಗೂ ಸೇವೆಗಳಲ್ಲದೆ ಹೊಸ ಸೇವೆಗಳನ್ನು ಆರಂಭಿಸಬಹುದು. ಉದಾಹರಣೆಗೆ, ಕೇರಳದ ಅಂಜರಕಂಡಿ ನಗರ ಸಹಕಾರ ಬ್ಯಾಂಕ್, ಬ್ಯಾಂಕಿಂಗ್ ಆಧರಿತ ಪ್ರಾಥಮಿಕ ಉತ್ಪನ್ನಗಳು ಹಾಗೂ ಸೇವೆಗಳನ್ನು ಪೂರೈಸುವುದಲ್ಲದೆ, ತೆಂಗಿನಕಾಯಿ ಆಧರಿತ ಉತ್ಪನ್ನಗಳಾದ ಕೊಬ್ಬರಿ, ಎಳನೀರು/ಹಾಲು/ತೈಲದ ಮಾರಾಟ ಮಾಡುತ್ತದೆ. |
| ಜಂಟಿ ಉಪಕ್ರಮಗಳು | ಸಹಕಾರ ಸಂಸ್ಥೆಗಳು ಅಗತ್ಯ ಸಂಪನ್ಮೂಲ ಹಾಗೂ ಪರಿಣತಿಯನ್ನು ಕ್ರೋಢೀಕರಿಸಲು, ಜಂಟಿ ಉಪಕ್ರಮ (ಜಾಯಿಂಟ್ ವೆಂಚರ್, ಜೆವಿ)ಗಳನ್ನು ಆರಂಭಿಸಬಹುದು. ಉದಾಹರಣೆಗೆ, ಕೃಷಿ ಉತ್ಪನ್ನಗಳನ್ನು ಉತ್ಪಾದಿಸುವ ಸಹಕಾರ ಸಂಸ್ಥೆಯೊಂದು ತಂತ್ರಜ್ಞಾನ ಕಂಪನಿಯೊಟ್ಟಿಗೆ ಜಂಟಿ ಉಪಕ್ರಮ ರಚಿಸಿಕೊಂಡು, ನೂತನ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬಹುದು. ರಸಗೊಬ್ಬರ ಉತ್ಪಾದಿಸುವ ಇಫ್ಕೋ (ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕೋಆಪರೇಟಿವ್ ಲಿಮಿಟೆಡ್) ಸ್ಪೇನ್‌ನ ಕಂಗೆಲೆಡೋಸ್ ಡಿ ನವಾರಾ ಜೊತೆ ಪಂಜಾಬಿನ ಲೂಧಿಯಾನದಲ್ಲಿ ಆಹಾರ ಸಂಸ್ಕರಣೆ ಘಟಕವೊಂದನ್ನು ಸ್ಥಾಪಿಸಲು ಒಪ್ಪಂದ ಮಾಡಿಕೊಂಡಿದೆ. |
| ಲಂಬ ಸಮನ್ವಯ | ಸಹಕಾರ ಸಂಸ್ಥೆಗಳು ತಮ್ಮ ಹಾಲಿ ಕಾರ್ಯಾಚರಣೆಗಳೊಟ್ಟಿಗೆ ಮೇಲ್ಹರಿವು ಅಥವಾ ಕೆಳಹರಿವು ಚಟುವಟಿಕೆಗಳನ್ನು ಲಂಬವಾಗಿ ಕೂಡಿಸಬಹುದು. ಉದಾಹರಣೆಗೆ, ಹೈನು ಸಹಕಾರ ಸಂಸ್ಥೆಯು ಪಶು ಆಹಾರವನ್ನು ಉತ್ಪಾದಿಸಲು ಆರಂಭಿಸಬಹುದು. ಅಮ್ರೇಲಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟವು ಇಫ್ಕೋ ಕಿಸಾನ್ ಸಂಚಾರ್ ಜೊತೆ ಪಶು ಆಹಾರ ಪೂರೈಕೆಗೆ ಮಾಡಿಕೊಂಡ ಜೆವಿ ಇಂಥ ಉಪಕ್ರಮಗಳಲ್ಲೊಂದು. |
| ಸಮತಲ ಸಮನ್ವಯ | ಸಹಕಾರ ಸಂಸ್ಥೆಗಳು ತಮ್ಮಂಥದ್ದೇ ಉತ್ಪನ್ನಗಳನ್ನು ಉತ್ಪಾದಿಸುತ್ತಿರುವ ಸಹಕಾರ ಸಂಸ್ಥೆಗಳು ಅಥವಾ ಕಂಪನಿಗಳೊಟ್ಟಿಗೆ ತಮ್ಮ ಕಾರ್ಯಾಚರಣೆಯನ್ನು ಸಮತಲ ವಿಲೀನಗೊಳಿಸಬಹುದು. ಇದರಿಂದ ಉತ್ಪನ್ನಗಳ ಪ್ರಮಾಣ ಹೆಚ್ಚಳಗೊಂಡು ಗ್ರಾಹಕರು ಹಾಗೂ ಪಾಲುದಾರರಿಗೆ ಗಮನಾರ್ಹ ಆರ್ಥಿಕ ಲಾಭ ಉಂಟಾಗಲಿದೆ. ಉದಾಹರಣೆಗೆ, ಮುಂಬೈ ಮೂಲದ ಬ್ಯಾಂಕೇತರ ಹಣಕಾಸು ಸಂಸ್ಥೆ ಸೆಂಟ್ರಂ ಫೈನಾನ್ಸ್ ಲಿಮಿಟೆಡ್, ಪಂಜಾಬ್ ಆಂಡ್ ಮಹಾರಾಷ್ಟ್ರ ಕೋಆಪರೇಟಿವ್ ಬ್ಯಾಂಕ್‌ನ್ನು ಅರ್ಜನೆ ಮಾಡಿಕೊಂಡು, ಅದರ ಮಾರುಕಟ್ಟೆಯನ್ನು ಪಡೆದುಕೊಂಡಿತು. |



Scanned with ACE Scanner

ತೆಗೆದುಕೊಳ್ಳುವ ಪ್ರಕ್ರಿಯೆಗೆ ಇರುವ ಆಯ್ಕೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಗುರಿಗಳನ್ನು ಸಾಧಿಸಲು ಸೂಕ್ತವಾದ ಕಾರ್ಯತಂತ್ರವನ್ನು ಸೂತ್ರೀಕರಿಸುವುದು. ಬಳಿಕ, ಕಾರ್ಯತಂತ್ರವನ್ನು ರಚಿಸಲು ಪರ್ಯಾಯ ಆಯ್ಕೆಗಳ ಮೌಲ್ಯಮಾಪನ ಮಾಡಬೇಕು

* ಕಾರ್ಯತಂತ್ರದ ಸೂತ್ರೀಕರಣದ ಬಳಿಕ ಅದನ್ನು ಸಾಧಿಸುವ ಜವಾಬ್ದಾರಿ ವಹಿಸಿಕೊಂಡಿರುವ ವ್ಯಕ್ತಿಗೆ ಲಭ್ಯ ಸಂಪನ್ಮೂಲಗಳು, ಸಿಬ್ಬಂದಿ ಹಾಗೂ ದಾರಿಗಳು ಹಾಗೂ ವಿಧಾನಗಳ ಅಧಿಕಾರವನ್ನು ವಹಿಸಿಕೊಡಬೇಕು. ಅವರು ಆಯ್ಕೆ ಮಾಡಿಕೊಂಡ ಯೋಜನೆಗಳನ್ನು ಆಚರಣೆಗೆ ತರುತ್ತಾರೆ, ಸಂಪನ್ಮೂಲಗಳನ್ನು ಮುನ್ನಡೆಸುತ್ತಾರೆ ಮತ್ತು ಕಾರ್ಯತಂತ್ರವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಬೇಕಾದ ಮಾರ್ಗಗಳನ್ನು ಗುರುತಿಸುತ್ತಾರೆ

* ಕೊನೆಯ ಹೆಜ್ಜೆಯೆಂದರೆ, ಸಮ್ಮತಿಸಿದ ಕಾಲಾವಧಿಯಲ್ಲಿ / ಪ್ರಮಾಣೀಕರಣ ವಿಧಾನದಲ್ಲಿ ಕಾರ್ಯತಂತ್ರವು ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದರ ಅವಲೋಕನಕ್ಕೆ ಮಧ್ಯಂತರ / ನಿಗದಿಪಡಿಸಿದ ಕಾಲಾವಧಿಗೊಮ್ಮೆ ಪರಾಮರ್ಶನ ಮಾಡುವುದು ಮತ್ತು ಅಗತ್ಯವಿದ್ದಲ್ಲಿ ಸರಿಗೊಳಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು

**ಸಹಕಾರ ಸಂಘಗಳ ಕಾರ್ಯತಂತ್ರದ ವೈವಿಧ್ಯೀಕರಣ:**

ಸದಸ್ಯರು ನಿರ್ಧರಿಸಿದ ಕಾರ್ಯತಂತ್ರದ ಉದ್ದೇಶಗಳನ್ನು ಸಾಧಿಸಲು ಯಾವ ರೀತಿ ವೈವಿಧ್ಯೀಕರಣ ಆಗಬೇಕು ಎಂಬುದನ್ನು (ಚಿತ್ರ 1-ರಲ್ಲಿ ತೋರಿಸಿದ ಮಾದರಿಯಂತೆ)ಸಹಕಾರ ಸಂಘಗಳು ನಿರ್ಧರಿಸಬೇಕಾಗುತ್ತದೆ (ಕೋಷ್ಟಕ 1)

**ಪರಿಸಮಾಪ್ತಿ**

ಸಹಕಾರ ಸಚಿವರು ಸಮುದಾಯ ಮುಂಚೂಣಿಯಲ್ಲಿರುವ ಸಹಕಾರ ಆರ್ಥಿಕ ಅಭಿವೃದ್ಧಿ ಮಾದರಿಯ ಸಾಮರ್ಥ್ಯದ ಬಗ್ಗೆ ಹಲವು ವೇದಿಕೆಗಳಲ್ಲಿ ಪದೇಪದೇ ಹೇಳಿದ್ದಾರೆ. ಕೇಂದ್ರ ಸರ್ಕಾರವು ಚಾಲ್ತಿಯಲ್ಲಿರುವ ಪ್ರಾಥಮಿಕ ಸಹಕಾರ ಸಂಘಗಳ ಬಲವರ್ಧನೆ, ನಿಷ್ಕ್ರಿಯವಾಗಿರುವ ಸಂಘಗಳ ಪುನರುಜ್ಜೀವನ ಜೊತೆಗೆ ದೇಶದಲ್ಲಿ ಮುಂದಿನ 4-5 ವರ್ಷದಲ್ಲಿ ಕನಿಷ್ಠ 2 ಲಕ್ಷ ಹೆಚ್ಚುವರಿ ಪ್ರಾಥಮಿಕ ಹಂತದ ಸಹಕಾರ ಸಂಘಗಳನ್ನು ರಚಿಸುವ ಪ್ರಾಮಾಣಿಕ ಉದ್ದೇಶ ಹೊಂದಿದೆ. ಸಹಕಾರ ಸಚಿವಾಲಯವು ಸಚಿವರ ಮಾರ್ಗದರ್ಶನದಡಿ ಕಾರ್ಯತಂತ್ರದ ವೈವಿಧ್ಯೀಕರಣದ ಮೂಲಕ ಸ್ಪರ್ಧಾತ್ಮಕ ಅನುಕೂಲವನ್ನು ಗಳಿಸಿಕೊಳ್ಳುವಿಕೆಯನ್ನು ಖಾತ್ರಿಪಡಿಸುವ ಅಗತ್ಯವಿದೆ. ಕಾರ್ಯತಂತ್ರದ ವೈವಿಧ್ಯೀಕರಣ ಉಪಕ್ರಮದುದ್ದಕ್ಕೂ ಸಾಮರ್ಥ್ಯಗಳು, ಮಿಷನ್ ಹಾಗೂ ಮೌಲ್ಯಗಳ ಕುರಿತ ಮಾಹಿತಿಯನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಬೇಕಲ್ಲದೆ, ಸದಸ್ಯರ ಒಳಗೊಳ್ಳುವಿಕೆ ಹಾಗೂ ಬೆಂಬಲದ ಅಗತ್ಯವಿದೆ. ಸಹಕಾರ ಸಂಸ್ಥೆಗಳ ವಿಶಿಷ್ಟ ಸಾಮರ್ಥ್ಯಗಳು / ಮತ್ತು ಅರ್ಹತೆಗಳನ್ನು ಬಳಸಿಕೊಂಡು ಹಾಗೂ ಅವುಗಳ ಮಿಷನ್ ಮತ್ತು ಮೌಲ್ಯಗಳೊಟ್ಟಿಗೆ ವೈವಿಧ್ಯೀಕರಣ ಅವಕಾಶಗಳನ್ನು ಜೊತೆಗೂಡಿಸುವ ಮೂಲಕ ಹೊಸ ಮಾರುಕಟ್ಟೆಗಳು ಹಾಗೂ ಉತ್ಪನ್ನಗಳ ಬೆಳವಣಿಗೆಯನ್ನು ಉತ್ತೇಜಿಸಬಹುದು. ಭಾರತದಲ್ಲಿ ಸಹಕಾರ ಸಂಸ್ಥೆಗಳ ಕಾರ್ಯತಂತ್ರಗಳ ವೈವಿಧ್ಯೀಕರಣದಿಂದ ನಿರ್ದಿಷ್ಟ ಮಾರುಕಟ್ಟೆಗಳ ಮೇಲಿನ ಅವಲಂಬನೆ ಕಡಿಮೆಗೊಂಡು, ಗ್ರಾಹಕ ನೆಲೆಯನ್ನು ವಿಸ್ತರಿಸುತ್ತದೆ ಮತ್ತು ಗ್ರಾಹಕರ ಅಗತ್ಯಗಳನ್ನು ಉತ್ತಮವಾಗಿ ಪೂರೈಸಲು ನೆರವಾಗುತ್ತದೆ. ಮಾರುಕಟ್ಟೆಯ ಅಗತ್ಯಗಳನ್ನು ತೀರಿಸುವ ಸಹಕಾರ ಸಂಸ್ಥೆಗಳು ಹೆಚ್ಚು ಪ್ರಸ್ತುತವಾಗುತ್ತವೆ. ದೀರ್ಘಾವಧಿಯಲ್ಲಿ ಕಾರ್ಯತಂತ್ರಗಳು ಅನುಕೂಲ ಹಾಗೂ ಸ್ಥಾನವನ್ನು ಬೆಳೆಸಿಕೊಳ್ಳಲು ನೆರವಾಗಲಿದ್ದು, ತಮ್ಮ ಚಟುವಟಿಕೆಗಳ ವ್ಯೂಹಾತ್ಮಕ ವೈವಿಧ್ಯೀಕರಣದಿಂದ ಎಲ್ಲರನ್ನೂ ಒಳಗೊಂಡು ಲಾಭದಾಯಕವಾಗುತ್ತವೆ.


**ಯೋಜನಾ**

**ಆಗಸ್ಟ್ 2023 ಸಂಚಿಕೆಯ ವಿಷಯ**

**ಸ್ವಾತಂತ್ರ್ಯದ ಅಮೃತ ಮಹೋತ್ಸವ**





Scanned with ACE Scanner

# ಡಿಜಿಟಲೀಕರಣದ ಮೂಲಕ ಸಶಕ್ತೀಕರಣ

* ಅಂಶು ಸಿಂಗ್

**ವೇಗವಾಗಿ ಬೆಳೆಯುತ್ತಿರುವ ಇಂದಿನ ತಾಂತ್ರಿಕ ಜೀವನದಲ್ಲಿ ಗ್ರಾಮೀಣ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರು ಅಂದರೆ ರೈತಾಪಿ ವರ್ಗದವರ ಸಮಗ್ರ ಏಳಿಗೆಗಾಗಿ ಸಾಂಪ್ರದಾಯಿಕ ಪದ್ಧತಿಗಿಂತ ವಿಭಿನ್ನವಾಗಿ ಮತ್ತು ವಿಶಿಷ್ಟವಾಗಿ ಸೇವೆ ಒದಗಿಸುವುದು ತುರ್ತಿನ ಅಗತ್ಯಗಳಲ್ಲಿ ಒಂದಾಗಿದೆ. ಬ್ಯಾಂಕಿಂಗ್ ಸೇವೆಗಳು ಇನ್ನಷ್ಟು ಕಡಿಮೆ ವೆಚ್ಚದಾಯಕವಾಗಬೇಕು, ಇನ್ನಷ್ಟು ಪರಿಣಾಮಕಾರಿಯಾಗಬೇಕು, ಇನ್ನು ತ್ವರಿತಗೊಳ್ಳಬೇಕು ಮತ್ತು ಇನ್ನಷ್ಟು ಸುಭದ್ರವಾಗಿರಬೇಕು ಎಂಬುದು ಇಂದಿನ ಆಶಯವಾಗಿದೆ. ಇಂದು ಕೃಷಿಗೆ ಸಾಲ ನೀಡುವ ಪದ್ಧತಿಯಲ್ಲಿ ಬಹಳಷ್ಟು ಬದಲಾವಣೆ ಆಗಿದ್ದು, ಸಾಲದ ಅಗತ್ಯಗಳು ಕೇವಲ ಆಹಾರ ಧಾನ್ಯಗಳ ಉತ್ಪಾದನೆಗೆ ಮಾತ್ರ ಸೀಮಿತವಾಗಿಲ್ಲ. ರೈತನ ಸಾಲದ ಅವಶ್ಯಕತೆ ಇದಕ್ಕಿಂತ ವಿಭಿನ್ನವಾಗಿ ಇನ್ನಿತರ ರಂಗಗಳಲ್ಲೂ ವಿಸ್ತರಿಸಿಕೊಂಡಿದೆ ಎಂಬುವುದು ವಾಸ್ತವ ಸಂಗತಿ. ಹೀಗಾಗಿ ರೈತರ ಬೇಡಿಕೆಗೆ ಅನುಗುಣವಾಗಿ ಗ್ರಾಮೀಣ ಪತ್ತಿನ ಸಹಕಾರ ಸಂಘಗಳು ಸಾಲ ನೀಡಲು ಅಪಾರ ಅವಕಾಶಗಳನ್ನು ಹೊಂದಿವೆ.**

ಭಾರತದಲ್ಲಿ ಸಾಮಾಜಿಕ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ಸಹಕಾರ ಸಂಘಗಳು ಮಹತ್ತರ ಪಾತ್ರವನ್ನು ವಹಿಸುತ್ತಲೇ ಬಂದಿವೆ. ದೇಶದ ಒಟ್ಟಾರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಗತ್ಯಕ್ಕೆ ತಕ್ಕಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಹಕಾರ ಸಂಘಗಳು ಅಭಿವೃದ್ಧಿ ಅಂತರವನ್ನು ಭರಿಸುವ ಅಪಾರ ಸಾಮರ್ಥ್ಯವನ್ನು ಹೊಂದಿವೆ.



ಗ್ರಾಮೀಣ ಭಾಗದಲ್ಲಿ ಸಹಕಾರಿ ಪತ್ತಿನ ಸಂಘಗಳು ಸಾಲ ಕ್ರೋಢೀಕರಣ ಮತ್ತು ಕೃಷಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸಿವೆ. ಅಲ್ಪಾವಧಿ ಗ್ರಾಮೀಣ ಸಹಕಾರ ಪತ್ತಿನ ಸಂಘಗಳು ಎಸ್‌ಟಿಸಿಸಿಎಸ್ ಮೂರು ಹಂತದವುಗಳಾಗಿದ್ದು ಅವುಗಳೆಂದರೆ ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರ ಬ್ಯಾಂಕ್‌ಗಳು (ಎಸ್‌ಟಿಸಿಬಿಗಳು), ಜಿಲ್ಲಾ ಮಟ್ಟದಲ್ಲಿ ಕೇಂದ್ರೀಯ ಸಹಕಾರ ಬ್ಯಾಂಕ್‌ಗಳು (ಡಿಸಿಸಿಬಿಗಳು) ಮತ್ತು ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿಎಸಿಎಸ್‌ಗಳು). ಈ ಮಾದರಿಯ/ವ್ಯವಸ್ಥೆಯ ಮುಖ್ಯ ಉದ್ದೇಶವೆಂದರೆ ಸಕಾಲಿಕವಾಗಿ, ಅಗತ್ಯಕ್ಕೆ ತಕ್ಕಷ್ಟು ಮತ್ತು ಕೈಗೆಟುಕುವ ದರದಲ್ಲಿ ರೈತರಿಗೆ ಕೃಷಿ ಸಾಲವನ್ನು ವಿತರಿಸುವ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಗುರಿಗಳನ್ನು ಸಾಧಿಸುವುದು. ಇದಕ್ಕಾಗಿ ಸ್ವ ಸಹಾಯ ಗುಂಪುಗಳು ಮತ್ತು ಗ್ರಾಮ ಮಟ್ಟದಲ್ಲಿ ಸಮುದಾಯ ಭಾಗಿತ್ವದ ಆಧಾರದ ಮೇಲೆ ಲಭ್ಯವಿರುವ ಸಂಪನ್ಮೂಲವನ್ನು ಉತ್ಪಾದನೆ, ವಿತರಣೆ ಮತ್ತು ಕ್ರೋಢೀಕರಣದ ಸಾಮಾಜಿಕ ತತ್ವದ ಆಧಾರದ ಮೇಲೆ ನಿಯಂತ್ರಣ ಸಾಧಿಸಿ ಗುರಿ ತಲುಪುವುದು ಇದರ ಮುಖ್ಯ ಉದ್ದೇಶಗಳಲ್ಲಿ ಸೇರಿವೆ. ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರು ಒಂದರ್ಥದಲ್ಲಿ ಅವರೇ ಮಾಲಿಕರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಹತ್ತಿರದ ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕ್‌ಗಳಿಗೆ ಜೋಡಿಸಿರಲಾಗುತ್ತದೆ. ಅದೇ ರೀತಿ ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕ್‌ಗಳು ರಾಜ್ಯ ಮಟ್ಟದ ಸಹಕಾರ ಸಂಘದ ಸದಸ್ಯರಾಗಿರುತ್ತಾರೆ. ಸದಸ್ಯರೇ ಕೇಂದ್ರವಾಗಿರುವ, ಸಮುದಾಯ ಆಧರಿತ

* ಸಹಕಾರ ಬ್ಯಾಂಕಿಂಗ್ ಮತ್ತು ಹಣಕಾಸು ವಿಚಾರದಲ್ಲಿ ಪರಿಣಿತರು. Email: knowanshu@gmail.com



Scanned with ACE Scanner

ನೆಲೆಯಲ್ಲಿ ರೂಪುಗೊಂಡಿರುವ ಈ ಸಂಸ್ಥೆಗಳು ತಮ್ಮ ಸದಸ್ಯರ ಮನೆ ಮನೆಗೆ ಆರ್ಥಿಕ ಸಹಾಯವು ದೊರೆಯುವ ನಿಟ್ಟಿನಲ್ಲಿ ಸಂಘಟನಾತ್ಮಕವಾಗಿ ಕೆಲಸ ಮಾಡಬೇಕಿದೆ. ಈ ಸಂಸ್ಥೆಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳ ವ್ಯಾಪ್ತಿಗೆ ಒಳಪಡುತ್ತಿದ್ದು, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಇವುಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ. ಸದ್ಯ ದೇಶದಲ್ಲಿ 34 ರಾಜ್ಯ ಮಟ್ಟದ ಸಹಕಾರ ಸಂಘಗಳಿದ್ದು ಇವು ಸುಮಾರು 2000ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿವೆ. ಅದೇ ರೀತಿ 351 ಜಿಲ್ಲಾ ಕೇಂದ್ರೀಯ ಸಹಕಾರ ಸಂಘಗಳಿದ್ದು, 14 ಸಾವಿರ ಶಾಖೆಗಳನ್ನು ಹೊಂದಿವೆ. ಅದೇ ರೀತಿ ದೇಶಾದ್ಯಂತ 95 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿದ್ದು ಇವುಗಳ ಪೈಕಿ 65 ಸಾವಿರಕ್ಕೂ ಹೆಚ್ಚು ಸಂಘಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿವೆ.

### ಕೃಷಿ ಪತ್ತಿನ ಸಾಲ: ಸಮಸ್ಯೆಗಳು ಮತ್ತು ಸವಾಲುಗಳು

ಗ್ರಾಮೀಣ ಸಾಲ ನೀಡುವ ವ್ಯವಸ್ಥೆಯನ್ನು ಕ್ರಮೇಣವಾಗಿ ಸಾಂಸ್ಥೀಕರಣ ಮಾಡಿದ ಕಾರಣ ಹಲವು ವಾಣಿಜ್ಯ


## ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಡಿಜಿಟಲೀಕರಣದ ಮೂಲಕ ಸಬಲಗೊಳಿಸುವಿಕೆ

### ಪಕ್ಷಿನೋಟ



| | |
|---|---|
| ಇಡಿಸಿಬಿ | ಎರ್ನಾಕುಲಂ ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕ್ |
| ಎಸ್‌ಬಿ | ಉಳಿತಾಯ ಖಾತೆ |
| ಕೆಸಿಸಿ | ಕಿಸಾನ್ ಕ್ರೆಡಿಟ್ ಕಾರ್ಡ್ |
| ಕೆವೈಸಿ | ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ |
| ಎನ್‌ಪಿಸಿಐ | ನ್ಯಾಷನಲ್ ಪೇಮೆಂಟ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ |
| ಪಿಒಎಸ್ | ಪಾಯಿಂಟ್ ಆಫ್ ಸೇಲ್ |
| ಸಿಡಿ | ಕ್ರೆಡಿಟ್ ಡೆಬಿಟ್ ಇತ್ಯರ್ಥ ಖಾತೆ |
| ಎಸ್‌ಒಸಿ | ಭದ್ರತಾ ಕಾರ್ಯಾಚರಣೆ ಕೇಂದ್ರ |
| ಡಿಬಿಟಿ | ಫಲಾನುಭವಿಗಳ ಖಾತೆಗೆ ನೇರ ಹಣ ವರ್ಗಾವಣೆ |
| ಪಿಎಸಿಎಸ್ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ |
| ಎನ್‌ಎಫ್‌ಎಸ್ | ನ್ಯಾಷನಲ್ ಫೈನಾನ್ಷಿಯಲ್ ಸ್ವಿಚ್ |
| ಎಟಿಎಂ | ಆಟೋಮೇಟೆಡ್ ಟೆಲ್ಲರ್ ಮಷಿನ್ |

## ಇಕೋಬ್ಯಾನೆಟ್: ಎರ್ನಾಕುಲಂ ಸಹಕಾರಿ ಬ್ಯಾಂಕ್‌ನ ನೆಟ್‌ವರ್ಕ್




2017 ರಲ್ಲಿ ಪ್ರಾರಂಭವಾದ ಇಕೋಬ್ಯಾನೆಟ್ ಕೊಚ್ಚಿಯಲ್ಲಿರುವ ಎರ್ನಾಕುಲಂ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪ್ ಬ್ಯಾಂಕ್(ಇಡಿಸಿಸಿಬಿ)ನಸಮಗ್ರತಂತ್ರಜ್ಞಾನ ವೇದಿಕೆಯಾಗಿದೆ. ಇದು ಇಡಿಸಿಸಿಬಿ ಬಾನ್‌ಗೆ ಸಂಯೋಜಿತವಾಗಿರುವ ಎಲ್ಲಾ ಕ್ರೆಡಿಟ್ ಸಂಸ್ಥೆಗಳನ್ನು ಕಾಮನ್‌ಟೆಕ್ ಆಧರಿತ ಪ್ಲಾಟ್‌ಫಾರ್ಮ್‌ಗೆ ತರುತ್ತದೆ. ಈ ಸಮಗ್ರ ಪರಿಹಾರವು ತಳಮಟ್ಟದ ಸದಸ್ಯ ಸಂಸ್ಥೆಗಳಾದ ಪಿಎಸಿಎಸ್ ಅನ್ನುಸದಸ್ಯರಿಗೆ ನೈಜ ಸಮಯದ ಆಧಾರದ ಮೇಲೆ ಆಧುನಿಕ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಅನುಮತಿಸುತ್ತದೆ. ಸಹಕಾರಿ ಸಂಸ್ಥೆ ತಂತ್ರಜ್ಞಾನ ಚಾಲಿತ ಹಣಕಾಸು ಸೇವಾ ಪೂರೈಕೆದಾರರಾಗಿ ಕಾರ್ಯನಿರ್ವಹಿಸಬಹುದು, ಆ ಮೂಲಕ ಸಹಕಾರಿ ಸಂಸ್ಥೆ ತಮ್ಮ ಸದಸ್ಯರಿಗೆ ನೇರ ಲಾಭ ವರ್ಗಾವಣೆಗಳು (ಡಿಬಿಟಿ ಗಳು), ರುಪೇ ಕಾರ್ಡ್‌ಗಳು, ಆರ್‌ಟಿಜಿಎಸ್/ನೆಫ್ಟ್, ಮೊಬೈಲ್ ಪಾಸ್ಬುಕ್ ಸೇವೆಗಳು, ಇ-ಕಾಮರ್ಸ್ ಸೇವೆಗಳು ಮತ್ತು ಖಾತೆ ತೆರೆಯುವ ಸೇವೆಗಳನ್ನು ಒಳಗೊಂಡಂತೆ ಹಲವಾರು ಸೇವೆಗಳನ್ನು ತಲುಪಿಸಬಹುದು. ಡಿಸಿಸಿಬಿ ಮಟ್ಟದಲ್ಲಿ ನೈಜ ಸಮಯದ ಮೇಲ್ವಿಚಾರಣೆಯೊಂದಿಗೆ ಪಿಎಸಿಎಸ್ ಮಟ್ಟದಲ್ಲಿಯೇ ಆಧಾರ್ ಸಕ್ರಿಯಗೊಳಿಸಿದ ಉಳಿತಾಯ ಬ್ಯಾಂಕ್ ಮತ್ತು ಕೆಸಿಸಿ ಖಾತೆಗಳನ್ನು ತೆರೆಯಲು ಇದು ಸದಸ್ಯರಿಗೆ ಅನುಮತಿಸುತ್ತದೆ. ಪಿಎಸಿಎಸ್ ಮಟ್ಟದಲ್ಲಿಯೇ ಹೊಸ ಯುಗದ ಬ್ಯಾಂಕಿಂಗ್ ಅನ್ನು ಅನುಭವಿಸುವ ಗ್ರಾಮೀಣ ಗ್ರಾಹಕರಿಗಾಗಿ ಇಕೋಬ್ಯಾನೆಟ್ ಡಿಜಿಟಲ್ ಹಣಕಾಸು ಸೇವೆಗಳ ಹೊಸ ಗೇಟ್‌ವೇಯನ್ನು ತೆರೆದಿದೆ. ಇಡಿಸಿಸಿಬಿಗೆ ಸಂಯೋಜಿತವಾಗಿರುವ ಪಿಎಸಿಎಸ್ ಪೂರ್ಣ ಪ್ರಮಾಣದ ಬ್ಯಾಂಕಿಂಗ್ ಪಾಯಿಂಟ್‌ಗಳಾಗಿ ಕಾರ್ಯನಿರ್ವಹಿಸುತ್ತದೆ, ಇದರಿಂದಾಗಿ ತಮ್ಮ ಪ್ರದೇಶಗಳಲ್ಲಿನ ಆರ್ಥಿಕ ಸೇರ್ಪಡೆ ಮಟ್ಟವನ್ನು ಆಳವಾಗಿಸುತ್ತದೆ. ಇಕೋಬ್ಯಾನೆಟ್ ತಂತ್ರಜ್ಞಾನ ಸಕ್ರಿಯಗೊಳಿಸಿದ ಪ್ಲಾಟ್‌ಫಾರ್ಮ್‌ಗಳು ಗ್ರಾಮೀಣ ಗ್ರಾಹಕರಿಗೆ ಉತ್ತಮ ಬ್ಯಾಂಕಿಂಗ್ ಅನುಭವವನ್ನು ಹೇಗೆ ತರಬಹುದು ಎಂಬುದಕ್ಕೆ ಉತ್ತೇಜಕ ಉದಾಹರಣೆಯಾಗಿದೆ. ಡಿಜಿಟಲ್ ಬ್ಯಾಂಕಿಂಗ್ ಪರಿಹಾರಗಳನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ಅದರ ಕಾರ್ಯ ದಕ್ಷತೆಯನ್ನು ಸುಧಾರಿಸುವಲ್ಲಿ ಪಿಎಸಿಎಸ್‌ನಂತಹ ತಳಮಟ್ಟದ ಸಂಸ್ಥೆಗಳಿಗೆ ನೆರವು ನೀಡುವಲ್ಲಿ ಡಿಸಿಸಿಬಿಗಳಂತಹ ದೊಡ್ಡ ಕ್ರೆಡಿಟ್ ಸಂಸ್ಥೆಗಳ ಪ್ರಮುಖ ಪಾತ್ರವನ್ನು ಇದು ಎತ್ತಿ ತೋರಿಸುತ್ತದೆ.



Scanned with ACE Scanner

# ಎರ್ನಾಕುಲಂ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ನಡೆಯುವ ವಹಿವಾಟಿನ ಪ್ರಕ್ರಿಯೆ ಮತ್ತು ತಂತ್ರಜ್ಞಾನ ವ್ಯವಸ್ಥೆ





ಬ್ಯಾಂಕ್‌ಗಳು ಮತ್ತು ಸಣ್ಣ ಪ್ರಮಾಣದ ಸಾಲ ಸಂಸ್ಥೆಗಳು ತಂತ್ರಜ್ಞಾನ ಅಳವಡಿಸಿಕೊಂಡು ಈ ಕ್ಷೇತ್ರದಲ್ಲಿ ಬರಲಾರಂಭಿಸಿದವು. ಸಹಕಾರ ಸಂಸ್ಥೆಗಳು ಇವುಗಳಿಂದ ಸ್ಪರ್ಧೆ ಎದುರಿಸಬೇಕಾಯಿತು. ಗ್ರಾಮೀಣ ಭಾಗದಲ್ಲಿ ಬ್ಯಾಂಕಿಂಗ್ ಸೇವೆ ಒದಗಿಸುವುದು ಈ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಬಹಳಷ್ಟು ಸ್ಪರ್ಧಾತ್ಮಕವಾಗಿ ಪರಿಣಮಿಸಿತು. ಕೃಷಿ ಪತ್ತಿ ಸಹಕಾರ ಸಂಘಗಳು ಕೇವಲ ಅಲ್ಪಾವಧಿ ಸಾಲ ಮಾತ್ರವಲ್ಲ, ರೈತರಿಗೆ ಇನ್ನಿತರ ಕ್ಷೇತ್ರಗಳಲ್ಲೂ, ಉದಾಹರಣೆಗೆ– ಹಣಕಾಸಿನ, ಸಲಹೆಗಳನ್ನು ನೀಡುವ ಮತ್ತು ರೈತರು ಬೆಳೆದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಸಲಹೆ ಸೂಚನೆಗಳನ್ನು ನೀಡಬೇಕಾಗುತ್ತದೆ. ತಂತ್ರಜ್ಞಾನ ಅಳವಡಿಕೆಯ ಅಸಮರ್ಥತೆ ಕಾರಣ ಸಹಕಾರಿ ಸಂಸ್ಥೆಗಳಿಗೆ ಸ್ಪರ್ಧೆ ಅಸಾಧ್ಯವಾಯಿತು. ತಮ್ಮ ಕಾರ್ಯಚಟುವಟಿಕೆಗಳಲ್ಲಿ ತಂತ್ರಜ್ಞಾನ ಆಧಾರಿತ ಡಿಜಿಟಲೀಕರಣವನ್ನು ಅಳವಡಿಸಿಕೊಳ್ಳುವುದರ ಮೂಲಕ ಮಾತ್ರ ಸ್ಪರ್ಧೆ ಸಾಧಿಸಬಹುದಾಗಿದೆ. ಈ ನಿಟ್ಟಿನಲ್ಲಿ ಇರುವ ಕೆಲವು ಸಾಮಾನ್ಯ ಸಮಸ್ಯೆಗಳೆಂದರೆ– ಸಂಘದ ಕಚೇರಿಗಳ ಸಮರ್ಪಕ ನಿರ್ವಹಣೆ, ಪಾರದರ್ಶಕತೆ ಕಾಪಾಡುವುದು, ಉತ್ತಮ ಆಡಳಿತ ಜಾರಿಗೆ ತರುವುದು ಮತ್ತು ವೃತ್ತಿಪರತೆಗೆ ಹೆಚ್ಚು ಆದ್ಯತೆ ನೀಡುವುದು. ಇದಲ್ಲದೇ ಉತ್ಪನ್ನಗಳಲ್ಲಿ ನಾವಿನ್ಯತೆ ತರುವುದು, ರೈತರು ಬೆಳೆದ ಉತ್ಪನ್ನಗಳನ್ನು ಅತಿ ಶೀಘ್ರದಲ್ಲಿ ಮಾರುಕಟ್ಟೆ ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಸಹ ಅತಿ ಮುಖ್ಯವಾಗಿದೆ.

### ತಂತ್ರಜ್ಞಾನ ಅಳವಡಿಕೆ ಮತ್ತು ಕೃಷಿ ಪತ್ತಿನ ಸಾಲ

ತಂತ್ರಜ್ಞಾನ ಅಳವಡಿಕೆ ಮತ್ತು ವ್ಯವಸ್ಥೆಯ ಡಿಜಿಟಲೀಕರಣ ಪ್ರಕ್ರಿಯೆಯು ಸಹಕಾರ ಸಂಘಗಳ ಸಬಲೀಕರಣದ ದಿಸೆಯಲ್ಲಿ, ಮಹತ್ತರ ಪಾತ್ರವನ್ನು ವಹಿಸಲಿವೆ. ಸಹಕಾರ ಸಂಘಗಳನ್ನು ಬಲಪಡಿಸುವ




Scanned with ACE Scanner



ನಿಟ್ಟಿನಲ್ಲಿ, ಸಹಕಾರ ಚಳವಳಿಯನ್ನು ಸದೃಢಗೊಳಿಸುವ ನಿಟ್ಟಿನಲ್ಲಿ, ಪ್ರತ್ಯೇಕವಾದ ಕಾನೂನುಗಳನ್ನು ತರಲು ಮತ್ತು ತಂತ್ರಜ್ಞಾನದ ಅಳವಡಿಕೆಯ ಮೂಲಕ ಈ ವ್ಯವಸ್ಥೆಗೆ ಆಧುನೀಕರಣದ ಸ್ಪರ್ಶ ನೀಡುವಲ್ಲಿ ಕೇಂದ್ರ ಸರ್ಕಾರದಲ್ಲಿ ಸಹಕಾರ ಸಚಿವಾಲಯವನ್ನು ತೆರೆದಿರುವುದು ಈ ದಿಸೆಯಲ್ಲಿ ಕೈಗೊಳ್ಳಲಾದ ದಿಟ್ಟ ಮತ್ತು ಸರಿಯಾದ ಹೆಜ್ಜೆಯಾಗಿದೆ. ಸಹಕಾರ ಬ್ಯಾಂಕ್‌ಗಳ ಡಿಜಿಟಲೀಕರಣ ಪ್ರಕ್ರಿಯೆಯನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು. ರಾಜ್ಯಮಟ್ಟದ ಸಹಕಾರ ಸಂಘಗಳ ಡಿಜಿಟಲೀಕರಣ ಮತ್ತು ಗ್ರಾಹಕರ ಜತೆಗಿನ ವ್ಯವಹಾರದಲ್ಲಿ ತಂತ್ರಜ್ಞಾನದ ಸದುಪಯೋಗ ಮತ್ತು ಸೇವೆಯನ್ನು ಒದಗಿಸುವ ಹಾಗೂ ಕಾಲ ಕಾಲಕ್ಕೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುವುದು.

**(ಎ) ರಾಜ್ಯ ಮಟ್ಟದ ಪತ್ತಿನ ಸಹಕಾರ ಸಂಘಗಳ ಡಿಜಿಟಲೀಕರಣ:**

ರಾಜ್ಯ ಮಟ್ಟದ ಪತ್ತಿನ ಸಹಕಾರ ಬ್ಯಾಂಕ್‌ಗಳು ಮತ್ತು ಜಿಲ್ಲಾ ಮಟ್ಟದ ಕೇಂದ್ರೀಯ ಪತ್ತಿನ ಸಹಕಾರ ಬ್ಯಾಂಕ್‌ಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣದಡಿ ಬರುತ್ತವೆ. ಈ ಬ್ಯಾಂಕ್‌ಗಳು ಸೆಂಟ್ರಲೈಸ್ಡ್ ಆನ್‌ಲೈನ್ ರಿಯಲ್-ಟೈಮ್ ಎಕ್ಸ್‌ಚೇಂಜ್ (ಕೋರ್) ಬ್ಯಾಂಕಿಂಗ್ ವ್ಯವಸ್ಥೆಯಡಿ ಜೋಡಿಸಲ್ಪಟ್ಟಿವೆ. ಇದು ಎಲ್ಲ ಬ್ಯಾಂಕ್‌ಗಳು ಎಲೆಕ್ಟ್ರಾನಿಕ್ ಫಾರಂನಲ್ಲಿ ಒಂದೇ ಬಗೆಯ ಲೆಕ್ಕಪತ್ರಗಳನ್ನು ಇಡಲು ಸಹಕಾರಿಯಾಗುತ್ತದೆ. ಕೋರ್ ಬ್ಯಾಂಕಿಂಗ್ ಸೊಲ್ಯೂಷನ್ಸ್ (ಸಿಬಿಎಸ್) ಪದ್ಧತಿಯು ಈ ಬ್ಯಾಂಕ್‌ಗಳ ಮೇಲಿನ ಉಸ್ತುವಾರಿ ಮತ್ತು ನಿಯಂತ್ರಣ ಪ್ರಕ್ರಿಯೆಯಲ್ಲಿ ಸಹಕಾರಿಯಾಗುತ್ತದೆ. ಅಲ್ಲದೇ ಬ್ಯಾಂಕಿನ ಸದಸ್ಯರಿಗೆ (ಗ್ರಾಹಕರಿಗೆ) ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಬ್ಯಾಂಕಿಂಗ್ ಮಾಡಬಹುದಾದ ಸೌಲಭ್ಯವನ್ನು ಕಲ್ಪಿಸುತ್ತದೆ. ಕೋರ್ ಬ್ಯಾಂಕಿಂಗ್ ವ್ಯವಸ್ಥೆಯು ತಾಂತ್ರಿಕ ಆಧುನೀಕರಣ ಮತ್ತು ಆರ್‌ಬಿಐ ಸೂಚನೆಯಂತೆ ಪಾರದರ್ಶಕತೆಯನ್ನು ಒಳಗೊಂಡಿದೆ. ಸಹಕಾರಿ ಬ್ಯಾಂಕ್‌ಗಳು ಅದರಲ್ಲೂ ವಿಶೇಷವಾಗಿ ಜಿಲ್ಲಾ ಮಟ್ಟದ ಕೇಂದ್ರೀಯ ಪತ್ತಿನ ಸಹಕಾರಿ ಬ್ಯಾಂಕ್‌ಗಳು ತಮ್ಮ ತಮ್ಮ ಕಚೇರಿಯಲ್ಲಿ ಆಧುನಿಕ ವ್ಯವಸ್ಥೆಯನ್ನು ಇನ್ನೂ ಜಾರಿಗೆ ತರಬೇಕಾಗಿದೆ. ಪತ್ತಿನ ಸಹಕಾರ ಬ್ಯಾಂಕ್‌ಗಳಲ್ಲಿ ದೈನಂದಿನ ಚಟುವಟಿಕೆಗಳಾದ ಲೆಕ್ಕಪತ್ರ ನಿರ್ವಹಣೆ, ಆಂತರಿಕ ಆಡಿಟ್, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಸೇವೆ ನೀಡುವ ಪ್ರಕ್ರಿಯೆಯಲ್ಲಿ ತ್ವರಿತಗತಿ ತರುವುದು, ಮಾನವ ಸಂಪನ್ಮೂಲವನ್ನು ಸರಿಯಾಗಿ ನಿರ್ವಹಿಸುವುದು ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್‌ಗಳಲ್ಲಿ ಆಧುನೀಕರಣ ವ್ಯವಸ್ಥೆ – ಇಆರ್‌ಪಿ ಆಧುನೀಕರಣ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಅನೇಕ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ನೀಡುವ ಪ್ರಕ್ರಿಯೆ, ಸಿಬ್ಬಂದಿಯ ಸಾಧನೆಯ ದಾಖಲಾತಿ, ಕಚೇರಿಯ ಲೆಕ್ಕಪತ್ರಗಳನ್ನು ಇಡುವ ಪ್ರಕ್ರಿಯೆ ಮೊದಲಾದವುಗಳನ್ನು ಇಂದಿಗೂ ಸಹ ಆಧುನಿಕ ವ್ಯವಸ್ಥೆಗಳಾದ ಕಂಪ್ಯೂಟರ್‌ಗಳನ್ನು ಬಳಸದೇ ಮಾನವ ಸಿಬ್ಬಂದಿಯಿಂದ ಮಾಡಿಸಲಾಗುತ್ತಿದೆ. ಇದು ಸಹಕಾರಿ ಬ್ಯಾಂಕ್‌ಗಳ ಸಾಧನೆಯನ್ನು ಕುಂಠಿತಗೊಳಿಸುತ್ತದೆ. ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳು ಎಲ್ಲೆಡೆ ಒಂದೇ ಬಗೆಯ ಸಮಸ್ಯೆಗಳನ್ನು ಎದುರಿಸುವ ಕಾರಣ ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡಿರುವ ಮಾದರಿ ತಾಂತ್ರಿಕ ಪರಿಹಾರ ಕ್ರಮಗಳನ್ನು ಎಲ್ಲ ರಾಜ್ಯಗಳ ಪತ್ತಿನ ಸಹಕಾರ ಸಂಘಗಳು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಅತ್ಯಾಧುನಿಕ ತಾಂತ್ರಿಕ ಗುಣಮಟ್ಟದ ಆಂತರಿಕ ಬ್ಯಾಂಕಿಂಗ್ ಪದ್ಧತಿಯನ್ನು ಸಹಕಾರ ಸಂಘಗಳು, ಬ್ಯಾಂಕ್‌ಗಳ ಕಚೇರಿಗಳಲ್ಲಿ ಅಳವಡಿಸಿಕೊಳ್ಳುವುದರಿಂದ ಆರ್‌ಬಿಐ ವಿಧಿಸಿರುವ ಕಾನೂನುಬದ್ಧ ನಿಯಮಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸಿದಂತೆಯೂ ಆಗುತ್ತದೆ. ಹೀಗಾಗಿ ದೇಶದ ಎಲ್ಲ ರಾಜ್ಯಗಳಲ್ಲಿ ಏಕ ಪ್ರಕಾರದ ಸಾಲ ನೀಡಿಕೆ ಪ್ರಕ್ರಿಯೆಯನ್ನು ಸಮರ್ಪಕವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಕೃಷಿ ಪತ್ತಿನ ಸಹಕಾರ ಸಂಘಗಳು ಸಾರ್ವತ್ರಿಕ ತಂತ್ರಜ್ಞಾನ ವೇದಿಕೆ ಅಳವಡಿಸಿಕೊಳ್ಳುವುದು ಇಂದಿನ ಅತ್ಯಗತ್ಯವಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಕಚೇರಿಗಳಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸಿ ಕಚೇರಿಯ ದಾಖಲೆಗಳನ್ನು ಕಂಪ್ಯೂಟರ್‌ನಲ್ಲಿ ದಾಖಲಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಿದೆ. ಜಿಲ್ಲಾ ಕೇಂದ್ರೀಯ ಪತ್ತಿನ ಸಹಕಾರ ಬ್ಯಾಂಕ್‌ಗಳು ತಮ್ಮ ಕಚೇರಿಯ ದಾಖಲೆಗಳನ್ನು ಡಿಜಿಟಲೀಕರಣ ಮಾಡುವ ದಿಸೆಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಕೂಡ ಆದ್ಯತೆಯ ವಿಷಯವಾಗಬೇಕಾಗಿದೆ. ಇದು ಕೋರ್ ಬ್ಯಾಂಕಿಂಗ್ ಸೊಲ್ಯೂಷನ್ (ಸಿಬಿಎಸ್) ವ್ಯವಸ್ಥೆಯನ್ನು ಜಾರಿಗೆ ತರಲು ಸಹಕಾರಿಯಾಗುತ್ತದೆ. ಈ ವ್ಯವಸ್ಥೆಯಿಂದಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಪಾರದರ್ಶಕತೆಯನ್ನು ಜಾರಿ ಮಾಡಲು ಸಾಧ್ಯವಾಗುತ್ತದೆ. ಭಾರತ ಸರ್ಕಾರದ ಗೃಹ ಮತ್ತು ಸಹಕಾರ ಸಚಿವರ ಸಕ್ರಿಯ ನೇತೃತ್ವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಂಪ್ಯೂಟರೀಕರಣ ನೀತಿಯು ಇವುಗಳ ಕಾರ್ಯ ದಕ್ಷತೆಯನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸುವ ಮೂಲಕ ರೈತರಿಗೆ ಸಾಲ ಹಾಗೂ ಇನ್ನಿತರ ಆರ್ಥಿಕ ಸಹಾಯಗಳನ್ನು ನೀಡುವ ನಿಟ್ಟಿನಲ್ಲಿ ಖಂಡಿತವಾಗಿಯೂ ಸಹಕಾರಿಯಾಗುತ್ತದೆ. ಆದರೆ ಗ್ರಾಮೀಣ ಭಾಗದಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ವಿದ್ಯುತ್ ಕಡಿತ, ಇಂಟರ್‌ನೆಟ್ ಸಂಪರ್ಕದಲ್ಲಿ ಕೊರತೆ ಮತ್ತು ಕಂಪ್ಯೂಟರ್ ಬಳಸುವ ಜಾಣ್ಮೆಯನ್ನು ಹೊಂದಿರುವವರ ಕೊರತೆಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಂಪ್ಯೂಟರ್ ಅಳವಡಿಕೆಯ ದಿಸೆಯಲ್ಲಿ ಅಡೆತಡೆಗಳಾಗಿವೆ ಎಂಬುದು ಕೂಡ ವಾಸ್ತವ ಸಂಗತಿ. ಇವುಗಳ ಜತೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ದಾಖಲಾತಿಗಳು ಅಪೂರ್ಣವಾಗಿರುವುದು ಮತ್ತು ದಾಖಲಾತಿಗಳನ್ನು ಇಡುವಲ್ಲಿ ನಿರಂತರತೆ ಕಾಣದಿರುವುದು ಇವುಗಳ ಕಂಪ್ಯೂಟರೀಕರಣದ ಪ್ರಕ್ರಿಯೆಯನ್ನು ಮತ್ತಷ್ಟು ಜಟಿಲಗೊಳಿಸಿವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಬಲಪಡಿಸುವ ಹಾಗೂ ಫಲಪ್ರದವಾಗಿಸುವ ನಿಟ್ಟಿನಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸುವ ಪ್ರಕ್ರಿಯೆ ಅತ್ಯಂತ ಅಗತ್ಯವಾದ ಸಂಗತಿಯಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಿಸಿ, ಇವುಗಳ ಮೇಲ್‌ಸ್ತರದ ಹಂತಗಳಾದ ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕ್‌ಗಳು ಮತ್ತು ರಾಜ್ಯ ಮಟ್ಟದ ಸಹಕಾರ ಬ್ಯಾಂಕ್‌ಗಳ ಜತೆ ಡಿಜಿಟಲೀಕರಣದ ವ್ಯವಸ್ಥೆಯೊಳಗೆ ತರುವುದರಿಂದ ಇವುಗಳನ್ನು





Scanned with ACE Scanner

ಬಲಪಡಿಸಿದಂತೆ ಆಗುವುದಲ್ಲದೇ ದೇಶದಲ್ಲಿ ಕೃಷಿ ಸಾಲ ವಿತರಣೆ ವ್ಯವಸ್ಥೆಯನ್ನು ಪಾರದರ್ಶಕವಾಗಿ ಮಾಡುವ ನಿಟ್ಟಿನಲ್ಲಿ ಸಹಕಾರಿಯಾಗುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸುವ ಹಾಗೂ ಅವುಗಳಿಗೆ ಅಗತ್ಯ ಇಂಟರ್‌ನೆಟ್ ಸೌಲಭ್ಯವನ್ನು ಕಲ್ಪಿಸುವುದರ ಜತೆಗೆ ದಾಖಲೆಗಳ ಸಿದ್ಧತೆ, ದಾಖಲೆಗಳ ದಾಖಲಾತಿ, ತರಬೇತಿ ಪಡೆದ ನಿಷ್ಠಾವಂತ ಮಾನವ ಸಿಬ್ಬಂದಿಯನ್ನು ಬೆಳೆಸುವ ಅಗತ್ಯವಿದೆ.

ಕೇಂದ್ರ ಗೃಹ ಮತ್ತು ಸಹಕಾರ ಸಚಿವರ ಮಾರ್ಗದರ್ಶನದಲ್ಲಿ ಕೇಂದ್ರ ಸಹಕಾರ ಇಲಾಖೆಯು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಂಪ್ಯೂಟರೀಕರಣಕ್ಕಾಗಿ 2,516 ಕೋಟಿ ವೆಚ್ಚದ ಯೋಜನೆಯನ್ನು ಜಾರಿ ಮಾಡಿದೆ. ಇದರ ಫಲವಾಗಿ ಐದು ವರ್ಷಗಳ ಅವಧಿಯಲ್ಲಿ ದೇಶದಾದ್ಯಂತ ಸುಮಾರು 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಕಂಪ್ಯೂಟರೀಕರಣಕ್ಕೆ ಒಳಗಾಗಲಿದ್ದು, ಇದು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಅಪರಿಮಿತ ಸಹಕಾರಿಯಾಗಲಿದೆ. ಈ ಕಂಪ್ಯೂಟರೀಕರಣದಿಂದಾಗಿ ಇವುಗಳನ್ನು ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕ್‌ಗಳು ಮತ್ತು ರಾಜ್ಯ ಮಟ್ಟದ ಸಹಕಾರ ಬ್ಯಾಂಕ್‌ಗಳ ಜತೆ ಡಿಜಿಟಲೀಕರಣಕ್ಕೆ ಜೋಡಣೆಗೊಳ್ಳಲು ಸಹಕಾರಿಯಾಗಲಿದ್ದು, ಇದು ತ್ವರಿತಗತಿಯಲ್ಲಿ ಸಾಲ ವಿತರಣೆ, ಕಡಿಮೆ ಸಾಗಣೆ ವೆಚ್ಚ, ತ್ವರಿತ ಗತಿಯಲ್ಲಿ ಲೆಕ್ಕ ಪರಿಶೋಧನೆ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಕೃಷಿ ಪತ್ತಿನ ಸಹಕಾರ ಸಂಘಗಳ ಪಾವತಿಯಲ್ಲಿನ ಅಸಮತೋಲನ ಹೋಗಲಾಡಿಸುವ ನಿಟ್ಟಿನಲ್ಲಿ ಇದು ನೆರವಾಗಲಿದೆ. ಲಭ್ಯವಿರುವ ದಾಖಲೆಗಳ ಪ್ರಕಾರ ದೇಶದಲ್ಲಿ ಕೊಡಮಾಡಿರುವ ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಸಾಲಗಳ ಪೈಕಿ ಶೇ 41ರಷ್ಟು ಅಂದರೆ 3.01 ಕೋಟಿ ರೈತರಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಸಾಲ ಸೌಲಭ್ಯ ಒದಗಿಸಿವೆ. ಈ ಪೈಕಿ ಶೇ 95ರಷ್ಟು ಅಂದರೆ 2.95 ಕೋಟಿ ರೈತರು ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದಾರೆ ಎಂಬುದು ವಿಶೇಷ. ರೈತರಿಗೆ ಆರ್ಥಿಕ ಸಹಾಯ ಒದಗಿಸುವ ನಿಟ್ಟಿನಲ್ಲಿ ಮತ್ತು ಹಣಕಾಸೇತರ ಸೌಲಭ್ಯಗಳಾದ ನೇರ ಫಲಾನುಭವಿ ವರ್ಗಾವಣೆ ಯೋಜನೆ (ಡೈರೆಕ್ಟ್ ಬೆನೆಫಿಟ್ ಟ್ರಾನ್ಸಫರ್- ಡಿಬಿಟಿ), ಇಂಟರೆಸ್ಟ್ ಸಬ್‌ವೆನ್ಷನ್ ಸ್ಕೀಮ್ (ಐಎಸ್‌ಎಸ್), ಬೆಳೆ ಸಾಲ ಯೋಜನೆ ಮತ್ತು ಕೃಷಿಕರಿಗೆ ಬೇಕಾಗುವ ರಸಗೊಬ್ಬರ ಮತ್ತು ಬೀಜಗಳನ್ನು ಒದಗಿಸುವ ದಿಸೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಪಂಚಾಯ್ತಿ ಮಟ್ಟದಲ್ಲಿ ನೋಡಲ್ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಲಿವೆ.

**(ಬಿ) ಗ್ರಾಹಕರ ಜತೆಗಿನ ಸಂಪರ್ಕಸಾಧನವಾಗಿ ತಂತ್ರಜ್ಞಾನ ಅಳವಡಿಕೆ, ಸೇವೆ ನೀಡುವಿಕೆ ಮತ್ತು ನಿರ್ಧಾರ ಕೈಗೊಳ್ಳುವಿಕೆ**

ಬ್ಯಾಂಕಿಂಗ್ ಉದ್ಯಮದಲ್ಲಿ ಡಿಜಿಟಲೀಕರಣ ಮಹತ್ತರ ಬದಲಾವಣೆಗಳನ್ನು ತಂದಿದೆ. ಜನರು ಪರಸ್ಪರ ಮಾತನಾಡುವುದು ಹಾಗೂ ವ್ಯಾಪಾರ ವಹಿವಾಟುಗಳನ್ನು ಕೈಗೊಳ್ಳುವುದು ಇಂದಿನ ಡಿಜಿಟಲ್ ಯುಗದಿಂದಾಗಿ ಸಂಪೂರ್ಣ ಬದಲಾಗಿದೆ. ತಂತ್ರಜ್ಞಾನದಲ್ಲಿನ ಆಧುನಿಕ ಆವಿಷ್ಕಾರಗಳು ದೇಶದಲ್ಲಿ ಬ್ಯಾಂಕಿಂಗ್ ಉದ್ಯಮದ ಭವಿಷ್ಯವನ್ನು ದಿನದಿಂದ ದಿನಕ್ಕೆ ಬದಲಿಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ಆರ್ಥಿಕ ರಂಗವು ಹಣಕಾಸು ತಂತ್ರಜ್ಞಾನ ಮತ್ತು ಕೃಷಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡಿದ್ದು ಭಾರತವು ಈ ಕ್ಷೇತ್ರಗಳಲ್ಲಿ ಅಪಾರ ಸಕಾರಾತ್ಮಕ ಚಟುವಟಿಕೆಗಳನ್ನು ಕಾಣುತ್ತಿದೆ. ತಂತ್ರಜ್ಞಾನ ಆಧರಿತ ಪರಿಕರಗಳನ್ನು ಬಳಸಿಕೊಂಡು ಇಂದು ಅನೇಕ ಸ್ಟಾರ್ಟ್ ಅಪ್‌ಗಳು ಗ್ರಾಮೀಣ ಭಾಗದಲ್ಲಿನ ಗ್ರಾಹಕರನ್ನು ತಮ್ಮತ್ತ ಸೆಳೆಯುತ್ತಿವೆ. 2022ರ ವೇಳೆಗೆ ಭಾರತದಲ್ಲಿ ಹಣಕಾಸು ತಂತ್ರಜ್ಞಾನ ಮತ್ತು ಕೃಷಿ ತಂತ್ರಜ್ಞಾನಗಳ ಬಳಕೆಯ ಸ್ಟಾರ್ಟ್ ಅಪ್‌ಗಳಿಂದಾಗಿ ಕ್ರಿಯಾಶೀಲ ವಾತಾವರಣ ನಿರ್ಮಾಣವಾಗಿದೆ. ಈ ಬೆಳವಣಿಗೆಯು ಗ್ರಾಮೀಣ ಭಾಗದಲ್ಲಿ ಗ್ರಾಮೀಣ ಪತ್ತಿನ ಸಹಕಾರ ಸಂಘಗಳಿಗೆ ಪ್ರಬಲ ಪೈಪೋಟಿ ತಂದೊಡ್ಡಿದ್ದು, ಗ್ರಾಹಕರಿಗೆ ಸೇವೆ ಒದಗಿಸುವ ನಿಟ್ಟಿನಲ್ಲಿ ಮತ್ತು ಅವರ ಅನುಭವಗಳಿಗೆ, ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡುವ ದಿಸೆಯಲ್ಲಿ ಸಾಕಷ್ಟು ಸವಾಲು ಎದುರಾಗಿವೆ.

ಶೀಘ್ರ ಗತಿಯಲ್ಲಿ ಬದಲಾಗುತ್ತಿರುವ ಇಂದಿನ ತಂತ್ರಜ್ಞಾನ ಮುಂದುವರಿಕೆಯ ದಿನಗಳಲ್ಲಿ ಗ್ರಾಮೀಣ ಸಾಲ ಸಹಕಾರ ಸಂಘಗಳು ಕೇವಲ ತನ್ನ ರೈತ ಗ್ರಾಹಕರಿಗೆ ಕೇವಲ ಸಾಂಪ್ರದಾಯಿಕ ಸಾಲ ನೀಡಿಕೆಯಂಥ ಕಾರ್ಯಕ್ರಮಗಳ ಜತೆಗೆ ರೈತರ ಒಟ್ಟಾರೆ ಅಭಿವೃದ್ಧಿಯ ಕುರಿತಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ದಿಸೆಯಲ್ಲಿ ಆಲೋಚಿಸುವ ಅಗತ್ಯವಿದೆ. ಬ್ಯಾಂಕಿಂಗ್ ಸೇವೆಗಳು ಇನ್ನಷ್ಟು ಕಡಿಮೆ ಖರ್ಚುದಾಯಕ, ಪರಿಣಾಮಕಾರಿ, ಶೀಘ್ರ ಗತಿಯಲ್ಲಿ ನಿರ್ವಹಿಸುವಂಥವು ಹಾಗೂ ಸುಭದ್ರ ಸೇವೆಗಳನ್ನು ಒದಗಿಸುವ ಕೇಂದ್ರಗಳಾಗಿ ಹೊರಹೊಮ್ಮಬೇಕಿವೆ. ಇಂದು ಕೃಷಿ ಸಾಲ ನೀಡಿಕೆಯ ಪ್ರಕ್ರಿಯೆ ಸಾಕಷ್ಟು ಬದಲಾವಣೆಯಾಗಿದ್ದು ರೈತಾಪಿ ವರ್ಗಕ್ಕೆ ಇಂದು ಕೇವಲ ಆಹಾರ ಉತ್ಪಾದನೆಗೆ ಮಾತ್ರವಲ್ಲ ಇನ್ನಿತರ ಕಾರ್ಯ ಚಟುವಟಿಕೆಗಳಿಗೂ ಸಾಲ ನೀಡುವ ಅವಶ್ಯಕತೆ ಇದೆ. ಭಾರತವು ವಿಶ್ವದಲ್ಲಿ ಅತಿ ಹೆಚ್ಚು ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವ ರಾಷ್ಟ್ರಗಳ ಪೈಕಿ ಒಂದಾಗಿ ಮಾರ್ಪಟ್ಟಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ, ಸರಕು ಸಾಗಣೆಯನ್ನು ಸುಲಭವಾಗಿ ಕೈಗೊಳ್ಳುವ ನಿಟ್ಟಿನಲ್ಲಿ ರೈತಾಪಿ ವರ್ಗದ ಹೆಗಲಿಗೆ ಹೆಗಲು ಕೊಟ್ಟು ಸಹಾಯ ನೀಡುವ ದಿಸೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯ ನಿರ್ವಹಿಸಲು ಮುಂದಾಗಬೇಕಿದೆ. ಅದೇ ರೀತಿಯಾಗಿ ಗೋದಾಮುಗಳ ಅಭಿವೃದ್ಧಿಯು ಇಂದಿನ ಅಗತ್ಯಗಳಲ್ಲಿ ಒಂದಾಗಿದ್ದು ಕೃಷಿ ಪತ್ತಿನ ಸಹಕಾರ ಸಂಘಗಳು ಇಂಥ ಘಟಕಗಳಿಗೆ ಹಣಕಾಸು ನೆರವು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಮುಂದಾಗಬೇಕಿದೆ. ಪ್ರಸ್ತುತ ಕೃಷಿ ರಂಗದಲ್ಲಿನ ಬೆಳವಣಿಗೆಗಳನ್ನು ಗಮನಿಸಿದರೆ ಕೃಷಿ ಆಧರಿತ ಸಾಲ ಸೌಲಭ್ಯಗಳನ್ನು ಒದಗಿಸುವ ಅವಕಾಶಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚು ಹೆಚ್ಚಾಗಿ ತೆರೆದುಕೊಳ್ಳಲಿವೆ.

ಇನ್ನೂ ಅನೇಕ ಕೃಷಿ ಪತ್ತಿನ ಸಹಕಾರ ಸಂಘಗಳು ಮೊಬೈಲ್ ಬ್ಯಾಂಕಿಂಗ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಲ್ಲಿ ವಿಫಲವಾಗಿವೆ. ಈ ಬ್ಯಾಂಕ್‌ಗಳಲ್ಲಿ ಸೈಬರ್ ಭದ್ರತೆಗಳನ್ನು ಒದಗಿಸದೇ ಇದ್ದರೆ ಸೈಬರ್ ಅಪರಾಧಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಹೀಗಾಗಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವೆಚ್ಚ ಹೆಚ್ಚೆನಿಸಿದರೆ ಅವು ಜಂಟಿಯಾಗಿ ತಂತ್ರಜ್ಞಾನವನ್ನು ಹಂಚಿಕೊಂಡು ಅಳವಡಿಸಿಕೊಳ್ಳಲು ಮುಂದಾಗಬೇಕಿದೆ. ಈ ನಿಟ್ಟಿನಲ್ಲಿ ಇತರರ ಸಹಕಾರ ಪಡೆಯುವತ್ತ ಯೋಚಿಸಬೇಕಿದೆ. ಉದಾಹರಣೆಗೆ ಹಣಕಾಸು ತಂತ್ರಜ್ಞಾನ ಸಂಸ್ಥೆಗಳ ನೆರವು ಪಡೆದುಕೊಳ್ಳಬಹುದು. ಜತೆಗೆ ಗ್ರಾಹಕರನ್ನು ಸೆಳೆಯುವ ನಿಟ್ಟಿನಲ್ಲಿ, ರೈತರ ಸಾಲದ



Scanned with ACE Scanner

ವಿವರಗಳನ್ನು ದಾಖಲಿಸುವ ನಿಟ್ಟಿನಲ್ಲಿ, ಕೆವೈಸಿ. ರೈತರಿಗೆ ಸಲಹೆ ನೀಡುವ ದಿಸೆಯಲ್ಲಿ, ಆಸ್ತಿ ಪಾಸ್ತಿಗಳ ಉಸ್ತುವಾರಿ ವಿಷಯದಲ್ಲಿ, ಗ್ರಾಹಕರ ಜೊತೆಗೆ ಸಂಪರ್ಕ ಸಾಧಿಸುವ ನಿಟ್ಟಿನಲ್ಲಿ, ಡಿಜಿಟಲ್ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವಲ್ಲಿ ಫಿನ್‌ಟೆಕ್‌ಗಳ ಸಹಾಯ ಪಡೆಯಬಹುದಾಗಿದೆ.

ಇನ್ನೊಂದು ಉದಾಹರಣೆಯೆಂದರೆ ಜಮೀನುಗಳ ಉಸ್ತುವಾರಿ ನೋಡಿಕೊಳ್ಳುವ ಕಾರ್ಯದಲ್ಲಿ ಡ್ರೋನ್‌ಗಳನ್ನು ಬಳಸಿಕೊಳ್ಳುವಿಕೆ. ಇದರಿಂದ ನಿಖರ ಹಾಗೂ ಪರಿಣಾಮಕಾರಿ ಮಾಹಿತಿ ದೊರೆಯುವುದಲ್ಲದೇ, ಬೆಳೆ ವಿಮೆ ಉತ್ಪನ್ನಗಳನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಸಹಕಾರಿಯಾಗಲಿದೆ. ಗ್ರಾಮೀಣ ಭಾಗದಲ್ಲೂ ಸಹ ಇಂದಿನ ದಿನಗಳಲ್ಲಿ ನಗರ ಪ್ರದೇಶಗಳಂತೆ ಸಾಕಷ್ಟು ಪ್ರಮಾಣದಲ್ಲಿ ಸ್ಮಾರ್ಟ್ ಫೋನ್‌ಗಳನ್ನು ಹೊಂದಿರುವವರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈತಾಪಿ ವರ್ಗಕ್ಕೆ ಉತ್ತಮ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕೊಡಮಾಡುವ ದಿಸೆಯಲ್ಲಿ ಸ್ಮಾರ್ಟ್‌ಫೋನ್‌ಗಳನ್ನು ಬಳಸಿಕೊಳ್ಳಬಹುದಾಗಿದೆ. ಇದು ಡಿಜಿಟಲ್ ಸಾಲ ನೀಡುವಿಕೆ, ಸ್ಮಾರ್ಟ್ ಮರುಪಾವತಿ, ಪೇಮೆಂಟ್ (ಪಾವತಿ) ವ್ಯವಸ್ಥೆ, ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುವುದು, ಬೆಳೆಗೆ ಸಂಬಂಧಿಸಿದಂತೆ ಸಲಹೆ– ಸೂಚನೆಗಳನ್ನು ಕೊಡುವುದು, ಕುಂದುಕೊರತೆ ನಿವಾರಣೆ ಹೀಗೆ ಹತ್ತು ಹಲವು ಕಾರ್ಯಗಳಿಗಾಗಿ ಸ್ಮಾರ್ಟ್ ಫೋನ್‌ಗಳನ್ನು ಬಳಸಿ ರೈತರಿಗೆ, ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಗಬಹುದು. ಇದು ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರ ಆರ್ಥಿಕ ಮಟ್ಟವನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಸಹಕಾರಿಯಾಗಲಿದೆ.

ಸೈಬರ್ ಭದ್ರತೆ ದಿಸೆಯಲ್ಲಿ ಬ್ಲಾಕ್ ಚೇನ್‌ನಂತಹ ಹತ್ತು ಹಲವು ಅತ್ಯಾಧುನಿಕ ತಂತ್ರಜ್ಞಾನಗಳು ಈಗ ಲಭ್ಯವಿದ್ದು, ಇವುಗಳನ್ನು ಸಕ್ರಿಯವಾಗಿ ಬಳಸಿಕೊಂಡು ಸಹಕಾರಿ ಬ್ಯಾಂಕಿಂಗ್ ಕಾರ್ಯಾಚರಣೆಯಲ್ಲಿ ಪಾರದರ್ಶಕತೆಯನ್ನು ತರುವುದು ಇಂದಿನ ಅಗತ್ಯವಾಗಿದೆ. ಬ್ಯುಸಿನೆಸ್ ಅನಾಲಿಟಿಕ್ಸ್ ಎಂಬುದು ಮತ್ತೊಂದು ಮುಂಚೂಣಿಗೆ ಬರುತ್ತಿರುವ ಕ್ಷೇತ್ರವಾಗಿದ್ದು, ಇದರ ಮೂಲಕ ಸಾಲ ನೀಡಿಕೆ ಮತ್ತು ಸಾಲ ಮರುಪಾವತಿಗೆ ಸಂಬಂಧಿಸಿದಂತೆ ತ್ವರಿತಗತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳಬಹುದಾಗಿದೆ. ಸಿಬಿಎಸ್ ಮುಖಾಂತರ ಸಹಕಾರಿ ಬ್ಯಾಂಕ್‌ಗಳು ಬಹಳಷ್ಟು ಅಗಾಧ ಪ್ರಮಾಣದ ಅಂಕಿ ಅಂಶಗಳನ್ನು ಸೃಷ್ಟಿಸುತ್ತವೆ. ಉತ್ತಮ ವಹಿವಾಟು ನಡೆಸುವಲ್ಲಿ ಹಾಗೂ ಸದಸ್ಯರನ್ನು ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡುವ ದಿಸೆಯಲ್ಲಿ ಡಿಜಿಟಲೀಕರಣ ವ್ಯವಸ್ಥೆಯು ಮಾತ್ರ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು. ಇದನ್ನು ಅಳವಡಿಸುವ ನಿಟ್ಟಿನಲ್ಲಿ ಅಪಾರ ಇಚ್ಛಾಶಕ್ತಿಯ ಅಗತ್ಯವಿದೆ.

## ಉಪಸಂಹಾರ

ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯವು ಗೃಹ ಮತ್ತು ಸಹಕಾರ ಸಚಿವರ ಸಮರ್ಥ ಮಾರ್ಗದರ್ಶನದಲ್ಲಿ ರಾಜ್ಯ ಮಟ್ಟದ ಸಹಕಾರ ಸಂಘಗಳನ್ನು ಬಲಪಡಿಸುವ ನಿಟ್ಟಿನಲ್ಲಿ ನೀತಿ ನಿಯಮಗಳನ್ನು ರೂಪಿಸುವಲ್ಲಿ ಮತ್ತು ಸುಲಭವಾಗಿ ಅನುಸರಿಸಬಲ್ಲ, ಕಾರ್ಯಗತ ಮಾಡಲು ಸಾಧ್ಯವಾಗಬಲ್ಲ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಭಾರತ ದೇಶದಾದ್ಯಂತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಿಸುವ ಉಪಕ್ರಮ, ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟು ಮಾಡುವ ಶಕ್ತಿಯನ್ನು ಹೊಂದಿದ್ದು ಈ ವ್ಯವಸ್ಥೆಯು ಬಹಳ ಕಾಲ ಸದೃಢವಾಗಿ ಉಳಿಯುವಂತೆ ಮಾಡುವಲ್ಲಿ ಯಾವುದೇ ಸಂಶಯವಿಲ್ಲ. ಕಂಪ್ಯೂಟರೀಕರಣ, ಇದರ ಬೆನ್ನ ಹಿಂದೆಯೇ ಡಿಜಿಟಲೀಕರಣ ಪ್ರಕ್ರಿಯೆಯು ಸಹಕಾರ ಕ್ಷೇತ್ರದಲ್ಲಿ ಹಣಕಾಸು ಮತ್ತು ಹಣಕಾಸೇತರ ಉತ್ಪನ್ನಗಳನ್ನು ರೈತಾಪಿ ವರ್ಗಕ್ಕೆ ಒದಗಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸಲಿವೆ. ರಾಜ್ಯ ಮಟ್ಟದ ಸಹಕಾರ ಬ್ಯಾಂಕ್‌ಗಳು ಮತ್ತು ಜಿಲ್ಲಾ ಮಟ್ಟದ ಕೇಂದ್ರೀಯ ಸಹಕಾರ ಬ್ಯಾಂಕ್‌ಗಳು ಸಹಕಾರಿ ಕ್ಷೇತ್ರವನ್ನು ಇಡಿಯಾಗಿ ಡಿಜಿಟಲೀಕರಣ ಮಾಡುವ ಮಹತ್ತರ ಕಾರ್ಯದಲ್ಲಿ ತಮ್ಮನ್ನು ತಾವು ಹೆಚ್ಚಾಗಿ ತೊಡಗಿಸಿಕೊಂಡು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುನ್ನಡೆಯನ್ನು ಖಾತರಿಗೊಳಿಸಬೇಕಿದೆ.

ರೈತರಿಗೆ ತಲೆ ತಲಾಂತರಗಳಿಂದ ಪರಿಚಿತವಾಗಿರುವ ಸಾಂಪ್ರದಾಯಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತಾಪಿ ವರ್ಗದೊಂದಿಗೆ ಬೆಸೆದುಕೊಂಡಿವೆ. ಹಾಗಾಗಿಯೇ ರೈತಾಪಿ ವರ್ಗಕ್ಕೆ ವಾಣಿಜ್ಯ ಬ್ಯಾಂಕ್‌ಗಳಿಗಿಂತ ಈ ಸಹಕಾರ ಸಂಘಗಳ ಜತೆ ವಹಿವಾಟು ನಡೆಸುವ ದಿಸೆಯಲ್ಲಿ ಹೆಚ್ಚು ಆಪ್ತ ಭಾವ ಮೂಡುತ್ತದೆ ಎಂಬುದು ಸಹಜ ಸಂಗತಿ. ಕಾಲಮಾನಕ್ಕೆ ತಕ್ಕಂತೆ ಸಹಕಾರ ಸಂಘಗಳು ಸಹ ಕಂಪ್ಯೂಟರೀಕರಣ ಮತ್ತು ಡಿಜಿಟಲೀಕರಣ ವ್ಯವಸ್ಥೆಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರಿಂದಾಗಿ ಇವು ಭಾರತೀಯ ಕೃಷಿ ವಲಯದ ಬದಲಾದ ಅಗತ್ಯಗಳಿಗೆ ತಕ್ಕಂತೆ ಸ್ಪಂದಿಸಲು ಸಮರ್ಥವಾಗಿ ರೂಪುಗೊಳ್ಳುತ್ತಿವೆ. ಡಿಜಿಟಲೀಕರಣ ಎಂದರೆ ಕೃಷಿ ಸಾಲ ವ್ಯವಸ್ಥೆಯ ಸಂಪೂರ್ಣ ಬದಲಾವಣೆ ಎಂಬುದು ವಾಸ್ತವ ವಿಚಾರ. ಇದು ದೇಶದ ಅಭಿವೃದ್ಧಿಯ ದಿಸೆಯಲ್ಲಿ ಸಾಗುವ ಉದ್ದೇಶದ ಆರ್ಥಿಕ ಒಳಗೊಳ್ಳುವಿಕೆ, ಸುಸ್ಥಿರ ಕೃಷಿ ಮತ್ತು ಕೃಷಿ ಮತ್ತು ಕೃಷಿಕರ ಆದಾಯವನ್ನು ಹೆಚ್ಚಿಸುವ ಮೂಲ ಉದ್ದೇಶಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಲಿದೆ. ಭಾರತವು ಮುಂದಿನ ದಿನಗಳಲ್ಲಿ, ವರ್ಷಗಳಲ್ಲಿ 5 ಶತಕೋಟಿ ಡಾಲರ್ ಆರ್ಥಿಕ ವಹಿವಾಟಿನ ದೇಶವಾಗಿ ಹೊರಹೊಮ್ಮುತ್ತಿರುವ ಕಾಲಘಟ್ಟದಲ್ಲಿ ಈ ದಿಸೆಯಲ್ಲಿ ಸಹಕಾರ ಸಂಘಗಳ ಕೊಡುಗೆ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಯಾವುದೇ ಸಂಶಯವಿಲ್ಲ. ಮುಂದಿನ ದಿನಗಳಲ್ಲಿ ಕೃಷಿ, ಕೃಷಿ ವ್ಯಾಪಾರ ವಹಿವಾಟು, ಕೃಷಿಯೇತರ ಚಟುವಟಿಕೆಗಳು ಹಾಗೂ ಸಣ್ಣ ಮತ್ತು ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಬೆಳವಣಿಗೆ ಮತ್ತಷ್ಟು ವೇಗ ಪಡೆದುಕೊಳ್ಳುವ ಎಲ್ಲ ಲಕ್ಷಣಗಳೂ ಈಗ ಗೋಚರಿಸುತ್ತಿವೆ. ಆರ್ಥಿಕ ಬೆಳವಣಿಗೆ ಹೆಚ್ಚಾದಂತೆ ಹಣಕಾಸು ವಹಿವಾಟು ಕೂಡ ಹೆಚ್ಚುವುದು ಸ್ವಾಭಾವಿಕವಾಗಿದೆ. ಈ ದಿಸೆಯಲ್ಲಿ ಗ್ರಾಮೀಣ ಸಹಕಾರಿ ಪತ್ತಿನ ಸಂಘಗಳು ಲಾಭದಾಯಕ ಸಂಸ್ಥೆಗಳಾಗಿ ಹೊರಹೊಮ್ಮುವುದಲ್ಲದೇ ದೇಶದ ಒಟ್ಟಾರೆ ಅಭಿವೃದ್ಧಿಯಲ್ಲಿ ತಮ್ಮದೇ ಆದ ಕೊಡುಗೆ ಕೊಡುವುದರಲ್ಲಿ ಯಾವುದೇ ಸಂಶಯವಿಲ್ಲ. ಗ್ರಾಮೀಣ ಭಾರತದ ಅಭಿವೃದ್ಧಿಯ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ನೀತಿ ನಿಯಮಗಳ ಜತೆಗೆ ಕೃಷಿ ಸಹಕಾರ ಸಂಘಗಳನ್ನು ತಾಂತ್ರಿಕವಾಗಿ ಆಧುನೀಕರಿಸುವ ಪ್ರಕ್ರಿಯೆಯು ಮಹತ್ತರ ಪಾತ್ರ ವಹಿಸುತ್ತದೆ ಎಂಬ ಲಕ್ಷಣಗಳು ಎಲ್ಲೆಡೆ ಗೋಚರಿಸುತ್ತಿವೆ. ತಂತ್ರಜ್ಞಾನ ಅಳವಡಿಕೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳನ್ನು ಉನ್ನತ ಸ್ಥಾನಕ್ಕೆ ಕರೆದೊಯ್ಯಬಲ್ಲದು.

ಅಳವಡಿಕೆ

# ಭವಿಷ್ಯಕ್ಕಾಗಿ ಸಹಕಾರಿ ಸಂಸ್ಥೆಗಳ ಸನ್ನದ್ಧತೆ

* ಪ್ರೊ. ಹರೇಕೃಷ್ಣ ಮಿಶ್ರಾ

ಸಮಾಜದಲ್ಲಿ ನಾನಾ ರೀತಿಯ ವ್ಯಾಪಾರ ಉದ್ಯಮಗಳು ಅಸ್ತಿತ್ವದಲ್ಲಿರುವಾಗ, ಸಹಕಾರಿ ಸಂಸ್ಥೆಗಳನ್ನು ವ್ಯಾಪಾರ ಸಂಸ್ಥೆಯ ರೂಪವಾಗಿ ಉತ್ತೇಜಿಸಬೇಕೆ ಎಂಬ ಬಗ್ಗೆ ಆಗಾಗ್ಗೆ ಚರ್ಚೆಗಳಾಗುತ್ತಿವೆ. ಸಹಕಾರಿ ಸಂಸ್ಥೆಗಳು ಸ್ಥಳೀಯ ವ್ಯಾಪಾರ ಆಡಳಿತವನ್ನು ಪೂರೈಸುತ್ತವೆ ಮತ್ತು ಸಾಮೂಹಿಕ ವಿಧಾನದ ಮೂಲಕ ಮಾರುಕಟ್ಟೆ ಅಪಾಯಗಳು ಮತ್ತು ಜೀವನೋಪಾಯದ ಸವಾಲುಗಳನ್ನು ಪರಿಹರಿಸಲು ಶ್ರಮಿಸುತ್ತವೆ. ಈ ಸಹಕಾರಿಗಳು ಒಂದೇ ರೀತಿಯ ಅಥವಾ ಏಕರೂಪದ ವ್ಯವಸ್ಥೆಯೊಂದಿಗೆ ಒಟ್ಟುಗೂಡಿದರೆ, ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಲು ತಮ್ಮ ಸಂಪನ್ಮೂಲಗಳನ್ನು ಒಟ್ಟುಗೂಡಿಸಬಹುದು ಎಂಬುದು ಒಂದು ತಾತ್ವಿಕ ನಿಲುವು. ಸಹಕಾರಿ ಸಂಸ್ಥೆಗಳನ್ನು ಅದರ ಸದಸ್ಯರೇ ಸ್ಥಾಪಿಸಿ, ನಿಯಂತ್ರಿಸುವ ಮತ್ತು ನಿರ್ವಹಿಸುವ ಸಂಸ್ಥೆ ಎಂದು ಅಂತಾರಾಷ್ಟ್ರೀಯ ಸಹಕಾರ ಮೈತ್ರಿಕೂಟ(ಐಸಿಎ) ವ್ಯಾಖ್ಯಾನಿಸುತ್ತದೆ. ಈ ಸದಸ್ಯರು




**ಅಂತಾರಾಷ್ಟ್ರೀಯ ಸಹಕಾರ ಆಡಳಿತ ಅಥವಾ ಮೈತ್ರಿಕೂಟ(ಐಸಿಎ) ವರದಿಗಳ ಪ್ರಕಾರ, ವಿಶ್ವಾದ್ಯಂತ 3 ದಶಲಕ್ಷ ಸಹಕಾರಿ ಸಂಸ್ಥೆಗಳಲ್ಲಿ 1 ಶತಕೋಟಿಗೂ ಹೆಚ್ಚಿನ ಸಹಕಾರಿ ಸದಸ್ಯರು ಇದ್ದಾರೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್ಓ) ಪ್ರಕಾರ, ಜಾಗತಿಕ ಕೃಷಿ ಉತ್ಪಾದನೆಯ 50 ಪ್ರತಿಶತಕ್ಕಿಂತ ಹೆಚ್ಚಿನ ಪ್ರಮಾಣ ಸಹಕಾರಿ ಸಂಸ್ಥೆಗಳ ಮೂಲಕವೇ ಮಾರಾಟವಾಗುತ್ತಿದೆ. ತಂತ್ರಜ್ಞಾನ-ಚಾಲಿತ ಯೋಜನೆಗಳಾದ ಸೌರಶಕ್ತಿ, ಪವನ ಶಕ್ತಿ ಮತ್ತು ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಸಹಕಾರಿ ಸಂಸ್ಥೆಗಳು ಹೊಂದಿವೆ. ಭಾರತವು 8.5 ಲಕ್ಷ ಸಹಕಾರಿ ಘಟಕಗಳನ್ನು ಹೊಂದಿದೆ, ಅದರಲ್ಲಿ 20 ಪ್ರತಿಶತ ಸಾಲ ಪತ್ತಿನ ಸಹಕಾರಿ ಸಂಸ್ಥೆಗಳಾಗಿವೆ. ಯಾವುದೇ ಒಂದು ಆವಿಷ್ಕಾರವು ಹೊಸ ಆಲೋಚನೆಗಳನ್ನು ಗಮನಿಸಲು, ನಿರ್ಣಯಿಸಲು, ಮತ್ತು ಹೊಸ ಆಲೋಚನೆ ಅಥವಾ ವಿಚಾರಧಾರೆಗಳನ್ನು ಅಭಿವೃದ್ಧಿಪಡಿಸಲು ಅತ್ಯಗತ್ಯ. ಹೊಸ ಉತ್ಪನ್ನ, ಹೊಸ ಪ್ರಕ್ರಿಯೆ, ಅಥವಾ ಹೊಸ ಸೇವೆ, ವ್ಯಾಪಾರ ಅಥವಾ ಜೀವನದ ಗುಣಮಟ್ಟವನ್ನು ಸುಧಾರಿಸಲು ಮತ್ತು ಪರಿಚಯಿಸಲು ಈ ಆಲೋಚನೆಗಳನ್ನು ಸಹಕಾರಿಗಳಲ್ಲಿ ಕಾರ್ಯರೂಪಕ್ಕೆ ತರಬೇಕಾಗಿದೆ. ಪ್ರಸ್ತುತ, ಅತ್ಯುತ್ತಮ ವ್ಯಾಪಾರ ಪ್ರಕ್ರಿಯೆಗಳನ್ನು ಡಿಜಿಟಲ್ ಆಗಿ ಸಕ್ರಿಯಗೊಳಿಸಲಾಗಿದೆ. ಡಿಜಿಟಲ್ ಸಕ್ರಿಯಗೊಳಿಸಿದ ವೆಬ್ 4.0 ಮತ್ತು ಇಂಡಸ್ಟ್ರಿ 4.0 ಮೆಷಿನ್ ಲರ್ನಿಂಗ್ (ಎಂಎಲ್), ಕೃತಕ ಬುದ್ಧಿಮತ್ತೆ (ಎಐ), ವರ್ಚುವಲ್ ರಿಯಾಲಿಟಿ (ವಿಆರ್), ಆಗ್ಮೆಂಟೆಡ್ ರಿಯಾಲಿಟಿ (ಎಆರ್) ಮತ್ತು ಡಿಜಿಟಲ್ ಟ್ವಿನ್ ಕೋಆಪರೇಟಿವ್ ತಂತ್ರಜ್ಞಾನಗಳ ಪ್ರಯೋಜನಗಳನ್ನು ಒದಗಿಸಲು ವಿನ್ಯಾಸಗೊಳಿಸಲಾದ ಕೆಲವು ಆವಿಷ್ಕಾರಗಳಾಗಿವೆ. ಸಹಕಾರಿ ಸಂಸ್ಥೆಗಳು, ವಿಶೇಷವಾಗಿ ಪ್ರಮುಖ ಬ್ರ್ಯಾಂಡ್‌ಗಳು, ತಂತ್ರಜ್ಞಾನ, ನಾವಿನ್ಯತೆ ಮತ್ತು ಉದ್ಯಮಶೀಲತೆಯ ಪ್ರಯೋಜನಗಳನ್ನು ಬಳಸಿಕೊಳ್ಳುವ ಮೂಲಕ ಇಂದಿನ ವೇಗವಾಗಿ ಬದಲಾಗುತ್ತಿರುವ ವ್ಯಾಪಾರ ವಾತಾವರಣಕ್ಕೆ ಹೊಂದಿಕೊಳ್ಳುವಲ್ಲಿ ಮುಂಚೂಣಿಯಲ್ಲಿವೆ. ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಸಹಕಾರಿ ಸಂಸ್ಥೆಗಳಿಗೆ ಪ್ರಯೋಜನ ಒದಗಿಸಲು ಎಂಎಲ್, ಎಐ, ಬಿಐ ಮತ್ತು ಡಿಜಿಟಲ್ ಟ್ವಿನ್ ಕೋಆಪರೇಟಿವ್ ಸೇವೆಗಳ ಪರಿಣಾಮಕಾರಿ ಬಳಕೆಗಾಗಿ ಇರುವ ಉದಯೋನ್ಮುಖ ವೇದಿಕೆಯಾಗಿದೆ. ಡ್ಯಾಶ್‌ಬೋರ್ಡ್‌ಗಳ ಹೊರಹೊಮ್ಮುವಿಕೆಯು ನೀತಿ ನಿರ್ಧಾರಗಳನ್ನು ಬೆಂಬಲಿಸುವ ಸಾಮರ್ಥ್ಯವನ್ನು ಹೊಂದಿವೆ.**

* ಪ್ರಾಧ್ಯಾಪಕರು, ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್ ಆನಂದ್(ಐಆರ್‌ಎಂಎ). ಇಮೇಲ್: hkmishra@irma.ac.in



Scanned with ACE Scanner




ಸ್ವಯಂಪ್ರೇರಣೆಯಿಂದ ಸಹಕಾರಿ ಸಂಸ್ಥೆಗೆ ಸೇರುತ್ತಾರೆ. ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ನೀತಿಯನ್ನು ಉಳಿಸಿಕೊಂಡು ಆರ್ಥಿಕ ಚಟುವಟಿಕೆಗಳ ಮೂಲಕ ಸಾಮೂಹಿಕ ಸದಸ್ಯರ ಆಕಾಂಕ್ಷೆಗಳನ್ನು ಪೂರೈಸಲು ಶ್ರಮಿಸುವ ಉದ್ಯಮವಾಗಿದೆ. ಮೂಲಭೂತವಾಗಿ, ಸಹಕಾರಿ ರೂಪದ ಸಂಸ್ಥೆಗಳು ಮತ್ತು ಬೇರೆ ರೀತಿಯ ವ್ಯವಹಾರ ನಡೆಸುವ ಸಂಸ್ಥೆಗಳ ನಡುವಿನ ಪ್ರಮುಖ ವ್ಯತ್ಯಾಸವೆಂದರೆ:

* ಸಹಕಾರಿ ಸಂಸ್ಥೆಯ ಮಾಲಿಕತ್ವ ಮತ್ತು ಹಣಕಾಸು ಹೊಂದಿರುವ ವ್ಯಕ್ತಿಗಳೇ ಅದನ್ನು ಬಳಸುವವರಾಗಿರುತ್ತಾರೆ.
* ಸಹಕಾರಿ ಸಂಸ್ಥೆಗಳನ್ನು ಬಳಸುವವರೇ ಅದರ ಮೇಲೆ ನಿಯಂತ್ರಣ ಹೊಂದಿರುತ್ತಾರೆ.
* ಸಹಕಾರಿ ಸಂಸ್ಥೆಗಳ ಪ್ರಯೋಜನಗಳನ್ನು ಅವರ ಬಳಕೆ ಮತ್ತು ಕೊಡುಗೆಗಳ ಆಧಾರದ ಮೇಲೆ ಅದರ ಸದಸ್ಯರಿಗೆ ವಿತರಿಸಲಾಗುತ್ತದೆ.

ಚಿಲ್ಲರೆ ವ್ಯಾಪಾರ, ವಸತಿ, ಬಳಕೆಯ ಕ್ಷೇತ್ರ (ಯುಟಿಲಿಟೀಸ್), ಕರಕುಶಲ ವಸ್ತುಗಳಂತಹ ಅನೇಕ ಆರ್ಥಿಕ ಕ್ಷೇತ್ರಗಳಲ್ಲಿ ಸಹಕಾರಿ ಸಂಸ್ಥೆಗಳ ರೂಪಗಳನ್ನು ಕಾಣಬಹುದು ಮತ್ತು ಅವು ಕೃಷಿ ಕ್ಷೇತ್ರದಲ್ಲಿ ಹೆಚ್ಚು ಪ್ರಮುಖವಾಗಿವೆ.

**ಸಹಕಾರಿ ಸಂಸ್ಥೆಗಳ ವಿಸ್ತಾರ ಮತ್ತು ವೈವಿಧ್ಯ**

ಜಾಗತಿಕವಾಗಿ, ವಿಶ್ವ ಜನಸಂಖ್ಯೆಯ ಶೇಕಡ 12ಕ್ಕಿಂತ ಹೆಚ್ಚಿನ ಜನರು 3 ದಶಲಕ್ಷ ಸಹಕಾರಿ ಸಂಸ್ಥೆಗಳ ಭಾಗವಾಗಿದ್ದಾರೆ. ವಿಶ್ವ ಸಹಕಾರ ಮಾನಿಟರ್ (2022) ವರದಿಯ ಪ್ರಕಾರ, ಅತಿದೊಡ್ಡ 300 ಸಹಕಾರಿ ಸಂಸ್ಥೆಗಳು ಮತ್ತು ಸಂಬಂಧಿತ ಸಂಸ್ಥೆಗಳು ಒಟ್ಟು 2,146 ಶತಕೋಟಿ ಡಾಲರ್ ವಹಿವಾಟು ನಡೆಸುತ್ತಿವೆ. ವಿಶ್ವಾದ್ಯಂತ ಸಹಕಾರಿ ಸಂಸ್ಥೆಗಳು 280 ದಶಲಕ್ಷ ಜನರಿಗೆ ಉದ್ಯೋಗ ಅಥವಾ ಕೆಲಸದ ಅವಕಾಶಗಳನ್ನು ಒದಗಿಸುತ್ತಿವೆ, ಇದು ವಿಶ್ವದ ಒಟ್ಟು ಉದ್ಯೋಗಿಪಡೆಯ 10% ಪ್ರಮಾಣವಾಗಿದೆ. ಐಸಿಎ ವರದಿ ಪ್ರಕಾರ, ವಿಶ್ವಾದ್ಯಂತ 3 ದಶಲಕ್ಷ ಸಹಕಾರಿ ಸಂಸ್ಥೆಗಳಲ್ಲಿ 1 ಶತಕೋಟಿಗೂ ಹೆಚ್ಚು ಸಹಕಾರಿ ಸದಸ್ಯರು ಇದ್ದಾರೆ. ಐಎಲ್ಓ ವರದಿ ಪ್ರಕಾರ, ಜಾಗತಿಕ ಕೃಷಿ ಉತ್ಪಾದನೆಯ ಶೇಕಡ 50ಕ್ಕಿಂತ ಹೆಚ್ಚಿನ ಪ್ರಮಾಣ ಸಹಕಾರಿ ಸಂಸ್ಥೆಗಳ ಮೂಲಕವೇ ಮಾರಾಟವಾಗುತ್ತಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಸಹಕಾರಿ ಸಂಸ್ಥೆಗಳ ಮೂಲಕ ಸಹಕಾರ ನಡೆಯುತ್ತಿರುವುದನ್ನು ಕಾಣಬಹುದು, ಅಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಪ್ರಕ್ರಿಯೆಗಳ ಮೂಲಕ ಸ್ವಸಹಾಯ ಗುಂಪುಗಳನ್ನು ರಚಿಸಲು ಗೃಹ ಕಾರ್ಮಿಕರು, ನಿರ್ಮಾಣ ಕೆಲಸಗಾರರು ಮತ್ತು ಬೀದಿ ವ್ಯಾಪಾರಿಗಳನ್ನು ಒಟ್ಟುಗೂಡಿಸಲಾಗುತ್ತಿದೆ. ಅಂತಹ ಗುಂಪುಗಳು ಸಹಕಾರಿಗಳಂತೆ, ಉತ್ಪಾದಕ ಕಾರ್ಯಕ್ರಮಗಳಿಗೆ ಪ್ರವೇಶಿಸಲು, ನಿರ್ವಹಿಸಲು ಮತ್ತು ಸ್ವಂತ ಪ್ರಕ್ರಿಯೆಗಳನ್ನು, ಉತ್ಪನ್ನ ಮಾರುಕಟ್ಟೆಗಳನ್ನು ಪ್ರವೇಶಿಸಲು ಮತ್ತು ತಮ್ಮನ್ನು ತಾವು ತೊಡಗಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸಿದೆ. ಸಹಕಾರಿ ಸಂಘಗಳು ನಗರ ಪ್ರದೇಶಗಳಲ್ಲೂ ಕಂಡುಬರುತ್ತವೆ. ಸಹಕಾರಿ ಸಂಸ್ಥೆಗಳು ಸ್ಥಳೀಯವಾಗಿದ್ದರೂ, ಮಾಂಡ್ರಾಗನ್, ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋಆಪರೇಟಿವ್ (ಐಎಫ್ಎಫ್‌ಸಿಒ), ಕೃಶಕ್ ಭಾರತಿ ಕೋಆಪರೇಟಿವ್ ಲಿಮಿಟೆಡ್ (ಕೆಆರ್‌ಐಬಿಹೆಚ್‌ಸಿಒ) ಮತ್ತು ಗುಜರಾತ್ ಕೋಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್ (ಅಮುಲ್)ನಂತಹ ಸಹಕಾರಿ ಸಂಸ್ಥೆಗಳು ವಿಶ್ವ ನಾಯಕರಾಗುವ ಮಟ್ಟಿಗೆ ಬೆಳೆದು ನಿಂತಿವೆ. ತಂತ್ರಜ್ಞಾನ ಸೇರ್ಪಡೆ ಅಥವಾ ಅಳವಡಿಕೆ, ಮಾರುಕಟ್ಟೆಯ ಮೂಲಕ ಉತ್ತಮ ಅಭ್ಯಾಸಗಳನ್ನು ಸಂಯೋಜಿಸುತ್ತವೆ. ಜತೆಗೆ, ದೃಷ್ಟಿಕೋನ, ಮತ್ತು ಬ್ರ್ಯಾಂಡಿಂಗ್, ಜಾಗತಿಕ ಮೌಲ್ಯ ಸರಪಳಿಗಳು ಸಹಕಾರಿ ಸಂಸ್ಥೆಗಳಲ್ಲಿ ವಿಶೇಷವಾಗಿ ಕಾಫಿ, ಕೊಕೊ, ಹತ್ತಿ ಮತ್ತು ಮೀನುಗಾರಿಕೆ ವಲಯದಲ್ಲಿ ಕಂಡುಬರುತ್ತವೆ. ತಂತ್ರಜ್ಞಾನ–ಚಾಲಿತ ಯೋಜನೆಗಳಾದ ಸೌರಶಕ್ತಿ, ಪವನ ಶಕ್ತಿ ಮತ್ತು ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಸಹಕಾರಿ ಸಂಸ್ಥೆಗಳು ಹೊಂದಿವೆ. ಭಾರತವು 8.5 ಲಕ್ಷ ಸಹಕಾರಿ ಘಟಕಗಳನ್ನು ಹೊಂದಿದೆ, ಅದರಲ್ಲಿ 20% ಸಾಲ ಸಹಕಾರಿ ಸಂಸ್ಥೆಗಳಾಗಿವೆ. ಉಳಿದ 80% ಸಂಸ್ಥೆಗಳು ವೈವಿಧ್ಯಮಯ ಚಟುವಟಿಕೆಗಳಲ್ಲಿ ತೊಡಗಿರುವ ಸಾಲಯೇತರ ಸಹಕಾರಿಗಳಾಗಿವೆ. ಅಂದರೆ, ಮೀನುಗಾರಿಕೆ, ಹೈನು, ಉತ್ಪಾದನೆ, ಸಂಸ್ಕರಣೆ, ಗ್ರಾಹಕ, ಕೈಗಾರಿಕಾ, ಮಾರುಕಟ್ಟೆ, ಪ್ರವಾಸೋದ್ಯಮ, ಆಸ್ಪತ್ರೆ, ವಸತಿ, ಸಾರಿಗೆ, ಕಾರ್ಮಿಕ, ಕೃಷಿ, ಸೇವೆ, ಜಾನುವಾರು, ವಿವಿಧೋದ್ದೇಶ ಸಹಕಾರ ಸಂಘಗಳು, ಇತ್ಯಾದಿ ಸೇರಿವೆ.

**ಆವಿಷ್ಕಾರ, ತಂತ್ರಜ್ಞಾನ ಮತ್ತು ಉದ್ಯಮಶೀಲತೆ**

ವ್ಯಾಪಾರ ಉದ್ಯಮವು ಅದರ ಕಾನೂನು ಸಂಬಂಧಗಳನ್ನು ಲೆಕ್ಕಿಸದೆ ಯಾವಾಗಲೂ ಮಾರುಕಟ್ಟೆ ಪ್ರಭಾವಿತವಾಗಿರುತ್ತದೆ, ಸಹಕಾರಿ ಸಂಸ್ಥೆಗಳು ಇದಕ್ಕೆ ಹೊರತಾಗಿಲ್ಲ. ಆವಿಷ್ಕಾರ ಮತ್ತು ಉದ್ಯಮಶೀಲತೆ ಮತ್ತು ಒಪ್ಪಿತ ಅಥವಾ ಗೆದ್ದ(ಸಾಬೀತಾದ) ವ್ಯಾಪಾರ ಮಾದರಿಗಳು ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ವ್ಯಾಪಾರ ಉದ್ಯಮಗಳ ಮುಂದುವರಿದ ಕಾರ್ಯತಂತ್ರಗಳಾಗಿವೆ. ಈ ಕಾರ್ಯತಂತ್ರಗಳು ಸಹಕಾರಿ ಸಂಸ್ಥೆಗಳಿಗೆ ಸೂಕ್ತವಾಗಬಹುದೇ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ. ಈ ಪ್ರಸ್ತುತತೆಯನ್ನು ಶ್ಲಾಘಿಸಬೇಕಾದರೆ, ಈ ಆಯಾಮಗಳು ಹೇಗೆ ಕೊಡುಗೆ ನೀಡಬಹುದು



Scanned with ACE Scanner

ಎಂಬುದನ್ನು ನಾವು ತಿಳಿದುಕೊಳ್ಳೋಣ. ನಾವಿನ್ಯತೆಯು ಹೊಸ ಸಂಶೋಧನೆ (ಆವಿಷ್ಕಾರ)ಯಿಂದ ಯಶಸ್ವಿಯಾಗುತ್ತದೆ ಎಂದು ಪ್ರತಿಪಾದಿಸಲಾಗಿದೆ. ಒಂದು ಆವಿಷ್ಕಾರವು ಹೊಸ ಆಲೋಚನೆಗಳನ್ನು ಗಮನಿಸಲು, ನಿರ್ಣಯಿಸಲು ಮತ್ತು ಹೊಸ ಆಲೋಚನೆಗಳನ್ನು ಅಭಿವೃದ್ಧಿಪಡಿಸಲು ನಾವಿನ್ಯತೆ ಅಥವಾ ಹೊಸತನವನ್ನು ಪ್ರೋತ್ಸಾಹಿಸುತ್ತದೆ. ಹೊಸ ಉತ್ಪನ್ನ, ಹೊಸ ಪ್ರಕ್ರಿಯೆ, ಅಥವಾ ಹೊಸ ಸೇವೆ, ವ್ಯಾಪಾರ ಅಥವಾ ಜೀವನದ ಗುಣಮಟ್ಟವನ್ನು ಸುಧಾರಿಸಲು, ಪರಿಚಯಿಸಲು ಈ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಹೀಗಾಗಿ, ನಾವಿನ್ಯತೆ ಎಂಬುದು ಉತ್ಪನ್ನ, ಪ್ರಕ್ರಿಯೆ ಅಥವಾ ಸೇವೆಗಾಗಿ ಎಂದು ನಾವು ಹೇಳಬಹುದು. ಜತೆಗೆ, ನಾವಿನ್ಯತೆಯು ಸಾಮಾಜಿಕ, ಆರ್ಥಿಕ ಮತ್ತು ಮೌಲ್ಯವರ್ಧಿತ ಆಯಾಮಗಳನ್ನು ಸಹ ಹೊಂದಿರುತ್ತದೆ.

ನಾವಿನ್ಯತೆ ಮತ್ತು ಉದ್ಯಮಶೀಲತೆಯನ್ನು ನಿರ್ವಹಿಸುವಲ್ಲಿ ತಂತ್ರಜ್ಞಾನದ ಪಾತ್ರವು ಜಾಗತಿಕವಾಗಿ ಅಂಗೀಕರಿಸಲ್ಪಟ್ಟಿದೆ. ಪ್ರಸ್ತುತ, ಅತ್ಯುತ್ತಮ ವ್ಯಾಪಾರ ಪ್ರಕ್ರಿಯೆಗಳನ್ನು ಡಿಜಿಟಲ್ ಆಗಿ ಸಕ್ರಿಯಗೊಳಿಸಲಾಗಿದೆ. ಡಿಜಿಟಲ್ ಸಕ್ರಿಯಗೊಳಿಸಿದ ವೆಬ್ 4.0 ಮತ್ತು ಇಂಡಸ್ಟ್ರಿ 4.0 ಮೆಷಿನ್ ಲರ್ನಿಂಗ್, ಕೃತಕ ಬುದ್ಧಿಮತ್ತೆ, ವರ್ಚುವಲ್ ರಿಯಾಲಿಟಿ, ಆಗ್ಮೆಂಟೆಡ್ ರಿಯಾಲಿಟಿ ಮತ್ತು ಡಿಜಿಟಲ್ ಟ್ವಿನ್ಸ್ ಕೋಆಪರೇಟಿವ್ಸ್ ತಂತ್ರಜ್ಞಾನಗಳ ಮೂಲಕ ಪ್ರಯೋಜನಗಳನ್ನು ಒದಗಿಸಲು ವಿನ್ಯಾಸಗೊಳಿಸಲಾದ ಕೆಲವು ಹೊಸ ಆವಿಷ್ಕಾರಗಳಾಗಿವೆ. ಇಂಡಸ್ಟ್ರಿ 4.0ರಿಂದ ಮಾರುಕಟ್ಟೆಯು ವೇಗವಾಗಿ ಬೆಳೆಯುತ್ತಿದೆ. 2024ರ ವೇಳೆಗೆ ಸಹಕಾರಿ ಸಂಸ್ಥೆಗಳ ವ್ಯಾಪಾರ ವಹಿವಾಟು 156.6 ಶತಕೋಟಿ ಡಾಲರ್ ತಲುಪುವ ನಿರೀಕ್ಷೆಯಿದೆ. 2019ರಿಂದ 2024ರ ವರೆಗೆ ಸಂಯೋಜಿತ ವಾರ್ಷಿಕ ಬೆಳವಣಿಗೆ ದರ(ಸಿಎಜಿಆರ್) ಶೇಕಡ 16.9 ರಷ್ಟು ಪ್ರಗತಿ ಕಂಡಿದೆ. ಬ್ಲಾಕ್ ಚೈನ್ ತಂತ್ರಜ್ಞಾನ ಇನ್ನೂ ಅಕಾಲಿಕವಾಗಿದ್ದರೂ ಪಾರದರ್ಶಕ ವಹಿವಾಟುಗಳನ್ನು ಬೆಂಬಲಿಸಲು ಅಸಾಧಾರಣವಾಗಿ ಬೆಳೆಯುತ್ತಿವೆ. ಎಂಟರ್ಪ್ರೈಸ್ ರಿಸೋರ್ಸ್ ಪ್ಲ್ಯಾನಿಂಗ್ (ಇಆರ್‌ಪಿ) ಎನ್ನುವುದು ಪೂರೈಕೆ ಸರಪಳಿ ಅಥವಾ ಅಂತಹ ಜಾಲವನ್ನು ಬೆಂಬಲಿಸಲು ತಂತ್ರಜ್ಞಾನಗಳನ್ನು



ಪರಿಚಯಿಸುವ ಮತ್ತೊಂದು ಮಾರುಕಟ್ಟೆ (ವೇದಿಕೆ)ಯಾಗಿದೆ.

ಉದ್ಯಮಶೀಲತೆಯು ನಾವಿನ್ಯತೆ-ಚಾಲಿತ ಅಥವಾ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಚಾಲಿತ ವಿಧಾನವಾಗಿದೆ. ಈ ಎರಡೂ ಸಂದರ್ಭಗಳಲ್ಲಿ, ನೀತಿಯ ಉತ್ತೇಜನ ಅಥವಾ ಜಾರಿ ಅತ್ಯಗತ್ಯ. ನಾವಿನ್ಯತೆ-ಚಾಲಿತ ಉದ್ಯಮಶೀಲತೆ (ಐಡಿಇ) ಮತ್ತು ಎಂಎಸ್ಎಂಇಗಳು ಮಾರುಕಟ್ಟೆಗೆ ಪ್ರವೇಶಿಸುವ ಮತ್ತು ನಿರ್ಗಮಿಸುವ ಅಪಾಯವನ್ನು ಮಧ್ಯಮಗೊಳಿಸಲು ಸೂಕ್ತ ನೀತಿ ಅನುಷ್ಠಾನದ ಅಗತ್ಯವಿದೆ. ಉತ್ಪನ್ನ ಸೇವೆ ಪ್ರಾರಂಭಿಸಲು ಉದ್ಯಮಿ ಎದುರಿಸುವ ಆರಂಭಿಕ ನಗದು ಕೊರತೆಯಂತಹ ಪ್ರವೇಶ ಅಡೆತಡೆಗಳು ಇರುತ್ತದೆ. ಜತೆಗೆ, ಆದಾಯ ಪ್ರಾರಂಭವಾಗುವ ತನಕ ಆಂತರಿಕ ಸ್ವತ್ತುಗಳ ನಿರ್ವಹಣೆ, ನಿರ್ಗಮನ ಅಡೆತಡೆಗಳು ಸ್ವತ್ತುಗಳ ಪ್ರಕಾರ ಮತ್ತು ಸ್ವರೂಪ ಮತ್ತು ಅವರು ರಚಿಸಿದ ಮಾರುಕಟ್ಟೆಯನ್ನು ಅವಲಂಬಿಸಿರುತ್ತದೆ. ಭಾರತ ಸರ್ಕಾರದ ಆರಂಭಿಕ ನೀತಿಯು ಐಡಿಇ ವಿಭಾಗವನ್ನು ಉತ್ತಮವಾಗಿ ಯೋಜಿತ ಪ್ರವೇಶ ಮತ್ತು ನಿರ್ಗಮನ ತಡೆಗೋಡೆ ಸಮಸ್ಯೆ ಪರಿಹಾರ ಮಾಡಬಹುದಾದ ಕಾರ್ಯವಿಧಾನವನ್ನು ಬೆಂಬಲಿಸುವ ಗುರಿ ಹೊಂದಿದೆ. ಎಂಎಸ್ಎಂಇ ವಲಯವು ಭಾರತ ಸರ್ಕಾರದ ಉಡಾನ್ ಮತ್ತು ಜೆಮ್ ಪೋರ್ಟಲ್ ಆಧರಿತ ನೀತಿ-ಚಾಲಿತ ಬೆಂಬಲ ಹೊಂದಿದೆ. ಅಲ್ಲದೆ, ಕೃಷಿ ಆಧರಿತ ಉದ್ಯಮಿಗಳನ್ನು (ಐಡಿಇ ಮತ್ತು ಎಂಎಸ್ಎಂಇ) ಬೆಂಬಲಿಸಲು ಭಾರತ ಸರ್ಕಾರವು ಇ-ನಾಮ್ ಯೋಜನೆಯನ್ನು ಜಾರಿಗೆ ತಂದಿದೆ.

ತಂತ್ರಜ್ಞಾನ-ಚಾಲಿತ ಉದ್ಯಮಶೀಲತೆಗೆ ಉದ್ಯಮಶೀಲತೆ ಮತ್ತು ನಾವಿನ್ಯತೆ ನೇತೃತ್ವದ ಉದ್ಯಮಗಳನ್ನು ಉತ್ತೇಜಿಸುವ ಮೂಲಕ ವಿವಿಧ ಮಾರುಕಟ್ಟೆ-ಕಾರ್ಯಸಾಧು ತಾಂತ್ರಿಕ ಆವಿಷ್ಕಾರಗಳನ್ನು ಅಳೆಯುವ ಮತ್ತು ಪರಿವರ್ತಿಸುವ ಪರಿಸರ ವ್ಯವಸ್ಥೆಯ ಅಗತ್ಯವಿದೆ. ಅಂತಹ ಪ್ರಯತ್ನಗಳು ಆರ್ಥಿಕ ಲಾಭ ಮತ್ತು ಸಂಪತ್ತು ಸೃಷ್ಟಿಗೆ ಪರಿವರ್ತಿಸುವ ಜಾಲಗಳ ಮೂಲಕ ನಿರ್ದಿಷ್ಟ ಪ್ರದೇಶ, ಉದ್ಯಮ ಅಥವಾ ಕ್ಲಸ್ಟರ್‌ಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುವ ಮೂಲಕ ಎಲ್ಲರನ್ನೂ ಒಳಗೊಂಡ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ತರಲು ವಿಶೇಷ ಗಮನ ಹರಿಸಬೇಕು. ಹೀಗೆ ಮಾಡುವುದರಿಂದ ಈ ಉದ್ಯಮಗಳು ಉತ್ತಮ ಸಾಮಾಜಿಕ ಮತ್ತು ಮಾರುಕಟ್ಟೆ ಸ್ವೀಕಾರವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಉದ್ಯಮಶೀಲ ಉದ್ಯಮಗಳು ತರುವಾಯ ಗುರುತಿಸಲಾದ ನವೀನ ಪರಿಹಾರಗಳನ್ನು ಮಾರುಕಟ್ಟೆಯ ಅವಕಾಶಗಳನ್ನು ಹಿಡಿಯುವ ಮೂಲಕ ಮತ್ತು ಸೂಕ್ತ ವ್ಯಾಪಾರ ಮಾದರಿಗಳಿಗೆ ಪರಿವರ್ತನೆ ಹೊಂದಲು ಸಮರ್ಥವಾಗಿರುತ್ತವೆ. ಈ ಉದ್ಯಮಗಳ ಮೌಲ್ಯವರ್ಧಿತ ಉತ್ಪನ್ನಗಳು ಮತ್ತು ಸೇವೆಗಳು ಉತ್ತಮ ಮಾರುಕಟ್ಟೆ ಪ್ರಭಾವವನ್ನು ಹೊಂದಲು ಕೈಗೆಟುಕುವ ಬೆಲೆಗೆ ಅವರು ಗ್ರಾಹಕರನ್ನು ತಲುಪಬೇಕು.



Scanned with ACE Scanner

ಸಹಕಾರಿ ಸಂಸ್ಥೆಗಳು ವಿಶೇಷವಾಗಿ ಪ್ರಮುಖ ಬ್ರ್ಯಾಂಡ್‌ಗಳು, ತಂತ್ರಜ್ಞಾನ, ನಾವಿನ್ಯತೆ ಮತ್ತು ಉದ್ಯಮಶೀಲತೆಯ ಪ್ರಯೋಜನಗಳನ್ನು ಬಳಸಿಕೊಳ್ಳುವ ಮೂಲಕ ಇಂದಿನ ವೇಗವಾಗಿ ಬದಲಾಗುತ್ತಿರುವ ವ್ಯಾಪಾರ ವಾತಾವರಣಕ್ಕೆ ಹೊಂದಿಕೊಳ್ಳುವಲ್ಲಿ ಮುಂದಿವೆ. ಸಾಂಪ್ರದಾಯಿಕವಾಗಿ, ಸಹಕಾರಿ ಸಂಸ್ಥೆಗಳು 3 ಹಂತದ ರಚನೆಗಳಲ್ಲಿ ಕಾರ್ಯ ನಿರ್ವಹಿಸುತ್ತವೆ (ಪ್ರಾಥಮಿಕ, ಮಧ್ಯಂತರ ಮತ್ತು ಅಪೆಕ್ಸ್), ತಮ್ಮ ಸದಸ್ಯರ ಬೇಡಿಕೆಗಳನ್ನು ಒಟ್ಟುಗೂಡಿಸುತ್ತವೆ ಮತ್ತು ಅಂತಹ ಸೇವೆಗಳನ್ನು ಒದಗಿಸುತ್ತವೆ. ಸಹಕಾರಿ ಸಂಸ್ಥೆಗಳು ಸ್ವಭಾವತಃ ಮತ್ತು ವಿನ್ಯಾಸದಿಂದ, ಐಡಿಇ ಮತ್ತು ಎಂಎಸ್‌ಎಂಇ ವಲಯಗಳ ಎಲ್ಲಾ ಸವಾಲುಗಳನ್ನು ಎದುರಿಸುತ್ತವೆ. ಸಾಮಾಜಿಕ ಮತ್ತು ಆರ್ಥಿಕ ಆವಿಷ್ಕಾರಗಳ ಮೂಲಕ ಸಹಕಾರಿ ಸಂಸ್ಥೆಗಳು ಹೊರಹೊಮ್ಮುತ್ತಿವೆ. ಸಹಕಾರಿ ಸಂಸ್ಥೆಯ ಪ್ರತಿಯೊಬ್ಬ ಸದಸ್ಯರು ಲಭ್ಯವಿರುವ ಕೌಶಲ್ಯಗಳಿಗೆ ಅನುಗುಣವಾಗಿ ಉತ್ಪನ್ನಗಳು ಅಥವಾ ಸೇವೆಗಳನ್ನು ರೂಪಿಸುತ್ತಾರೆ. ಸದಸ್ಯರು ಸಾಮಾನ್ಯವಾಗಿ ಜೀವನೋಪಾಯದ ಸವಾಲುಗಳಿಂದ ಒತ್ತಡಕ್ಕೊಳಗಾಗುತ್ತಿದ್ದಾರೆ. ಜತೆಗೆ, ಪ್ರವೇಶ ಮತ್ತು ನಿರ್ಗಮನ ಅಡೆತಡೆಗಳಿಗೆ ತಕ್ಷಣದ ಉತ್ತರಗಳನ್ನು ಹುಡುಕುತ್ತಿದ್ದಾರೆ. ಸಹಕಾರಿ ಸಂಸ್ಥೆಗಳು ಈ ವೈಯಕ್ತಿಕ ಸದಸ್ಯರನ್ನು ನೋಡಿಕೊಳ್ಳಬೇಕು ಮತ್ತು ಅಂತಹ ಸವಾಲುಗಳನ್ನು ಎದುರಿಸಲು ಬೆಂಬಲ ಒದಗಿಸಬೇಕು. ಸದಸ್ಯರ ಬೇಡಿಕೆಯನ್ನು ಪೂರೈಸಲು ಪ್ರಯತ್ನಿಸುತ್ತಿರುವಾಗ, ಸಹಕಾರಿಯು ತನ್ನ ವಿಲೇವಾರಿಯಲ್ಲಿ ಲಭ್ಯವಿರುವ ಉತ್ಪನ್ನಗಳು ಮತ್ತು ಸೇವೆಗಳ ಒಟ್ಟುಗೂಡಿಸುವಿಕೆಯಿಂದಾಗಿ ದಾಸ್ತಾನು ಹಿಡಿದಿಟ್ಟುಕೊಳ್ಳುವ ಸವಾಲನ್ನು ಎದುರಿಸುತ್ತದೆ. ಅಂತಹ ದಾಸ್ತಾನು ಹಿಡುವಳಿ ವೆಚ್ಚವು ಕಾಳಜಿ ವಹಿಸಬೇಕಾದ ವಿಷಯವಾಗಿದೆ. ಏಕೆಂದರೆ ಒಬ್ಬ ಸದಸ್ಯನು ಅಂತಹ ದಾಸ್ತಾನು ಸಂಪುಟಗಳನ್ನು ಊಹಿಸಲು ಮತ್ತು ಮಾರುಕಟ್ಟೆಗೆ ತರಲು ಉತ್ತಮ ಕೌಶಲ್ಯ ಹೊಂದಿರುವುದಿಲ್ಲ. ಕನಿಷ್ಠ ವಿಳಂಬದೊಂದಿಗೆ ಈ ಉತ್ಪನ್ನಗಳು ಮತ್ತು ಸೇವೆಗಳು ಮಾರುಕಟ್ಟೆಯಲ್ಲಿ ಬಿಕರಿ ಆಗುವುದನ್ನು ಇದು ಖಾತ್ರಿಪಡಿಸುವ ಅಗತ್ಯವಿದೆ. ಈ ಸವಾಲು ಎದುರಿಸಲು, ಸಹಕಾರಿ ಸಂಸ್ಥೆಗಳ ಪಾಲುದಾರರು ರಗಳೆ ಮುಕ್ತ ಸೇವೆ ನೀಡುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಸಹಕಾರಿ ಸಂಸ್ಥೆಗಳ ಸದಸ್ಯರು ಮಾರುಕಟ್ಟೆ ಅಪಾಯಗಳಿಂದ ಮುಕ್ತವಾಗುವುದನ್ನು ಖಚಿತಪಡಿಸಿಕೊಳ್ಳಲು ಇದೇ ರೀತಿಯ ಸಹಕಾರಿ ಸಂಘಗಳು ಒಗ್ಗೂಡಿ ಒಕ್ಕೂಟವನ್ನು ರಚಿಸುತ್ತಿವೆ. ಒಕ್ಕೂಟವು ನಾವಿನ್ಯತೆ, ತಂತ್ರಜ್ಞಾನ-ಪ್ರೇರಿತ ಪ್ರಕ್ರಿಯೆಗಳು ಮತ್ತು ಮಾರುಕಟ್ಟೆ ಅಪಾಯಗಳನ್ನು ನಿರ್ವಹಿಸುವ ಕಾರ್ಯ ಕೈಗೊಳ್ಳುತ್ತದೆ. ಸಹಕಾರಿ ಸಂಸ್ಥೆಗಳ ಸದಸ್ಯರ ಪ್ರಯೋಜನಕ್ಕಾಗಿ ಸಂಕೀರ್ಣ ಮೌಲ್ಯ ಸೇರ್ಪಡೆಗಳನ್ನು ಖಚಿತಪಡಿಸಿಕೊಳ್ಳಲು ಇದು ಹೆಚ್ಚು ಹೂಡಿಕೆ ಮಾಡುತ್ತದೆ. ಮಾರುಕಟ್ಟೆ, ಬ್ರಾಂಡ್ ಮತ್ತು ಪ್ರಭಾವ ಕ್ರೋಢೀಕರಿಸಲು ಸಹಕಾರಿ ಒಕ್ಕೂಟವನ್ನು ರಚಿಸುವ ಮೂಲಕ ಒಕ್ಕೂಟಗಳನ್ನು ಮತ್ತಷ್ಟು ಒಗ್ಗೂಡಿಸಲು ಅವಕಾಶವಿದೆ.

### ಡೇರಿ ವಲಯದಲ್ಲಿ ವಿಶಿಷ್ಟ ಸಹಕಾರದ ಪ್ರಕರಣ

ಭಾರತದಲ್ಲಿನ ಡೇರಿ ವಲಯದ ಸಹಕಾರವು 3 ಹಂತದ ರಚನೆಯನ್ನು ಅನುಸರಿಸುತ್ತಿದೆ. ಮೊದಲ ಪದರವು ಡೇರಿ ಉತ್ಪಾದಕರ ಸದಸ್ಯರಿಂದ ರೂಪುಗೊಂಡ ಉತ್ಪಾದಕರ ಸಹಕಾರಿ ಸಂಸ್ಥೆಯಾಗಿದೆ. ಈ ಸದಸ್ಯರು ಸೊಸೈಟಿಯಿಂದ ಅಭಿಪ್ರಾಯ, ಸಲಹೆ, ಸೂಚನೆ ಸ್ವೀಕರಿಸುತ್ತಾರೆ. ಒಕ್ಕೂಟದ ಬೆಂಬಲದೊಂದಿಗೆ ಸೊಸೈಟಿಯು ಮಾರುಕಟ್ಟೆಯ ಮಾಹಿತಿ ಮತ್ತು ಸದಸ್ಯರ ಅಗತ್ಯತೆಗಳನ್ನು ಬಹಳ ಎಚ್ಚರಿಕೆಯಿಂದ ಅಧ್ಯಯನ ಮಾಡುತ್ತದೆ. ಈ ಸದಸ್ಯರ ಮೂಲಕ ನಿರಂತರ ಹಾಲು ಉತ್ಪಾದನೆಯನ್ನು ಖಚಿತಪಡಿಸಿಕೊಳ್ಳಲು ವಿಮರ್ಶಾತ್ಮಕ ಒಳನೋಟಗಳನ್ನು ಸೃಷ್ಟಿಸುತ್ತದೆ. ಈ ಉತ್ಪಾದಕರು ಕುಟುಂಬದ ಸದಸ್ಯರ ಸಹಾಯದಿಂದ ಉತ್ಪಾದನೆಯ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ, ಜಾನುವಾರುಗಳು ಹಾಲು ಉತ್ಪಾದನೆಯ ಮೂಲಗಳಾಗಿವೆ. ಹಿಂಡಿನ ಗಾತ್ರವು ಉತ್ಪಾದಕರ ಕುಟುಂಬ ಸದಸ್ಯರಿಗೆ ವ್ಯವಹಾರವನ್ನು ಹೆಚ್ಚು ಸಂಕೀರ್ಣಗೊಳಿಸುತ್ತದೆ. ಹೀಗಾಗಿ, ವ್ಯವಹಾರದ ಸಂಕೀರ್ಣತೆಗಳನ್ನು ಗಮನಿಸುವುದು ಮುಖ್ಯ, ವ್ಯಾಪಾರ ಘಟಕಗಳನ್ನು ಯಾವುದೇ ಸಾರ್ವತ್ರಿಕ ಕಾರ್ಯತಂತ್ರದ ವ್ಯಾಪಾರ ಘಟಕಕ್ಕೆ (ಎಸ್‌ಬಿಯು) ಸಮಾನವಾಗಿ ಪರಿಗಣಿಸಲಾಗುತ್ತದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ಐಸಿಟಿ) ಪಾತ್ರವು ಈ ಇನ್ಪುಟ್ (ಮಾಹಿತಿ) ಸೇವೆಗಳಿಗೆ ಮಾರುಕಟ್ಟೆಗಳು ಮತ್ತು ಮಾರುಕಟ್ಟೆ ಬೆಲೆಗಳನ್ನು ಪತ್ತೆ ಹಚ್ಚಲು ಸಾಕಷ್ಟು ಸಹಾಯಕವಾಗಿದೆ. ಪ್ರಸ್ತುತ, ಒಕ್ಕೂಟಗಳು ಸದಸ್ಯರ ಅಗತ್ಯಗಳನ್ನು ಪೂರ್ವಭಾವಿಯಾಗಿ ಕಂಡುಹಿಡಿಯಲು ಎಂಎಲ್, ಎಐ ಮತ್ತು ವ್ಯಾಪಾರ ವಿಶ್ಲೇಷಣೆ ತಂತ್ರಜ್ಞಾನಗಳನ್ನು ಬಳಸುತ್ತಿವೆ. ಉತ್ಪಾದಕರು ಜಾನುವಾರು, ಮೇವು, ಜಾನುವಾರು ಆಹಾರ, ಪ್ರಾಣಿಗಳ ಆರೋಗ್ಯ ರಕ್ಷಣೆ, ವಿಮೆ ಮತ್ತು ಪಶುಸಂಗೋಪನೆ ಸೇವೆಗಳಂತಹ ಸಲಹೆ ಅಥವಾ ಮಾಹಿತಿಸೇವೆಗಳನ್ನು ಪಡೆಯುತ್ತಾರೆ. ಈ ಪದರದಲ್ಲಿ, ಉತ್ಪಾದಕನು ಸಹಕಾರಿಯು ಗ್ರಾಹಕನಂತೆ ಕಾರ್ಯ ನಿರ್ವಹಿಸುತ್ತಾನೆ. ಸಹಕಾರಿ ಸಂಸ್ಥೆಯು ಸದಸ್ಯರನ್ನು ಮಾರುಕಟ್ಟೆಯ ಒತ್ತಡದಿಂದ ರಕ್ಷಿಸುತ್ತದೆ, ಇದರಿಂದಾಗಿ ಉತ್ಪಾದಕನ ಸ್ಥಳದಲ್ಲಿ ಹಾಲು ಉತ್ಪಾದನೆಯ ವೆಚ್ಚದ ಮೇಲೆ ಪ್ರಭಾವ ಬೀರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಂದು ಪಶು ಆಹಾರ, ಸಸ್ಯಗಳು, ಮೇವು ನಿರ್ವಹಣೆ ಸೇವೆಗಳು, ಗೂಳಿ ಸಾಕಣೆ ಕೇಂದ್ರಗಳು, ಕೃತಕ ಗರ್ಭಧಾರಣೆ ಸೇವೆಗಳ ಸರಪಳಿಗೆ ಅಪಾರ ಮೌಲ್ಯ ಸೇರಿಸುವ ಕೆಲವು ಉಪಕ್ರಮಗಳಾಗಿವೆ. ಇದು ಯಾವುದೇ ಡೇರಿ ಮೌಲ್ಯ ಸರಪಳಿಗೆ ಮೂಲಾಧಾರವಾಗಿದೆ. ಇಂದು ತಂತ್ರಜ್ಞಾನ-ಶಕ್ತ ಸೇವೆಗಳು ಪಾರದರ್ಶಕ ವಹಿವಾಟುಗಳನ್ನು ಖಾತ್ರಿಪಡಿಸುವ ಮೂಲಕ ರೈತರ ಮನೆ ಬಾಗಿಲಿಗೆ ಈ ಸೌಲಭ್ಯವನ್ನು ಒದಗಿಸುತ್ತಿವೆ.

ಸ್ವಯಂಚಾಲಿತ ಹಾಲು ಸಂಗ್ರಹಣಾ ಘಟಕಗಳು ಈಗ ಪ್ರಬುದ್ಧ ತಂತ್ರಜ್ಞಾನಗಳ ಆಧಾರದ ಮೇಲೆ ವಹಿವಾಟುಗಳಲ್ಲಿ ಪಾರದರ್ಶಕತೆ ಬೆಂಬಲಿಸಲು ಮತ್ತು ಗುಣಮಟ್ಟದ ನಿಯಂತ್ರಣ ಖಚಿತಪಡಿಸುವ ಸಾಮರ್ಥ್ಯಗಳನ್ನು ಹೊಂದಿವೆ. ರೊಬೊಟಿಕ್ಸ್ ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ಆಧರಿತ ಹಾಲು ಕರೆಯುವ ಯಂತ್ರಗಳನ್ನು ಇಂದು ಬಳಸಲಾಗುತ್ತಿದೆ. ಹಾಲು ಉತ್ಪಾದಕರ ಸ್ಥಳದಲ್ಲೇ ಹಾಲಿನ ಪ್ರಮಾಣ ಮತ್ತು ಗುಣಮಟ್ಟದ ಸಮಯೋಚಿತ ಮಾಹಿತಿ ಖಚಿತಪಡಿಸುತ್ತದೆ. ಸಹಕಾರಿ ಸಂಸ್ಥೆಗಳು ಐಒಟಿ ಆಧರಿತ ಬಲ್ಕ್ ಮಿಲ್ಕ್ ಚಿಲ್ಲಿಂಗ್ ಘಟಕಗಳನ್ನು (ಬಿಎಂಸಿಯು) ಮತ್ತು ಕೆಲವು ಶೀತಲೀಕರಣ ಕೇಂದ್ರಗಳನ್ನು ಹೊಂದಿದ್ದು, ಇದು ಸಂಗ್ರಹಿಸಿದ ಹಾಲಿನ ಗುಣಮಟ್ಟದ ಕಾಳಜಿಗೆ ಧಕ್ಕೆಯಾಗದಂತೆ ಸಂಗ್ರಹಿಸಲು ಮತ್ತು ಸಾಗಿಸಲು ಸಹಾಯ ಮಾಡುತ್ತದೆ.



Scanned with ACE Scanner

ಡೇರಿ ವಲಯದ 2ನೇ ಹಂತದ ಪದರವು ಸಹಕಾರಿ ಒಕ್ಕೂಟವಾಗಿದೆ. ಒಕ್ಕೂಟವು ಈಗ ಐಸಿಟಿ ಸಕ್ರಿಯಗೊಳಿಸಲಾದ ಪೂರೈಕೆ ಸರಪಳಿ ಮತ್ತು ಸಾಗಾಣಿಕೆ ಮಾದರಿಗಳನ್ನು ಸ್ಥಾಪಿಸುವ ಮೂಲಕ ಸಹಕಾರಿಗಳಿಂದ ಸಂಗ್ರಹಿಸಲಾದ ಹಾಲನ್ನು ತೆಗೆದುಕೊಳ್ಳುತ್ತದೆ. ಈ ಐಸಿಟಿ-ಆಧಾರಿತ ಮಾದರಿಗಳು ಸಾಗಣೆ ಯೋಜನೆಯ ಮೂಲಕ ಸಾರಿಗೆ ವೆಚ್ಚ ಕಡಿಮೆ ಮಾಡುವ ಗುರಿ ಹೊಂದಿವೆ. ಟ್ಯಾಂಕರ್‌ಗಳ ಗಾತ್ರ ಮತ್ತು ಚಲನೆಯನ್ನು ಯೋಜಿಸಲು ಬಿಎಂಸಿಯುಗಳಲ್ಲಿ ಸಂಗ್ರಹವಾಗಿರುವ ಹಾಲಿನ ಪ್ರಮಾಣವನ್ನು ಒಕ್ಕೂಟವು ಮೊದಲೇ ತಿಳಿದಿರುತ್ತದೆ. ಎಎಂಸಿಯುಗಳು, ಬಿಎಂಸಿಯುಗಳು, ಚಿಲ್ಲಿಂಗ್ ಸೆಂಟರ್‌ಗಳು, ಟ್ಯಾಂಕರ್‌ಗಳು, ಹಾಲು ಸಂಗ್ರಹಣೆ ಬೆಂಬಲಿಸುವುದು ಮತ್ತು ಉತ್ಪಾದಕರಿಗೆ ಬಿಲ್ಲಿಂಗ್ ಮಾಡುವುದು, ಜಿಪಿಎಸ್ ಮತ್ತು ಜಿಪಿಆರ್‌ಎಸ್ ಸಕ್ರಿಯಗೊಳಿಸಿದ ಸೇವೆಗಳನ್ನು ಒಳಗೊಂಡಂತೆ ನಿರ್ದಿಷ್ಟವಾಗಿ ವಿವಿಧ ಐಸಿಟಿ-ಶಕ್ತ ಸೇವೆಗಳು ಲಭ್ಯವಿದೆ. ಒಕ್ಕೂಟದ ಮಟ್ಟದಲ್ಲಿ, ಸಂಸ್ಕರಣಾ ಘಟಕಗಳು ಬಹುಮಟ್ಟಿಗೆ ರೋಬೋಟ್‌ಗಳನ್ನು ಒಳಗೊಂಡಂತೆ ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುತ್ತಿವೆ. ಗುಣಮಟ್ಟದ ಭರವಸೆ ಮಾನದಂಡಗಳನ್ನು ನಿರ್ವಹಿಸುವಾಗ ಮತ್ತು ವೆಚ್ಚ ನಿಯಂತ್ರಣ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುವಾಗ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ಸಜ್ಜಾಗುತ್ತಿವೆ. ಒಕ್ಕೂಟಗಳು ಸಹಕಾರಿ ರಚನೆಗಳ ಅಡಿ, ಹಾಲು ಉತ್ಪಾದಕರ ಒಕ್ಕೂಟಗಳು ಮತ್ತು ಉತ್ಪಾದಕ ಕಂಪನಿ ಕಾಯ್ದೆಗಳ ಅಡಿ, ಉತ್ಪಾದಕ ಕಂಪನಿಗಳು – ಹೀಗೆ ವಿವಿಧ ರೂಪಗಳಲ್ಲಿ ಬಲವಾಗಿ ಹೊರಹೊಮ್ಮಿದೆ. ಬಹು ಮುಖ್ಯವಾಗಿ, ಇಂಡಸ್ಟ್ರಿಯಲ್ ಇಂಟರ್ನೆಟ್ ಆಫ್ ಥಿಂಗ್ಸ್ (ಐಐಓಟಿ) ಮತ್ತು ಬ್ಯಾಕ್ ಎಂಡ್ ಎಂಟರ್ ಪ್ರೈಸಸ್ ರಿಸೋರ್ಸ್ ಪ್ಲ್ಯಾನಿಂಗ್ (ಇಆರ್‌ಪಿ) ಬೆಂಬಲದೊಂದಿಗೆ, ಒಕ್ಕೂಟಗಳು ಡೈರಿ ವಲಯದಲ್ಲಿ ಪ್ರಕ್ರಿಯೆಯ ದಕ್ಷತೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುತ್ತಿವೆ. ಪೂರೈಕೆ ಸರಪಳಿ ಚಲನವಲನಗಳ ಸಂವೇದಕ-ಆಧರಿತ ಟ್ರ್ಯಾಕಿಂಗ್, ದಾಸ್ತಾನು ಯೋಜನೆ ಮತ್ತು ಮುನ್ಸೂಚನೆಯಿಂದಾಗಿ ಪೂರೈಕೆ ಸರಪಳಿಯ ದಕ್ಷತೆ ಸುಧಾರಿಸಿದೆ. ಅಂತಿಮವಾಗಿ, ವೆಚ್ಚದ ನಿಯಂತ್ರಣ ಮತ್ತು ಸಂಪನ್ಮೂಲ ಯೋಜನೆಗಳ ಪ್ರಯೋಜನಗಳು ಸಣ್ಣ ಉತ್ಪಾದಕ ಸದಸ್ಯರ ಪರವಾಗಿವೆ.

ಭಾರತದಲ್ಲಿ ಡೇರಿ ಸಹಕಾರಿ ಕ್ಷೇತ್ರದ 3ನೇ ಪದರವು ಒಕ್ಕೂಟವಾಗಿದೆ. ಒಕ್ಕೂಟವು ನಿರಂತರ ಪ್ರಕ್ರಿಯೆಗಳು ಮತ್ತು ಮಾರುಕಟ್ಟೆ ಆವಿಷ್ಕಾರಗಳ ಮೂಲಕ ಡೇರಿ ಸಹಕಾರಿ ಒಕ್ಕೂಟಗಳನ್ನು ಭವಿಷ್ಯಕ್ಕೆ ಅಣಿಗೊಳಿಸಲು ದೊಡ್ಡ ರಕ್ಷಣಾ ಸಂಸ್ಥೆಯಾಗಿ ಹೊರಹೊಮ್ಮುತ್ತದೆ. ಮಾರುಕಟ್ಟೆಯ ನಡವಳಿಕೆಗಳನ್ನು ಅರ್ಥ ಮಾಡಿಕೊಳ್ಳಲು, ಪ್ರಮಾಣ ಮತ್ತು ವ್ಯಾಪ್ತಿಯ ಆರ್ಥಿಕತೆಗಳನ್ನು ನಿರ್ವಹಿಸಲು ಮತ್ತು ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಇರುವ ಮಾರ್ಗಗಳು ಮತ್ತು ವಿಧಾನಗಳನ್ನು ಕಂಡುಹಿಡಿಯುವ ಗುರಿಯನ್ನು ಒಕ್ಕೂಟ ಹೊಂದಿದೆ. ಈ ಕಾರ್ಯವಿಧಾನಕ್ಕಾಗಿ ಒಕ್ಕೂಟವು ಬ್ಯುಸಿನೆಸ್ ಇಂಟೆಲಿಜೆನ್ಸ್ ಅಥವಾ ವ್ಯಾಪಾರ ಗುಪ್ತಚರ (ಬಿಐ) ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ.

## ಸಾರಾಂಶ ಮತ್ತು ಮುಂದಿರುವ ದಾರಿ

ಉದ್ಯಮಶೀಲತೆ ಚಾಲಿತವಾಗಿರುವ ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆ (ಎಸ್‌ಟಿಐ) ಆರ್ಥಿಕ ಬೆಳವಣಿಗೆ ಮತ್ತು ಮಾನವ ಅಭಿವೃದ್ಧಿಗೆ ಪ್ರಮುಖ ಚಾಲನಾ ಶಕ್ತಿಯಾಗಿವೆ. ಆತ್ಮನಿರ್ಭರ್ ಭಾರತವನ್ನು ಕಟ್ಟುವ ಆಧಾರದ ಮೇಲೆ ಸುಸ್ಥಿರ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವಲ್ಲಿ, ಅದು ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಪರಿಸರ ಸುಸ್ಥಿರತೆಯನ್ನು ಒಳಗೊಂಡಿರಬೇಕು. ಹಾಗೆ ಮಾಡುವಾಗ, ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗಳನ್ನು ಉತ್ತೇಜಿಸಲು, ಸ್ಥಳೀಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಮತ್ತು ತಳಮಟ್ಟದ ನಾವಿನ್ಯತೆಯನ್ನು ಉತ್ತೇಜಿಸಲು ಹೆಚ್ಚಿನ ಒತ್ತು ನೀಡುವ ಅವಶ್ಯಕತೆಯಿದೆ. ಪ್ರಭಾವಶಾಲಿ ತಂತ್ರಜ್ಞಾನಗಳ ಹೊರಹೊಮ್ಮುವಿಕೆಯು ಹೊಸ ಸವಾಲುಗಳನ್ನು ಮತ್ತು ಏಕಕಾಲದಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆಯಲು ಸಹಾಯ ಮಾಡುತ್ತದೆ. ಸಹಕಾರಿ ಸಂಸ್ಥೆಗಳು ಈ ಆಯಾಮಗಳನ್ನು ಬೆಂಬಲಿಸುವ ಸಾಮರ್ಥ್ಯವನ್ನು ಹೊಂದಿವೆ. ಹೊಸ ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆ ನೀತಿಯು ಜನರು ಮತ್ತು ಸಂಸ್ಥೆಗಳ ಕಡೆಯಿಂದ ಸಂಶೋಧನೆ ಮತ್ತು ನಾವಿನ್ಯತೆಯನ್ನು ಉತ್ತೇಜಿಸುವ ಪೋಷಿತ ಪರಿಸರ ವ್ಯವಸ್ಥೆ ನಿರ್ಮಿಸುವ ಮೂಲಕ ಅಲ್ಪಾವಧಿಯ, ಮಧ್ಯಮ ಅವಧಿಯ ಮತ್ತು ದೀರ್ಘಾವಧಿಯ ಮಿಷನ್ ಮೋಡ್ (ಕಾರ್ಯಾಚರಣೆ ಸ್ವರೂಪದಲ್ಲಿ) ಯೋಜನೆಗಳ ಮೂಲಕ ಆಳವಾದ ಬದಲಾವಣೆಗಳನ್ನು ತರುವ ಗುರಿ ಹೊಂದಿದೆ. ಭಾರತದಲ್ಲಿ ಸಾಕ್ಷ್ಯ ಮತ್ತು ಪಾಲುದಾರ-ಚಾಲಿತ ಎಸ್‌ಟಿಐ ಯೋಜನೆ, ಮಾಹಿತಿ, ಮೌಲ್ಯಮಾಪನ ಮತ್ತು ನೀತಿ ಸಂಶೋಧನೆಗಾಗಿ ದೃಢವಾದ ವ್ಯವಸ್ಥೆಯನ್ನು ಉತ್ತೇಜಿಸಲು, ಅಭಿವೃದ್ಧಿಪಡಿಸಲು ಮತ್ತು ಪೋಷಿಸುವ ಗುರಿಯನ್ನು ಇದು ಹೊಂದಿದೆ. ಈ ನೀತಿಯು ದೇಶದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸಲು ಮತ್ತು ಭಾರತೀಯ ಎಸ್ ಟಿಐ ಪರಿಸರ ವ್ಯವಸ್ಥೆಯನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸಲು ಭಾರತೀಯ ಎಸ್ ಟಿಐ ಪರಿಸರ ವ್ಯವಸ್ಥೆಯ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗುರುತಿಸಿ, ಪರಿಹರಿಸುತ್ತದೆ. ಡಿಜಿಟಲ್ ಇಂಡಿಯಾ ನೀತಿ(ಡಿಐ)ಯು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಡಿಜಿಟಲ್ ಸೇವೆಗಳನ್ನು ಸಕ್ರಿಯಗೊಳಿಸುತ್ತಿದೆ. ಪ್ರಾಥಮಿಕ ಕೃಷಿ ಸಾಲ ಸೊಸೈಟಿ (ಪಿಎಸಿಎಸ್) ಸೇವೆಗಳೊಂದಿಗೆ ಸಿಎಸ್ ಸಿ ಸೇವೆಗಳನ್ನು ಒಮ್ಮುಖಗೊಳಿಸುವಲ್ಲಿ ಸಹಕಾರ ಸಚಿವಾಲಯದ ಮಧ್ಯಸ್ಥಿಕೆಯು ಒಂದು ಪ್ರಮುಖ ಹೆಜ್ಜೆಯಾಗಿದೆ. ಸಹಕಾರಿ ಸಂಸ್ಥೆಗಳಿಗೆ ಪ್ರಯೋಜನ ಒದಗಿಸುವ ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಎಂಎಲ್, ಎಐ, ಬಿಐ ಮತ್ತು ಡಿಜಿಟಲ್ ಟ್ವಿನ್ಸ್ ಕೋಆಪರೋಟಿವ್ ತಂತ್ರಜ್ಞಾನ ಸೇವೆಗಳ ಪರಿಣಾಮಕಾರಿ ಬಳಕೆಯ ಉದಯೋನ್ಮುಖ ವೇದಿಕೆಯಾಗಿದೆ. ಡ್ಯಾಶ್‌ಬೋರ್ಡ್‌ಗಳ ಹೊರಹೊಮ್ಮುವಿಕೆಯು ನೀತಿ ನಿರ್ಧಾರಗಳನ್ನು ಬೆಂಬಲಿಸುವ ಸಾಮರ್ಥ್ಯವನ್ನು ಹೊಂದಿದೆ. ಜಿಇಎಂ ಪೋರ್ಟಲ್, ಇ-ನಾಮ್ ಮತ್ತು ಸಂಬಂಧಿತ ಸೇವೆಗಳು, ತರಬೇತಿ ಮತ್ತು ಮೂಲಸೌಕರ್ಯಕ್ಕಾಗಿ ಹಣ ಒದಗಿಸುವುದು ಸೇರಿದಂತೆ, ರಾಷ್ಟ್ರೀಯ ಸಹಕಾರಿ ಡೇಟಾಬೇಸ್‌ನೊಂದಿಗೆ ಒಮ್ಮುಖವಾಗುವ ಸಾಮರ್ಥ್ಯವನ್ನು ಹೊಂದಿವೆ. ಆಧುನಿಕ ತಂತ್ರಜ್ಞಾನ ಆವಿಷ್ಕಾರ ಕ್ರಾಂತಿಯ ಭಾಗವಾಗಿ ತಮ್ಮ ಉತ್ಪಾದಕತೆಯನ್ನು ಸುಧಾರಿಸಲು ಸಹಕಾರಿ ಸಂಸ್ಥೆಗಳು ಮಧ್ಯವರ್ತಿ ಶಕ್ತಿಯಾಗಿ ಮುಂದೆ ಬರಬೇಕು ಮತ್ತು ಬೆಂಬಲ ನೀತಿಗಳ ಪ್ರಯೋಜನಗಳನ್ನು ಬಳಸಿಕೊಳ್ಳಬೇಕು. ರಾಷ್ಟ್ರದ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಕೇಂದ್ರವಾಗಿರುವ ಸಹಕಾರಿ ಸಂಸ್ಥೆಗಳನ್ನು ಕಾರ್ಯತಂತ್ರದ ವ್ಯಾಪಾರ ಘಟಕಗಳಾಗಿ ಪರಿಗಣಿಸುವ ಸಮಯ ಇದಾಗಿದೆ.




Scanned with ACE Scanner

# ಸಹಕಾರ ಸಂಸ್ಥೆಗಳಿಂದ ಆತ್ಮನಿರ್ಭರ್ ಭಾರತ್

* ದೀನಾನಾಥ್ ಠಾಕೂರ್

ಸಹಕಾರ ಸಂಸ್ಥೆಗಳು ಆರ್ಥಿಕ ಮತ್ತು ವ್ಯಾಪಾರ ಉದ್ಯಮದ ಶುದ್ಧ ಮತ್ತು ನೈಸರ್ಗಿಕ ರೂಪವಾಗಿವೆ; ಪ್ರಕೃತಿ ಮಾತೆ ದಯಪಾಲಿಸಿದ ಸಂಪನ್ಮೂಲಗಳ ಜೊತೆಗೆ ಕೆಲಸ ಮಾಡುತ್ತಿವೆ. ಜನಸಾಮಾನ್ಯರು ಸಹಕಾರಿ ಸಂಸ್ಥೆಗಳಲ್ಲಿ ತಮ್ಮ ಸಂಪನ್ಮೂಲಗಳನ್ನು ಒಟ್ಟುಗೂಡಿಸುವ ಮೂಲಕ ಮತ್ತು ಪರಸ್ಪರ ಹಂಚಿಕೊಳ್ಳುವ ಮೂಲಕ ಆರ್ಥಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದು. ಒಬ್ಬ ವ್ಯಕ್ತಿಯಾಗಿ ಸಾಧಿಸಲಾಗದ್ದನ್ನು ಇಲ್ಲಿ ಸಾಧಿಸಬಹುದು. ಕೃಷಿ ಬೆಂಬಲ ಮತ್ತು ಆಹಾರ ಭದ್ರತಾ ಕಾರ್ಯಕ್ರಮಗಳು ಸರ್ಕಾರಕ್ಕೆ ಭಾರೀ ಆರ್ಥಿಕ ಮತ್ತು ಆಡಳಿತಾತ್ಮಕ ಹೊರೆಗಳನ್ನು ಉಂಟುಮಾಡುತ್ತಿವೆ. ಭಾರತದ ಬಲವಾದ ಸಹಕಾರಿ ಬೇರುಗಳು ಮತ್ತು ಕೃಷಿ ಕ್ಷೇತ್ರದ ಮೇಲೆ ಕೇಂದ್ರೀಕರಿಸಲಾಗಿರುವ ಕಾರ್ಯತಂತ್ರದ ಗಮನವು ಸರ್ಕಾರವು ಆಹಾರ ಉತ್ಪಾದನೆ ಮತ್ತು ಆಹಾರ ಭದ್ರತೆ ನಿರ್ವಹಣೆಯ ಮುಂಚೂಣಿಯಿಂದ ಹೊರಬರಲು ಮತ್ತು ಅದನ್ನು ರೈತ ಸಹಕಾರಿ ಸಂಘಗಳಿಗೆ ಹಸ್ತಾಂತರಿಸಲು ಸಾಕಷ್ಟು ಪುಷ್ಟಿಯನ್ನು ಒದಗಿಸುತ್ತದೆ.



'ಸಹಕಾರ' ಭಾರತದ ತತ್ವಶಾಸ್ತ್ರವಾಗಿ ಉಳಿದಿದೆ ಮತ್ತು ಸಹಕಾರ ಚಳವಳಿಯು ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದೆ. ಪ್ರಸ್ತುತ, ದೇಶದ ಸುಮಾರು 29 ಕೋಟಿ ಜನ ಭಾರತದ ಸಹಕಾರಿ ಕ್ಷೇತ್ರದೊಂದಿಗೆ ನೇರವಾದ ಸಂಪರ್ಕ ಹೊಂದಿದ್ದಾರೆ. ಸಹಕಾರಿ ಸಂಘಗಳು, ವಿಶೇಷವಾಗಿ ಕೃಷಿ, ಹೈನುಗಾರಿಕೆ ಮತ್ತು ಮೀನುಗಾರಿಕೆ ಕ್ಷೇತ್ರಗಳಲ್ಲಿ ಗ್ರಾಮೀಣ ಜನಸಂಖ್ಯೆಗೆ ಜೀವನೋಪಾಯದ ಅವಕಾಶಗಳನ್ನು ಮಾತ್ರವಲ್ಲದೆ ಸಮುದಾಯ ಆಧಾರಿತ ವಿಧಾನದೊಂದಿಗೆ ಆರ್ಥಿಕ ಸುರಕ್ಷತೆಯನ್ನೂ ಒದಗಿಸುತ್ತವೆ.

ಭಾರತದ ಪ್ರಧಾನ ಮಂತ್ರಿಗಳು 'ಸಹಕಾರ್ ಸೇ ಸಮೃದ್ಧಿ' (ಸಹಕಾರದಿಂದ ಸಮೃದ್ಧಿ) ಯೊಂದಿಗೆ ಕರೆ ನೀಡಿದಾಗ ಇಡೀ ಸಹಕಾರಿ ಸಮುದಾಯ ಸಂತೋಷಪಟ್ಟಿತು. ಹಾಗೆಯೇ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯವನ್ನು ರಚಿಸಲು ಜುಲೈ 6, 2021 ರಂದು ನಿರ್ಧರಿಸಲಾಯಿತು. ಇದು ದೇಶದಲ್ಲಿ ಸಹಕಾರಿ ಕ್ಷೇತ್ರದ ಉತ್ತೇಜನ ಮತ್ತು ಅಭಿವೃದ್ಧಿಗಾಗಿ ಸರ್ಕಾರದ ಉದ್ದೇಶ ಮತ್ತು ಬದ್ಧತೆಯನ್ನು ಸೂಚಿಸಿತು. ಅಷ್ಟೇ ಅಲ್ಲ, ಸಹಕಾರಿ ಸಂಸ್ಥೆಗಳನ್ನು ಸರ್ಕಾರವು ಅತ್ಯಂತ ಸೂಕ್ತವಾದ ಪರ್ಯಾಯ ಮಾದರಿಯಾಗಿ ನೋಡುತ್ತದೆ, ಮತ್ತು ಅದರ ಮೂಲಕ ದೇಶವು ಎಲ್ಲರನ್ನೂ ಒಳಗೊಳ್ಳುವ ಆರ್ಥಿಕತೆಯ ಕನಸನ್ನು ನನಸಾಗಿಸಿಕೊಳ್ಳಬಹುದು ಮತ್ತು ಆತ್ಮನಿರ್ಭರ ಭಾರತದ ದೂರದೃಷ್ಟಿಯನ್ನು ಸಾಕಾರಗೊಳಿಸಿಕೊಳ್ಳಬಹುದು ಎಂಬುದು ಕೂಡ ಈ ಸಚಿವಾಲಯದ ಸ್ಥಾಪನೆಯಿಂದ ಸಾಬೀತಾಯಿತು.

### ಸಹಕಾರಿ ತತ್ವದ ಸಾಮಾಜಿಕ-ಆರ್ಥಿಕ ಸಬಲೀಕರಣದ ಪರಿಣಾಮಗಳು

ಬಡತನ ನಿರ್ಮೂಲನೆ, ಆಹಾರ ಭದ್ರತೆ ಮತ್ತು ಉದ್ಯೋಗ ಸೃಷ್ಟಿಯ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಸಹಕಾರಿ ಸಂಸ್ಥೆಗಳು ಸ್ವಭಾವತಃ ಪ್ರಯೋಜನಗಳನ್ನು ಹೊಂದಿರುವುದರಿಂದ ಅವು ಸಾಮಾಜಿಕ ಮತ್ತು ಆರ್ಥಿಕ ನೀತಿ ನಿರೂಪಣೆಯ ಮತ್ತು

* ರಾಷ್ಟ್ರೀಯ ಅಧ್ಯಕ್ಷರು, ಸಹಕಾರ ಭಾರತಿ. ಇಮೇಲ್: dnthakur@yahoo.com




Scanned with ACE Scanner

ಅನುಷ್ಠಾನದ ಅತ್ಯುತ್ತಮ ಸಾಧನಗಳಾಗಿವೆ. ಇವುಗಳು ಜನ-ಕೇಂದ್ರಿತ ನಾಗರಿಕ ಸಂಸ್ಥೆಗಳಾಗಿರುವುದರಿಂದ ಯಾವುದೇ ತೊಂದರೆಗಳಿಲ್ಲದೆ ಸರಕು ಮತ್ತು ಸೇವೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಅಪಾರ ಸಾಮರ್ಥ್ಯವನ್ನು ಹೊಂದಿವೆ. ಜನಸಾಮಾನ್ಯರು ಸಹಕಾರಿ ಸಂಸ್ಥೆಗಳಲ್ಲಿ ಸೇರಿಕೊಂಡು ತಮ್ಮ ಸಂಪನ್ಮೂಲಗಳನ್ನು ಒಟ್ಟುಗೂಡಿಸುವ ಮೂಲಕ ಮತ್ತು ಪರಸ್ಪರ ಹಂಚಿಕೊಳ್ಳುವ ಮೂಲಕ ಆರ್ಥಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದು. ಒಬ್ಬ ವ್ಯಕ್ತಿಯಾಗಿ ಸಾಧಿಸಲಾಗದ್ದನ್ನು ಇಲ್ಲಿ ಸಾಧಿಸಬಹುದು. ಸಹಕಾರಿ ಉದ್ಯಮಗಳು ಮಾರುಕಟ್ಟೆ ಲಭ್ಯತೆಯನ್ನು ಸುಗಮಗೊಳಿಸಬಹುದು ಮತ್ತು ಖಚಿತಪಡಿಸಿಕೊಂಡು, ಪ್ರಮಾಣ ಮತ್ತು ವ್ಯಾಪ್ತಿಯ ಆರ್ಥಿಕತೆಯನ್ನು ಸೃಷ್ಟಿಸಬಹುದು ಮತ್ತು ಸ್ವತಂತ್ರ ಮಾರುಕಟ್ಟೆ ಅವಕಾಶಗಳನ್ನು ಸ್ಥಾಪಿಸಬಹುದು. ಮುಂದೆ ಅವು ದೇಶದ ಆರ್ಥಿಕ ಮತ್ತು ಸಾಮಾಜಿಕ ರಚನೆಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ಸಮರ್ಥವಾಗುತ್ತವೆ.

### ಸಹಕಾರ ಸಂಸ್ಥೆಗಳು, ಕೃಷಿ ಮತ್ತು ಆಹಾರ ಭದ್ರತೆ

ಕೃಷಿ ಸಮೃದ್ಧಿ ಮತ್ತು ಸುಸ್ಥಿರ ಆಹಾರ ಭದ್ರತೆಯನ್ನು ಸಾಧಿಸಲು ಭಾರತಕ್ಕೆ ಹೊಸ ವಿಧಾನಗಳ ಅಗತ್ಯವಿದೆ. ಇದನ್ನು ಸಾಧಿಸಲು ಆಹಾರ ಉತ್ಪಾದನೆ, ಪೂರೈಕೆ ಮತ್ತು ಬಳಕೆಯ ಸರಪಳಿಯ ಪ್ರತಿ ಹಂತದಲ್ಲೂ ಪರಿವರ್ತಕ ಮತ್ತು ಹೊಸತನದ ಬದಲಾವಣೆಗಳು ಮತ್ತು ನಾವಿನ್ಯತೆಯ ಅಗತ್ಯವಿದೆ. ಉತ್ಪಾದಕತೆಯನ್ನು ಹೆಚ್ಚಿಸುವಾಗ ನೈಸರ್ಗಿಕ ಸಂಪನ್ಮೂಲ ಮೂಲವನ್ನು ಸಂರಕ್ಷಿಸುವ, ರಕ್ಷಿಸುವ ಮತ್ತು ವರ್ಧಿಸುವ ಪ್ರಯೋಗಶೀಲ ವ್ಯವಸ್ಥೆಗಳು ನಮಗೆ ಬೇಕಾಗಿವೆ. ಇದಕ್ಕಾಗಿ ಸ್ಥಳೀಯ ಮತ್ತು ಸಾಂಪ್ರದಾಯಿಕ ಜ್ಞಾನ ಆಧರಿತ 'ಸಮಗ್ರ ದೃಷ್ಟಿಯ' ವಿಧಾನಗಳತ್ತ ಸುಧಾರಣಾವಾದಿ ಪ್ರಕ್ರಿಯೆಯ ಅಗತ್ಯವಿದೆ. ಜೊತೆಗೆ ಸಹಕಾರಿಗಳಂಥ ಸಮುದಾಯ-ಆಧರಿತ ಸಂಸ್ಥೆಗಳ ಪ್ರಾಮುಖ್ಯತೆ, ಕೇಂದ್ರೀಯತೆ ಮತ್ತು ವಿಮರ್ಶಾತ್ಮಕತೆಯನ್ನು ಗುರುತಿಸುವ ಅಗತ್ಯವೂ ಇದೆ. ಬೆಳೆಗಳ ಸ್ಥಿತಿಸ್ಥಾಪಕತ್ವ, ಉತ್ಪಾದಕತೆ ಮತ್ತು ಜೀವನೋಪಾಯವನ್ನು ಸುಧಾರಿಸುವ ದಿಸೆಯಲ್ಲಿ ಮಣ್ಣನ್ನು ಹೆಚ್ಚಿಸಲು ಮತ್ತು ಜೀವವೈವಿಧ್ಯವನ್ನು ರಕ್ಷಿಸಲು ರೈತರು ತಮ್ಮದೇ ಆದ ಸಹಕಾರಿ ಸಂಸ್ಥೆಗಳ ಮೂಲಕ



ಸಕ್ರಿಯವಾಗಿ ಮತ್ತು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಬೇಕಿದೆ. ಪರಿಸರ ವ್ಯವಸ್ಥೆಗಳನ್ನು ಪುನರುತ್ಪಾದಿಸಲು ಸಹಾಯ ಮಾಡುವಾಗ ಕೃಷಿ ಉತ್ಪಾದನೆಯನ್ನು ಬೆಂಬಲಿಸಲು ನಾವು ಪ್ರಕೃತಿ ಆಧಾರಿತ ಪರಿಹಾರಗಳನ್ನು ಅಳವಡಿಸಿಕೊಳ್ಳಲೇಬೇಕು. ಕೃಷಿ ಬೆಂಬಲ ಮತ್ತು ಆಹಾರ ಭದ್ರತಾ ಕಾರ್ಯಕ್ರಮಗಳು ಸರ್ಕಾರಕ್ಕೆ ಭಾರೀ ಆರ್ಥಿಕ ಮತ್ತು ಆಡಳಿತಾತ್ಮಕ ಹೊರೆಗಳನ್ನು ಉಂಟುಮಾಡುತ್ತಿವೆ. ಭಾರತದ ಬಲವಾದ ಸಹಕಾರಿ ಬೇರುಗಳು ಮತ್ತು ಕೃಷಿ ಕ್ಷೇತ್ರದ ಮೇಲೆ ಕೇಂದ್ರೀಕರಿಸಲಾಗಿರುವ ಕಾರ್ಯತಂತ್ರದ ಗಮನವು ಸರ್ಕಾರವು ಆಹಾರ ಉತ್ಪಾದನೆ ಮತ್ತು ಆಹಾರ ಭದ್ರತೆ ನಿರ್ವಹಣೆಯ ಮುಂಚೂಣಿಯಿಂದ ಹೊರಬರಲು ಮತ್ತು ಅದನ್ನು ರೈತ ಸಹಕಾರಿ ಸಂಘಗಳಿಗೆ ಹಸ್ತಾಂತರಿಸಲು ಸಾಕಷ್ಟು ಪುಷ್ಟಿಯನ್ನು ಒದಗಿಸುತ್ತದೆ. ಆಹಾರ ಭದ್ರತೆ, ಉದ್ಯೋಗ, ಬಡತನ ನಿರ್ಮೂಲನೆ ಮತ್ತು ಆರ್ಥಿಕ ಸೇರ್ಪಡೆಯಂಥ ಆದ್ಯತೆಯ ಕ್ಷೇತ್ರಗಳಿಗೆ ಕೊಡುಗೆ ನೀಡಲು ಮತ್ತು ಪರಿಹರಿಸಲು ಸಹಕಾರಿ ಸಂಸ್ಥೆಗಳು ಅತ್ಯಂತ ಸೂಕ್ತವಾದ ಸಂಸ್ಥೆಗಳಾಗಿವೆ ಎಂಬುದನ್ನು ಸರ್ಕಾರವು ಗುರುತಿಸಲೇಬೇಕು. ಭಾರತದ ಅತಿದೊಡ್ಡ ಮತ್ತು ಪ್ರಮುಖ ಶಕ್ತಿ ಅದರ ಜನರಲ್ಲಿ, ವಿಶೇಷವಾಗಿ ಲಕ್ಷಾಂತರ ರೈತ ಕುಟುಂಬಗಳಲ್ಲಿ ಅಡಗಿದೆ. ಭಾರತವು ತನ್ನ ರೈತರ ಬಲವನ್ನು ವೃತ್ತಿಪರ ನಿರ್ವಹಣೆಯೊಂದಿಗೆ ಸಂಯೋಜಿಸುವ ಮೂಲಕ ಯಾವುದೇ ಗುರಿಯನ್ನು ಸಾಧಿಸಬಹುದು.

### ಸಹಕಾರ ಗ್ರಾಮಗಳು – ಭವಿಷ್ಯ

ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿ, ಸರ್ಕಾರವು ಸೂಕ್ತ ನೀತಿಗಳು ಮತ್ತು ಪ್ರೋತ್ಸಾಹಗಳ ಮೂಲಕ ರೈತರನ್ನು ಸಹಕಾರಿ ಸಂಘಗಳಾಗಿ ಸಂಘಟಿಸುವಂತೆ ಉತ್ತೇಜಿಸಲು ಸಲಹೆ ನೀಡಬಹುದು ಮತ್ತು ದೇಶದ ಪ್ರತಿಯೊಂದು ಗ್ರಾಮವು ಆತ್ಮನಿರ್ಭರ ಸಹಕಾರ ಗ್ರಾಮ'ವಾಗಲು ಪ್ರೋತ್ಸಾಹಿಸಬೇಕು. ಕೃಷಿ ಅಭಿವೃದ್ಧಿ ಮತ್ತು ಆಹಾರ ನಿರ್ವಹಣೆಯ ಗುರುತ್ವಾಕರ್ಷಣೆಯ ಶಕ್ತಿಯನ್ನು ಹಳ್ಳಿಗಳಿಗೆ ಮತ್ತು ರೈತರಿಗೆ ವರ್ಗಾಯಿಸಬೇಕು ಎಂಬುದು 'ಸಹಕಾರ ಗ್ರಾಮಗಳ' ಪರಿಕಲ್ಪನೆಯಾಗಿದೆ. ಈ ವಿಧಾನದ ಅಡಿಯಲ್ಲಿ, ರೈತರು ತಮ್ಮ ಸಮರ್ಥ ಮತ್ತು ಸುಸ್ಥಿರ ಬಳಕೆ, ಸಂರಕ್ಷಣೆ ಮತ್ತು ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ತಮ್ಮ ನೈಸರ್ಗಿಕ ಮತ್ತು ಆರ್ಥಿಕ ಸ್ವತ್ತುಗಳನ್ನು ಒಟ್ಟುಗೂಡಿಸಲು ಪ್ರೋತ್ಸಾಹಿಸಲಾಗುತ್ತದೆ. ಭೂಮಿ, ನೀರು ಮತ್ತು ಜಾನುವಾರು ಸಂಪನ್ಮೂಲಗಳ ತರ್ಕಬದ್ಧ ಮತ್ತು ಸಮರ್ಥ ನಿರ್ವಹಣೆಯು ವ್ಯರ್ಥವಾಗದಂತೆ ಖಚಿತಪಡಿಸುತ್ತದೆ ಮತ್ತು ಪರ್ಯಾಯವಿಲ್ಲದಿದ್ದಾಗ ಮಾತ್ರ ರಾಸಾಯನಿಕಗಳನ್ನು ಬಳಸಲಾಗುತ್ತಿದೆ.

### ರಾಷ್ಟ್ರೀಯ ಸಹಕಾರಿ ಆಹಾರ ಗ್ರಿಡ್ ರಚನೆಯ ಒಂದು ಉದಾಹರಣೆ

'ರಾಷ್ಟ್ರೀಯ ಸಹಕಾರಿ ಆಹಾರ ಗ್ರಿಡ್ (ಎನ್‌ಸಿಎಫ್‌ಜಿ)' ಅನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಕೂಲಂಕಶ ಅಧ್ಯಯನ ಕೈಗೊಳ್ಳಬಹುದು. ಭಾರತದ ಪ್ರತಿ ಹಳ್ಳಿಯು ತನ್ನ ಸಂಪೂರ್ಣ ಆರ್ಥಿಕ ಚಟುವಟಿಕೆಗಳನ್ನು ಸಹಕಾರ ತತ್ವಗಳ ಮೇಲೆ ನಡೆಸಲು ಮತ್ತು ನಿರ್ವಹಿಸಲು ಒಂದು ಕೃಷಿ ಸಹಕಾರ ಸಂಸ್ಥೆ ಹೊಂದಿರಬೇಕು. ಇದು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದಲ್ಲದೆ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಪ್ರತಿ ಗ್ರಾಮ ಮಟ್ಟದ ಸಹಕಾರಿ ಸಂಘವು ಕೃಷಿ



Scanned with ACE Scanner



ಯಂತ್ರೋಪಕರಣಗಳು ಮತ್ತು ಜಾನುವಾರು ನಿರ್ವಹಣಾ ಕೇಂದ್ರವನ್ನು ಹೊಂದಿರಬೇಕು. ಇಂಥ ಎರಡು ಅಥವಾ ಮೂರು ಗ್ರಾಮ ಮಟ್ಟದ ಸಹಕಾರ ಸಂಘಗಳು ಜಂಟಿಯಾಗಿ ಒಂದು ಬಹುಪಯೋಗಿ ಗ್ರಾಮ ಸಹಕಾರ ಸಂಘವನ್ನು (ಎಂಪಿವಿಸಿಎಸ್) ಶೇಖರಣೆ, ವಿಂಗಡಣೆ, ಶ್ರೇಣೀಕರಣ, ಪ್ಯಾಕೇಜಿಂಗ್ ಮತ್ತು ಹಾಳಾಗುವ ಮತ್ತು ಹಾಳಾಗದ ವಸ್ತುಗಳ ನಿರ್ವಹಣೆ ವಹಿವಾಟು ಸೌಲಭ್ಯಗಳೊಂದಿಗೆ ಹೊಂದಿರಬೇಕು. ಈ ಎಂಪಿವಿಸಿಎಸ್ ತನ್ನ ಸದಸ್ಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸಲು ಮತ್ತು ಹಸಿರು ಶಕ್ತಿ, ಪ್ರವಾಸೋದ್ಯಮ, ಗ್ರಾಹಕ, ಆರೋಗ್ಯ ಮತ್ತು ಶಿಕ್ಷಣ, ವೃತ್ತಿಪರ ತರಬೇತಿ ಕೇಂದ್ರಗಳೂ ಸೇರಿದಂತೆ ಸೇವೆಗಳನ್ನು ಒದಗಿಸಲು ಸಮರ್ಥವಾಗಿರಬೇಕು. ಸರ್ಕಾರದ ಆಹಾರ ಭದ್ರತಾ ಕಾರ್ಯಕ್ರಮಗಳನ್ನು ನಡೆಸುವ ಏಕೈಕ ಏಜೆನ್ಸಿಯಾಗಿ ಎಂಪಿವಿಸಿಎಸ್ ಅನ್ನು ಗೊತ್ತುಪಡಿಸಬೇಕು. ಸಮುದಾಯ ಮಟ್ಟದಲ್ಲಿ ಎರಡು ಲಕ್ಷ ಹೆಚ್ಚುವರಿ ಬಹುಪಯೋಗಿ ಸಹಕಾರಿ ಸಂಘಗಳ ರಚನೆಗೆ ಸಂಬಂಧಿಸಿದಂತೆ ಸಹಕಾರ ಸಚಿವಾಲಯ ಕೈಗೊಂಡ ಇತ್ತೀಚಿನ ಕ್ರಮವು ತಳದಿಂದ ಮೇಲ್ಮಟ್ಟದವರೆಗೆ ಮಾದರಿಯನ್ನು ಅನುಸರಿಸುವ ಹಾಗೂ ಭಾರತದಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ನಿಟ್ಟಿನಲ್ಲಿ ಒಂದು ಉತ್ತಮ ಹೆಜ್ಜೆಯಾಗಿದೆ.

ಗ್ರಾಮದಲ್ಲಿ ಉತ್ಪಾದನೆಯಾಗುವ ಪ್ರತಿಯೊಂದು ಆಹಾರ ಧಾನ್ಯವು ಈ ಸಹಕಾರಿ ಸಂಘಗಳ ಮೂಲಕ ಎನ್‌ಸಿಎಫ್‌ಜಿಗೆ ಸೇರಬೇಕು. ಇದು ಆಹಾರದ ನಷ್ಟ ಮತ್ತು ವ್ಯರ್ಥವನ್ನು ಸಂಪೂರ್ಣವಾಗಿ ನಿವಾರಿಸುತ್ತದೆ. ಸದಸ್ಯ ರೈತರ ಸಂಪೂರ್ಣ ಉತ್ಪನ್ನವನ್ನು ಗ್ರಾಮ ಸಹಕಾರ ಸಂಘದಿಂದ ಸಂಗ್ರಹಿಸಿ ಎಂಪಿವಿಸಿಎಸ್‌ಗೆ ಸಾಗಿಸಬೇಕು. ಅದು ತಕ್ಷಣವೇ ಉತ್ಪನ್ನದ ಮೌಲ್ಯವನ್ನು ಸರ್ಕಾರದ ದರದಲ್ಲಿ ನಿರ್ಧರಿಸಿ ಸದಸ್ಯರ ಖಾತೆಗೆ ಜಮಾ ಆಗುವಂತಿರಬೇಕು. ಸರ್ಕಾರ ನಿರ್ಧರಿತ ದರಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಸದಸ್ಯರಿಗೆ ಉತ್ತಮ ಮಾರುಕಟ್ಟೆ ದರವನ್ನು ನೀಡಬಹುದು. ಯಾವುದೇ ಸದಸ್ಯ ತನ್ನ ಉತ್ಪನ್ನವನ್ನು ತಕ್ಷಣಕ್ಕೆ ಮಾರಾಟ ಮಾಡಲು ಬಯಸದಿದ್ದರೆ, ಅವನು ತನ್ನ ಸಹಕಾರಿ ಸಂಘಕ್ಕೆ ಈ ಬಗ್ಗೆ ಸಲಹೆ ನೀಡಬಹುದು. ಒಬ್ಬ ರೈತ ತನ್ನ 'ಆಯ್ಕೆ', 'ಧ್ವನಿ' ಮತ್ತು 'ಬೆಲೆ' ಹೊಂದಲು ಅಧಿಕಾರ ಹೊಂದಿರಬೇಕು. ಎಂಪಿವಿಸಿಎಸ್ ಕೂಡ ಆಹಾರ ಭದ್ರತಾ ಕಾರ್ಯಕ್ರಮಗಳನ್ನು ನಿರ್ವಹಿಸಲು ಧಾನ್ಯವನ್ನು ಸಂಗ್ರಹಿಸಬಹುದು ಮತ್ತು ಈ ಉದ್ದೇಶಕ್ಕಾಗಿ ಸರ್ಕಾರಿ ಏಜೆನ್ಸಿಗಳಿಂದ ಸೂಕ್ತ ಶುಲ್ಕವನ್ನು ಪಡೆಯಬಹುದು. ಈ ಪರಿಕಲ್ಪನೆಯಂತೆ ಇಡೀ ದೇಶವನ್ನು ಸಂಘಟಿಸಿದರೆ, ನಮಗೆ ಸುಮಾರು 7 ಲಕ್ಷ ಗ್ರಾಮ ಕೃಷಿ ಸಹಕಾರ ಸಂಘಗಳು ಮತ್ತು ಸುಮಾರು 3.5 ಲಕ್ಷ ಎಂಪಿವಿಸಿಎಸ್ ಸಿಕ್ಕಂತಾಗುತ್ತದೆ. ರಾಷ್ಟ್ರೀಯ ಸಹಕಾರಿ ಆಹಾರ ಗ್ರಿಡ್ (ಎನ್‌ಸಿಎಫ್‌ಜಿ) ಅನ್ನು ಗ್ರಾಮ ಮಟ್ಟದ ಸಹಕಾರಿಗಳು ಮತ್ತು ಎಂಪಿವಿಸಿಎಸ್‌ಗಳ ಸಂಪೂರ್ಣ ನೆಟ್‌ವರ್ಕ್ ಅನ್ನು ಡಿಜಿಟಲ್ ಮೂಲಕ ಸಂಪರ್ಕಿಸುವ ಮೂಲಕ ರಚಿಸಬಹುದು. ನನ್ನ ಅಭಿಪ್ರಾಯದ ಪ್ರಕಾರ ಎನ್‌ಸಿಎಫ್‌ಜಿ ಭಾರತಕ್ಕೆ ಆಹಾರ ಉತ್ಪಾದನೆಯ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಮತ್ತು ಸರ್ಕಾರದ ಆಹಾರ ಭದ್ರತಾ ಕಾರ್ಯಕ್ರಮಗಳ ವೆಚ್ಚವನ್ನು ತರ್ಕಬದ್ಧಗೊಳಿಸುವ ಮೂಲಕ ವಾರ್ಷಿಕವಾಗಿ ಸುಮಾರು ಮೂರು ಟ್ರಿಲಿಯನ್ ರೂ.ಗಳನ್ನು ಉಳಿಸಲು ಸಹಾಯ ಮಾಡುತ್ತದೆ. ಎನ್‌ಸಿಎಫ್‌ಜಿ ಗ್ರಾಮೀಣ ಪ್ರದೇಶಗಳಲ್ಲಿ ಅಗಾಧವಾದ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಗ್ರಾಮೀಣ ಅಭಿವೃದ್ಧಿಯ ಹೊಸ ಅಲೆಯನ್ನೇ ಹರಡುತ್ತದೆ.

ಸಹಕಾರಿ ಮೌಲ್ಯ–ಆಧರಿತ ಉದ್ಯಮದ ಮೂಲಕ ಸ್ವಾವಲಂಬಿ ಮತ್ತು ಸ್ವಾವಲಂಬಿಯಾದ 'ಭಾರತ್' ಚಳವಳಿಗೆ ಹಣಕಾಸಿನ ಬೆಂಬಲವನ್ನು ಒದಗಿಸಲು ಮೀಸಲಾದ 'ರಾಷ್ಟ್ರೀಯ ಗ್ರಾಮೀಣ ಮತ್ತು ಕೃಷಿ ಸಮೃದ್ಧಿ ನಿಧಿ (ಎನ್‌ಆರ್‌ಎಫ್‌ಪಿಎಫ್)' ಯನ್ನು ಸ್ಥಾಪಿಸುವ ಮೂಲಕ ಎನ್‌ಸಿಎಫ್‌ಜಿಯನ್ನು ಮತ್ತಷ್ಟು ಬಲಪಡಿಸಬಹುದು. ಪ್ರಯೋಗಶೀಲ ಮತ್ತು ಸೃಜನಶೀಲ ವಿಧಾನದೊಂದಿಗೆ ಎನ್‌ಆರ್‌ಎಫ್‌ಪಿಎಫ್ ಮತ್ತು ಎನ್‌ಸಿಎಫ್‌ಜಿಗಾಗಿ ಅಗತ್ಯವಿರುವ ಸಂಪನ್ಮೂಲವನ್ನು ಲಭ್ಯವಿರುವ ಬಜೆಟ್ ಹಂಚಿಕೆಗಳಲ್ಲಿಯೇ ಸುಲಭವಾಗಿ



ಹೊಂದಿಸಬಹುದು. ಸರ್ಕಾರ ಮತ್ತು ಕಾರ್ಪೊರೇಟ್ ಸಂಸ್ಥೆಗಳು ನೀಡುವ ಹಣಕಾಸಿನ ನೆರವನ್ನು ಸಮರ್ಥವಾಗಿ ಮತ್ತು ವಿವೇಚನೆಯಿಂದ ಬಳಸಿಕೊಂಡರೆ ಇದೊಂದು ಆರ್ಥಿಕ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಪ್ರಮುಖ ಸಾಧನವಾಗಬಲ್ಲದು ಮತ್ತು ನಾಗರಿಕರ ಘನತೆ ಮತ್ತು ಆತ್ಮ ವಿಶ್ವಾಸವನ್ನು ಹೆಚ್ಚಿಸಬಲ್ಲದು. ಸಮರ್ಥ ಕೃಷಿ ಉತ್ಪಾದನಾ ವ್ಯವಸ್ಥೆ ನಿರ್ವಹಣೆ, ಆಹಾರ ಭದ್ರತೆ ಮತ್ತು ಆಹಾರ ಪೂರೈಕೆ ಸರಪಳಿ ನಿರ್ವಹಣೆ, ಸ್ವಚ್ಛ ಮತ್ತು ಹಸಿರು ವಿಧಾನಗಳ ಮೂಲಕ ಇಂಧನ ಭದ್ರತೆ, ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಣೆ, ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳನ್ನು ತಗ್ಗಿಸುವುದು ಮತ್ತು ಸಾಮಾಜಿಕ ಸಾಮರಸ್ಯವನ್ನು ರಕ್ಷಿಸುವುದು ಇವೇ ಮುಂತಾದವು ದೇಶದ ಪ್ರಮುಖ ಭವಿಷ್ಯದ ಸವಾಲುಗಳಾಗಿವೆ ಮತ್ತು ಸಹಕಾರಿ ಸಂಸ್ಥೆಗಳಿಗೆ ಈ ದಿಸೆಯಲ್ಲಿ ಕೆಲಸ ಮಾಡಲು ಸಾಕಷ್ಟು ಅವಕಾಶಗಳಿವೆ. ಈ ಅವಕಾಶಗಳನ್ನು ಬಳಸಿಕೊಳ್ಳಲು ಸಹಕಾರಿ ಸಂಸ್ಥೆಗಳು ಅತ್ಯಂತ ಸೂಕ್ತವಾದ ಸಾಂಸ್ಥಿಕ ರೂಪವಾಗಿದೆ ಮತ್ತು ಒಟ್ಟಾರೆ ಆರ್ಥಿಕ ಮತ್ತು ಮಾರುಕಟ್ಟೆ ಸ್ಥಿತಿ ಏನೇ ಇರಲಿ, ನಿಜವಾದ ಸಹಕಾರಿ ಮೌಲ್ಯ ಆಧರಿತ ಉದ್ಯಮಶೀಲತೆಯ ಕಾರ್ಯಕ್ರಮವು ಎಂದಿಗೂ ವಿಫಲವಾಗುವುದಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ದಕ್ಷ ಸದಸ್ಯ–ಚಾಲಿತ ಸಹಕಾರ ಸಂಸ್ಥೆಯು ಉಂಟು ಮಾಡುವ ಪವಾಡದಿಂದ ಎಲ್ಲ ರೀತಿಯ ಶೋಷಣೆಗೆ ಮಂಗಳ ಹಾಡಿ, ಸರ್ವತೋಮುಖ ಸಮೃದ್ಧಿಗೆ ನಾವು ಸಾಕ್ಷಿಯಾಗುತ್ತೇವೆ. ಅಭಿವೃದ್ಧಿ ಹೊಂದಿದ ಮತ್ತು ಆತ್ಮನಿರ್ಭರ ಭಾರತ'ದ ಕಲ್ಪನೆಯು ಮೂಲಭೂತವಾಗಿ ಇಲ್ಲಿನ ನಾಗರಿಕರು, ಹಳ್ಳಿಗಳು, ನದಿಗಳು, ಕೃಷಿ ಭೂಮಿ, ನೈಸರ್ಗಿಕ ಸಂಪನ್ಮೂಲಗಳು ಮತ್ತು ಬಲಿಷ್ಠ ಸಹಕಾರಿ ಸಂಸ್ಥೆಗಳ ಮೂಲಕ ಸಾಕಾರಗೊಳ್ಳುತ್ತದೆ.

# ಅಮೆರಿಕ ಸಂಸತ್ತಿನ (ಕಾಂಗ್ರೆಸ್) ಜಂಟಿ ಅಧಿವೇಶನ ಉದ್ದೇಶಿಸಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಭಾಷಣ

**ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಅಮೆರಿಕದ ಕಾಂಗ್ರೆಸ್ ಉದ್ದೇಶಿಸಿ ಮಾಡಿದ ಭಾಷಣದ ಆಯ್ದ ಅವತರಣಿಕೆಯ ಕನ್ನಡ ಅನುವಾದ**

ಗೌರವಾನ್ವಿತ ಸ್ಪೀಕರ್, ಉಪಾಧ್ಯಕ್ಷರೆ, ಅಮೆರಿಕ ಸಂಸತ್ತಿನ ಗೌರವಾನ್ವಿತ ಸದಸ್ಯರೆ, ಮಹಿಳೆಯರೆ ಮತ್ತು ಸಜ್ಜನರೆ, ನಮಸ್ಕಾರ!

ಅಮೆರಿಕ ಸಂಸತ್ತನ್ನು (ಕಾಂಗ್ರೆಸ್) ಉದ್ದೇಶಿಸಿ ಮಾತನಾಡುವುದು ಯಾವಾಗಲೂ ದೊಡ್ಡ ಗೌರವವಾಗಿದೆ. ಇದನ್ನು ನಾನು 2 ಬಾರಿ ಮಾಡುವುದು ಅಸಾಧಾರಣ ವಿಶೇಷತೆಯಾಗಿದೆ. ಈ ಗೌರವಕ್ಕಾಗಿ ಭಾರತದ 140 ಕೋಟಿ ಭಾರತೀಯರ ಪರವಾಗಿ ನಾನು ನನ್ನ ತುಂಬು ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮಲ್ಲಿ 2016ರಲ್ಲಿದ್ದ ಅರ್ಧದಷ್ಟು ಜನರು ಇಲ್ಲಿದ್ದೀರಿ ಎಂದು ನಾನು ಭಾವಿಸುತ್ತೇನೆ. ಹಳೆಯ ಸ್ನೇಹಿತರಂತೆ ನಿಮ್ಮ ಪ್ರೀತಿಯನ್ನು ನಾನು ಅನುಭವಿಸುತ್ತೇನೆ. ಇನ್ನರ್ಧ ಸದಸ್ಯರಲ್ಲಿ ಹೊಸ ಸ್ನೇಹದ ಉತ್ಸಾಹವೂ ಕಾಣುತ್ತಿದೆ.



ಗೌರವಾನ್ವಿತ ಸ್ಪೀಕರ್ ಮತ್ತು ಸದಸ್ಯರೆ,

ವಿಶ್ವದ ಎರಡು ಮಹಾನ್ ಪ್ರಜಾಪ್ರಭುತ್ವಗಳಾದ ಭಾರತ ಮತ್ತು ಅಮೆರಿಕ ನಡುವಿನ ಬಾಂಧವ್ಯವನ್ನು ಆಚರಿಸಲು ನೀವು ಇಂದು ಒಟ್ಟಿಗೆ ಸೇರಿರುವುದನ್ನು ನೋಡಲು ನನಗೆ ಸಂತೋಷವಾಗಿದೆ. ನಿಮಗೆ ಬಲವಾದ ದ್ವಿಪಕ್ಷೀಯ ಒಮ್ಮತದ ಅಗತ್ಯವಿರುವಾಗ ಸಹಾಯ ಮಾಡಲು ನನಗೆ ಸಂತೋಷವಾಗಿದೆ. ಮನೆಯಲ್ಲೇ ವಿಚಾರಗಳ ಸ್ಪರ್ಧೆ ಇರುತ್ತದೆ, ಅದು ಇರಬೇಕು. ಆದರೆ, ನಮ್ಮ ರಾಷ್ಟ್ರಕ್ಕಾಗಿ ಮಾತನಾಡುವಾಗ ನಾವೂ ಒಂದಾಗಬೇಕು. ನೀವು ಅದನ್ನು ಮಾಡಬಹುದು ಎಂದು ತೋರಿಸಿದ್ದೀರಿ. ಅಭಿನಂದನೆಗಳು!

ಗೌರವಾನ್ವಿತ ಸ್ಪೀಕರ್,

ಕಳೆದ ವರ್ಷ ಭಾರತವು ತನ್ನ ಸ್ವಾತಂತ್ರ್ಯದ 75ನೇ ವರ್ಷ ಆಚರಿಸಿತು. ಪ್ರತಿ ಮೈಲಿಗಲ್ಲು ಮುಖ್ಯ, ಆದರೆ ಇದು ವಿಶೇಷವಾಗಿತ್ತು. ಒಂದಲ್ಲ ಒಂದು ರೂಪದಲ್ಲಿ ವಿದೇಶಿ ಆಳ್ವಿಕೆಯ ನಂತರ ನಾವು 75 ವರ್ಷಗಳ ಸ್ವಾತಂತ್ರ್ಯದ ಗಮನಾರ್ಹ ಪ್ರಯಾಣವನ್ನು ಆಚರಿಸಿದ್ದೇವೆ. ಇದು ಕೇವಲ ಪ್ರಜಾಪ್ರಭುತ್ವದ ಆಚರಣೆಯಾಗಿರದೆ ವೈವಿಧ್ಯತೆಯ ಆಚರಣೆಯೂ ಆಗಿತ್ತು.

ನಮ್ಮಲ್ಲಿ 2,500ಕ್ಕೂ ಹೆಚ್ಚು ರಾಜಕೀಯ ಪಕ್ಷಗಳಿವೆ. ಹೌದು, ನೀವು ಕೇಳಿದ್ದು ಸರಿ – ಎರಡು ಸಾವಿರದ ಐನೂರು. ಸುಮಾರು 20 ವಿವಿಧ ಪಕ್ಷಗಳು ಭಾರತದ ವಿವಿಧ ರಾಜ್ಯಗಳನ್ನು ಆಳುತ್ತವೆ. ನಾವು 22 ಅಧಿಕೃತ ಭಾಷೆಗಳನ್ನು ಮತ್ತು ಸಾವಿರಾರು ಉಪಭಾಷೆಗಳನ್ನು ಹೊಂದಿದ್ದೇವೆ. [illegible] ನಾವು ಒಂದೇ ಧ್ವನಿಯಲ್ಲಿ ಮಾತನಾಡುತ್ತೇವೆ. [illegible] ಸಂಬಿಕೆಗಳಿಗೆ ನೆಲೆಯಾಗಿದ್ದೇವೆ ಮತ್ತು [illegible] ಆಚರಿಸುತ್ತೇವೆ. ಭಾರತದಲ್ಲಿ, ವೈವಿಧ್ಯತೆಯು [illegible]ವಾಗಿದೆ.



ಗೌರವಾನ್ವಿತ ಸ್ಪೀಕರ್,

ನಾನು ಪ್ರಧಾನಿಯಾಗಿ ಮೊದಲ ಬಾರಿಗೆ ಅಮೆರಿಕಕ್ಕೆ ಭೇಟಿ ನೀಡಿದಾಗ, ಭಾರತವು ವಿಶ್ವದ 10ನೇ ಅತಿದೊಡ್ಡ ಆರ್ಥಿಕತೆಯಾಗಿತ್ತು. ಇಂದು ಭಾರತವು 5ನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಭಾರತವು ಶೀಘ್ರದಲ್ಲೇ 3ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ. ನಾವು ದೊಡ್ಡದಾಗಿ ಬೆಳೆಯುವುದು ಮಾತ್ರವಲ್ಲದೆ, ವೇಗವಾಗಿ ಬೆಳೆಯುತ್ತಿದ್ದೇವೆ. ಭಾರತ ಬೆಳೆದರೆ ಇಡೀ ಜಗತ್ತು ಬೆಳೆಯುತ್ತದೆ.

(38ನೇ ಪುಟಕ್ಕೆ)



Scanned with ACE Scanner


ತನು

# ವಿಶ್ವಸಂಸ್ಥೆಯಲ್ಲಿ 9ನೇ ಯೋಗ ದಿನಾಚರಣೆ



**ಜೂ**ನ್ 21 ರಂದು ವಿಶ್ವಸಂಸ್ಥೆಯ ಆವರಣದಲ್ಲಿ ನಡೆದ 9ನೇ ಯೋಗ ದಿನದ ಆಚರಣೆಯಲ್ಲಿ ಭಾರತದ ಪ್ರಧಾನ ಮಂತ್ರಿ ಶ್ರಿ ನರೇಂದ್ರ ಮೋದಿ ಅವರು ಗಣ್ಯರನ್ನು ಉದ್ದೇಶಿಸಿ ಮಾತನಾಡಿದ ಆಯ್ದ ಅವತರಣಿಕೆಯ ಕನ್ನಡ ಅನುವಾದ ಮುಂದಿನಂತಿದೆ:

ಗೌರವಾನ್ವಿತ ಶ್ರೀ ಸಿಸಾಬಾ ಕೊರೊಸಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷರು, ಗೌರವಾನ್ವಿತ ಅಮಿನಾ ಮೊಹಮ್ಮದ್, ವಿಶ್ವಸಂಸ್ಥೆಯ ಉಪ ಪ್ರಧಾನ ಕಾರ್ಯದರ್ಶಿ, ಗೌರವಾನ್ವಿತ ಎರಿಕ್ ಆಡಮ್ಸ್, ನ್ಯೂಯಾರ್ಕ್ ಮೇಯರ್, ಮತ್ತು ವಿಶ್ವಾದ್ಯಂತ ಇರುವ ನನ್ನ ಆತ್ಮೀಯ ಸ್ನೇಹಿತರೆ. ನಮಸ್ಕಾರ!





ಸ್ನೇಹಿತರೆ,

ನಾವೆಲ್ಲಾ ಇಂದು ಈ ಸುಪ್ರಭಾತದಲ್ಲಿ (ಶುಭ ಮುಂಜಾನೆ) ವಿಶ್ವಸಂಸ್ಥೆಯ ಕಚೇರಿಯಲ್ಲಿ ಒಟ್ಟುಗೂಡಿದ್ದೇವೆ. ಇಡೀ ಮನುಕುಲಕ್ಕಾಗಿ ಆರೋಗ್ಯ ಮತ್ತು ಒಳಿತಿಗಾಗಿ ಈ ಕಾರ್ಯಕ್ರಮ! ಈ ಅದ್ಭುತ ನಗರ ನ್ಯೂಯಾರ್ಕ್‌ನಲ್ಲಿ ನಾವೆಲ್ಲಾ ಸೇರಿದ್ದೇವೆ! ನನಗೆ ಗೊತ್ತು, ನಿಮ್ಮಲ್ಲಿ ಹಲವರು ದೂರದಿಂದ ಬಂದವರು, ನಿಮ್ಮಲ್ಲಿ ಹಲವರು ಸೂರ್ಯೋದಯಕ್ಕೆ ಮುಂಚೆಯೇ ಎಚ್ಚರಗೊಂಡು ಇಲ್ಲಿಗೆ ಬರಲು ಪ್ರಯತ್ನಿಸಿದ್ದೀರಿ.

ನಿಮಗೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ!

ಸ್ನೇಹಿತರೆ,

ಇಂದು ಇಲ್ಲಿ ಬಹುತೇಕ ಎಲ್ಲಾ ರಾಷ್ಟ್ರೀಯತೆಗಳು ಪ್ರತಿನಿಧಿಸಿವೆ ಎಂಬುದು ನನಗೆ ತಿಳಿದುಬಂದಿದೆ. ನಮ್ಮೆಲ್ಲರನ್ನೂ ಒಟ್ಟುಗೂಡಿಸಲು ಎಂತಹ ಅದ್ಭುತ ಕಾರಣ – ಅದು ಯೋಗ!

**ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2023ರ ಜೂನ್ 21ರಂದು ನ್ಯೂಯಾರ್ಕ್ ನಗರದಲ್ಲಿರುವ ವಿಶ್ವಸಂಸ್ಥೆ ಪ್ರಧಾನ ಕಚೇರಿಯ ಹುಲ್ಲುಹಾಸಿನಲ್ಲಿ ಆಯೋಜಿಸಲಾದ 9ನೇ ವಾರ್ಷಿಕ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ನೇತೃತ್ವ ವಹಿಸಿದ್ದರು.**

**ಈ ವರ್ಷದ ಶೀರ್ಷಿಕೆ 'ವಸುಧೈವ ಕುಟುಂಬಕಂ ಗಾಗಿ ಯೋಗ'.**


**ಈ ಕಾರ್ಯಕ್ರಮವು 135 ಕ್ಕೂ ಹೆಚ್ಚು ರಾಷ್ಟ್ರಗಳ ಸಾವಿರಾರು ಯೋಗ ಉತ್ಸಾಹಿಗಳಿಂದ ಅಭೂತಪೂರ್ವ ಪ್ರತಿಕ್ರಿಯೆಗೆ ಸಾಕ್ಷಿಯಾಯಿತು, ಯೋಗ ಅಧಿವೇಶನದಲ್ಲಿ ಗರಿಷ್ಠ ಸಂಖ್ಯೆಯ ರಾಷ್ಟ್ರಗಳು ಭಾಗವಹಿಸಿದ ಗಿನ್ನಿಸ್ ವಿಶ್ವ ದಾಖಲೆಯನ್ನು ಇದು ನಿರ್ಮಿಸಿತು. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಶ್ರೀ ಆಂಟೋನಿಯೊ ಗುಟೆರೆಸ್ ಅವರ ವಿಡಿಯೊ ಸಂದೇಶವನ್ನು ಕಾರ್ಯಕ್ರಮದಲ್ಲಿ ಬಿತ್ತರಿಸಲಾಯಿತು.**

**ರಾಜತಾಂತ್ರಿಕರು, ಅಧಿಕಾರಿಗಳು, ಶಿಕ್ಷಣ ತಜ್ಞರು, ಆರೋಗ್ಯ ವೃತ್ತಿಪರರು, ತಂತ್ರಜ್ಞರು, ಉದ್ಯಮದ ನಾಯಕರು, ಮಾಧ್ಯಮ ವ್ಯಕ್ತಿಗಳು, ಕಲಾವಿದರು, ಆಧ್ಯಾತ್ಮಿಕ ಮುಖಂಡರು ಮತ್ತು ಯೋಗಾಭ್ಯಾಸಿಗಳು ಸೇರಿದಂತೆ ಎಲ್ಲಾ ಕ್ಷೇತ್ರಗಳ ಹಲವಾರು ಪ್ರಮುಖ ಗಣ್ಯರು ಮತ್ತು ಪ್ರಮುಖ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 77 ನೇ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಗೌರವಾನ್ವಿತ ಶ್ರೀ ಸಾಬಾ ಕೊರೊಸಿ, ನ್ಯೂಯಾರ್ಕ್ ನಗರದ ಮೇಯರ್ ಶ್ರೀ ಎರಿಕ್ ಆಡಮ್ಸ್, ವಿಶ್ವಸಂಸ್ಥೆಯ ಉಪ ಮಹಾಪ್ರಧಾನ ಕಾರ್ಯದರ್ಶಿ ಮತ್ತು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುಂಪಿನ ಅಧ್ಯಕ್ಷರಾದ ಗೌರವಾನ್ವಿತ ಶ್ರೀಮತಿ ಅಮೀನಾ ಜೆ. ಮುಹಮ್ಮದ್ ಇದರಲ್ಲಿ ಭಾಗವಹಿಸಿದ ಪ್ರಮುಖರಲ್ಲಿ ಸೇರಿದ್ದಾರೆ.**

**ಯೋಗ ಅಧಿವೇಶನಕ್ಕೂ ಮುನ್ನ ಪ್ರಧಾನಮಂತ್ರಿಯವರು 2022ರ ಡಿಸೆಂಬರ್‌ನಲ್ಲಿ ಭಾರತದ ಯುಎನ್ ಎಸ್ ಸಿ ಅಧ್ಯಕ್ಷತೆಯ ಅವಧಿಯಲ್ಲಿ ಉದ್ಘಾಟಿಸಲಾದ ಮಹಾತ್ಮಾಗಾಂಧಿ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.**



Scanned with ACE Scanner



ಯೋಗ ಎಂದರೆ – ಒಂದಾಗುವುದು ಅಥವಾ ಒಟ್ಟಿಗೆ ಸೇರುವುದು. ಆದ್ದರಿಂದ, ನೀವು ಒಟ್ಟಿಗೆ ಸೇರುವುದು ಯೋಗದ ಮತ್ತೊಂದು ರೂಪದ ಅಭಿವ್ಯಕ್ತಿಯಾಗಿದೆ. ನನಗೆ ನೆನಪಿದೆ, ಸುಮಾರು 9 ವರ್ಷಗಳ ಹಿಂದೆ ಇಲ್ಲಿಯೇ ವಿಶ್ವಸಂಸ್ಥೆಯಲ್ಲಿ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನ ಆಚರಣೆಯನ್ನು ಪ್ರಸ್ತಾಪಿಸುವ ಗೌರವ ನನಗೆ ಸಿಕ್ಕಿತ್ತು. ಅಂದಿನ ಕಲ್ಪನೆಯನ್ನು ಬೆಂಬಲಿಸಲು ಇಡೀ ಜಗತ್ತೇ ಒಗ್ಗೂಡಿದ್ದನ್ನು ನೋಡುವುದು ನಿಜಕ್ಕೂ ಅದ್ಭುತವಾಗಿದೆ.





[illegible] ವರ್ಷ 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ [illegible]ವನ್ನಾಗಿ ಆಚರಿಸುವ ಭಾರತದ ಪ್ರಸ್ತಾಪವನ್ನು ಬೆಂಬಲಿಸಲು ಇಡೀ ಜಗತ್ತು ಒಗ್ಗೂಡಿತು. ಸಿರಿಧಾನ್ಯ ಒಂದು ಉತ್ಕೃಷ್ಟ ಆಹಾರ. ಅವು ಸಮಗ್ರ ಆರೋಗ್ಯವನ್ನು ಉತ್ತೇಜಿಸುತ್ತವೆ ಮತ್ತು ಪರಿಸರಕ್ಕೂ ಒಳ್ಳೆಯದು. ಇಂದು ಇಡೀ ಜಗತ್ತು ಯೋಗಕ್ಕಾಗಿ ಮತ್ತೆ ಒಟ್ಟಿಗೆ ಸೇರುವುದನ್ನು ನೋಡುವುದು ಅದ್ಭುತವಾಗಿದೆ!

ಸ್ನೇಹಿತರೆ,

ಯೋಗ ಭಾರತದಿಂದ ಬಂದಿದೆ. ಇದು ಬಹಳ ಹಳೆಯ ಸಂಪ್ರದಾಯವಾಗಿದೆ. ಆದರೆ ಎಲ್ಲಾ ಪ್ರಾಚೀನ ಭಾರತೀಯ ಸಂಪ್ರದಾಯಗಳಂತೆ, ಇದು ಜೀವಂತ ಮತ್ತು ಕ್ರಿಯಾತ್ಮಕವಾಗಿದೆ. ಯೋಗ ಉಚಿತವಾಗಿದೆ. ಹಕ್ಕುಸ್ವಾಮ್ಯ, ಪೇಟೆಂಟ್‌ಗಳಿಂದ







[illegible] [illegible] [illegible]ಪಾವತಿಗಳಿಂದಲೂ ಮುಕ್ತವಾಗಿದೆ. [illegible] ದೇಹದಾರ್ಢ್ಯತೆ ಮಟ್ಟಕ್ಕೆ ಯೋಗ [illegible] ಸಂಚಲನಶೀಲ ನೀವು ಅದನ್ನು [illegible] [illegible]ದಲ್ಲಿ ಅಥವಾ ಸಾರಿಗೆ ಸಂಚಾರ [illegible]

ಸ್ನೇಹಿತರೆ,

ಯೋಗ ಪ್ರಾರಂಭಿಸಲು ನೀವೆಲ್ಲರೂ ಉತ್ಸುಕರಾಗಿದ್ದೀರಿ ಎಂದು ನನಗೆ ತಿಳಿದಿದೆ! ಸರಿ, ನಾನು ಸಹ. ಇಂದು ನಮ್ಮನ್ನು ಕರೆದು ಇಲ್ಲಿ ಕಾರ್ಯಕ್ರಮ ಆಯೋಜಿಸಿದ್ದಕ್ಕಾಗಿ ನಾನು ವಿಶ್ವಸಂಸ್ಥೆಗೆ ಧನ್ಯವಾದ ಹೇಳಲು ಬಯಸುತ್ತೇನೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಸಹಾಯ ಮತ್ತು ಬೆಂಬಲ ನೀಡಿದ ಮೇಯರ್ ಮತ್ತು ನ್ಯೂಯಾರ್ಕ್ ನಗರಕ್ಕೆ ಕೃತಜ್ಞನಾಗಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ, ಇಂದು ಇಲ್ಲಿಗೆ ಬಂದಿದ್ದಕ್ಕಾಗಿ ಮತ್ತೊಮ್ಮೆ ನಾನು ನಿಮ್ಮೆಲ್ಲರಿಗೂ ಧನ್ಯವಾದ ಹೇಳಲು ಬಯಸುತ್ತೇನೆ. ಯೋಗದ ಶಕ್ತಿ, ಚೈತನ್ಯವನ್ನು ನಾವು ಆರೋಗ್ಯಕರವಾಗಿ ಮತ್ತು ಸಂತೋಷವಾಗಿರಲು ಮಾತ್ರವಲ್ಲದೆ, ದಯೆಯಿಂದ ನಮ್ಮೊಂದಿಗೆ ಮತ್ತು ಪರಸ್ಪರರಿಗೆ ಬಳಸೋಣ.

ಎಲ್ಲರೂ ಸುಖವಾಗಿ ಬಾಳಲಿ

ಸರ್ವೇ ಸಂತು ನಿರಾಮಯ:

ಎಲ್ಲರೂ ಸಂತೋಷವಾಗಿರಲಿ, ಎಲ್ಲರೂ ಆರೋಗ್ಯವಾಗಿರಲಿ!

ಧನ್ಯವಾದಗಳು!

ಮತ್ತೊಮ್ಮೆ ತುಂಬು ಧನ್ಯವಾದಗಳು!



Scanned with ACE Scanner

(35ನೇ ಪುಟದಿಂದ)

ಗೌರವಾನ್ವಿತ ಸ್ಪೀಕರ್,

ಭಾರತವು ಅಪಾರ ಯುವ ಜನರನ್ನು ಹೊಂದಿರುವ ಪ್ರಾಚೀನ ರಾಷ್ಟ್ರವಾಗಿದೆ. ಭಾರತವು ತನ್ನ ಸಂಪ್ರದಾಯಗಳಿಗೆ ಹೆಸರುವಾಸಿಯಾಗಿದೆ. ಯುವ ಪೀಳಿಗೆ ಇದನ್ನು ತಂತ್ರಜ್ಞಾನದ ಕೇಂದ್ರವನ್ನಾಗಿಯೂ ಮಾಡುತ್ತಿದೆ.




ಕಳೆದ 9 ವರ್ಷಗಳಲ್ಲಿ ಒಂದು ಶತಕೋಟಿ ಜನರು ತಮ್ಮ ಬ್ಯಾಂಕ್ ಖಾತೆಗಳು ಮತ್ತು ಮೊಬೈಲ್ ಫೋನ್‌ಗಳೊಂದಿಗೆ ಸಂಪರ್ಕ ಹೊಂದಿದ [illegible] ಪಡೆಯುತ್ತಿದ್ದಾರೆ. 100 ದಶಲಕ್ಷ ರೈತರು ತಮ್ಮ ಬ್ಯಾಂಕ್ ಖಾತೆಗಳಲ್ಲಿ ಒಂದು ಬಟನ್ ಕ್ಲಿಕ್ ಮಾಡುವ ಮೂಲಕ ಸಹಾಯ ಪಡೆಯುತ್ತಿದ್ದಾರೆ. ಅಂತಹ ವರ್ಗಾವಣೆಗಳ ಮೌಲ್ಯವು 320 ಶತಕೋಟಿ ಡಾಲರ್ ದಾಟಿದೆ. ಈ ಪಾರದರ್ಶಕ ಪ್ರಕ್ರಿಯೆಯಿಂದ ನಾವು 25 ಶತಕೋಟಿ ಡಾಲರ್ ಹಣವನ್ನು ಉಳಿಸಿದ್ದೇವೆ. ನೀವು ಭಾರತಕ್ಕೆ ಭೇಟಿ ನೀಡಿದರೆ, ಬೀದಿ ವ್ಯಾಪಾರಿಗಳು ಸೇರಿದಂತೆ ಪ್ರತಿಯೊಬ್ಬರೂ ಹಣ ಪಾವತಿಗಾಗಿ ಫೋನ್‌ಗಳನ್ನು ಬಳಸುತ್ತಿರುವುದನ್ನು ನೀವು ನೋಡುತ್ತೀರಿ. ಕಳೆದ ವರ್ಷ ವಿಶ್ವದ ಪ್ರತಿ 100 ರಿಯಲ್ ಟೈಮ್ ಡಿಜಿಟಲ್ ಪಾವತಿಗಳಲ್ಲಿ 46 ಭಾರತದಲ್ಲೇ ನಡೆದಿದೆ. ಸುಮಾರು 4 ಲಕ್ಷ ಮೈಲುಗಳಷ್ಟು ಆಪ್ಟಿಕಲ್ ಫೈಬರ್ ಕೇಬಲ್‌ಗಳು ಮತ್ತು ಅಗ್ಗದ ದರದ ಡೇಟಾವು ಅವಕಾಶಗಳ ಕ್ರಾಂತಿಗೆ ನಾಂದಿ ಹಾಡಿದೆ. ರೈತರು ಹವಾಮಾನ ಮಾಹಿತಿಗಳನ್ನು ಪರಿಶೀಲಿಸುತ್ತಿದ್ದಾರೆ, ವೃದ್ಧರು ಪಿಂಚಣಿ ಮತ್ತಿತರ ಸಾಮಾಜಿಕ ಭದ್ರತೆ ಪಾವತಿಗಳನ್ನು ಪಡೆಯುತ್ತಿದ್ದಾರೆ, ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯುತ್ತಿದ್ದಾರೆ. ವೈದ್ಯರು ಟೆಲಿಮೆಡಿಸಿನ್ ತಲುಪಿಸುತ್ತಿದ್ದಾರೆ, ಮೀನುಗಾರರು ಮೀನುಗಾರಿಕೆಯ ಜಲಭಾಗಗಳನ್ನು ಪರಿಶೀಲಿಸುತ್ತಿದ್ದಾರೆ ಮತ್ತು ಸಣ್ಣ ಉದ್ಯಮಗಳು ತಮ್ಮ ಫೋನ್‌ಗಳಿಂದಲೇ ಸಾಲ ಪಡೆಯುತ್ತಿದ್ದಾರೆ.

ಸನ್ಮಾನ್ಯ ಸಭಾಧ್ಯಕ್ಷರೆ ಮತ್ತು ಸದಸ್ಯರೆ,

ಹಿಂದಿನ ಪ್ರತಿ ಭಾರತೀಯ ಪ್ರಧಾನಿ ಮತ್ತು ಅಮೆರಿಕದ ಅಧ್ಯಕ್ಷರು ನಮ್ಮ ಸಂಬಂಧವನ್ನು ಮುಂದಕ್ಕೆ ಕೊಂಡೊಯ್ದಿದ್ದಾರೆ. ಆದರೆ ಅದನ್ನು ಎತ್ತರಕ್ಕೆ ಕೊಂಡೊಯ್ದ ಗೌರವ ನಮ್ಮ ಪೀಳಿಗೆಗೆ ಇದೆ. ಇದು ಈ ಶತಮಾನದ ನಿರ್ಣಾಯಕ ಪಾಲುದಾರಿಕೆ ಎಂಬ ಅಧ್ಯಕ್ಷ ಶ್ರೀ ಬೈಡೆನ್ ಮಾತನ್ನು ನಾನು ಒಪ್ಪುತ್ತೇನೆ.

ಗೌರವಾನ್ವಿತ ಸ್ಪೀಕರ್ ಮತ್ತು ಸದಸ್ಯರೆ,

ಕಳೆದ ಕೆಲವು ವರ್ಷಗಳಲ್ಲಿ ಆಳವಾದ ವಿಚ್ಛಿದ್ರಕಾರಕ ಬೆಳವಣಿಗೆಗಳನ್ನು ಕಂಡಿದ್ದೇವೆ. ಉಕ್ರೇನ್ ಸಂಘರ್ಷದೊಂದಿಗೆ ಯುದ್ಧವು ಯುರೋಪ್ ಗೆ ಮುಟ್ಟಿದೆ. ಇದು ಪ್ರದೇಶದಲ್ಲಿ ತೀವ್ರ ನೋವು ಉಂಟುಮಾಡುತ್ತದೆ. ನಾನು ನೇರವಾಗಿ ಮತ್ತು ಸಾರ್ವಜನಿಕವಾಗಿ ಹೇಳಿದಂತೆ, ಇದು ಯುದ್ಧದ ಯುಗವಲ್ಲ. ಆದರೆ, ಇದು ಸಂಭಾಷಣೆ ಮತ್ತು ರಾಜತಾಂತ್ರಿಕತೆಯ ಕಾಲ. ರಕ್ತಪಾತ ಮತ್ತು ಮಾನವ ಸಂಕಟವನ್ನು ನಿಲ್ಲಿಸಲು ನಾವೆಲ್ಲರೂ ನಮ್ಮಿಂದ ಸಾಧ್ಯವಿರುವ ಎಲ್ಲವನ್ನೂ ಮಾಡಬೇಕು



ಗೌರವಾನ್ವಿತ ಸ್ಪೀಕರ್,

ಮುಂಬೈನ 9/11 ದುರ್ಘಟನೆ ಮತ್ತು 26/11 ದುರ್ಘಟನೆ ನಂತರ ಭಯೋತ್ಪಾದನೆ ಇನ್ನೂ ಇಡೀ ಜಗತ್ತಿಗೆ ಅಪಾಯವಾಗಿ ಉಳಿದಿದೆ. ಈ ಸಿದ್ಧಾಂತಗಳು ಹೊಸ ಗುರುತುಗಳು ಮತ್ತು ರೂಪಗಳನ್ನು ತೆಗೆದುಕೊಳ್ಳುತ್ತಲೇ ಇರುತ್ತವೆ, ಆದರೆ ಅವುಗಳ ಉದ್ದೇಶಗಳು ಒಂದೇ ಆಗಿರುತ್ತವೆ. ಭಯೋತ್ಪಾದನೆಯು ಮಾನವತೆಯ ಶತ್ರುವಾಗಿದೆ. ಭಯೋತ್ಪಾದನೆಯನ್ನು ಪ್ರಾಯೋಜಿಸುವ ಮತ್ತು ರಫ್ತು ಮಾಡುವ ಎಲ್ಲಾ ಶಕ್ತಿಗಳನ್ನು ನಾವು ಜಯಿಸಬೇಕು.

ಗೌರವಾನ್ವಿತ ಸ್ಪೀಕರ್ ಮತ್ತು ಸದಸ್ಯರೆ,

ನಮ್ಮ ಪಾಲುದಾರಿಕೆ ಉನ್ನತ ಗುಣಮಟ್ಟದಿಂದ ಕೂಡಿದೆ, ಈ ಭೇಟಿಯು ಉತ್ತಮ ಸಕಾರಾತ್ಮಕವಾಗಿ ರೂಪಾಂತರವಾಗಿದೆ. ಒಟ್ಟಾಗಿ, ಪ್ರಜಾಪ್ರಭುತ್ವಗಳು ಮುಖ್ಯವೆಂದು ನಾವು ಸಾರುತ್ತೇವೆ. ಭಾರತ-ಅಮೆರಿಕ ಪಾಲುದಾರಿಕೆಗೆ ನಿಮ್ಮ ನಿರಂತರ ಬೆಂಬಲವನ್ನು ನಾನು ನಿರೀಕ್ಷಿಸುತ್ತೇನೆ.

ದೇವರು ಅಮೆರಿಕವನ್ನು ಉತ್ತಮವಾಗಿ ಇಟ್ಟಿರಲಿ.

ಜೈ ಹಿಂದ್.

ಭಾರತ-ಅಮೆರಿಕ ಸ್ನೇಹ ಚಿರಾಯುವಾಗಲಿ.

ಮೂಲ : (ಪಿಐಬಿ)




Scanned with ACE Scanner

# ಸಹಕಾರಿ ಉದ್ಯಮಶೀಲತೆಯ ಬಲವರ್ಧನೆ

* ಸಾಗರ್ ಕಿಶನ್ ವಾಡ್ಕರ್

**ಸಹಕಾರಿ ಸಂಸ್ಥೆಗಳ ಯಶಸ್ಸು ಅದರ ಸದಸ್ಯರೊಂದಿಗಿನ ಪರಿಣಾಮಕಾರಿ ಸಂಬಂಧ, ನಿರ್ವಹಣೆ ಮತ್ತು ನಾಯಕತ್ವವನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ಪಾಲುದಾರನು ತನ್ನ ಕರ್ತವ್ಯಗಳ ಬಗ್ಗೆ ತಿಳಿದಿರಬೇಕು ಮತ್ತು ಸಹಕಾರ ಸಂಸ್ಥೆಯು ಎಲ್ಲ ಸದಸ್ಯರು ಹಾಗೂ ಆಡಳಿತ ಮಂಡಳಿಯೊಂದಿಗೆ ಮುಕ್ತ ಸಂವಹನದ ದಾರಿಗಳನ್ನು ತೆರೆದಿರಬೇಕು. ಸಹಕಾರಿ ಸಂಸ್ಥೆಗಳ ಸದಸ್ಯರು, ನಿರ್ವಾಹಕರು ಮತ್ತು ನಾಯಕರಿಗೆ ನಿಯಮಿತ ತರಬೇತಿ ನೀಡುವುದು ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಅಗತ್ಯ. ಕೇಂದ್ರ ಸರ್ಕಾರವು ವ್ಯವಸ್ಥಿತ ಮಧ್ಯಸ್ಥಿಕೆಯನ್ನು ಮಾಡುವ ಮೂಲಕ ಭಾರತದಲ್ಲಿ ಸಹಕಾರಿ ಸಂಸ್ಥೆಗಳ ಉದ್ಯಮಶೀಲತೆಯನ್ನು ಬಲಪಡಿಸಲು ಬೆಂಬಲ ಸೇವೆಗಳನ್ನು ವಿಸ್ತರಿಸಿದೆ.**

ಸಹಕಾರಿ ಉದ್ಯಮಶೀಲತೆ ಎನ್ನುವುದು ಸಾಮೂಹಿಕ ಅಥವಾ ಜಂಟಿ ಉದ್ಯಮಶೀಲತೆಯ ಒಂದು ರೂಪವಾಗಿದೆ. 'ಸಹಕಾರಿ ಉದ್ಯಮಿ'ಯು ಕೇವಲ ವೈಯಕ್ತಿಕ ಲಾಭವನ್ನು ಗುರಿಯಾಗಿಸಿಕೊಳ್ಳದೆ ಪ್ರಜಾಸತ್ತಾತ್ಮಕವಾಗಿ ವ್ಯಾಪಾರ ವ್ಯವಹಾರಗಳನ್ನು ನಿರ್ವಹಿಸಲು ದೃಢವಾದ ಕಾರ್ಯತಂತ್ರಗಳನ್ನು ರೂಪಿಸುವ ದೃಷ್ಟಿಕೋನವನ್ನು ಹೊಂದಿರುವ ಸಾಮಾಜಿಕ ನಾಯಕ. ಈ ನಾಯಕರು ದೃಢನಿರ್ಧಾರ, ಬದ್ಧತೆಯೊಂದಿಗೆ ಕಾರ್ಯನಿರ್ವಹಿಸುವವರಾಗಿದ್ದು 'ವಿಭಿನ್ನವಾಗಿ' ಯೋಚಿಸುವ, ಅಪಾಯಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಸಹಕಾರಿ ಸಂಸ್ಥೆಯ ಸದಸ್ಯರು ಗ್ರಾಹಕರಾಗಿರಲಿ, ಕೆಲಸಗಾರರಾಗಿರಲಿ ಇಲ್ಲವೇ ಉತ್ಪಾದಕರಾಗಿರಲಿ ಅವರೇ ವ್ಯವಹಾರದ ಒಡೆಯರೂ ಹಾಗೂ ಆ ಉತ್ಪನ್ನಗಳು ಮತ್ತು ಸೇವೆಗಳ ಬಳಕೆದಾರರಾಗಿದ್ದಾರೆ. ಸಹಕಾರಿ ಸಂಸ್ಥೆಗಳು ಒಬ್ಬ ಸದಸ್ಯ, ಒಂದು ಓಟು ಎನ್ನುವ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಸದಸ್ಯರ ಪ್ರಜಾಸತ್ತಾತ್ಮಕ ಆಡಳಿತ ಮಾದರಿಯು ಸಹಕಾರಿ ಸಂಸ್ಥೆಗಳ ಬಹುದೊಡ್ಡ ಶಕ್ತಿಯಾಗಿದೆ. ಸಮುದಾಯಗಳ ಸಮಸ್ಯೆಗಳನ್ನು ಪರಿಹರಿಸುವುದು, ವಲಯದ ಆಯಾಮಗಳನ್ನು ಗುರುತಿಸಿಕೊಳ್ಳುವುದು ಸಹಕಾರಿ ಸಂಸ್ಥೆಗಳನ್ನು ರೂಪಿಸುವ ಅವಕಾಶಗಳನ್ನು ಹುಡುಕಿಕೊಳ್ಳುವ ಪರಿಣಾಮಕಾರಿ ವಿಧಾನವಾಗಿದೆ.



## ಹಿನ್ನೆಲೆ


ಭಾರತದ ಸಹಕಾರ ಚಳವಳಿಯು ಯಾವಾಗಲೂ ಸಾಮಾಜಿಕ ಹಾಗೂ ಆರ್ಥಿಕ ಹೂಡಿಕೆಯನ್ನು ಎಲ್ಲರನ್ನೂ ಒಳಗೊಂಡಂತೆ ಸಮುದಾಯದ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡಿದೆ. ಭಾರತದಲ್ಲಿನ ಸಹಕಾರ ಚಳವಳಿಗಳು ಹಾಗೂ ಉದ್ಯಮಗಳ ಇತಿಹಾಸವು ಸಮೃದ್ಧವಾಗಿದ್ದು ವೈವಿಧ್ಯತೆಯಿಂದ ಕೂಡಿದೆ. ಸಹಕಾರಿ ಉದ್ಯಮಶೀಲತೆಯು ಗುಣಮಟ್ಟದ ಉದ್ಯೋಗ ಸೃಷ್ಟಿ, ಸಂಪತ್ತು ಸೃಷ್ಟಿ ಮತ್ತು ಸಮುದಾಯ ಮಟ್ಟದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯ ಕಡೆ ಗಮನ ನೀಡುತ್ತದೆ. ಸದಸ್ಯ-ಚಾಲಿತ ಮತ್ತು ಸದಸ್ಯ-ನಿಯಂತ್ರಿತ ಸಂಘಗಳಾಗಿ, ಈ ಘಟಕಗಳು ತೀವ್ರ ಸಮುದಾಯ ವ್ಯಾಪಾರ ಪ್ರಜ್ಞೆ, ಒಗ್ಗಟ್ಟು ಹಾಗೂ ಸಾಮಾಜಿಕ ಬಂಧದೊಂದಿಗೆ ಉತ್ಪನ್ನಗಳು ಮತ್ತು ಸೇವೆಗಳನ್ನು ತಳಮಟ್ಟದವರೆಗೆ ಒಯ್ಯುವ ಸಾಮರ್ಥ್ಯವನ್ನು ಹೊಂದಿವೆ. ಭಾರತದಲ್ಲಿ, ಸಹಕಾರಿ ಸಂಸ್ಥೆಗಳು ಕೃಷಿಗೆ 19%,


* ಸಲಹಾಕಾರರು, ರಾಷ್ಟ್ರೀಯ ಸಹಕಾರ ಸಂಘಟನೆ, ನವದೆಹಲಿ. Email: sagarkwadkar@gmail.com



Scanned with ACE Scanner

ರಸಗೊಬ್ಬರ ವಿತರಣೆಗೆ 35%, ರಸಗೊಬ್ಬರ ಉತ್ಪಾದನೆಗೆ 30%, ಸಕ್ಕರೆ ಉತ್ಪಾದನೆಗೆ 40%, ಗೋಧಿ ಸಂಗ್ರಹಣೆಗೆ 13% ಮತ್ತು ಭತ್ತದ ಸಂಗ್ರಹಣೆಗೆ 20% (ಎನ್‌ಸಿಯುಐ:2018) ಹಣಕಾಸನ್ನು ಒದಗಿಸುತ್ತಿವೆ. ಜನರ ಜೀವನ ಹಾಗೂ ಜೀವನೋಪಾಯ ಮಾರ್ಗಗಳ ಮೇಲೆ ಸಹಕಾರ ಚಳವಳಿಯು ಅಗಾಧ ಪರಿಣಾಮವನ್ನು ಬೀರಿದೆ. ಇದನ್ನು ನೋಡಿ ಭಾರತದ ಪ್ರಧಾನಮಂತ್ರಿಗಳು ಸಹಕಾರ್ ಸೇ ಸಮೃದ್ಧಿ ಎನ್ನುವುದು ಸಹಭಾಗಿತ್ವದ ಅಭಿವೃದ್ಧಿಯನ್ನು ಸಾಧಿಸುವ ಮಂತ್ರ ಎಂದು ಹೇಳಿದರು. ಇದಕ್ಕಾಗಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ರಚಿಸಿದರು. ಬದಲಾಗುತ್ತಿರುವ ಭಾರತ ಮತ್ತು ಜಗತ್ತಿನ ಆರ್ಥಿಕತೆಯನ್ನು ಗಮನದಲ್ಲಿರಿಸಿಕೊಂಡು ಭಾರತದ ಮೊದಲ ಸಹಕಾರ ಸಚಿವ ಶ್ರೀ ಅಮಿತ್ ಶಾ ಅವರ ನೇತೃತ್ವದಲ್ಲಿ, ಸಹಕಾರ ಸಚಿವಾಲಯವು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ ವಿನೂತನ ಕಾರ್ಯತಂತ್ರವನ್ನಾಧರಿಸಿ ಉದ್ಯಮಶೀಲ ಸಂಸ್ಕೃತಿಯನ್ನು ಉತ್ತೇಜಿಸಲು ವಿಭಿನ್ನ, ಪರಿಣಾಮಕಾರಿ ಆಡಳಿತಾತ್ಮಕ, ಕಾನೂನು ಮತ್ತು ನಿಯಂತ್ರಕ ಚೌಕಟ್ಟನ್ನು ರೂಪಿಸುವ ನಿರೀಕ್ಷೆಯಿದೆ.





ಸಹಕಾರಿ ಉದ್ಯಮಶೀಲತೆಯು ಸಹಕಾರಿ ಉದ್ಯಮಗಳು ಮತ್ತು ಸಹಕಾರ ಚಳವಳಿಗಳಿಗೆ ಯಶಸ್ಸು ಹಾಗೂ ಪುಷ್ಟಿಯನ್ನು ಒದಗಿಸುತ್ತದೆ. ಸಹಕಾರಿ ಉದ್ಯಮಶೀಲತೆ ಎಂದರೆ ವ್ಯಕ್ತಿಗಳು ಗುಂಪಾಗಿ ತಮ್ಮ ಆರ್ಥಿಕ, ಆರ್ಥಿಕೇತರ ಸಂಪನ್ಮೂಲಗಳನ್ನು ಒಗ್ಗೂಡಿಸಿ ಸದಸ್ಯರ ಸಾಮಾಜಿಕ-ಆರ್ಥಿಕ ಹಾಗೂ ಸಾಂಸ್ಕೃತಿಕ ಅಗತ್ಯಗಳು, ಮಹತ್ವಾಕಾಂಕ್ಷೆಗಳನ್ನು ಪೂರೈಸುವ ಪ್ರಕ್ರಿಯೆಯಾಗಿದೆ.

ಸಹಕಾರಿ ಉದ್ಯಮಶೀಲತೆಯ ಗುರಿಯು ಸಹಕಾರ ಸಂಘಗಳ ಕಾರ್ಯಾಚರಣೆಗಳಲ್ಲಿ ಕಾರ್ಯತಂತ್ರ, ಸೃಜನಶೀಲತೆ ಮತ್ತು ನಾವಿನ್ಯತೆಯನ್ನು ತುಂಬುವುದು. ಸಹಕಾರ ಸಂಘವು ತನ್ನ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಕ್ರಿಯಾಶೀಲ ಆಡಳಿತ ಸ್ವರೂಪ, ಅರ್ಹ, ಸಮರ್ಥ ಮತ್ತು ಬದ್ಧತೆಯಿಂದಿರುವ ಮಾನವ ಸಂಪನ್ಮೂಲಗಳು ಹಾಗೂ ಆಡಳಿತ ವ್ಯವಸ್ಥೆಗಳನ್ನು ಹೊಂದಿರಬೇಕು. ದೇಶದಾದ್ಯಂತ, ಸದಸ್ಯರು ಮತ್ತು ಸದಸ್ಯರಲ್ಲದವರ ಅಗತ್ಯಗಳನ್ನು ಪೂರೈಸುವ ಹಲವಾರು ಸಹಕಾರಿ ವ್ಯವಹಾರ ಮಾದರಿಗಳಿವೆ. ಅವುಗಳಲ್ಲಿ ಹದಿನಾರು ವರ್ಲ್ಡ್ ಕೋಆಪರೇಟಿವ್ ಮಾನಿಟರ್ 2022 (ಐಸಿಎ, 2022) ರ 'ತಲಾವಾರು ಜಿಡಿಪಿ ವಹಿವಾಟಿನ ಅನುಪಾತ' ಪಟ್ಟಿಯಲ್ಲಿ ಸ್ಥಾನಪಡೆದಿವೆ. ಅದರಲ್ಲಿ ಐಎಫ್‌ಎಫ್‌ಸಿಒ (ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕೋಆಪರೇಟಿವ್ ಲಿಮಿಟೆಡ್, ನವದೆಹಲಿ, ಮೊದಲ ಸ್ಥಾನ); ಗುಜರಾತ್ ಸ್ಟೇಟ್ ಕೋಆಪರೇಟಿವ್ ಮಿಲ್ಕ್ ಅಂಡ್ ಮಾರ್ಕೆಟಿಂಗ್ ಫೆಡರೇಶನ್, ಗುಜರಾತ್ (2ನೇ ಸ್ಥಾನ); ಕೃಷಿಕ ಭಾರತಿ ಕೋಆಪರೇಟಿವ್ ಲಿ., ನವದೆಹಲಿ (3ನೇ ಸ್ಥಾನ); ಕೇರಳ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ಗುಜರಾತ್ ಮತ್ತು ಉತ್ತರ ಪ್ರದೇಶ ರಾಜ್ಯಗಳ ಏಳು ಸಹಕಾರಿ ಬ್ಯಾಂಕುಗಳು: ಸಾರಸ್ವತ್ ಕೋಆಪರೇಟಿವ್ ಬ್ಯಾಂಕ್, ಮುಂಬಯಿ; ಟಿಜೆಎಸ್‌ಬಿ ಕೋಆಪರೇಟಿವ್ ಬ್ಯಾಂಕ್, ಥಾಣೆ; ಕಾಸ್ಮೋಸ್ ಕೋಆಪರೇಟಿವ್ ಬ್ಯಾಂಕ್, ಪುಣೆ; ಎಸ್‌ವಿಸಿ ಕೋಆಪರೇಟಿವ್ ಬ್ಯಾಂಕ್, ಮಹಾರಾಷ್ಟ್ರ ಮತ್ತು ಎರಡು ಪ್ರಾಥಮಿಕ ಸೊಸೈಟಿಗಳಾದ ಬುಲ್ಡಾನ ಅರ್ಬನ್ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ, ಮಹಾರಾಷ್ಟ್ರ ಮತ್ತು ಉರಾಲುಂಗಲ್ ಲೇಬರ್ ಕಾಂಟ್ರಾಕ್ಟ್ ಕೋ ಆಪರೇಟಿವ್ ಸೊಸೈಟಿ ಲಿ. (ಯುಎಲ್‌ಸಿಸಿಎಸ್), ಕೇರಳ ಸೇರಿವೆ.

ಉತ್ಪಾದನೆ, ಸೇವೆಗಳು, ನವೀಕರಿಸಬಹುದಾದ ಇಂಧನ, ಪ್ರವಾಸೋದ್ಯಮ, ಸಾರಿಗೆ, ಕೈಮಗ್ಗ, ಕರಕುಶಲ, ಆರೋಗ್ಯ, ವಿದ್ಯಾರ್ಥಿ/ಕ್ಯಾಂಪಸ್ ಗ್ರಾಹಕ ಸಹಕಾರ ಸಂಘಗಳು ಇತ್ಯಾದಿಗಳಂತಹ ಆರ್ಥಿಕತೆಯ ಉದಯೋನ್ಮುಖ ವಲಯಗಳಲ್ಲಿ ಸಹಕಾರಿ ಸಂಘಗಳನ್ನು ರೂಪಿಸಿ ಬೆಳೆಸುವ ಬಹುದೊಡ್ಡ ಅವಕಾಶಗಳಿವೆ. ಇದರೊಂದಿಗೆ ಸಾಮಾಜಿಕ ಹಿತರಕ್ಷಣಾ ವಲಯದಲ್ಲಿ ಇತರ ಖಾಸಗಿ ಉದ್ಯಮಗಳು ಆರ್ಥಿಕವಾಗಿ ಸಾಧಿಸಲು ಸಾಧ್ಯವಾಗದಂತಹ ಅವಕಾಶಗಳಿವೆ. ಸಹಕಾರಿ ಸಂಸ್ಥೆಗಳ 'ವಿಶಿಷ್ಟ ಮಾರಾಟ ಪ್ರತಿಪಾದನೆ'ಯು 'ಲಾಭಕ್ಕಿಂತ ವ್ಯಕ್ತಿಗಳು ಮುಖ್ಯ' ಎನ್ನುತ್ತದೆ. ಹೀಗಾಗಿ



Scanned with ACE Scanner




ಸ್ವಯಂಪ್ರೇರಿತರಾಗಿ ಕೆಲಸ ಮಾಡುವ ಸದಸ್ಯರಿಂದಾಗಿ ವೆಚ್ಚಗಳನ್ನು ಉಳಿಸಲು ಸಾಧ್ಯವಾಗುತ್ತದೆ.

**ಸಹಕಾರಿ ಉದ್ಯಮಶೀಲತೆ**

ಸಹಕಾರಿ ಉದ್ಯಮಶೀಲತೆ ಸಾಮೂಹಿಕ ಅಥವಾ ಜಂಟಿ ಉದ್ಯಮಶೀಲತೆಯ ಒಂದು ರೂಪವಾಗಿದೆ. 'ಸಹಕಾರಿ ಉದ್ಯಮಿ'ಯು ಕೇವಲ ವೈಯಕ್ತಿಕ ಲಾಭಕ್ಕಾಗಿ ಬದಲಾಗಿ ಪ್ರಜಾಸತ್ತಾತ್ಮಕವಾಗಿ ವ್ಯಾಪಾರ ವ್ಯವಹಾರಗಳನ್ನು ನಿರ್ವಹಿಸಲು ದೃಢವಾದ ಕಾರ್ಯತಂತ್ರಗಳನ್ನು ರೂಪಿಸುವ ದೃಷ್ಟಿಕೋನವನ್ನು ಹೊಂದಿರುವ ಸಾಮಾಜಿಕ ನಾಯಕನಲ್ಲದೆ ಬೇರೇನೂ ಅಲ್ಲ. 'ಸಹಕಾರಿ ಉದ್ಯಮಿ'ಯು ಕೇವಲ ವೈಯಕ್ತಿಕ ಲಾಭವನ್ನು ಗುರಿಯಾಗಿಸಿಕೊಳ್ಳದೆ ಪ್ರಜಾಸತ್ತಾತ್ಮಕವಾಗಿ ವ್ಯಾಪಾರ ವ್ಯವಹಾರಗಳನ್ನು ನಿರ್ವಹಿಸಲು ದೃಢವಾದ ಕಾರ್ಯತಂತ್ರಗಳನ್ನು ರೂಪಿಸುವ ದೃಷ್ಟಿಕೋನವನ್ನು ಹೊಂದಿರುವ ಸಾಮಾಜಿಕ ನಾಯಕ. ಈ ನಾಯಕರು ದೃಢನಿರ್ಧಾರ, ಬದ್ಧತೆಯೊಂದಿಗೆ ಕಾರ್ಯನಿರ್ವಹಿಸುವವರಾಗಿದ್ದು 'ವಿಭಿನ್ನವಾಗಿ' ಯೋಚಿಸುವ, ಅಪಾಯಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಸಮಾನ ಅವಶ್ಯಕತೆಗಳಿರುವ ಸಮಾನ ಮನಸ್ಕರು ಹಾಗೂ ಸೂಕ್ತ ವ್ಯಕ್ತಿಗಳು ಒಟ್ಟಾಗಿ ತಮ್ಮ ಸಂಪನ್ಮೂಲಗಳನ್ನು ಒಂದೆಡೆ ಕ್ರೋಢೀಕರಿಸಿ ಒಟ್ಟಾಗಿ ಕೆಲಸ ಮಾಡುವ ಮೂಲಕ ವಹಿವಾಟನ್ನು ಯಶಸ್ವಿಗೊಳಿಸಲು ಕಾರ್ಯೋನ್ಮುಖರಾದಾಗ ಸಹಕಾರಿ ಉದ್ಯಮವು ರೂಪುತಳೆಯುತ್ತದೆ.

ಸಹಕಾರಿ ಸಂಸ್ಥೆಯ ಸದಸ್ಯರು ಗ್ರಾಹಕರಾಗಿರಲಿ, ಕೆಲಸಗಾರರಾಗಿರಲಿ ಇಲ್ಲವೇ ಉತ್ಪಾದಕರಾಗಿರಲಿ ಅವರೇ ವ್ಯವಹಾರದ ಒಡೆಯರೂ ಹಾಗೂ ಆ ಉತ್ಪನ್ನಗಳು ಮತ್ತು ಸೇವೆಗಳ ಬಳಕೆದಾರರಾಗಿದ್ದಾರೆ. ಸಹಕಾರಿ ಸಂಸ್ಥೆಗಳು ಒಬ್ಬ ಸದಸ್ಯ, ಒಂದು ಓಟು ಎನ್ನುವ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಸದಸ್ಯರ ಪ್ರಜಾಸತ್ತಾತ್ಮಕ ಆಡಳಿತ ಮಾದರಿಯು ಸಹಕಾರಿ ಸಂಸ್ಥೆಗಳ ಬಹುದೊಡ್ಡ ಶಕ್ತಿಯಾಗಿದೆ. ಆಪತ್ತು ಹಾಗೂ ಹೆಚ್ಚುವರಿ ಉತ್ಪಾದನೆ ಎರಡೂ ಸದಸ್ಯರು ಹಾಗೂ ಷೇರುದಾರರ ನಡುವೆ ಸಮಾನವಾಗಿ ಹಂಚಿಕೆಯಾಗುತ್ತದೆ. ಸಹಕಾರಿ ಸಂಸ್ಥೆಗಳಾಗಲಿ, ಖಾಸಗಿ ಕಂಪನಿಯಾಗಲಿ, ನವೋದ್ಯಮವಾಗಲಿ ಅಥವಾ ಯಾರದೇ ಸ್ವಾಮ್ಯದ ಉದ್ಯಮವನ್ನಾಗಲಿ ಆರಂಭಿಸಲು ಕಾರ್ಯಸಾಧ್ಯವಾದ ಯೋಜನೆ ಅವಶ್ಯಕ. ಸಹಕಾರಿ ಉದ್ಯಮವು ಸ್ಪರ್ಧಾತ್ಮಕವಾಗಿರಲು ಈ ಪೂರ್ವಭಾವಿ ಸಿದ್ಧತೆ ಅತ್ಯವಶ್ಯಕ. ಉದ್ಯಮವನ್ನು ರೂಪಿಸುವಲ್ಲಿ ಈ ಮುಂದಿನ ಹಂತಗಳನ್ನು ಅನುಸರಿಸುವುದು ಅತ್ಯಗತ್ಯ.

**ಅವಕಾಶಗಳನ್ನು ಗುರುತಿಸುವುದು**

ಉದ್ಯಮಶೀಲತೆಯ ಪ್ರಕ್ರಿಯೆಯಲ್ಲಿ ಕಾರ್ಯಸಾಧ್ಯವಾದ ವಹಿವಾಟು ಯೋಜನೆಯು ಅತ್ಯಗತ್ಯ. ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುವುದು, ವಲಯದ ಆಯಾಮಗಳನ್ನು ಗುರುತಿಸುವುದು ಸಹಕಾರಿ ಸಂಸ್ಥೆಗಳು ಅವಕಾಶಗಳನ್ನು ರೂಪಿಸಿಕೊಳ್ಳುವ ಎರಡು ಪರಿಣಾಮಕಾರಿ ವಿಧಾನಗಳು. ಮಾರುಕಟ್ಟೆ ವೈಫಲ್ಯದ ವಿರುದ್ಧ ಸಹಕಾರಿ ಸಂಸ್ಥೆಗಳು ಸ್ಥಾಪನೆಯಾದಾಗ ಅವುಗಳನ್ನು "ಸಮಸ್ಯೆಗಳ ಪರಿಹಾರ" ಎಂದು ಗುರುತಿಸಲಾಯಿತು. ಉದ್ಯಮಿಗಳು ವಲಯಗಳ ಟ್ರೆಂಡ್‌ಗಳಿಗನುಸಾರವಾಗಿ ಹೆಚ್ಚು ಅಭಿವೃದ್ಧಿ ಹೊಂದಿರದ ವಿಭಾಗಗಳಲ್ಲಿ ಪುನರುತ್ಪಾದನೆ ಮಾಡಬಹುದು.

**ಸಾಂಸ್ಥಿಕ ವಿನ್ಯಾಸ**

ಒಮ್ಮೆ ಆರಂಭಿಕ ಹಂತದಲ್ಲಿ ನಾಯಕರು ಅಥವ ಪ್ರವರ್ತಕರು ವ್ಯಾಪಾರಕ್ಕೆ ಆರ್ಥಿಕ ಸಾಮರ್ಥ್ಯವಿದೆ ಎಂದು ಪ್ರದರ್ಶಿಸಿದ ನಂತರ ಮುಂದಿನ ಹಂತದಲ್ಲಿ ಸಾಂಸ್ಥಿಕ ವಿನ್ಯಾಸವನ್ನು ಈ ಅಂಶಗಳೊಂದಿಗೆ ವಿವರಿಸಬಹುದಾಗಿದೆ :

- **ಉದ್ದೇಶ:** ಗುರಿ ಮತ್ತು ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸಬೇಕು. ಉದ್ಯಮವು (ಸದಸ್ಯರು ಹಾಗೂ ಗ್ರಾಹಕರ) ಅಗತ್ಯಗಳನ್ನು ಪೂರೈಸುವ ಗುರಿಯನ್ನು ಹೊಂದಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.
- **ಸಹಮತದ ಗುರಿಗಳು:** ಸ್ಥಾಪಕ ಸದಸ್ಯರು ಮತ್ತು ಪ್ರವರ್ತಕರು ಸಹಕಾರ ಸಂಸ್ಥೆಯ ನಿಗದಿಪಡಿಸಿದ ಗುರಿಗಳನ್ನು ಒಪ್ಪಿಕೊಳ್ಳಬೇಕು.



Scanned with ACE Scanner



- **ಮಾಲಿಕತ್ವದ ಸ್ವರೂಪ:** ಸಹಕಾರ ಸಂಸ್ಥೆಯ ಸದಸ್ಯತ್ವದ ಪ್ರಕಾರಗಳು (ಉದಾಹರಣೆಗೆ, ಕೆಲಸಗಾರರು, ಗ್ರಾಹಕರು ಮತ್ತು ಸಮುದಾಯ), ಸದಸ್ಯರನ್ನು ಗುರುತಿಸುವ ಅಥವಾ ವರ್ಗೀಕರಿಸುವ ವಿಧಾನಗಳು (ಉದಾಹರಣೆಗೆ, ಷೇರುಗಳ ಖರೀದಿಯ ಮೂಲಕ) ಮತ್ತು ಆಸ್ತಿ ಮಾಲಿಕತ್ವದ ಪ್ರಕಾರಗಳು (ಸಾಮಾನ್ಯ ಅಥವಾ ಜಂಟಿ ಒಡೆತನ).

- **ಪ್ರಜಾಸತ್ತಾತ್ಮಕ ಆಡಳಿತ:** ಆಡಳಿತ ವ್ಯವಸ್ಥೆಗಳನ್ನು ಸ್ಪಷ್ಟವಾಗಿ ವಿವರಿಸಬೇಕು – ಉದಾಹರಣೆಗೆ, ಸಹಕಾರಿ ಸಂಸ್ಥೆಗಳ ಆಡಳಿತದಲ್ಲಿ ಸದಸ್ಯರ ಒಳಗೊಳ್ಳುವಿಕೆ (ಸಭೆಗಳು ಮತ್ತು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಮತದಾನ), ನಿರ್ದೇಶಕ ಮಂಡಳಿಯ ಆಯ್ಕೆ, ಮಂಡಳಿಯ ಸಾಪ್ತಾಹಿಕ ಅಥವಾ ಮಾಸಿಕ ಸಭೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ವಿಧಾನಗಳು, ಇತ್ಯಾದಿ.

- **ಹೆಚ್ಚುವರಿ ಲಾಭದ ವಿತರಣೆ:** ಸಂಸ್ಥೆಯು ಸದಸ್ಯರ ಹೆಚ್ಚುವರಿ ಜವಾಬ್ದಾರಿಗಳನ್ನು ವಿವರಿಸಬೇಕು. ಸದಸ್ಯರು ವಹಿವಾಟಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಭಾಗಿಯಾಗಬೇಕು, ಪರಿಹಾರ ನೀಡುವ ಸ್ವರೂಪವನ್ನು ರೂಪಿಸಬೇಕು, ಮೀಸಲು ನಿಧಿಯನ್ನು ನಿರ್ವಹಿಸಬೇಕು, ಹೆಚ್ಚುವರಿ ಹಣವನ್ನು ಸಹಕಾರ ಸಂಸ್ಥೆಗಳಲ್ಲಿ ಹೂಡಿಕೆ ಮಾಡಬೇಕು ಇತ್ಯಾದಿ.

- **ಸದಸ್ಯತ್ವ:** ಸದಸ್ಯರು, ಸಹಕಾರಿ ಸಂಘಗಳೊಂದಿಗಿನ ಅವರ ಸಂಬಂಧಗಳು, ಸಹಕಾರಿ ಸಂಘಕ್ಕೆ ಸೇರುವ ವಿಧಾನ ಮತ್ತು ಸದಸ್ಯತ್ವವನ್ನು ಪಡೆಯುವ ವಿಧಾನಗಳ ಬಗ್ಗೆ ಸ್ಪಷ್ಟತೆಯ ಅಗತ್ಯವಿದೆ. ಸಮುದಾಯ, ಪರಿಸರ, ಉದ್ಯೋಗಿಗಳು, ಗ್ರಾಹಕರು ಮತ್ತು ಪೂರೈಕೆದಾರರು ಸೇರಿದಂತೆ ತನ್ನ ವಿವಿಧ ಪಾಲುದಾರರೊಂದಿಗೆ ಸಹಕಾರ ಸಂಘವು ಹೇಗೆ ಸಂವಹನ ನಡೆಸುತ್ತದೆ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ.

- **ಬಂಡವಾಳದ ಅವಶ್ಯಕತೆಗಳು:** ಹಣಕಾಸಿನ ಮೂಲವನ್ನು ಗುರುತಿಸಿಕೊಳ್ಳಬೇಕು ಅಂದರೆ ಷೇರುಗಳು ಅಥವಾ ಸಾಲದ ಮೂಲಕ ಸದಸ್ಯರಿಂದ ಹಣದ ಸಂಗ್ರಹಣೆ, ವಿಶೇಷ ಸಹಕಾರ ಸಂಘ ನಿಧಿಯಿಂದ ಸಾಲ, ಸಹಕಾರ ಸಂಘ ಅಭಿವೃದ್ಧಿ ಸಂಸ್ಥೆಗಳಿಂದ ಅನುದಾನ, ವಾಣಿಜ್ಯ ಸಾಲದಾತರಿಂದ ಸಾಲಗಳು ಇತ್ಯಾದಿ.

**ಕಾರ್ಯಸಾಧ್ಯತೆಯ ಅಧ್ಯಯನ ಮತ್ತು ವ್ಯವಹಾರ ಯೋಜನೆ**

ವ್ಯವಹಾರ ಯೋಜನೆಯನ್ನು ರೂಪಿಸಿಕೊಂಡು ಮುಂದುವರಿಯುವುದಕ್ಕೂ ಮೊದಲು, ಸಹಕಾರಿ ಸಂಘದ ಪ್ರವರ್ತಕರ ತಂಡವು ಕಾರ್ಯಸಾಧ್ಯತೆಯ ಅಧ್ಯಯನ ಅಥವಾ ವಿಶ್ಲೇಷಣೆಯನ್ನು ನಡೆಸಬೇಕು. ಮಾರುಕಟ್ಟೆಯ ಗಾತ್ರ, ಯಾವ ಬಗೆಯ ಗ್ರಾಹಕರು, ಎದುರಿಸಬೇಕಾದ ಸ್ಪರ್ಧೆಯ ವಿಶ್ಲೇಷಣೆ, ಸಂಭಾವ್ಯ ಗ್ರಾಹಕರ ಅಭಿರುಚಿಗಳು ಮತ್ತು ಆದ್ಯತೆಗಳು, ಪ್ರಸ್ತುತ ಮಾರುಕಟ್ಟೆಯ ಪ್ರವೃತ್ತಿಗಳನ್ನು ಒಳಗೊಂಡಂತೆ ಮಾರುಕಟ್ಟೆಯ ಅಧ್ಯಯನ ನಡೆಸಬೇಕು. ವ್ಯವಹಾರ ಯೋಜನೆಯ ಪ್ರಯೋಗಿಸಲು ಈ ಮುಂದಿನವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು:

- ಉದ್ದೇಶ ಮತ್ತು ಗುರಿಗಳ ಕಾರ್ಯತಂತ್ರದ ಪರಾಮರ್ಶೆ
- ವಹಿವಾಟು ಯೋಜನೆ
- ಕಾರ್ಯತಂತ್ರ ಯೋಜನೆ – ಸಂಪನ್ಮೂಲಗಳ ಉತ್ಪತ್ತಿ ಹಾಗೂ ಬಳಕೆಯ ವಿಧಾನ
- ಉತ್ಪನ್ನಗಳು ಮತ್ತು ಸೇವೆಗಳ ಪೋರ್ಟ್‌ಫೋಲಿಯೊ– ಆದಾಯ ಗಳಿಕೆ, ವೆಚ್ಚಗಳ ನಿರ್ವಹಣೆ ಮತ್ತು ಹೂಡಿಕೆ
- ಬಂಡವಾಳ ಕ್ರೋಢೀಕರಣ

**ಕಾನೂನು ಪರಿಶೀಲನೆ ಮತ್ತು ಸಹಕಾರ ಸಂಘಗಳ ಸಂಯೋಜನೆ**

ಉದ್ಯಮಶೀಲತೆಯ ಪ್ರಕ್ರಿಯೆಯಲ್ಲಿ ಮುಂದಿನ ಹಂತವೆಂದರೆ, ಸೂಕ್ತ ಕಾನೂನು ಪ್ರಕ್ರಿಯೆ ಕೈಗೊಳ್ಳುವುದು. ಸಂಘವು ಹಲವು ರಾಜ್ಯಗಳ ಇಲ್ಲವೇ ರಾಜ್ಯಮಟ್ಟದ ಸಹಕಾರ ಸಂಘವಾಗಿದ್ದರೆ ಪ್ರವರ್ತಕರು ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರನ್ನು (ಕೇಂದ್ರ ಅಥವಾ ರಾಜ್ಯ) ಭೇಟಿಮಾಡಬಹುದು.

**ನಿರ್ವಹಣೆ ಮತ್ತು ಮುನ್ನಡೆಸುವಿಕೆ**

ಉದ್ಯಮಶೀಲತೆಯ ಈ ಘಟ್ಟದಲ್ಲಿ ನಿರ್ದೇಶಕರ ಮಂಡಳಿ ಅಥವಾ ನಾಯಕರ ಪಾತ್ರವು ನಿರ್ಣಾಯಕವಾಗಿದೆ. ಸಹಕಾರ ಸಂಘವು ತನ್ನ ಗುರಿ ಮತ್ತು ಉದ್ದೇಶಗಳಿಗೆ ಬದ್ಧವಾಗಿದ್ದು ಸದಸ್ಯರ ಮತ್ತು ಸಮುದಾಯಗಳ ಅಗತ್ಯಗಳು ಮತ್ತು ಆಕಾಂಕ್ಷೆಗಳ ಪೂರೈಕೆಗೆ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆಯೇ ಎನ್ನುವುದನ್ನು ಇವರು ಗಮನಿಸಬೇಕು. ಸಹಕಾರ ಸಂಘದ ಯಶಸ್ಸು ಸದಸ್ಯರು, ಆಡಳಿತ ಮಂಡಳಿ ಮತ್ತು ನಾಯಕತ್ವದ ಮೇಲೆ ನಿರ್ಭರವಾಗಿರುತ್ತದೆ. ಪ್ರತಿಯೊಬ್ಬ



Scanned with ACE Scanner

| ಕೋಷ್ಟಕ 1: ಸಹಕಾರ ಸಂಘ ಅಭಿವೃದ್ಧಿಗಾಗಿ ಸಚಿವಾಲಯವಾರು ಮತ್ತು ವಲಯವಾರು ಯೋಜನೆಗಳು | | | |
|---|---|---|---|
| | ವಲಯಗಳು | ಸಚಿವಾಲಯ/ಇಲಾಖೆ | ಅನ್ವಯವಾಗುವ ಯೋಜನೆಗಳು |
| 1 | ಹೈನುಗಾರಿಕೆ | ಮೀನುಗಾರಿಕೆ, ಪಶುಪಾಲನೆ ಮತ್ತು ಹೈನುಗಾರಿಕೆ | • ಪಶುಸಂಗೋಪನೆ ಮೂಲಸೌಕರ್ಯ ಅಭಿವೃದ್ಧಿ ನಿಧಿ<br>• ರಾಷ್ಟ್ರೀಯ ಜಾನುವಾರು ಮಿಷನ್ ಡೈರಿ ಸಹಕಾರಿಗಳು ಮತ್ತು ರೈತ ಉತ್ಪಾದಕ ಸಂಸ್ಥೆಗಳನ್ನು ಬೆಂಬಲಿಸುತ್ತದೆ |
| 2 | ಮೀನುಗಾರಿಕೆ | | • ಮೀನುಗಾರಿಕೆ ಮತ್ತು ಅಕ್ವಾಕಲ್ಚರ್ ಮೂಲಸೌಕರ್ಯ ಅಭಿವೃದ್ಧಿ ನಿಧಿ<br>• ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ |
| 3 | ಕೈಮಗ್ಗ ಮತ್ತು ಕರಕುಶಲ ಜವಳಿ | ಜವಳಿ | • ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ<br>• ಕೈಮಗ್ಗ ನೇಕಾರರ ಸಮಗ್ರ ಕಲ್ಯಾಣ ಯೋಜನೆ<br>• ಅಂಬೇಡ್ಕರ್ ಹಸ್ತಶಿಲ್ಪ ವಿಕಾಸ ಯೋಜನೆ<br>• ಕೈಮಗ್ಗ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ– ಕೈಮಗ್ಗ ಮೆಗಾ ಕ್ಲಸ್ಟರ್<br>• ರೇಷ್ಮೆ ಉದ್ಯಮದ ಅಭಿವೃದ್ಧಿಗಾಗಿ ಸಮಗ್ರ ಯೋಜನೆ<br>• ಮೆಗಾ–ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ರೀಜನ್ ಮತ್ತು ಅಪ್ಯಾರಲ್ ಪಾರ್ಕ್‌ಗಳು<br>• ಸಮಗ್ರ ಉಣ್ಣೆ ಅಭಿವೃದ್ಧಿ ಕಾರ್ಯಕ್ರಮ; ಪವರ್ ಲೂಮ್ ಕ್ಲಸ್ಟರ್ ಅಭಿವೃದ್ಧಿ ಯೋಜನೆ<br>• ಈಶಾನ್ಯ ಜವಳಿ ಪ್ರಚಾರ ಯೋಜನೆ; ರಾಷ್ಟ್ರೀಯ ಕರಕುಶಲ ಅಭಿವೃದ್ಧಿ ಕಾರ್ಯಕ್ರಮ<br>• ಕರಕುಶಲ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ– ಕರಕುಶಲ ಮೆಗಾ ಕ್ಲಸ್ಟರ್ |
| 4 | | ಎಂಎಸ್‌ಎಂಇ | • ಸಾಂಪ್ರದಾಯಿಕ ಕೈಗಾರಿಕೆಗಳ ಪುನರುತ್ಪಾದನೆಗಾಗಿ ನಿಧಿಯ ಯೋಜನೆ<br>• ಸೌರ ಚರಖಾ ಮಿಷನ್; ಖಾದಿ ಗ್ರಾಮೋದ್ಯೋಗ ಅಭಿವೃದ್ಧಿ ಯೋಜನೆ |
| 5 | | ಅಲ್ಪಸಂಖ್ಯಾತ ವ್ಯವಹಾರಗಳು | • ಸಾಂಪ್ರದಾಯಿಕ ಕಲೆಗಳು/ಕಸುಬುಗಳ ಅಭಿವೃದ್ಧಿಗಾಗಿ ಕೌಶಲ್ಯ ಮತ್ತು ತರಬೇತಿಯನ್ನು ನವೀಕರಿಸುವುದು |
| 6 | ಆರೋಗ್ಯ | ಆಯುಷ್ | • ಆಯುರ್‌ಜ್ಞಾನಕ್ಕಾಗಿ ಕೇಂದ್ರ ವಲಯ ಯೋಜನೆ<br>• ಔಷಧೀಯ ಸಸ್ಯಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ಸುಸ್ಥಿರ ನಿರ್ವಹಣೆಗಾಗಿ ಕೇಂದ್ರ ವಲಯ ಯೋಜನೆ<br>• ರಾಷ್ಟ್ರೀಯ ಆಯುಷ್ ಮಿಷನ್ |
| 7 | | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | • ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್<br>• ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್ ಆಯುಷ್ಮಾನ್ ಭಾರತ– ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ |
| 8 | ಪ್ರವಾಸೋದ್ಯಮ ಮತ್ತು ಸಾರಿಗೆ | ನಾಗರಿಕ ವಿಮಾನಯಾನ | • ಕೃಷಿ ಉಡಾನ್ ಯೋಜನೆ |
| 9 | | ಪ್ರವಾಸೋದ್ಯಮ | • ತೀರ್ಥಯಾತ್ರೆ ಪುನರುಜ್ಜೀವನ ಮತ್ತು ಆಧ್ಯಾತ್ಮಿಕ, ಪರಂಪರೆ ವರ್ಧನೆಯ ಡ್ರೈವ್ |
| 10 | | ಭಾರೀ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ಯಮಗಳು | • ಭಾರತದಲ್ಲಿ (ಹೈಬ್ರಿಡ್ ಮತ್ತು ಎಲೆಕ್ಟ್ರಿಕ್) ವಾಹನಗಳ ವೇಗದ ಅಳವಡಿಕೆ ಮತ್ತು ತಯಾರಿಕಾ ಯೋಜನೆ |
| 11 | ಮಹಿಳೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬುಡಕಟ್ಟು, ಇತ್ಯಾದಿ | ಬುಡಕಟ್ಟು ವ್ಯವಹಾರಗಳು | • ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಕಾರ್ಯಕ್ರಮ (ಪ್ರಧಾನಿ ವನಬಂಧು ಕಲ್ಯಾಣ ಯೋಜನೆ) |
| 12 | | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ | • ಹಿಂದುಳಿದ ಗುಂಪುಗಳು ಮತ್ತು ವರ್ಗಗಳಿಗೆ ಆರ್ಥಿಕ ನೆರವು ಯೋಜನೆ<br>• ಪ್ರಧಾನಮಂತ್ರಿ ದಕ್ಷತೆ ಮತ್ತು ನುರಿತ ಫಲಾನುಭವಿ ಯೋಜನೆ<br>• DNT/NT/SNTಗಳ ಆರ್ಥಿಕ ಸಬಲೀಕರಣಕ್ಕಾಗಿ ಯೋಜನೆ<br>• ಅಂಚಿನಲ್ಲಿರುವ/ಹಿಂದುಳಿದ ವ್ಯಕ್ತಿಗಳಿಗೆ ಜೀವನೋಪಾಯ ಮತ್ತು ಉದ್ಯಮಕ್ಕೆ ನೆರವು |
| 13 | | ಅಲ್ಪಸಂಖ್ಯಾತ ವ್ಯವಹಾರಗಳು | • ಅಲ್ಪಸಂಖ್ಯಾತ ಮಹಿಳೆಯರ ನಾಯಕತ್ವ ಅಭಿವೃದ್ಧಿಗಾಗಿ ನಯಿ ರೋಶನಿ ಯೋಜನೆ |



Scanned with ACE Scanner

| | | | |
|---|---|---|---|
| 14 | ಪರಿಸರ ಮತ್ತು ಜೀವವೈವಿಧ್ಯ | ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ | • ಹಸಿರು ಭಾರತಕ್ಕಾಗಿ ರಾಷ್ಟ್ರೀಯ ಮಿಷನ್<br>• ರಾಷ್ಟ್ರೀಯ ಕರಾವಳಿ ಮಿಷನ್ |
| 15 | | ಹೊಸ ಮತ್ತು ನವೀಕರಿಸಬಹುದಾದ ಶಕ್ತಿ | • ಬಯೋ ಎನರ್ಜಿ ಕಾರ್ಯಕ್ರಮ – ಬಯೋ ಪವರ್ (ಆಫ್ ಗ್ರಿಡ್)<br>• ಬಯೋ ಎನರ್ಜಿ ಕಾರ್ಯಕ್ರಮ – ಬಯೋಗ್ಯಾಸ್ ಕಾರ್ಯಕ್ರಮ (ಆಫ್ ಗ್ರಿಡ್)<br>• ಪವನ ಮತ್ತು ಇತರ ನವೀಕರಿಸಬಹುದಾದ ಶಕ್ತಿಗಾಗಿ ಕಾರ್ಯಕ್ರಮ<br>• ಸೌರಶಕ್ತಿ: ಸೌರಶಕ್ತಿ (ಗ್ರಿಡ್) ಮತ್ತು ಸೌರಶಕ್ತಿ (ಆಫ್-ಗ್ರಿಡ್) |
| 16 | ಉತ್ಪಾದಕರು/ ಸರಕು | ಆಹಾರ ಸಂಸ್ಕರಣಾ ಉದ್ಯಮಗಳು | • ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳನ್ನು ಔಪಚಾರಿಕಗೊಳಿಸುವ ಯೋಜನೆ<br>• ಪ್ರಧಾನಮಂತ್ರಿ ಕಿಸಾನ್ ಸಂಪದ (ಕೃಷಿ-ಸಾಗರ ಸಂಸ್ಕರಣೆ ಮತ್ತು ಕೃಷಿ ಸಂಸ್ಕರಣಾ ಕ್ಲಸ್ಟರ್‌ಗಳ ಅಭಿವೃದ್ಧಿ ಯೋಜನೆ) |
| 17 | | ಕೃಷಿ ಮತ್ತು ರೈತರ ಕಲ್ಯಾಣ | • ರಾಷ್ಟ್ರೀಯ ಜೇನುಸಾಕಣೆ ಜೇನು ಮಿಷನ್<br>• ತೋಟಗಾರಿಕೆ ಸಮಗ್ರ ಅಭಿವೃದ್ಧಿ ಮಿಷನ್<br>• ಈಶಾನ್ಯ ಪ್ರದೇಶಗಳ ಸಾವಯವ ಮೌಲ್ಯ ಸರಪಳಿ ಅಭಿವೃದ್ಧಿಯ ಮಿಷನ್ |

(ಮೂಲ: ಲೇಖಕರ ಸಂಕಲನ www.indiabudget.gov.in )

ಪಾಲುದಾರನೂ ತನ್ನ ಕರ್ತವ್ಯಗಳ ಬಗ್ಗೆ ತಿಳಿದುಕೊಂಡಿರಬೇಕು. ಸಹಕಾರ ಸಂಘವು ಎಲ್ಲ ಸದಸ್ಯರು ಹಾಗೂ ಆಡಳಿತ ಮಂಡಳಿಯ ನಡುವೆ ಮುಕ್ತಸಂವಹನ ಸಾಧ್ಯತೆಗಳನ್ನು ಹೊಂದಿರಬೇಕು. ನಿರ್ದೇಶಕ ಮಂಡಳಿಯು ಸಹಕಾರ ಸಂಘಗಳ ಆರ್ಥಿಕ ಸ್ಥಿತಿ ಮತ್ತು ಹೂಡಿಕೆಗಳನ್ನು ಪರಿಶೀಲಿಸಬೇಕು. ಸಹಕಾರ ಸಂಘಗಳ ಹಣಕಾಸಿನ ಮೇಲೆ ಕಟ್ಟುನಿಟ್ಟಾದ ನಿಯಂತ್ರಣವನ್ನು ಹೊಂದಿರಬೇಕು. ರಿಜಿಸ್ಟರ್‌ಗಳು, ದಾಖಲೆ ಪುಸ್ತಕಗಳನ್ನು ಸೂಕ್ತರೀತಿಯಲ್ಲಿ ನಿರ್ವಹಣೆಮಾಡಬೇಕು. ಲಾಭದಾಯಕ ಭವಿಷ್ಯಕ್ಕಾಗಿ ದಣಿವಿಲ್ಲದೆ ಕೆಲಸ ಮಾಡಬೇಕು.

### ಸದಸ್ಯರಿಗೆ ಶಿಕ್ಷಣ, ನಾಯಕರು ಮತ್ತು ಆಡಳಿತ ಮಂಡಳಿಗೆ ತರಬೇತಿ ಮತ್ತು ಅಭಿಪ್ರಾಯ ರೂಪಿಸಬಲ್ಲ ನಾಯಕರಿಗೆ ಮಾಹಿತಿ

ಶಿಕ್ಷಣ ಮತ್ತು ತರಬೇತಿ ಸಹಕಾರ ಚಳವಳಿಯ ಮುಖ್ಯಅಂಶಗಳಾಗಿವೆ. ಸಹಕಾರ ಸಂಘದ ಬೆಳವಣಿಗೆಗೆ ಸಂಘದ ಸದಸ್ಯರು, ನಿರ್ವಾಹಕರು ಮತ್ತು ನಾಯಕರಿಗೆ ನಿಯಮಿತ ತರಬೇತಿ ಅಗತ್ಯ.

### ಸಹಕಾರಿ ಉದ್ಯಮಶೀಲತೆಯನ್ನು ಉತ್ತೇಜಿಸುವಲ್ಲಿ ಸರ್ಕಾರದ ಪಾತ್ರ

ಕೇಂದ್ರ ಸರ್ಕಾರವು ವ್ಯವಸ್ಥಿತ ಮಧ್ಯಸ್ಥಿಕೆಗಳ ಮೂಲಕ ಭಾರತದಲ್ಲಿ ಸಹಕಾರಿ ಉದ್ಯಮಶೀಲತೆಯನ್ನು ಬಲಪಡಿಸಲು ಬೆಂಬಲ ಸೇವೆಗಳನ್ನು ನೀಡಿದೆ. ದೊಡ್ಡ ಪ್ರಮಾಣದ ಸಹಕಾರಿ ಉದ್ಯಮಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸುವ ಇಂತಹ ಹಲವಾರು ಕಾರ್ಯಕ್ರಮಗಳನ್ನು ಕೋಷ್ಟಕ 1 ರಲ್ಲಿ ಪಟ್ಟಿ ಮಾಡಲಾಗಿದೆ.

### ಉಪಸಂಹಾರ

ಸಹಕಾರಿ ಉದ್ಯಮಶೀಲತೆಯು ಒಂದರೊಡನೊಂದು ಸಂಬಂಧ ಹೊಂದಿರುವ ಉದ್ಯಮಗಳು ಬಳಕೆಯಾಗದ ಸಂಪನ್ಮೂಲಗಳನ್ನು ಇನ್ನೂ ತಲುಪಿರದ ಮಾರುಕಟ್ಟೆಯ ನಿರೀಕ್ಷೆಗಳೊಂದಿಗೆ ಹೊಂದಿಸುವ ನಾವಿನ್ಯತೆಗಳ ನಿರಂತರವಾದ ವಾಣಿಜ್ಯೀಕರಣವಾಗಿದೆ. ಸಂಪರ್ಕಜಾಲದಲ್ಲಿರುವ ಸ್ವತಂತ್ರ ಸಂಸ್ಥೆಗಳು ಮತ್ತು ಸೊಸೈಟಿಗಳು ಒಟ್ಟಾಗಿ ಕೆಲಸ ಮಾಡುವಾಗ, ಮೌಲ್ಯ ವಿತರಣೆಯ ಬದಲಿಗೆ ನಾವಿನ್ಯತೆಯ ಮೂಲಕ ಮೌಲ್ಯ ಸೃಷ್ಟಿಗೆ ಗಮನ ನೀಡಲಾಗುತ್ತದೆ. ಸಂಪರ್ಕಜಾಲದೊಳಗಿರುವ ಉದ್ಯಮಗಳ ಸಮುದಾಯದ ಸದಸ್ಯರು ಪರಸ್ಪರ ನಂಬಿಕೆಯಿಂದ ಇರುತ್ತಾರೆ. ಏಕೆಂದರೆ ಅವರು ಯೋಜನೆಗಳನ್ನು ಸಂಪನ್ಮೂಲವಾಗಿ ನೋಡುತ್ತಾರೆ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಒಟ್ಟಾಗಿ ಕೆಲಸ ಮಾಡುತ್ತಾರೆ.

ಸಹಕಾರ ಚಳವಳಿಗೆ ಸಹಾಯ ಮಾಡುವಲ್ಲಿ ಭಾರತ ಸರ್ಕಾರದ ಪ್ರಮುಖ ಗುರಿಯು ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಸ್ವಾವಲಂಬನೆಯನ್ನು ಉತ್ತೇಜಿಸುವುದು ಮತ್ತು ಹಸಿವು, ಬಡತನವನ್ನು ಕಡಿಮೆ ಮಾಡುವುದು. ಆದ್ದರಿಂದ ಸಹಕಾರಿ ಸಂಸ್ಥೆಗಳು ನ್ಯಾಯಯುತ ಹಾಗೂ ಸಮಾನ ಸಾಮಾಜಿಕ ಆರ್ಥಿಕ ಅಭಿವೃದ್ಧಿ ತತ್ವಗಳನ್ನು ಅನುಸರಿಸಬೇಕು ಎಂದು ಕೇಂದ್ರ ಸಹಕಾರ ಸಚಿವ ಶ್ರೀ ಅಮಿತ್ ಶಾ ಹೇಳುತ್ತಾರೆ.

ಸಮಸ್ಯೆಗಳು ಮತ್ತು ಸಂಭಾವ್ಯ ಪರಿಹಾರಗಳನ್ನು ಚರ್ಚಿಸಲು, ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು, ವ್ಯಾಪಾರ ಮೈತ್ರಿಗಳನ್ನು ಉತ್ತೇಜಿಸಲು ಮತ್ತು ಸಹಕಾರಿ ಉದ್ಯಮಶೀಲತೆಯಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಯುವಜನರು ಮತ್ತು ಮಹಿಳೆಯರನ್ನು ಪ್ರೇರೇಪಿಸಲು ವೇದಿಕೆಯನ್ನು ಒದಗಿಸುವುದು ಅತ್ಯಗತ್ಯ.

ಸದೃಢ ವ್ಯಾಪಾರ ತಂತ್ರಗಳನ್ನು ಅಭಿವೃದ್ಧಿಪಡಿಸುವಾಗ ಮತ್ತು ತಮ್ಮ ಉತ್ಪನ್ನಗಳು ಹಾಗೂ ಸೇವೆಗಳನ್ನು ಮಾರ್ಕೆಟಿಂಗ್ ಮಾಡಲು ಯುವಜನರಿಗೆ ಮತ್ತು ಮಹಿಳೆಯರಿಗೆ ಸಹಕಾರಿ ಗುರುತು, ಮೌಲ್ಯಗಳು ಮತ್ತು ತತ್ವಗಳನ್ನು ಕಲಿಸಬೇಕು.



Scanned with ACE Scanner

# ಮೀನುಗಾರಿಕೆ; ಆರ್ಥಿಕ ವಿಕಾಸಕ್ಕೆ ಅವಕಾಶ

* ಬಿ. ಕೆ. ಮಿಶ್ರಾ

ಮೀನುಗಾರಿಕೆಯು ಭಾರತದಲ್ಲಿ ವಿಕಾಸ ಹೊಂದುತ್ತಿರುವ ಕ್ಷೇತ್ರವಾಗಿದೆ. 8,000 ಕಿ.ಮೀ ಗಿಂತ ಹೆಚ್ಚಿನ ಕರಾವಳಿ ಪ್ರದೇಶ, 2 ಮಿಲಿಯನ್ ಚದರ ಕಿ.ಮೀ ಗಿಂತ ಹೆಚ್ಚಿನ ವಿಶಿಷ್ಟ ಆರ್ಥಿಕ ವಲಯ ಮತ್ತು ರಾಷ್ಟ್ರದ ಉದ್ದಗಲಕ್ಕೂ ಇರುವ ವ್ಯಾಪಕ ಸಿಹಿನೀರಿನ ಪಾತ್ರಗಳಿಂದಾಗಿ ಭಾರತ ದೇಶದ ಮೀನುಗಾರಿಕೆಯಲ್ಲಿ ಅಪಾರ ಆರ್ಥಿಕತೆ ಸಾಧಿಸುವ ಸಾಮರ್ಥ್ಯವನ್ನು ಹೊಂದಿದೆ. ಭಾರತವು ವಿಶ್ವದ 3ನೇ ಅತಿದೊಡ್ಡ ಮೀನು-ಉತ್ಪಾದಿಸುವ ದೇಶವಾಗಿದೆ, ಜಾಗತಿಕ ಮೀನು ಉತ್ಪಾದನೆಗೆ 7.93% ಕೊಡುಗೆ ನೀಡುತ್ತಿರುವ ಭಾರತ, ಮೀನು ಕೃಷಿಯಲ್ಲಿ ತೊಡಗಿಕೊಂಡಿರುವ ದೇಶಗಳಲ್ಲಿ ಜಾಗತಿಕವಾಗಿ ಎರಡನೇ ಅತಿದೊಡ್ಡ ದೇಶವಾಗಿದೆ. ಭಾರತೀಯ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸಿರುವ ಮೀನುಗಾರಿಕಾ ಕ್ಷೇತ್ರವು ಇಂದು ರಾಷ್ಟ್ರೀಯ ಜಿಡಿಪಿಗೆ ಸುಮಾರು ಒಂದು ಪ್ರತಿಶತದಷ್ಟು ಕೊಡುಗೆ ನೀಡುತ್ತದೆ. ಇದು ವೇಗವಾಗಿ ಬೆಳೆಯುತ್ತಿದ್ದು, ರಾಷ್ಟ್ರೀಯ ಆದಾಯಕ್ಕೆ ಮಾತ್ರವಲ್ಲದೆ ಭಾರತದ ರಫ್ತು, ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆ ಮತ್ತು ಉದ್ಯೋಗ ಸೃಷ್ಟಿಗೆ ಸಹ ತನ್ನದೇ ಕೊಡುಗೆ ನೀಡುತ್ತಿದೆ. ಇದು 2.8 ಕೋಟಿಗೂ ಹೆಚ್ಚು ಮೀನುಗಾರರು ಮತ್ತು ಮೀನು-ಕೃಷಿಕರಿಗೆ ಜೀವನೋಪಾಯದ ಮಾರ್ಗವಾಗಿದೆ. ಭಾರತವು ಉಪ್ಪುನೀರು ಮತ್ತು ತಣ್ಣೀರು ಸೇರಿದಂತೆ ಸಮುದ್ರ ಮತ್ತು ಒಳನಾಡಿನ ಎರಡೂ ವಲಯಗಳಲ್ಲಿ ಜಲಸಂಪನ್ಮೂಲಗಳ ಆಗರವಾಗಿದ್ದು ಗಮನಾರ್ಹ ಸಂಖ್ಯೆಯಲ್ಲಿ ನುರಿತ ಮಾನವಶಕ್ತಿ ಸಂಪನ್ಮೂಲ ಇದರಲ್ಲಿ ತೊಡಗಿಕೊಂಡಿದೆ. ಮೀನುಗಾರಿಕೆ ವಲಯದಿಂದ ದೇಶವು ವಾರ್ಷಿಕ



**ಮೀನುಗಾರಿಕೆ ವಲಯವು ಸಮುದ್ರ, ಒಳನಾಡು ಮತ್ತು ಉಪ್ಪುನೀರು ಮೀನುಗಾರಿಕೆಗಳಷ್ಟೇ ಅಲ್ಲದೆ ತಣ್ಣೀರು ಮತ್ತು ಅಲಂಕಾರಿಕ ಮೀನುಗಾರಿಕೆ ಮುಂತಾದ ಉಪ-ವಲಯಗಳನ್ನು ಹೊಂದಿದ್ದು ಸಾಕಷ್ಟು ವೈವಿಧ್ಯತೆಯಿಂದ ಕೂಡಿದೆ. ಭಾರತದಲ್ಲಿ 2021ರಲ್ಲಿ ಪ್ರಾರಂಭಿಸಲಾದ ಸಹಕಾರ ಸಚಿವಾಲಯದಿಂದಾಗಿ ದೇಶದಲ್ಲಿ ಮೀನುಗಾರಿಕೆ ಸಹಕಾರಿ ಅಂದೋಲನ ವೇಗ ಪಡೆದುಕೊಂಡಿತು ಮತ್ತು ಅಂದಿನಿಂದ, ಅದಕ್ಕೆ ಆದ್ಯತಾಪೂರ್ವಕ ಮತ್ತು ಕೇಂದ್ರೀಕೃತ ಗಮನ ಲಭ್ಯವಾಯಿತು. ಬದಲಾದ ಆರ್ಥಿಕ ಸನ್ನಿವೇಶದಲ್ಲಿ ಮೀನುಗಾರಿಕೆ ಸಹಕಾರ ಸಂಸ್ಥೆಗಳ ಪಾತ್ರವನ್ನು ಪ್ರತಿ ಹಂತದಲ್ಲೂ ಪರಿಗಣಿಸಬೇಕಾಗಿದ್ದು, ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಸುಸ್ಥಿರತೆಗಾಗಿ ಪ್ರಗತಿಪರ ಪೂರೈಕೆ ಮತ್ತು ಮೌಲ್ಯ ಸರಪಳಿಯನ್ನು ಅಭಿವೃದ್ಧಿಪಡಿಸಲು ಆರ್ಥಿಕ ಬೆಂಬಲ ನೀಡಬೇಕಾಗಿದೆ. ಭಾರತ ಸರ್ಕಾರವು ಸೂಕ್ತ ನೀತಿ-ನಿಯಮ ಮತ್ತು ಆರ್ಥಿಕ ಬೆಂಬಲದ ಮೂಲಕ ಮೀನುಗಾರಿಕೆ ಸಹಕಾರ ಕ್ಷೇತ್ರವನ್ನು ಉನ್ನತೀಕರಿಸಲು ಬದ್ಧವಾಗಿದೆ.**

* ಮಾಜಿ ಮ್ಯಾನೇಜಿಂಗ್ ಡೈರೆಕ್ಟರ್, ರಾಷ್ಟ್ರೀಯ ಮೀನುಗಾರಿಕೆ ಸಹಕಾರ ಒಕ್ಕೂಟ, ದೆಹಲಿ. ಇಮೇಲ್: bimalk1234@hotmail.com



Scanned with ACE Scanner

50,000 ಕೋಟಿ ರೂ.ಗಿಂತ ಹೆಚ್ಚಿನ ರಫ್ತು ಆದಾಯವನ್ನು ಹೊಂದಿದೆ.

### ಮೀನುಗಾರಿಕೆ ಅಭಿವೃದ್ಧಿ: ಭಾರತ ಸರ್ಕಾರದ ಒತ್ತು

ಮೀನುಗಾರಿಕೆ ಕ್ಷೇತ್ರದ ಮೂಲಕ ಭಾರತದ ಆರ್ಥಿಕತೆಯನ್ನು ಹೆಚ್ಚಿಸಲು, ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯನ್ನು (ಪಿಎಂಎಂಎಸ್‌ವೈ) 2019–20 ರಲ್ಲಿ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಒಟ್ಟು 20,050 ಕೋಟಿ ರೂ. ಮೀಸಲಿಟ್ಟ ಯೋಜನೆ ರೂಪಿಸಿದೆ. ಅಲ್ಲದೇ, ರೂ 7,522 ಕೋಟಿಯ ಮೀನುಗಾರಿಕೆ ಮತ್ತು ಜಲಕೃಷಿ ಮೂಲಸೌಕರ್ಯ ಅಭಿವೃದ್ಧಿ ನಿಧಿಯನ್ನು (ಎಫ್‌ಐಡಿಎಫ್) 2018–19 ರಲ್ಲಿ ರಚಿಸಲಾಗಿದೆ. ಮೀನು ಉತ್ಪಾದನೆಯನ್ನು ಮಾತ್ರವಲ್ಲದೆ ಮೀನುಗಾರಿಕೆ ವಲಯದಲ್ಲಿ ಮೂಲಸೌಕರ್ಯ ಅಭಿವೃದ್ಧಿಯನ್ನೂ ಉತ್ತೇಜಿಸುವ ಸಲುವಾಗಿ ಭಾರತ ಸರ್ಕಾರವು 2014ರಲ್ಲಿ ನೀಲಿ ಕ್ರಾಂತಿ ಪ್ರಾರಂಭಿಸಿತು. ಈ ವಲಯದಲ್ಲಿ ಆತ್ಮನಿರ್ಭರ ಭಾರತ್ ಯಶಸ್ವಿಯಾಗಿಸುವ ಸಲುವಾಗಿ ಉದ್ಯಮಶೀಲತೆಯ ಮೇಲೆ ಕೇಂದ್ರೀಕೃತವಾದ ಅನೇಕ ಫಲಾನುಭವಿ–ಆಧರಿತ ಯೋಜನೆಗಳನ್ನು ಪರಿಚಯಿಸಲಾಗಿದೆ. 2021 ರಲ್ಲಿ ಸಹಕಾರ ಸಚಿವಾಲಯದ ಸ್ಥಾಪನೆಯೊಂದಿಗೆ ದೇಶದಲ್ಲಿ ಮೀನುಗಾರಿಕೆ ಸಹಕಾರ ಆಂದೋಲನ ವೇಗವನ್ನು ಪಡೆದುಕೊಂಡಿದೆ. ಇದು ಆರ್ಥಿಕ ಅಭಿವೃದ್ಧಿಗೆ ಚಾಲನೆ ದೊರಕಿಸಲು, ಸಹಕಾರಿ ಸಂಸ್ಥೆಗಳು ಮತ್ತು ಅವುಗಳ ಸದಸ್ಯರನ್ನು ಬಲಪಡಿಸಲು ಮತ್ತು ಸಬಲೀಕರಣಗೊಳಿಸಲು ಭಾರತ ಸರ್ಕಾರವು ತೆಗೆದುಕೊಂಡ ಒಂದು ಮಹತ್ವದ ನಿರ್ಧಾರವಾಗಿದೆ.

### ಭಾರತದಲ್ಲಿ ಮೀನುಗಾರಿಕೆ ಸಹಕಾರಿ ಆಂದೋಲನ

ಭಾರತದಲ್ಲಿ ಮೀನುಗಾರಿಕೆ ಸಹಕಾರ ಆಂದೋಲನ 1913 ರಲ್ಲಿ ಪ್ರಾರಂಭವಾಯಿತು. ಮೊದಲ ಮೀನುಗಾರರ ಸಂಘವನ್ನು ಮಹಾರಾಷ್ಟ್ರದಲ್ಲಿ 'ಕರ್ಲಾ ಮಚ್ಛಿಮಾರ್ ಸಹಕಾರಿ ಸಂಘ' ಎಂಬ ಹೆಸರಿನಲ್ಲಿ ರಚಿಸಲಾಯಿತು. 110 ವರ್ಷಗಳ ಅವಧಿಯಲ್ಲಿ, ಭಾರತೀಯ ಮೀನುಗಾರಿಕೆ ಸಹಕಾರ ಆಂದೋಲನ ವಿವಿಧ ಹಂತದ ರಚನೆಗಳೊಂದಿಗೆ ಎಲ್ಲಾ ರಾಜ್ಯಗಳನ್ನು ತಲುಪಿದೆಯಾದರೂ, ಇನ್ನೂ ಅದರ ಸಂಪೂರ್ಣ ಸಾಮರ್ಥ್ಯವನ್ನು ಕ್ರಿಯಾಶೀಲಗೊಳಿಸಲಾಗಿಲ್ಲ.

ಈವರೆಗೆ ಒಟ್ಟು 24 ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ರಾಜ್ಯ ಮಟ್ಟದ ಮೀನುಗಾರಿಕೆ ಒಕ್ಕೂಟವನ್ನು ಹೊಂದಿವೆ. ಕೇವಲ ಮೂರು ರಾಜ್ಯಗಳು 6 ಪ್ರಾದೇಶಿಕ






ಒಕ್ಕೂಟಗಳನ್ನು ಹೊಂದಿವೆ. 126 ಜಿಲ್ಲೆಗಳು ಜಿಲ್ಲಾ ಮಟ್ಟದ ಮೀನುಗಾರಿಕಾ ಒಕ್ಕೂಟಗಳನ್ನು ಹೊಂದಿವೆ. ಒಟ್ಟಾರೆಯಾಗಿ, ಭಾರತದಲ್ಲಿ 27,391 ಪ್ರಾಥಮಿಕ ಮೀನುಗಾರಿಕಾ ಸಂಘಗಳಿದ್ದು, 39.57 ಲಕ್ಷ ಮೀನುಗಾರರು ಸದಸ್ಯರಾಗಿದ್ದಾರೆ. ಪ್ರತಿ ಸಂಘವು ಸರಾಸರಿ 144 ಮೀನುಗಾರರ ಸದಸ್ಯತ್ವವನ್ನು ಹೊಂದಿದೆ. ಪುದುಚೇರಿ, ತಮಿಳುನಾಡು, ಕರ್ನಾಟಕ ಮತ್ತು ಬಿಹಾರದಲ್ಲಿ 500ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಪ್ರಾಥಮಿಕ ಮೀನುಗಾರಿಕಾ ಸಂಘಗಳು ಕಂಡುಬಂದಿವೆ. ಅಸ್ಸಾಂ, ಬಿಹಾರ, ಕರ್ನಾಟಕ, ಕೇರಳ, ಹಿಮಾಚಲ ಪ್ರದೇಶ, ಒಡಿಶಾ, ತಮಿಳುನಾಡು, ದಮನ್ ಮತ್ತು ದಿಯು, ಲಕ್ಷದ್ವೀಪ, ಪುದುಚೇರಿ ಮುಂತಾದ 10 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತಿ ಸಂಘದ ಸದಸ್ಯತ್ವವು ರಾಷ್ಟ್ರೀಯ ಸರಾಸರಿಯಾದ 144ಕ್ಕಿಂತ ಹೆಚ್ಚಿದೆ (ಕೋಷ್ಟಕ 1)

### ಮೀನುಗಾರಿಕೆ ಸಹಕಾರ ಒಕ್ಕೂಟದ ಪಾತ್ರ

ನ್ಯಾಷನಲ್ ಫೆಡರೇಶನ್ ಆಫ್ ಫಿಶರ್ಸ್ ಕೋಆಪರೇಟಿವ್ಸ್ ಲಿಮಿಟೆಡ್ (ಫಿಶ್‌ಕೊಪ್‌ಫೆಡ್) ಭಾರತದಲ್ಲಿ ಮೀನುಗಾರಿಕಾ ಸಹಕಾರಿ ಆಂದೋಲನದ ಅಭಿವೃದ್ಧಿಗಾಗಿ ರಚಿಸಲಾದ ಉನ್ನತ ಮತ್ತು ರಾಷ್ಟ್ರೀಯ ಮಟ್ಟದ ಸಹಕಾರಿ ಸಂಸ್ಥೆಯಾಗಿದೆ. 1980 ರಲ್ಲಿ ನೊಂದಾಯಿಸಲ್ಪಟ್ಟ ಈ ಫೆಡರೇಶನ್ 1982 ರಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿ ಈಗ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ, ಭಾರತ ಸರ್ಕಾರ ಮತ್ತು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ಎನ್‌ಸಿಡಿಸಿ) ಸೇರಿದಂತೆ ದೇಶದಾದ್ಯಂತ 104 ಸದಸ್ಯ ಸಂಸ್ಥೆಗಳನ್ನು ಹೊಂದಿದೆ.

ಫಿಶ್‌ಕೊಪ್‌ಫೆಡ್ ದೇಶದ ಮೀನುಗಾರಿಕೆ ಸಹಕಾರಿ ಸಂಘಗಳ



Scanned with ACE Scanner

| ಕೋಷ್ಟಕ-1: ಭಾರತದಲ್ಲಿನ ಮೀನುಗಾರಿಕೆ ಸಹಕಾರಿಗಳ ಪ್ರಸ್ತುತ ರಚನೆ | | | | | | | |
|---|---|---|---|---|---|---|---|
| ಕ್ರ ಸಂ | ರಾಜ್ಯ/ಕೇಂದ್ರಾಡಳಿತ ಪ್ರದೇಶ | ಸಂಘಗಳ ಸಂಖ್ಯೆ (ಮಟ್ಟವಾರು) | | | ಒಟ್ಟು ಪ್ರಾಥಮಿಕ ಸಂಘದ ಸಂಖ್ಯೆಯ ಶೇಕಡಾವಾರು | ಸದಸ್ಯರ ಸಂಖ್ಯೆ | ಮೀನು-ಕೃಷಿಕರ ಸಂಖ್ಯೆ |
| | | ರಾಜ್ಯ | ಜಿಲ್ಲೆ | ಪ್ರಾಥಮಿಕ | | | |
| 1 | ಆಂಧ್ರ ಪ್ರದೇಶ | 1 | 13 | 2,810 | 10.26 | 2,86,410 | 102 |
| 2 | ಅರುಣಾಚಲ ಪ್ರದೇಶ | – | – | 11 | 0.04 | 230 | 21 |
| 3 | ಅಸ್ಸಾಂ | 1 | 2 | 520 | 1.90 | 90,000 | 173 |
| 4 | ಬಿಹಾರ | 1 | 5 | 528 | 1.93 | 4,10,007 | 777 |
| 5 | ಛತ್ತೀಸ್‌ಗಢ | 1 | 5 | 1671 | 6.10 | 55,685 | 33 |
| 6 | ಗೋವಾ | – | – | 26 | 0.09 | 1,503 | 58 |
| 7 | ಗುಜರಾತ್ | 1 | | 701 | 2.56 | 94,893 | 135 |
| 8 | ಹರಿಯಾಣ | – | – | 124 | 0.45 | 1,276 | 10 |
| 9 | ಹಿಮಾಚಲ ಪ್ರದೇಶ | – | – | 62 | 0.23 | 9,742 | 157 |
| 10 | ಜಾರ್ಖಂಡ್ | 1 | | 520 | 1.90 | 32,635 | 63 |
| 11 | ಕರ್ನಾಟಕ | 1 | – | 714 | 2.61 | 4,82,115 | 675 |
| 12 | ಕೇರಳ | 1 | – | 985 | 3.60 | 4,60,486 | 467 |
| 13 | ಮಧ್ಯಪ್ರದೇಶ | 1 | – | 2,734 | 9.98 | 96,817 | 35 |
| 14 | ಮಹಾರಾಷ್ಟ್ರ* | 1 | 36 | 3,775 | 13.78 | 3,32,636 | 88 |
| 15 | ಮಣಿಪುರ* | 1 | 3 | 800 | 2.92 | 14,258 | 18 |
| 16 | ಮೇಘಾಲಯ | 1 | – | 128 | 0.47 | 611 | 5 |
| 17 | ಮಿಜೋರಾಂ | 1 | 1 | 47 | 0.17 | 1,656 | 35 |
| 18 | ನಾಗಾಲ್ಯಾಂಡ್ | 1 | – | 370 | 1.35 | 9,234 | 25 |
| 19 | ಒಡಿಶಾ* | 1 | – | 775 | 2.83 | 1,54,318 | 199 |
| 20 | ಪಂಜಾಬ್ | – | 1 | 9 | 0.03 | 95 | 11 |
| 21 | ರಾಜಸ್ಥಾನ | 1 | 1 | 137 | 0.50 | 4,130 | 30 |
| 22 | ಸಿಕ್ಕಿಂ | – | – | 8 | 0.03 | 230 | 29 |
| 23 | ತಮಿಳುನಾಡು | 1 | 12 | 1,475 | 5.38 | 7,61,521 | 516 |
| 24 | ತೆಲಂಗಾಣ | 1 | – | 5,200 | 18.98 | 3,64,357 | 70 |
| 25 | ತ್ರಿಪುರಾ | 1 | – | 308 | 1.12 | 22,967 | 75 |
| 26 | ಉತ್ತರ ಪ್ರದೇಶ | 1 | 23 | 1,125 | 4.11 | 54,521 | 48 |




Scanned with ACE Scanner

| | | | | | | | |
|---|---|---|---|---|---|---|---|
| 27 | ಉತ್ತರಾಖಂಡ | 1 | 1 | 167 | 0.61 | 634 | 4 |
| 28 | ಪಶ್ಚಿಮ ಬಂಗಾಳ | 1 | 20 | 1,433 | 5.23 | 1,31,578 | 92 |
| 29 | ಅಂ. & ನಿ. ದ್ವೀಪಗಳು | – | 1 | 129 | 0.47 | 4,149 | 32 |
| 30 | ದಮನ್ ಮತ್ತು ದಿಯು | – | – | 19 | 0.07 | 3,176 | 167 |
| 31 | ಲಕ್ಷದ್ವೀಪ | – | – | 6 | 0.02 | 2,910 | 485 |
| 32 | ಜಮ್ಮು ಮತ್ತು ಕಾಶ್ಮೀರ | – | 1 | 6 | 0.02 | 162 | 27 |
| 33 | ಪುದುಚೇರಿ | 1 | 1 | 67 | 0.24 | 72,162 | 1077 |
| 34 | ಲಡಾಖ್ | – | – | 1 | 0.00 | 21 | 21 |
| ಒಟ್ಟು | 24 | 126 | 27,391 | 100 | 39,57,104 | 144 | |

ಮೂಲ: ಫಿಶ್‌ಕೊಪ್‌ಫೆಡ್ ಡೇಟಾ ಬ್ಯಾಂಕ್– ಸಂಬಂಧಪಟ್ಟ ರಾಜ್ಯಗಳು/ಕೇ. ಪ್ರಗಳಿಂದ ಸಂಗ್ರಹಿಸಲಾದ ಡೇಟಾ

ಗಮನಿಸಿ: * ಭಾರತದಲ್ಲಿ, 9 ಪ್ರಾದೇಶಿಕ ಮೀನುಗಾರಿಕೆ ಒಕ್ಕೂಟಗಳಿವೆ. ಒಡಿಶಾ, ಮಹಾರಾಷ್ಟ್ರ ಮತ್ತು ಮಣಿಪುರ ಕ್ರಮವಾಗಿ 6, 2 ಮತ್ತು 1 ಪ್ರಾದೇಶಿಕ ಮೀನುಗಾರಿಕೆ ಒಕ್ಕೂಟಗಳನ್ನು ಹೊಂದಿವೆ.

ಸಬಲೀಕರಣಕ್ಕೆ ಸಮರ್ಪಿತವಾಗಿದೆ. ಇದು ಇಂಟರ್‌ನ್ಯಾಷನಲ್ ಕೋಆಪರೇಟಿವ್ ಅಲೈಯನ್ಸ್‌ನ ಸದಸ್ಯ ಮತ್ತು ಇಂಟರ್‌ನ್ಯಾಷನಲ್ ಕೋಆಪರೇಟಿವ್ ಫಿಶರೀಸ್ ಆರ್ಗನೈಸೇಶನ್ (ಐಸಿಎಫ್‌ಓ) ಮತ್ತು ಏಶಿಯಾ ಮತ್ತು ಪೆಸಿಫಿಕ್‌ನ ಕೃಷಿ ಸಹಕಾರಿಗಳ ಅಭಿವೃದ್ಧಿಯ ನೆಟ್‌ವರ್ಕ್ (ಎನ್‌ಇಡಿಎಸಿ) ನ ಸದಸ್ಯ ಸಂಸ್ಥೆಯಾಗಿದೆ. ಫಿಶ್‌ಕೊಪ್‌ಫೆಡ್ ಪ್ರಾಥಮಿಕ ಮೀನುಗಾರಿಕೆ ಸಹಕಾರ ಸಂಘಗಳ ಅನುಕೂಲಕರ ಕಾರ್ಯಚರಣೆಗಾಗಿ ಹಲವಾರು ರಾಜ್ಯಗಳಲ್ಲಿ ತನ್ನನ್ನು ರೀಟೇಲ್ ಮತ್ತು ಸಗಟು ವ್ಯಾಪಾರದಲ್ಲಿ ತೊಡಗಿಸಿಕೊಂಡು ಮೀನು ಮಾರಾಟದ ಜೊತೆಗೆ ಮೀನುಗಾರಿಕೆ ವಲಯದಲ್ಲಿ ವಿವಿಧ ಪ್ರಚಾರ ಮತ್ತು ಕಲ್ಯಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಇದರಿಂದಾಗಿ ಅಡಚಣೆ–ಮುಕ್ತ ಮಾರ್ಕೆಟಿಂಗ್ ಚಾನಲ್‌ಗಳ ರಚನೆಯಾಗಿ ಮಾರಾಟಗಾರರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆಯುವಂತಾಗಿದೆ.



**ಮೀನುಗಾರಿಕೆ ಸಹಕಾರಿಗಳ ರಾಷ್ಟ್ರೀಯ ಡೇಟಾಬೇಸ್**


ಸಹಕಾರ ಸಚಿವಾಲಯದ ಸ್ಥಾಪನೆಯೊಂದಿಗೆ, ಮೀನುಗಾರಿಕಾ ಸಹಕಾರ ಸಂಘಗಳು ಆದ್ಯತಾಪೂರ್ವಕ ಮತ್ತು ಕೇಂದ್ರೀಕೃತ ಗಮನ ಪಡೆದಿವೆ. ದೇಶದ ಪ್ರಪ್ರಥಮ ಸಹಕಾರಿ ಸಚಿವ ಶ್ರೀ ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ ದೇಶದ ಪ್ರತಿ ಪಂಚಾಯತ್ ವ್ಯಾಪ್ತಿಯಲ್ಲಿಯೂ ಮೀನುಗಾರಿಕೆ ಸಹಕಾರಿ ಸಂಘಗಳನ್ನು ಸಂಘಟಿಸಿ ಮುಂಬರುವ ಐದು ವರ್ಷಗಳಲ್ಲಿ ಅವುಗಳ ಸಂಖ್ಯೆ 2 ಲಕ್ಷವನ್ನು ದಾಟಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಇದನ್ನು ತ್ವರಿತಗೊಳಿಸುವ ಸಲುವಾಗಿ ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ (ಎನ್‌ಎಫ್‌ಡಿಬಿ) ಮತ್ತು ಫಿಶ್‌ಕೊಪ್‌ಫೆಡ್ ಅನ್ನು ಸಂಬಂಧಿತ ರಾಜ್ಯ/ಕೇ.ಪ್ರ. ದ ಅಧಿಕಾರಿಗಳ ಸಮನ್ವಯದೊಂದಿಗೆ ನಿಯೋಜಿಸಲಾಗಿದೆ.

ಮೀನುಗಾರಿಕೆ ವಲಯವು ಸಮುದ್ರ, ಒಳನಾಡು ಮತ್ತು ಉಪ್ಪುನೀರು ಮೀನುಗಾರಿಕೆಗಳಷ್ಟೇ ಅಲ್ಲದೆ ತಣ್ಣೀರು ಮತ್ತು ಅಲಂಕಾರಿಕ ಮೀನುಗಾರಿಕೆ ಮುಂತಾದ ಉಪ–ವಲಯಗಳನ್ನು ಹೊಂದಿದ್ದು ಸಾಕಷ್ಟು ವೈವಿಧ್ಯತೆಯಿಂದ ಕೂಡಿದೆ. ಮೀನುಗಾರ ಮಹಿಳೆಯರು ಮೀನು ಸಂಸ್ಕರಣೆ ಮತ್ತು ಮಾರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಮತ್ತು ಮೀನುಗಾರಿಕೆ ಸಹಕಾರಿಗಳಲ್ಲಿ ಸಾಕಷ್ಟು ಸಕ್ರಿಯರಾಗಿದ್ದಾರೆ; ಇದಲ್ಲದೆ, ವಿಶೇಷ ಮೀನುಗಾರ ಮಹಿಳಾ ಸಹಕಾರ ಸಂಘಗಳಿವೆ. ಈ ಡೇಟಾಬೇಸ್, ವಲಯದಲ್ಲಿನ ಕೊರತೆಗಳನ್ನು ಗುರುತಿಸಲು ನಮಗೆ ಸಹಾಯ ಮಾಡುವುದರಿಂದ ಅವುಗಳನ್ನು ನಿವಾರಿಸುವ ಪ್ರಯತ್ನಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ಕೆಲವು ರಾಜ್ಯಗಳಲ್ಲಿ ಮೀನುಗಾರಿಕಾ ವಲಯದ ಪ್ರಾಥಮಿಕ ಸಂಘಗಳು, ಉದಾ: ಕೇರಳ ಮತ್ತು ಮಹಾರಾಷ್ಟ್ರ – ಉತ್ತಮ ಸಾಧನೆ ತೋರಿವೆ. ಈ ಸಂಘಗಳನ್ನು ಪಾವತಿಯುಕ್ತ ಕಾರ್ಯದರ್ಶಿ ಮೂಲಕ ವೃತ್ತಿಪರವಾಗಿ ನಿರ್ವಹಿಸುವ ಮತ್ತು ಪಿಎಸಿಎಸ್‌ಗಳಂತೆ ಯಾಂತ್ರೀಕರಣಗೊಳಿಸುವ ಅವಶ್ಯಕತೆ ಇದೆ. ಅತ್ಯುತ್ತಮ ಸದಸ್ಯತ್ವ ಬಲದೊಂದಿಗೆ ಮೀನುಗಾರಿಕೆ ಸಹಕಾರ ಸಂಘಗಳ ಕಾರ್ಯನಿರ್ವಹಣೆಯನ್ನು ಬಲಪಡಿಸಲು ಜಲಮೂಲಗಳು ಮತ್ತು ಉತ್ಪಾದನಾ ಘಟಕಗಳ ಮ್ಯಾಪಿಂಗ್ ಮಾಡುವ ಅಗತ್ಯವಿದೆ. ಫಿಶ್‌ಕೊಪ್‌ಫೆಡ್‌ನ ಅಧೀನದಲ್ಲಿ ಎಲ್ಲಾ ಮೀನುಗಾರಿಕೆ ಸಹಕಾರ ಸಂಸ್ಥೆಗಳನ್ನು ಮೇಲಿನ ಹಂತಗಳೊಂದಿಗೆ ಏಕೀಕರಣಗೊಳಿಸಿ ಅವುಗಳ ನೆಟ್‌ವರ್ಕಿಂಗ್ ಮತ್ತು ಪುನರ್ ರಚಿಸುವುದು ಅತ್ಯಗತ್ಯವಾಗಿದೆ..



Scanned with ACE Scanner



## ಮೀನುಗಾರಿಕೆ ಯಶಸ್ಸಿನ ಕಥೆಗಳು

ಕೇರಳದ ಮತ್ಸ್ಯಫೆಡ್, ಗುಜರಾತ್‌ನ ಗುಜರಾತ್ ಮೀನುಗಾರಿಕಾ ಕೇಂದ್ರ ಸಹಕಾರ ಸಂಘ (ಜಿಎಫ್‌ಸಿಸಿಎ) ಮತ್ತು ಪಶ್ಚಿಮ ಬಂಗಾಳದ ಬೆನ್‌ಫಿಶ್ ಅಲ್ಲದೇ, ಮಹಾರಾಷ್ಟ್ರ ರಾಜ್ಯ ಫೆಡರೇಶನ್, ತಮಿಳುನಾಡು ರಾಜ್ಯ ಒಕ್ಕೂಟ, ಎಂಪಿ ರಾಜ್ಯ ಒಕ್ಕೂಟ ಮತ್ತು ಎಪಿ ರಾಜ್ಯ ಫೆಡರೇಶನ್‌ನಂತಹ ಕೆಲವು ರಾಜ್ಯ ಒಕ್ಕೂಟಗಳು ಮೀನುಗಾರಿಕೆ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿವೆ. ಇತರ ರಾಜ್ಯಗಳ ಒಕ್ಕೂಟಗಳೂ ಉತ್ತಮ ಪ್ರಗತಿ ಸಾಧಿಸುತ್ತಿವೆ. ಈ ಸಹಕಾರಿ ಸಂಸ್ಥೆಗಳಲ್ಲಿ ಹೆಚ್ಚಿನವು ಉತ್ಪಾದನೆ, ಮಾರುಕಟ್ಟೆ ಮತ್ತು ಸದಸ್ಯರಿಗೆ ಸೇವೆಗಳನ್ನು ಒದಗಿಸುವಲ್ಲಿ ಉತ್ತಮವಾಗಿದೆ. ಪ್ರಾಥಮಿಕ ಮೀನುಗಾರಿಕಾ ಸಹಕಾರ ಸಂಘಗಳಿಗೆ ಮಾರ್ಗದರ್ಶನ ನೀಡಲು ಜಿಲ್ಲಾ ಮಟ್ಟದ ಒಕ್ಕೂಟಗಳ ಕಾರ್ಯನಿರ್ವಹಣೆಯ ಮೇಲೆ ಕೇಂದ್ರೀಕರಿಸುವ ಮತ್ತು ಅವುಗಳ ಪಾತ್ರವನ್ನು ಹೆಚ್ಚು ಪೂರ್ವಭಾವಿಯಾಗಿ ವ್ಯಾಖ್ಯಾನಿಸುವ ಅವಶ್ಯಕತೆಯಿದೆ.

**ಮತ್ಸ್ಯಫೆಡ್ – ಕೇರಳ**

1984ರಲ್ಲಿ ನೊಂದಾಯಿಸಲಾದ ಪ್ರಗತಿಪರ ರಾಜ್ಯ ಮಟ್ಟದ ಈ ಒಕ್ಕೂಟವು 668 ಪ್ರಾಥಮಿಕ ಮೀನುಗಾರಿಕೆ ಸಹಕಾರ ಸಂಘಗಳನ್ನು ಸದಸ್ಯರನ್ನಾಗಿ ಹೊಂದಿದೆ. ಒಕ್ಕೂಟವು ಕಳೆದ ಮೂರು ವರ್ಷಗಳಿಂದ ಸತತವಾಗಿ ರೂ 300 ಕೋಟಿಗೂ ಹೆಚ್ಚು ಒಟ್ಟು ವಹಿವಾಟು ಹೊಂದಿದೆ ಮತ್ತು ಮೀನುಗಳ ದೇಶೀಯ ಮಾರಾಟ ಮತ್ತು ರಫ್ತುಗಳಲ್ಲಿಯೂ ಉತ್ತಮ ಕಾರ್ಯ ದಾಖಲಿಸಿದೆ. ಇದು ಕೇರಳ ರಾಜ್ಯದಲ್ಲಿ ಸರಣಿ ಮೀನು ಚಿಲ್ಲರೆ ಮಾರಾಟ ಮಳಿಗೆಗಳನ್ನು ಹೊಂದಿದೆ ಮತ್ತು ಸ್ವಂತ ಬಲೆ-ತಯಾರಿಕೆ ಮತ್ತು ಸಂಸ್ಕರಣಾ ಘಟಕವನ್ನು ಹೊಂದಿದೆ. ತರಬೇತಿ ಮತ್ತು ಸಾಮಾಜಿಕ ಭದ್ರತಾ ಕ್ರಮಗಳ ಮೂಲಕ ಪ್ರಾಥಮಿಕ ಮೀನುಗಾರಿಕಾ ಸಹಕಾರಿ ಸಂಘಗಳನ್ನು ಸಬಲೀಕರಣಗೊಳಿಸುವಲ್ಲಿ ಫೆಡರೇಶನ್ ಸಕ್ರಿಯ ಪಾತ್ರ ವಹಿಸಿದೆ.

**ಗುಜರಾತ್ ಮೀನುಗಾರಿಕಾ ಕೇಂದ್ರ ಸಹಕಾರ ಸಂಘ (ಜಿಎಫ್‌ಸಿಸಿಎ)**

1956 ರಲ್ಲಿ ನೊಂದಾಯಿಸಲಾಗಿರುವ, ಜಿಎಫ್‌ಸಿಸಿಎ ಅತ್ಯಂತ ಹಳೆಯ ರಾಜ್ಯ ಒಕ್ಕೂಟಗಳಲ್ಲಿ ಒಂದಾಗಿದೆ, 308 ಪ್ರಾಥಮಿಕ ಮೀನುಗಾರಿಕೆ ಸಹಕಾರ ಸಂಘಗಳು ಇದರ ಸದಸ್ಯತ್ವ ಹೊಂದಿವೆ. ಒಕ್ಕೂಟವು 2021–22ರಲ್ಲಿ 544.23 ಕೋಟಿ ರೂ.ಗಳ ಗರಿಷ್ಠ ವಹಿವಾಟು ಹೊಂದಿದೆ. ಇದು ದೆಹಲಿಯಲ್ಲಿ ಯಶಸ್ವಿ ಮೀನು ಚಿಲ್ಲರೆ ಮಾರಾಟ ಮಳಿಗೆಗಳಲ್ಲದೆ ಯಾಂತ್ರಿಕೃತ ಮೀನುಗಾರಿಕೆ ದೋಣಿಗಳಿಗೆ ಇಂಧನವನ್ನು ಒದಗಿಸಲು ಡೀಸೆಲ್ ಮಳಿಗೆಗಳ ಸರಣಿಯನ್ನು ಹೊಂದಿದೆ. ಇದು ರಾಜ್ಯದ ಮೀನುಗಾರಿಕಾ ಸಹಕಾರ ಸಂಘಗಳನ್ನು ಬಲಪಡಿಸಿದೆ.

ಮೂಲ : ಫಿಶ್‌ಕೊಪ್‌ಫೆಡ್

**ರಾಷ್ಟ್ರೀಯ ಒಕ್ಕೂಟದ ಬಲವರ್ಧನೆ**

ಫಿಶ್‌ಕೊಪ್‌ಫೆಡ್ 1982–2020ರ ಅವಧಿಯಲ್ಲಿ ಅಪಘಾತ ವಿಮೆಯ ಮೂಲಕ ಬಡ ಮೀನುಗಾರರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿದೆ. ಅವರು ತಳಮಟ್ಟದಲ್ಲಿ ಮೀನುಗಾರರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಮತ್ತು ಪಿಎಂಎಂಎಸ್‌ವೈ ಮತ್ತು ಸಹಕಾರಿ ತತ್ವಗಳ ಬಗ್ಗೆ ಆನ್‌ಲೈನ್ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಜೊತೆಗೆ ಸೂಕ್ತವಾದ ಸಾಮರ್ಥ್ಯ ನಿರ್ಮಾಣದ ಪ್ರವರ್ತಕರಾಗಿದ್ದಾರೆ. ಫೆಡರೇಶನ್ ಅನ್ನು ಭಾರತ ಸರ್ಕಾರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಅಂತಿಮ ಅನುಷ್ಠಾನ ಸಂಸ್ಥೆ ಎಂಡ್ ಇಂಪ್ಲಿಮೆಂಟಿಂಗ್ ಏಜೆನ್ಸಿ (ಇಐಎ) ಎಂದು ಗುರುತಿಸಿದೆ. ಮೀನುಗಾರಿಕೆ ಸಹಕಾರಿ ಕ್ಷೇತ್ರದ ಸುಸ್ಥಿರ ಅಭಿವೃದ್ಧಿಗಾಗಿ ತರಬೇತಿ ಮತ್ತು ಸಾಮಾಜಿಕ-ಸುರಕ್ಷತಾ ಕಾರ್ಯಕ್ರಮಗಳಂತಹ ವಿವಿಧ ಯೋಜನೆಗಳ ಅಡಿಯಲ್ಲಿ ಈಕ್ವಿಟಿ ಬೆಂಬಲ ಮತ್ತು ಆರ್ಥಿಕ ಸಹಾಯದೊಂದಿಗೆ ಫೆಡರೇಶನ್



Scanned with ACE Scanner



ಅನ್ನು ಸಮರ್ಪಕವಾಗಿ ಬಲಪಡಿಸಬೇಕು. ಮೀನುಗಾರಿಕೆ ಸಹಕಾರಿ ವಲಯದಲ್ಲಿ ಎಫ್ಎಫ್‌ಪಿಓಗಳನ್ನು ಸಂಘಟಿಸುವಲ್ಲಿ ಫೆಡರೇಶನ್ ಮುಂದಾಳತ್ವವನ್ನು ತೆಗೆದುಕೊಳ್ಳಬಹುದು.

ದೇಶದಲ್ಲಿ ಮೀನುಗಾರಿಕೆ ಸಹಕಾರ ನಿರ್ವಹಣಾ ಸಂಸ್ಥೆಯನ್ನು ಸ್ಥಾಪಿಸುವ ಅಗತ್ಯವಿದೆ. ಭುವನೇಶ್ವರದಲ್ಲಿರುವ ಕೌಸಲ್ಯಗಂಗಾ ದೇಶದಲ್ಲೇ ಮಾನ್ಯತೆ ಪಡೆದ ಮೀನುಗಾರಿಕಾ ಕೇಂದ್ರವಾಗಿದೆ, ಇಲ್ಲಿ ಫಿಶ್‌ಕೊಪ್‌ಫೆಡ್ ತರಬೇತಿ ಕೇಂದ್ರವನ್ನು ಹೊಂದಿದ್ದು, ಇದನ್ನು ಯೋಜಿತ ಆದರೆ ಹಂತಹಂತವಾಗಿ ಮೀನುಗಾರಿಕೆ ಸಹಕಾರಿ ವಲಯದಲ್ಲಿ ಕೌಶಲ್ಯ ಅಭಿವೃದ್ಧಿಗಾಗಿ ಪ್ರಾದೇಶಿಕ ನೆಟ್‌ವರ್ಕ್‌ಗಳೊಂದಿಗೆ ರಾಷ್ಟ್ರೀಯ ಮೀನುಗಾರಿಕೆ ಸಹಕಾರಿ ನಿರ್ವಹಣೆ ಸಂಸ್ಥೆಯಾಗಿ ಮೇಲ್ದರ್ಜೆಗೇರಿಸಬಹುದು.

**ಆತ್ಮನಿರ್ಭರ ಭಾರತ ಅಭಿಯಾನ**

ಪ್ರಧಾನ ಮಂತ್ರಿಯವರು ಸರಿಯಾಗಿಯೇ ಹೇಳಿದಂತೆ, ಭಾರತವು ಸ್ವಾವಲಂಬಿಯಾಗುವ ಬಗ್ಗೆ ಮಾತನಾಡುವಾಗ, ಅದು ಸ್ವ-ಕೇಂದ್ರಿತ ವ್ಯವಸ್ಥೆಯನ್ನು ಪ್ರತಿಪಾದಿಸುವುದಿಲ್ಲ. "ಭಾರತದ ಸ್ವಾವಲಂಬನೆಯಲ್ಲಿ; ಇಡೀ ಪ್ರಪಂಚದ ಸಂತೋಷ, ಸಹಕಾರ ಮತ್ತು ಶಾಂತಿಯ ಬಗ್ಗೆ ಕಾಳಜಿ ಇದೆ. ಅವರು 'ಆತ್ಮನಿರ್ಭರ್ ಭಾರತ್ ಅಭಿಯಾನ' ಅಡಿಯಲ್ಲಿ 20 ಲಕ್ಷ ಕೋಟಿ ಆರ್ಥಿಕ ಪ್ಯಾಕೇಜ್ ಘೋಷಿಸಿದ್ದಾರೆ. ಈ ಕೇಂದ್ರೀಕೃತ ಹೂಡಿಕೆಯ ಪರಿಣಾಮವಾಗಿ ಮುಂಬರುವ ಐದು ವರ್ಷಗಳಲ್ಲಿ ಮೀನುಗಾರಿಕೆ ವಲಯದಲ್ಲಿ ಹೆಚ್ಚುವರಿಯಾಗಿ 55 ಲಕ್ಷ ನೇರ ಮತ್ತು ಪರೋಕ್ಷ ಲಾಭದಾಯಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯ ಉಂಟಾಗಿದೆ.

**ತೀರ್ಮಾನ**

ಭಾರತದಲ್ಲಿ ಪ್ರಾಥಮಿಕ ಮೀನುಗಾರಿಕೆ ಸಹಕಾರ ಸಂಘಗಳ ಮೂಲಕ ಸುಮಾರು 40 ಲಕ್ಷ ಜನರು ಆರ್ಥಿಕವಾಗಿ ಪ್ರಯೋಜನ ಪಡೆಯುತ್ತಿದ್ದಾರೆ. ಮೀನುಗಾರಿಕೆ ಸಹಕಾರಿ ಕ್ಷೇತ್ರವು ನಮ್ಮ ಸಮಾಜದಲ್ಲಿನ ದುರ್ಬಲ ವರ್ಗಗಳಿಗೆ ಜೀವನೋಪಾಯದ ಭದ್ರತೆ, ಪೌಷ್ಟಿಕಾಂಶದ ಭದ್ರತೆ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ. ಮೀನುಗಾರಿಕೆ ಸಹಕಾರ ಸಂಘಗಳು ತಮ್ಮ ಸೇವೆಯನ್ನು ಮನೆ ಬಾಗಿಲಿಗೆ ತಲುಪಿಸಲು ಮತ್ತು ಜನರಿಗೆ ಪೌಷ್ಟಿಕ ಆಹಾರ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಲು ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ತುರ್ತು ಅಗತ್ಯವಿದೆ. ಬದಲಾದ ಆರ್ಥಿಕ ಸನ್ನಿವೇಶದಲ್ಲಿ ಪ್ರತಿ ಹಂತದಲ್ಲೂ ಮೀನುಗಾರಿಕೆ ಸಹಕಾರ ಸಂಸ್ಥೆಗಳನ್ನು ತೊಡಗಿಸಿಕೊಂಡು, ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಸುಸ್ಥಿರತೆಗಾಗಿ ಪ್ರಗತಿಪರವಾದ ಪೂರೈಕೆ ಮತ್ತು ಮೌಲ್ಯ ಸರಪಳಿ ಅಭಿವೃದ್ಧಿಪಡಿಸಲು ಅದಕ್ಕೆ ಆರ್ಥಿಕ ಸಹಾಯ ನೀಡಬೇಕಿದೆ. ಭಾರತ ಸರ್ಕಾರವು ಪೂರಕ ನೀತಿ ಮತ್ತು ಆರ್ಥಿಕ ಸಹಾಯದ ಮೂಲಕ ಮೀನುಗಾರಿಕೆ ಸಹಕಾರ ಕ್ಷೇತ್ರವನ್ನು ಉನ್ನತೀಕರಿಸಲು ಬದ್ಧವಾಗಿದೆ.

ದೇಶದ ಗೃಹ ಮತ್ತು ಸಹಕಾರ ಸಚಿವರ ಸಮರ್ಥ ಮಾರ್ಗದರ್ಶನದೊಂದಿಗೆ ರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಸಚಿವಾಲಯ ಮತ್ತು ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ, ಈ ಎರಡೂ ಸಚಿವಾಲಯಗಳ ಒಗ್ಗೂಡಿತ ವಿಧಾನಗಳೊಂದಿಗೆ ಮೀನುಗಾರಿಕೆ ಸಹಕಾರಿ ಕ್ಷೇತ್ರವು ಅಭಿವೃದ್ದಿಯಲ್ಲಿ ವೇಗವರ್ಧನೆ ಪಡೆಯಲು ಸಿದ್ಧಗೊಂಡಿದೆ. ಸ್ವಾತಂತ್ರ್ಯೋತ್ತರ ಕಾಲದಿಂದ ಇರುವ ಕೊರತೆಯನ್ನು ನಿವಾರಿಸಲು ಬಂಡವಾಳ ಹೂಡಿಕೆಯ ಜೊತೆಗೆ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್), ಎನ್‌ಸಿಡಿಸಿ ಮತ್ತು ಎನ್‌ಎಫ್‌ಡಿಬಿಯಿಂದ ಸಹಾಯಹಸ್ತ ವಿಸ್ತರಿಸುವ ಕೆಲಸವಾಗಬೇಕಿದೆ. ಮೊದಲ ಹಂತವಾಗಿ, ಮುಂದಿನ 2 ರಿಂದ 3 ವರ್ಷಗಳಲ್ಲಿ ಗುಂಪು ಅಪಘಾತ ವಿಮಾ ಯೋಜನೆ (ಜಿಎಐಎಸ್) ಅಡಿಯಲ್ಲಿ ಒಂದು ಕೋಟಿ ಮೀನುಗಾರರಿಗೆ ವಿಮೆ ಯೋಜನೆ ಜಾರಿಗೊಳಿಸುವ ಅವಶ್ಯಕತೆಯಿದೆ. ಎಲ್ಲಾ 40 ಲಕ್ಷ ಮೀನುಗಾರಿಕಾ ಸಹಕಾರಿ ಸದಸ್ಯರಿಗೆ ಪಿಎಂಎಂಎಸ್‌ವೈ ಯೋಜನೆ ಮತ್ತು ಸಹಕಾರಿ ತತ್ವಗಳ ಬಗ್ಗೆ ಆನ್‌ಲೈನ್ ಜಾಗೃತಿ ತರಬೇತಿಯನ್ನು ಒದಗಿಸಬೇಕಿದೆ. ಮೀನುಗಾರಿಕಾ ಸಹಕಾರಿ ವಲಯವು ಬಡತನ ರೇಖೆಗಿಂತ ಕೆಳಗಿರುವ ದುರ್ಬಲ ವರ್ಗದ ಜನರನ್ನು ಪ್ರತಿನಿಧಿಸುವುದರಿಂದ, ದೇಶೀಯ ವ್ಯಾಪಾರೋದ್ಯಮದಲ್ಲಿ ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್ (ಅಮುಲ್) ರೀತಿಯಲ್ಲಿ ಬೆಳೆಯಬಹುದಾದ ಉತ್ಕೃಷ್ಟ ವ್ಯಾಪಾರ ಯೋಜನೆಗಾಗಿ ಅವರಿಗೆ ಮಾರುಕಟ್ಟೆ ಬೆಂಬಲವನ್ನು ಒದಗಿಸಲಾಗುತ್ತಿದೆ. ಪ್ರಾಥಮಿಕ ಮೀನುಗಾರಿಕೆ ಸಹಕಾರ ಸಂಸ್ಥೆಯ ಗಣಕೀಕರಣವು ಸೂಕ್ಷ್ಮ ಮಟ್ಟದಲ್ಲಿ ವಲಯದಲ್ಲಿಯೂ ಸಹ ಬೆಳವಣಿಗೆಯನ್ನು ವೇಗಗೊಳಿಸುತ್ತದೆ.





Scanned with ACE Scanner

# ಪ್ರಾಥಮಿಕ ಕೃಷಿ ಸಾಲ ಸಂಘಗಳಿಗೆ ಡ್ರೋನ್

* ಸಚಿನ್ ಕುಮಾರ್



**ಭಾರತವನ್ನು 2030ರ ವೇಳೆಗೆ ಜಾಗತಿಕ ಡ್ರೋನ್ ಹಬ್ ಆಗಿಸುವ ಮುನ್ನೋಟದೊಂದಿಗೆ ಪ್ರಧಾನಮಂತ್ರಿ ನಾಯಕತ್ವದಲ್ಲಿ ನಾಗರಿಕ ವಿಮಾನಯಾನ ಸಚಿವಾಲಯ ಸರಳೀಕೃತ ಡ್ರೋನ್ ನಿಯಮ 2021 ಅನ್ನು ಪ್ರಕಟಿಸಿದೆ. ಭಾರತದಲ್ಲಿ ಡ್ರೋನ್‌ಗಳ ತಯಾರಿಕೆ ಪ್ರೋತ್ಸಾಹಿಸಲು, ಕೇಂದ್ರ ಸರ್ಕಾರ 120 ಕೋಟಿ ರೂಪಾಯಿ ಮೌಲ್ಯದ ಡ್ರೋನ್ ಮತ್ತು ಬಿಡಿಭಾಗಗಳ ತಯಾರಿಕೆಗೆ ಉತ್ಪಾದನಾ ಸಂಪರ್ಕಿತ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಗೆ ಅನುಮೋದನೆ ನೀಡಿದೆ. ಆಮದಿನ ಮೇಲೆ ನಿರ್ಬಂಧ ಹೇರಿದ್ದು, ಸ್ಥಳೀಯ ಉತ್ಪಾದನೆಗೆ ದಾರಿ ಮಾಡಿಕೊಟ್ಟಿದೆ. ಡ್ರೋನ್ ತಂತ್ರಜ್ಞಾನ ಬಳಸಿ, ಕೃಷಿ ಚಟುವಟಿಕೆಗಳಿಗೆ ನಿಖರ ಮಾಹಿತಿ ಒದಗಿಸುವಂತೆ ಮಾಡಲು, ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಕೃಷಿ ವಲಯದ ಸಂಬಂಧಿತರಿಗೆ ಡ್ರೋನ್ ತಂತ್ರಜ್ಞಾನವನ್ನು ಕೈಗೆಟಕುವಂತೆ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಿದೆ. ಡಿಜಿಟಲ್ ತಂತ್ರಜ್ಞಾನ ಆಧರಿತ ಕೃಷಿ ವಲಯ 2025ರ ವೇಳೆಗೆ 65 ಶತಕೋಟಿ ಡಾಲರ್ ಭವಿಷ್ಯದ ಮೌಲ್ಯವನ್ನು ತೆರೆಯಬಲ್ಲದಾಗಿದೆ ಎಂಬ ಬಗ್ಗೆ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ವರದಿ ಬೆಳಕು ಚೆಲ್ಲಿದೆ. ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಯ ಮೇಲೆ ಡಿಜಿಟಲ್ ಕೃಷಿಯ ಪ್ರಭಾವ ಇನ್ನೂ ಹೆಚ್ಚಿರಲಿದೆ. ಡ್ರೋನ್‌ಗಳು ಕೃಷಿ ಜಿಡಿಪಿಗೆ ಶೇಕಡ 1 ರಿಂದ 1.5 ರಷ್ಟು ಉತ್ತೇಜನ ನೀಡಿ, ಕನಿಷ್ಠ 5 ಲಕ್ಷ ಹೊಸ ಉದ್ಯೋಗ ಸೃಷ್ಟಿಸಿ ಭಾರತೀಯ ಕೃಷಿಯ ರೂಪಾಂತರಕ್ಕೆ ನೆರವಾಗಬಲ್ಲವಾಗಿ ದೇಶವು ಹೊಸ ಡಿಜಿಟಲ್ ಯುಗದಲ್ಲಿ ಸಮೃದ್ಧಿಯಿಂದ ರಾರಾಜಿಸಲು ಪೂರಕವಾಗಲಿವೆ.**

ದೇಶಾದ್ಯಂತ ಸಹಕಾರ ಚಳವಳಿಯನ್ನು ಬಲಪಡಿಸಲು ಭಾರತ ಸರ್ಕಾರ ಆದ್ಯ ಗಮನ ನೀಡುತ್ತಿದೆ. ಪ್ರಧಾನಮಂತ್ರಿಗಳ 'ಸಹಕಾರದಿಂದ ಸಮೃದ್ಧಿ' ಆಶಯದ ಸಾಕಾರಕ್ಕಾಗಿ, ಸಹಕಾರ ವಲಯದ ಉತ್ತೇಜನಕ್ಕಾಗಿ 2021ರ ಜುಲೈ 6 ರಂದು ಸಹಕಾರ ಸಚಿವಾಲಯವನ್ನು ಕೂಡ ಸ್ಥಾಪಿಸಿದೆ. ಈ ಕನಸನ್ನು ನನಸು ಮಾಡಲು, ಆದ್ಯತೆಯ ಮೇರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಂಘ (ಪಿಎಸಿಎಸ್) ಗಳನ್ನು ಬಲಪಡಿಸಬೇಕಿದೆ ಎಂಬ ಅನಿಸಿಕೆ ಇದೆ.

* ಅಧೀನ ಕಾರ್ಯದರ್ಶಿಗಳು, ಸಹಕಾರ ಸಚಿವಾಲಯ. ಇ-ಮೇಲ್ : sachin.sinha@nic.in



Scanned with ACE Scanner

## ಪ್ರಗತಿಪರ ಕೃಷಿ ಮತ್ತು ಡ್ರೋನ್ ತಂತ್ರಜ್ಞಾನದ ಉದಾಹರಣೆ



ಮಹಾರಾಷ್ಟ್ರದ ಸತಾರಾ ಜಿಲ್ಲೆಯ ವಾಯ್ ತಾಲ್ಲೂಕಿನ ಒಜ್ಹಾರ್ಡೆ ಗ್ರಾಮದಲ್ಲಿ ಪ್ರಗತಿಪರ ಕೃಷಿಕರ ಪ್ರಾಬಲ್ಯವಿದೆ. ಈ ಹಳ್ಳಿಯಲ್ಲಿ 2,500 ಎಕರೆ ಭೂಮಿಯಿದೆ. ಮಹಾತ್ಮಗಾಂಧಿ ಓಜಾರ್ಡೆ ಪ್ರಾಥಮಿಕ ಕೃಷಿ ಸಹಕಾರ ಸಂಘ, ಗ್ರಾಮೀಣ ಭಾಗದ ಕೃಷಿಕರ ಸಾಲದ ಅಗತ್ಯಗಳನ್ನು ಪೂರೈಸಲು ಗ್ರಾಮ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹಳ್ಳಿಗಳ ಕೃಷಿ ಸದಸ್ಯರಿಗೆ ಬೆಳೆ ಸಾಲ ಒದಗಿಸಲು 1962 ರಲ್ಲಿ ಪಿಎಸಿಎಸ್ ಸ್ಥಾಪಿಸಲಾಯಿತು. ಹಸಿರು ಮನೆ, ಪಾಲಿಹೌಸ್, ನರ್ಸರಿ, ಎಕ್ಸಾಟಿಕ್ ತರಕಾರಿ, ಕಬ್ಬು, ಸ್ಟ್ರಾಬೆರಿ ಮತ್ತು ಅರಿಶಿನ ಕೃಷಿ ಮೊದಲಾದ ನಾವಿನ್ಯತಾ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಈ ಸಂಘ ರೈತರಿಗೆ ಬೆಂಬಲವಾಗಿ ನಿಂತಿದೆ. ವಿವಿಧೋದ್ದೇಶ ಸಹಕಾರ ಸಂಘದಂತೆ ಅನೇಕ ವಿಧದ ಸೇವೆ ಒದಗಿಸುವ ಉದ್ದೇಶದೊಂದಿಗೆ ಇದನ್ನು ಸ್ಥಾಪಿಸಲಾಗಿದೆ. ಈ ಸಂಘವನ್ನು ಅಲ್ಲಿನ ರಾಜ್ಯ ಸರ್ಕಾರ ಲೆಕ್ಕಪರಿಶೋಧನೆಗೆ 'ಎ' ಶ್ರೇಣಿಯಡಿ ಪರಿಗಣಿಸಿದೆ. 2003 ರಿಂದ ಈ ಸಂಘ ಗಣಕೀಕೃತವಾಗಿದೆ. ರೈತ ಸಮುದಾಯಕ್ಕಾಗಿ ಪಿಎಸಿಎಸ್ ಡ್ರೋನ್ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. 2021 ರಲ್ಲಿ ಡ್ರೋನ್ ಸಾಧನವನ್ನು ಪಿಎಸಿಎಸ್ ಮೂರು ಲಕ್ಷ ಐವತ್ತು ಸಾವಿರ ರೂಪಾಯಿಗೆ ಮೂರು ವರ್ಷಗಳ ವಾರಂಟಿಯೊಂದಿಗೆ ಹೈದರಾಬಾದ್ ಕಂಪೆನಿ, ಫ್ಲೈಮೋರ್‌ನಿಂದ ಖರೀದಿ ಮಾಡಿತ್ತು. ಈ ಕಂಪೆನಿಯು ಕೊಲ್ಹಾಪುರದಲ್ಲಿ ತನ್ನ ಕೇಂದ್ರವನ್ನು ಹೊಂದಿದೆ. ಈ ಡ್ರೋನ್ 10 ಲೀಟರ್ ರೀಚಾರ್ಜಬಲ್ ಲಿಥಿಯಂ ಬ್ಯಾಟರಿಯುಳ್ಳ ಟ್ಯಾಂಕ್ ಹೊಂದಿದ್ದು ಅರವತ್ತು ಅಡಿ ಎತ್ತರದಿಂದ ಜಮೀನುಗಳಿಗೆ ಒಳಸುರಿ ಸಿಂಪಡಿಸುವ ಸಾಮರ್ಥ್ಯ ಹೊಂದಿದೆ. ಒಂದೂವರೆ ಎಕರೆ ಪ್ರದೇಶದಲ್ಲಿ ಸಿಂಪಡಣೆಗೆ ಸುಮಾರು 7 ರಿಂದ 10 ನಿಮಿಷ ಬೇಕಾಗಬಹುದು. ಡ್ರೋನ್ ನಲ್ಲಿ ಬಳಸಿರುವ ಬ್ಯಾಟರಿ ಸೆಟ್ ನ ಬೆಲೆ ಐವತ್ತು ಸಾವಿರ ರೂಪಾಯಿ. ಪಿಎಸಿಎಸ್ ಬಳಿ ಮೂರು ಬ್ಯಾಟರಿ ಸೆಟ್‌ಗಳು ಮೀಸಲಿರಲಿವೆ. ಒಂದು ವರ್ಷದಲ್ಲಿ ಡ್ರೋನ್ ಗೆ ಯಾವುದೇ ನಿರ್ವಹಣೆ ಬೇಕಾಗಿರಲಿಲ್ಲ ಎಂಬುದನ್ನು ಗಮನಿಸಲಾಗಿದೆ. ಕೃಷಿ ಭೂಮಿಗೆ ರಸಗೊಬ್ಬರ, ಕೀಟನಾಶಕ ಮತ್ತು ಔಷಧಗಳನ್ನು ಸಿಂಪಡಿಸುವಲ್ಲಿ ಡ್ರೋನ್ ಗಳು ಕೃಷಿಕರಿಗೆ ನೆರವಾಗಿವೆ. ಡ್ರೋನ್ ಬಳಸಲು ತಾಂತ್ರಿಕ ವ್ಯಕ್ತಿಯೊಬ್ಬರಿಗೆ ತರಬೇತಿ ನೀಡಲಾಗಿದೆ. ಒಂದು ಎಕರೆಗೆ ರೂ.800/- ಬಾಡಿಗೆಗೆ ಡ್ರೋನ್ ಗಳನ್ನು ಒದಗಿಸಲಾಗುತ್ತದೆ. ಇದು ಪಿಎಸಿಎಸ್‌ಗಳಿಗೆ ಆದಾಯದ ಮೂಲವಾಗಿದೆ ಅಂದರೆ ರೈತರು ಕೊಡುವ ಬಾಡಿಗೆ ಹಣ ಆದಾಯ ಸೃಷ್ಟಿಗೆ ಪೂರಕವಾಗಿದೆ. ಸಂಘ ಸದಸ್ಯರಲ್ಲದ ರೈತರಿಗೂ ಕೂಡ ಡ್ರೋನ್ ಒದಗಿಸುತ್ತದೆ ಮತ್ತು ಈ ಡ್ರೋನ್ ಗಳ ಕಾರ್ಯಾಚರಣೆಗಾಗಿ ಇಬ್ಬರು ರೈತ ಸದಸ್ಯರ ಸೌಲಭ್ಯವನ್ನೂ ಕೊಡಲಾಗುತ್ತದೆ. ಡ್ರೋನ್ ತಂತ್ರಜ್ಞಾನದ ಲಾಭಗಳು ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ಪಿಎಸಿಎಸ್ ರೂಪಾಂತರಕ್ಕೆ ಕೊಡುಗೆ ನೀಡಬಲ್ಲವಾಗಿದೆ.






Scanned with ACE Scanner

ದೇಶದಲ್ಲಿ ಮೂರು ಹಂತದ (3-ಟೈಯರ್) ಅಲ್ಪಾವಧಿ ಸಹಕಾರ ಸಂಘ (ಎಸ್.ಟಿ.ಸಿ.ಸಿ.) ಗಳ ಪೈಕಿ ಪಿಎಸಿಎಸ್ ಅತಿ ತಳ ಹಂತದ್ದಾಗಿದೆ. 13 ಕೋಟಿ ರೈತರು ಪಿಎಸಿಎಸ್ ಸದಸ್ಯರಾಗಿದ್ದು, ದೇಶದ ಗ್ರಾಮೀಣ ಆರ್ಥಿಕತೆ ಬೆಳವಣಿಗೆಯಲ್ಲಿ ಅದು ಪ್ರಮುಖ ಪಾತ್ರ ವಹಿಸಿದೆ.

ಹೊಸ ಸಚಿವಾಲಯ ರಚನೆಯಾದ ನಂತರ, ಸಹಕಾರ ವಲಯದ ವ್ಯಾಪ್ತಿ ವಿಸ್ತಾರಗೊಂಡಿದೆ. ಇತ್ತೀಚೆಗೆ 2023ರ ಫೆಬ್ರವರಿ 2 ರಂದು ಸಹಕಾರ ಸಚಿವಾಲಯ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ (ಎಂಇಐಟಿವೈ), ನಬಾರ್ಡ್ ಮತ್ತು ಸಿಎಸ್‌ಸಿ ಇ-ಗವರ್ನೆನ್ಸ್ ಸರ್ವೀಸ್ ಇಂಡಿಯಾ ಲಿಮಿಟೆಡ್ ನಡುವೆ ಒಡಬಂಡಿಕೆಗೆ ಸಹಿ ಹಾಕಲಾಗಿದೆ. ಪಿಎಸಿಎಸ್‌ಗಳನ್ನು ಸಾಮಾನ್ಯ ಸೇವಾ ಕೇಂದ್ರ (ಸಿಎಸ್‌ಸಿ) ಗಳಂತೆ ಕಾರ್ಯನಿರ್ವಹಿಸುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಪಿಎಸಿಎಸ್‌ಗಳು ವಿವಿಧೋದ್ದೇಶ ಆಗುತ್ತಿದ್ದಂತೆಯೇ, ಗ್ರಾಮೀಣ ಜನರಿಗೆ ಅದರಲ್ಲೂ ದೇಶದ ದೂರದ ಭಾಗಗಳಲ್ಲಿ ಇರುವ ಸಣ್ಣ ಹಳ್ಳಿಗಳಲ್ಲೂ 300 ಕ್ಕೂ ಹೆಚ್ಚು ಸೇವೆಗಳು ಲಭ್ಯವಾಗಲಿವೆ. ಪಿಎಸಿಎಸ್‌ಗಳು ಸಹಕಾರ ಚಳವಳಿಯ ಪ್ರಾಥಮಿಕ ಕೇಂದ್ರಗಳಾಗಿವೆ. ಇವುಗಳಲ್ಲಿ 20 ಕ್ಕೂ ಹೆಚ್ಚು ಸೇವೆಗಳನ್ನು ಸಂಪರ್ಕಿತಗೊಳಿಸಿದಾಗ, ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಈ ಸರಪಳಿಯನ್ನು 'ಒನ್ ಪಿಎಸಿಎಸ್ ಒನ್ ಡ್ರೋನ್ (ಒಪಿಒಡಿ)' ಉಪಕ್ರಮದಡಿ ಪ್ರತಿ ಪ್ರಾಥಮಿಕ ಕೃಷಿ ಸಾಲ ಸಂಘಗಳಿಗೆ ಒಂದು ಡ್ರೋನ್ ಒದಗಿಸುವ ಮೂಲಕ ಬಲಪಡಿಸಬಹುದಾಗಿದೆ. ಇದು ಪಿಎಸಿಎಸ್‌ಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಲಿದೆ ಮತ್ತು ಈ ವಲಯದಲ್ಲಿ ಹೊಸ ಉದ್ಯಮಗಳ ಸೃಷ್ಟಿಗೆ ಉತ್ತೇಜನ ನೀಡಲಿದೆ. ಆದಾಗ್ಯೂ, ಮುನ್ನಡೆದು ಈ ಉಪಕ್ರಮ ಜಾರಿಗೊಳಿಸುವುದಕ್ಕೂ ಮುನ್ನ, ಡ್ರೋನ್ ಬಳಕೆ ಬಗೆಗೆ ಎಲ್ಲಾ ಆಯಾಮಗಳಲ್ಲೂ ಸಂಪೂರ್ಣವಾಗಿ ಚರ್ಚೆಯಾಗಬೇಕು.

## ಡ್ರೋನ್ ನೀತಿ

ಡ್ರೋನ್ ಒಂದು ಮಾನವರಹಿತ ವೈಮಾನಿಕ ಸಾಧನ (ಯುಎವಿ). ಮಾನವ ಪೈಲಟ್, ಸಿಬ್ಬಂದಿ ಅಥವಾ ಪ್ರಯಾಣಿಕರಿಲ್ಲದ ವಿಮಾನ. ಯುಎವಿಗಳು ಮಾನವರಹಿತ ವಿಮಾನ ವ್ಯವಸ್ಥೆ (ಯುಎಎಸ್) ಗಳ ಭಾಗವಾಗಿದ್ದು, ಭೂ ಆಧರಿತ ನಿಯಂತ್ರಕ ಮತ್ತು ಯುಎವಿಯೊಂದಿಗೆ ಸಂವಹನ ವ್ಯವಸ್ಥೆಯನ್ನು ಒಳಗೊಂಡಿದೆ. ಯುಎವಿಗಳ ಹಾರಾಟವನ್ನು ಮಾನವ ನಿರ್ವಾಹಕನ ಮುಖಾಂತರ ದೂರದಿಂದಲೇ ನಿಯಂತ್ರಿಸಬಹುದಾಗಿದೆ ಅಂದರೆ ರಿಮೋಟ್ ಪೈಲಟೆಡ್ ಏರ್‌ಕ್ರಾಫ್ಟ್ (ಆರ್‌ಪಿಎ) ಮಾದರಿಯಲ್ಲಿ ರಿಮೋಟ್ ಕಂಟ್ರೋಲ್ ಮೂಲಕ ಅಥವಾ ಡಿಗ್ರಿಗಳಲ್ಲಿ ಸ್ವಯಂ ನಿಯಂತ್ರಣದ ಮೂಲಕ ಅಂದರೆ ಸ್ವಯಂ ಹಾರಾಟ ಸಹಾಯಕದಿಂದ ಹಿಡಿದು ಮಾನವ ಹಸ್ತಕ್ಷೇಪವಿಲ್ಲದ ಸಂಪೂರ್ಣ ಯಾಂತ್ರೀಕೃತ ವಿಮಾನದವರೆಗೆ ಎಲ್ಲದರ ಹಾರಾಟ ನಡೆಸಬಹುದಾಗಿದೆ. 2030ರ ವೇಳೆಗೆ ಭಾರತವನ್ನು ಜಾಗತಿಕ ಡ್ರೋನ್ ಹಬ್ ಆಗಿಸುವ ಮುನ್ನೋಟದೊಂದಿಗೆ ಡ್ರೋನ್ ನಿಯಮ 2021 ಅನ್ನು ಪ್ರಕಟಿಸಲಾಗಿದೆ. ಭಾರತದಲ್ಲಿ ಡ್ರೋನ್ ಗಳ ತಯರಿಕೆಗೆ ಉತ್ತೇಜನ ನೀಡಲು, ಕೇಂದ್ರ ಸರ್ಕಾರ, 120 ಕೋಟಿ ರೂಪಾಯಿ ಮೌಲ್ಯದ ಡ್ರೋನ್ ಮತ್ತು ಬಿಡಿಭಾಗಗಳ ತಯಾರಿಕೆಗೆ ಉತ್ಪಾದನೆ ಆಧರಿತ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಗೆ ಅನುಮೋದನೆ ನೀಡಿದೆ ಮತ್ತು ಆಮದಿಗೆ ನಿರ್ಬಂಧ ಹೇರುತ್ತಾ, ಸ್ಥಳೀಯವಾಗಿ ತಯಾರಿಕೆಗೆ ದಾರಿ ಮಾಡಿಕೊಟ್ಟಿದೆ. ಮುಂದಿನ ಕೆಲವು ವರ್ಷಗಳಲ್ಲಿ ಡ್ರೋನ್ ಬಿಡಿಭಾಗಗಳ ವಲಯ 500 ಶತಕೋಟಿ ಡಾಲರ್ ಹೂಡಿಕೆ ಆಕರ್ಷಿಸಲಿದೆ ಎಂದು ನಿರೀಕ್ಷಿಸಲಾಗಿದೆ.

ಡ್ರೋನ್ ತಂತ್ರಜ್ಞಾನ ಬಳಸಿ ನಿಖರ ಕೃಷಿಗೆ ಉತ್ತೇಜನ ನೀಡಲು, ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಮಹತ್ವದ ಕ್ರಮ ಕೈಗೊಂಡಿದ್ದು, ಡ್ರೋನ್ ತಂತ್ರಜ್ಞಾನ ಕೃಷಿ ವಲಯದ ಸಂಬಂಧಿತರಿಗೆ ಸುಲಭವಾಗಿ ಕೈಗೆಟಕುವಂತಾಗಬೇಕು ಎಂದು ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಕೃಷಿ ಯಾಂತ್ರೀಕರಣದ ಉಪ-ಅಭಿಯಾನ (ಸಬ್-ಮಿಷನ್ ಆನ್ ಅಗ್ರಿಕಲ್ಚರಲ್ ಮೆಕನೈಸೇಷನ್ - ಎಸ್‌ಎಮ್‌ಎಮ್) ಗೆ ತಿದ್ದುಪಡಿ ಮಾಡಲಾಗಿದ್ದು, ಕೃಷಿ ಯಾಂತ್ರಿಕ ತರಬೇತಿ ಮತ್ತು ಪರೀಕ್ಷಾ ಸಂಸ್ಥೆಗಳು, ಐಸಿಎಆರ್ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳು (ಕೆವಿಕೆ) ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ದೊಡ್ಡ ಪ್ರಮಾಣದಲ್ಲಿ ಈ ತಂತ್ರಜ್ಞಾನದ ಬಳಕೆಯ ಬಗ್ಗೆ ರೈತರ ಹೊಲಗಳಲ್ಲಿ ಪ್ರದರ್ಶನ ನೀಡಲು, ಡ್ರೋನ್ ಖರೀದಿಗೆ ಶೇಕಡ 100 ರಷ್ಟು ಅಥವಾ 10 ಲಕ್ಷ ರೂಪಾಯಿಯಷ್ಟು, ಯಾವುದು ಕಡಿಮೆಯೋ ಅಷ್ಟು ಮೊತ್ತದ ಅನುದಾನ ನೀಡಲು ಅನುಮತಿ ನೀಡಲಾಗಿದೆ. ರೈತರ ಉತ್ಪನ್ನಗಳ ಸಂಘ (ಎಫ್‌ಪಿಒ)ಗಳು ರೈತರಿಗೆ ಪ್ರಾಯೋಗಿಕ ಪ್ರದರ್ಶನ ನೀಡಲು ಕೃಷಿ ಡ್ರೋನ್‌ನ ಶೇಕಡ 75ರಷ್ಟು ಮೊತ್ತದವರೆಗೆ ಅನುದಾನ ಪಡೆಯಲು ಅರ್ಹವಾಗಿವೆ.

ಡ್ರೋನ್ ಬಳಕೆಯ ಮೂಲಕ ಕೃಷಿ ಸೇವೆ ಒದಗಿಸಲು, ಡ್ರೋನ್ ಮತ್ತು ಅದರ ಪರಿಕರಗಳ ಒಟ್ಟು ವೆಚ್ಚದ ಶೇಕಡ 40 ರಷ್ಟು ಅಥವಾ ರೂ.4 ಲಕ್ಷ ರೂಪಾಯಿ, ಯಾವುದು ಕಡಿಮೆಯೋ ಅಷ್ಟು ಮೊತ್ತಕ್ಕೆ ರೈತರ ಸಹಕಾರ ಸಂಘ, ಎಫ್‌ಪಿಒ ಮತ್ತು ಗ್ರಾಮೀಣ ಉದ್ಯಮಿಗಳು ತೆರೆದಿರುವ ಕಸ್ಟಮ್ ಹೈರಿಂಗ್ ಸೆಂಟರ್ (ಸಿಎಚ್‌ಸಿ) ಮೂಲಕ ಹಣಕಾಸು ನೆರವು ಪಡೆಯಬಹುದಾಗಿದೆ. ಎಸ್‌ಎಂಎಎಮ್, ಆರ್‌ಕೆವಿವೈ ಅಥವಾ ಇತರ ಯೋಜನೆಗಳ ಹಣಕಾಸು ನೆರವಿನ ಮೂಲಕ ರೈತರ ಸಹಕಾರ ಸಂಘ, ಎಫ್‌ಪಿಒ ಮತ್ತು ಗ್ರಾಮೀಣ ಉದ್ಯಮಿಗಳಿಂದ ಸ್ಥಾಪಿಸಿಸಲ್ಪಡುವ ಈ ಸಿಎಚ್‌ಸಿಗಳು ಅಥವಾ ಹೈ-ಟೆಕ್ ಹಬ್ ಗಳು ಇತರ ಸಾಧನ, ಉಪಕರಣಗಳ ಜೊತೆಗೆ ಡ್ರೋನ್ ಅನ್ನೂ ಸಹ ಯಂತ್ರದಂತೆ ತಮ್ಮ ಪ್ರಾಜೆಕ್ಟ್ ಗಳಲ್ಲಿ ಸೇರ್ಪಡೆಗೊಳಿಸಿಕೊಳ್ಳಬಹುದಾಗಿದೆ. ಡ್ರೋನ್ ವಲಯದ ಸಂಬಂಧಿತರೊಂದಿಗೆ ವಿಸ್ತೃತ ಮಾತುಕತೆ ಬಳಿಕ, ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ (ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ), ಕೀಟನಾಶಕ ಮತ್ತು ಪೋಷಕಾಂಶ ಸಿಂಪಡಣೆಗೆ ಡೋನ್ ಬಳಕೆಗೆ ನಿರ್ದಿಷ್ಟ ಕಾರ್ಯಾನಿರ್ವಹಣಾ ವಿಧಾನಗಳನ್ನು (ಸ್ಟಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್‌ಗಳನ್ನು) ಪ್ರಕಟಿಸಿದೆ. ಇದು ಸುರಕ್ಷತೆಯ ಕಾರ್ಯವಿಧಾನ ಖಾತರಿಪಡಿಸುವ ಜೊತೆಜೊತೆಗೆ ಡ್ರೋನ್‌ಗಳ ಸಮರ್ಥ ಮತ್ತು ಪರಿಣಾಮಕಾರಿ ಬಳಕೆಗೆ ಮಾರ್ಗಸೂಚಿ ಮತ್ತು ಸೂಚನೆಗಳನ್ನು ಒಳಗೊಂಡಿದೆ.

## ಕೃಷಿ ವಲಯದಲ್ಲಿ ಡ್ರೋನ್ ಏಕೆ?

ಕಡಿಮೆ ಇಳುವರಿ, ಮಣ್ಣಿನ ಸವಕಳಿ, ನೀರಾವರಿ ಸೌಲಭ್ಯದ ಕೊರತೆ, ಸಂಪನ್ಮೂಲಗಳ ಅಸಮರ್ಥ ಬಳಕೆ, ರಾಸಾಯನಿಕ ರಸಗೊಬ್ಬರಗಳ ಅವೈಜ್ಞಾನಿಕ ಬಳಕೆ, ರಸಗೊಬ್ಬರಗಳಲ್ಲಿ ಅಸಮತೋಲಿತ ಎನ್‌ಪಿಕೆ (ಸಾರಜನಕ, ರಂಜಕ ಮತ್ತು



Scanned with ACE Scanner

ಪೊಟಾಷಿಯಂ) ಅನುಪಾತ, ಕಟಾವಿನ ನಂತರದ ನಿರ್ವಹಣಾ ವಿಧಾನದ ಕೊರತೆ, ಹಣಕಾಸು ಸೇವೆಗಳ ಕೊರತೆ ಮೊದಲಾದ ಸಮಸ್ಯೆಗಳನ್ನು ಭಾರತೀಯ ಕೃಷಿ ವಲಯ ಎದುರಿಸುತ್ತಿದೆ. ನಾಲ್ಕನೇ ಕೈಗಾರಿಕಾ ಕ್ರಾಂತಿಯ ತಂತ್ರಜ್ಞಾನಗಳು ಈ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವಾಗಿವೆ. ಡಿಜಿಟಲ್ ತಂತ್ರಜ್ಞಾನ ಆಧರಿತ ಕೃಷಿ 2025ರ ವೇಳೆಗೆ 65 ಶತಕೋಟಿ ಡಾಲರ್ ಭವಿಷ್ಯದ ಮೌಲ್ಯವನ್ನು ತೆರೆಯಬಲ್ಲದು ಎಂದು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (ಎಂಇಐಟಿವೈ) ವರದಿ ತಿಳಿಸಿದೆ. ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಮೇಲೆ ಡಿಜಿಟಲ್ ಕೃಷಿಯ ಪ್ರಭಾವ ಇನ್ನೂ ಹೆಚ್ಚಿರಲಿದೆ ಎಂದು ಹೇಳಲಾಗಿದೆ. ಕೃಷಿ ವಲಯದಲ್ಲಿ ಪ್ರಾಮುಖ್ಯತೆ ಪಡೆಯುತ್ತಿರುವ ಅಂತಹ ಒಂದು ತಂತ್ರಜ್ಞಾನಗಳ ಪೈಕಿ ಡ್ರೋನ್ ಸೇರಿದೆ. ಭೂಮಿ ಗುರುತಿಸುವಿಕೆ (ಲ್ಯಾಂಡ್ ಮ್ಯಾಪಿಂಗ್), ಕೃಷಿ ರಾಸಾಯನಿಕ ಮತ್ತು ದ್ರವ ರಸಗೊಬ್ಬರ ಸಿಂಪಡಣೆಗೆ (ನ್ಯಾನೋ ಯೂರಿಯಾ/ ನ್ಯಾನೋ ಡಿಎಪಿ/ ಸಾಗರಿಕಾ ಇತ್ಯಾದಿ), ಬೀಜಬಿತ್ತನೆ, ಬೆಳೆ ಇಳುವರಿ ಮೌಲ್ಯಮಾಪನ, ಡ್ರೋನ್ ಆಧಾರಿತ ವಿಶ್ಲೇಷಣೆಗಳಲ್ಲಿ ಡ್ರೋನ್ ಅನ್ನು ಪ್ರಮುಖವಾಗಿ ಬಳಸಲಾಗುತ್ತಿದ್ದು, ಪ್ರಾರಂಭಿಕ ಫಲಿತಾಂಶಗಳು ಭರವಸೆ ಹುಟ್ಟಿಸಿವೆ. ಕೃಷಿ ರಾಸಾಯನಿಕಗಳ ಸಿಂಪಡಣೆ ಮತ್ತು ದ್ರವ್ಯರೂಪದ ರಸಗೊಬ್ಬರಗಳು ಕಚ್ಚಾ ವಸ್ತುಗಳ ವೆಚ್ಚವನ್ನು ಶೇಕಡ 25 ರಿಂದ 90 ರಷ್ಟು ತಗ್ಗಿಸುವುದರಿಂದ, ಶ್ರಮದ ಪ್ರಮಾಣವನ್ನು ಶೇಕಡ 90 ರಷ್ಟು ಕಡಿಮೆ ಮಾಡಿರುವುದರಿಂದ ಮತ್ತು ಬೆಳೆ ಇಳುವರಿ ಹೆಚ್ಚಿಸುವುದರಿಂದ ಇವುಗಳು ಸಕ್ರಿಯ ಬಳಕೆಯ ಸಾಮರ್ಥ್ಯ ಹೊಂದಿವೆ. ಡ್ರೋನ್ ನ ಎರಡನೇ ಪ್ರಮುಖ ಉಪಯೋಗ ಎಂದರೆ ಮ್ಯಾಪಿಂಗ್. ಮ್ಯಾಪಿಂಗ್ ಗೆ ಡ್ರೋನ್‌ಗಳ ಬಳಕೆಯಿಂದ ನಿಖರ ಕೃಷಿ ಮತ್ತು ಭೂಮಿ ವಿವಾದಗಳನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ.

ಉತ್ತರ ಭಾರತದ ರಾಜ್ಯಗಳಾದ ಉತ್ತರಪ್ರದೇಶ, ಪಂಜಾಬ್ ಮತ್ತು ಹರ್ಯಾಣಗಳಲ್ಲಿ (ಒಟ್ಟಾರೆಯಾಗಿ ಶೇಕಡ 70–80 ಮತ್ತು ಅಕ್ಕಿ, ಗೋಧಿಗಳಿಗೆ ಶೇಕಡ 80–90 ರಷ್ಟು) ಕೃಷಿ ಯಾಂತ್ರೀಕರಣ ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ. ಆದಾಗ್ಯೂ ಚೀನಾ (ಶೇಕಡ 70ಕ್ಕಿಂತ ಹೆಚ್ಚು), ಬ್ರೆಜಿಲ್ (ಶೇಕಡ 75 ಕ್ಕಿಂತ ಹೆಚ್ಚು) ಮತ್ತು ಅಮೆರಿಕ (ಶೇಕಡ 95 ಕ್ಕಿಂತ ಹೆಚ್ಚು) ಮೊದಲಾದ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಉತ್ತರ ಭಾರತದಲ್ಲಿ ಯಂತ್ರಗಳ ಬಳಕೆ ಪ್ರಮಾಣ ಕಡಿಮೆಯೇ ಇದೆ. ಯಾಂತ್ರೀಕರಣದ ಕಡಿಮೆ ಪ್ರಮಾಣ (ಭಾರತದಲ್ಲಿ ಶೇಕಡ 50ಕ್ಕಿಂತ ಕಡಿಮೆ) ಕೊಯಿಲು ಮತ್ತು ಕಟಾವಿನ ನಂತರ ಹಂತಗಳಲ್ಲಿ ಅಸಮರ್ಥತೆಗಳು ಹೆಚ್ಚಲು ಕಾರಣವಾಗಿದೆ. ಇದು ಕಡಿಮೆ ಇಳುವರಿಗೂ ಪ್ರಮುಖ ಕಾರಣ ಎಂದು ಹೇಳಬಹುದು. ಕೃಷಿ ವಲಯದಲ್ಲಿ ಡ್ರೋನ್ ಬಳಕೆಯಿಂದ, ಸಂಪನ್ಮೂಲ, ಕಚ್ಚಾ ವಸ್ತುಗಳ ವೆಚ್ಚ (ಇನ್ಪುಟ್ ಕಾಸ್ಟ್) ಕಡಿಮೆ ಮಾಡುವ ಜೊತೆಗೆ, ಬೆಳೆ ಇಳುವರಿ ಹೆಚ್ಚಳ ಮಾಡಬಹುದಾಗಿದೆ. ಭಾರತದಲ್ಲಿ ಕೃಷಿಯು ಆಗ್ಗಾಗ್ಗೆ ಕೀಟಗಳ ಹಾವಳಿಗೆ ಒಳಪಡುವುದರಿಂದ, ಕೀಟನಾಶಕ/ ಶಿಲೀಂಧ್ರನಾಶಕ/ದ್ರವ ರಸಗೊಬ್ಬರಗಳು ಇತ್ಯಾದಿಗಳನ್ನು ಡ್ರೋನ್ ಮೂಲಕ ಸಿಂಪಡಿಸುವುದರಿಂದ ಕೀಟ ಬಾಧೆ ಮತ್ತು ಬೆಳೆಗಳ ಮೇಲೆ ಅವುಗಳ ಪರಿಣಾಮಗಳಿಂದ ಪಾರಾಗಬಹುದಾಗಿದೆ. ನಿರ್ವಹಣಾ ವೆಚ್ಚ ತಗ್ಗಿಸುವ ಜೊತೆಜೊತೆಗೇ, ಸಂಪನ್ಮೂಲಗಳ ಸಮರ್ಥ ಬಳಕೆಗೆ ಡ್ರೋನ್‌ಗಳು ಪರಿಣಾಮಕಾರಿ ಸಾಧನವಾಗಿ ರೈತರಿಗೆ ವರದಾನವಾಗಿವೆ. ಡ್ರೋನ್‌ಗಳು ಬಹೂಪಯೋಗಿ. ಸಮೀಕ್ಷಾ ಕಾರ್ಯ, ಬೀಜ ಬಿತ್ತನೆ, ಸಿಂಪಡಣೆ, ಪರಾಗಸ್ಪರ್ಶ ಮೊದಲಾವುಗಳಿಗೆ ತಂತ್ರಜ್ಞಾನ ಮತ್ತು ವ್ಯಾಪಾರ ಮಾದರಿಯ ವಿವಿಧ ಹಂತಗಳಲ್ಲಿ ಡ್ರೋನ್ ಬಳಸಬಹುದಾಗಿದೆ.

**ಒನ್ ಪ್ಯಾಕ್ಸ್ ಒನ್ ಡ್ರೋನ್: ಅಗತ್ಯ ಕ್ರಮ ಮತ್ತು ಲಾಭ**

ವಿವಿಧೋದ್ದೇಶ ಪಿಎಸಿಎಸ್‌ಗಳನ್ನು ದೇಶಾದ್ಯಂತ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ. ಪ್ರತಿ ಪಿಎಸಿಎಸ್‌ಗಳಿಗೆ ಒಂದು ಡ್ರೋನ್ ಒದಗಿಸಿದರೆ ಅದರ ಆರ್ಥಿಕ ಸ್ಥಿತಿಗತಿ ಬಲಗೊಳ್ಳಲಿದೆ. ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಎಫ್‌ಪಿಒಗಳಿಗೆ ಒದಗಿಸಿದಂತೆ ಪಿಎಸಿಎಸ್‌ಗಳು ಖರೀದಿಸುವ ಕೃಷಿ ಡ್ರೋನ್‌ಗಳ ವೆಚ್ಚದ ಶೇಕಡ 75 ರಷ್ಟು ಅನುದಾನವನ್ನು ಸರ್ಕಾರ ಒದಗಿಸಿದರೆ ಪಿಎಸಿಎಸ್‌ಗಳಿಗೆ ನೆರವಾಗಲಿದೆ.

ಡ್ರೋನ್ ಗಳು ಭಾರತೀಯ ಕೃಷಿಯ ರೂಪಾಂತರಕ್ಕೆ ನೆರವಾಗಬಲ್ಲದು, ಕೃಷಿ ಜಿಡಿಪಿಯನ್ನು ಶೇಕಡ 1 ರಿಂದ 1.5 ರಷ್ಟು ಹೆಚ್ಚಿಸಬಲ್ಲದು, ಕನಿಷ್ಠ 5 ಲಕ್ಷ ಹೊಸ ಉದ್ಯೋಗ ಸೃಷ್ಟಿಸಬಲ್ಲದು ಮತ್ತು ಉದಯೋನ್ಮುಖ ಸಮೃದ್ಧ ಡಿಜಿಟಲ್ ಯುಗದಲ್ಲಿ ದೇಶ ಪ್ರಜ್ವಲಿಸಲು ನೆರವಾಗಬಲ್ಲದಾಗಿದೆ. ಪಿಎಸಿಎಸ್‌ನೊಂದಿಗೆ ಸಂಪರ್ಕಿತವಾಗಿರುವ ಗ್ರಾಮೀಣ ಉದ್ಯಮಿಗಳು ಮಾನ್ಯತೆ ಪಡೆದ ಮಂಡಳಿಯಿಂದ 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆ ಉತ್ತೀರ್ಣರಾಗಿದ್ದು ಮತ್ತು ನಾಗರಿಕ ವಿಮಾನಯಾನ ಸಚಿವಾಲಯ (ಡಿಜಿಸಿಎ) ಸೂಚಿಸಿರುವ ಸಂಸ್ಥೆಗಳಿಂದ ಪೈಲಟ್ ಪರವಾನಗಿ ಪಡೆದಿದ್ದಲ್ಲಿ ಕೃಷಿ ಡ್ರೋನ್‌ಗಳ ಹಾರಾಟಕ್ಕೆ ಅರ್ಹರಾಗಿರುತ್ತಾರೆ. ದ್ರವ್ಯ ರಸಗೊಬ್ಬರಗಳ ಡ್ರೋನ್ ಸಿಂಪಡಣೆಗೆ ಉದ್ಯಮಗಳ ಅಭಿವೃದ್ಧಿಗೆ ಭಾರತ ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ರಸಗೊಬ್ಬರ ಇಲಾಖೆ ಪ್ರಕಟಿಸಿರುವ ಮಾರ್ಗಸೂಚಿಯಲ್ಲಿ, ಕೃಷಿ ಸಿಂಪಡಣೆ ಡ್ರೋನ್‌ನ ವಾಣಿಜ್ಯ ವೆಚ್ಚದ ಲೆಕ್ಕಾಚಾರ ಕೂಡ ಇದೆ. ಉದ್ಯಮಿಗಳ ಮತ್ತು ಪಿಎಸಿಎಸ್‌ನೊಂದಿಗೆ ಸಂಪರ್ಕಿತರಾಗಿರುವ ಸದಸ್ಯರ ವಾರ್ಷಿಕ ನಿವ್ವಳ ಲಾಭ 5 ರಿಂದ 6 ಲಕ್ಷ ರೂಪಾಯಿಯಷ್ಟಿರಲಿದೆ ಎಂದು ಮಾರ್ಗಸೂಚಿ ತಿಳಿಸಿದೆ.

**ಉಪಸಂಹಾರ**

ಕೃಷಿ ವಲಯದಲ್ಲಿ ಡ್ರೋನ್ ತಂತ್ರಜ್ಞಾನ ಅಳವಡಿಕೆ ಇನ್ನೂ ದೊಡ್ಡ ಸಮಸ್ಯೆಯಾಗಿಯೇ ಉಳಿದಿದೆ. ಕೆಲವು ಕಾರ್ಪೊರೇಟ್ ಕೃಷಿ ಸಂಸ್ಥೆಗಳು ಅಥವಾ ಸಿರಿವಂತ ರೈತರು ಅಥವಾ ಪ್ರಗತಿಪರ ಕೃಷಿಕರು ಮಾತ್ರ ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನ ಬಳಕೆಗೆ ಆಸಕ್ತಿ ತೋರಿದ್ದಾರೆ. ಒನ್ ಪ್ಯಾಕ್ಸ್ ಒನ್ ಡ್ರೋನ್ (ಒಂದು ಪ್ರಾಥಮಿಕ ಕೃಷಿ ಸಾಲ ಸಂಘ ಒಂದು ಡ್ರೋನ್) ಉಪಕ್ರಮದ ಮೂಲಕ ತಂತ್ರಜ್ಞಾನದ ಲಾಭ ಕಿರು ಮತ್ತು ಮಧ್ಯಮ ರೈತರನ್ನೂ ತಲುಪಬಹುದಾಗಿದೆ. ಯುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುತ್ತಾ ಗ್ರಾಮೀಣ ಯುವಕರಿಗೆ ತಮ್ಮ ಊರುಗಳಲ್ಲೇ ಉದ್ಯೋಗ ಒದಗಿಸಿ ಗ್ರಾಮೀಣ ಭಾರತದ ಸಾಮಾಜಿಕ–ಆರ್ಥಿಕ ಪ್ರಗತಿಯಲ್ಲಿ ಭಾರತೀಯ ಸಹಕಾರಿ ಸಂಘಗಳು ನಿರ್ಣಾಯಕ ಪಾತ್ರ ವಹಿಸಬಲ್ಲವಾಗಿವೆ. ಒನ್ ಪ್ಯಾಕ್ಸ್ ಒನ್ ಡ್ರೋನ್ ನ ಈ ಉಪಕ್ರಮ ತಂತ್ರಜ್ಞಾನದ ಮೂಲಕ ಸಹಕಾರ ವಲಯದ ರೂಪಾಂತರಕ್ಕೆ ಈ ಉಪಕ್ರಮ ಮಾದರಿಯಾಗಬಲ್ಲದು.



Scanned with ACE Scanner

# ಮರುಪೂರಣ ಕೃಷಿ ಸರಬರಾಜು ವ್ಯವಸ್ಥೆಯ ಸರಪಳಿ

* ಸ್ನೇಹಾ ಕುಮಾರಿ

**ಕೃಷಿ ಸಹಕಾರ ಸಂಘಗಳ ಆದ್ಯತೆ ಈಗ ಉತ್ಪಾದನೆ, ಅದರಲ್ಲಿಯೂ ಗುಣಮಟ್ಟದ ಉತ್ಪಾದನೆ, ಮಾರುಕಟ್ಟೆ ಮತ್ತು ಸರಬರಾಜಿನತ್ತ ವರ್ಗಾಯಿಸಲ್ಪಡುತ್ತಿದೆ. ಕೃಷಿ ಸಹಕಾರಿ ಸಂಘಗಳು ಉತ್ತಮ ದಾಸ್ತಾನು ವಿಭಾಗ, ಸಂಪನ್ಮೂಲಗಳ ಸಮರ್ಪಕ ನಿರ್ವಹಣೆ, ರೈತರಿಗೆ ಸಕಾಲದಲ್ಲಿ ಹಣ ಪಾವತಿ, ತ್ಯಾಜ್ಯ ಪ್ರಮಾಣವನ್ನು ಪರಿಮಿತಗೊಳಿಸುವಲ್ಲಿ ಪ್ರಗತಿ ಸಾಧಿಸುತ್ತಿವೆ, ಕೃಷಿ ಉತ್ಪನ್ನಗಳ ಪರಿಣಾಮಕಾರಿ ಸಂಚಲನ, ವಿಂಗಡಣೆ ಮತ್ತು ನಿರ್ವಹಣೆ, ದಕ್ಷ ಪೂರೈಕೆ ಸರಪಳ ರೂಪಿಸಲು ನೆರವಾಗಬಲ್ಲದು.**

ಸರಬರಾಜು ಸರಪಳಿಗೆ ಸಂಬಂಧಪಟ್ಟ ಸಂಸ್ಥೆಗಳು ಪದಾರ್ಥಗಳ ಸರಬರಾಜು ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿಯ ಕುರಿತು ಹೆಚ್ಚು ಚಿಂತಿತವಾಗಿರುತ್ತವೆ. ಇದು ಮೂಲ ಸಾಮಗ್ರಿಗಳು ಸುಸಜ್ಜಿತ ವಸ್ತುಗಳಾಗುವುದರಿಂದ ಹಿಡಿದು ಗ್ರಾಹಕರಿಗೆ ಈ ಉತ್ಪನ್ನಗಳ ಪೂರೈಕೆವರೆಗಿನ ಹಂತಗಳನ್ನು ಒಳಗೊಂಡಿದೆ. ಸರಬರಾಜು ಸರಪಳಿಯ ಯಶಸ್ಸಿನ ನಿಜವಾದ ಅಳತೆಗೋಲೆಂದರೆ ಇಡೀ ಸರಬರಾಜು ಸರಪಳಿಯಲ್ಲಿನ ಪ್ರತಿ ಘಟಕದ ನಡುವೆಯೂ ಎಂತಹ ಹೊಂದಾಣಿಕೆ ಇದೆ ಮತ್ತು ಅವುಗಳ ನಡುವೆ ಎಂತಹ ಅಂತರ್‌ಸಂಬಂಧವಿದೆ ಎನ್ನುವುದಾಗಿದೆ. ಸರಬರಾಜು ಸರಪಳಿ ಎನ್ನುವುದು ಕೃಷಿ ಉತ್ಪನ್ನಗಳು ರೈತರಿಂದ ಗ್ರಾಹಕರಿಗೆ ತಲುಪುವ ವ್ಯವಸ್ಥೆ. ಇದರಲ್ಲಿ ವಾಹನವೂ ಸೇರಿದಂತೆ ಸಂಪರ್ಕ ಜಾಲ, ಶೇಖರಣೆ, ವಿತರಣೆ, ಉಗ್ರಾಣ, ಸಂಶೋಧಾನಾತ್ಮಕ ನಿರ್ವಹಣೆ, ಉತ್ತಮೀಕರಣ, ಪರಸ್ಪರ ಸಹಕಾರ, ಸಂಸ್ಥೆಗಳು, ದಾಸ್ತಾನು, ಬಿತ್ತನೆಯಿಂದ ಕೊಳ್ಳುವವರವರೆಗೆ ಇರುವ ಚಕ್ರದ ಪರಿಶೀಲನೆ ಎಲ್ಲವೂ ಮುಖ್ಯವಾಗಿದೆ. ಗಮನಿಸಬೇಕಾದ ಸಂಗತಿ ಎಂದರೆ ಇಂತಹ ಅಂಶಗಳು ವಾತಾವರಣ ಬದಲಾವಣೆ, ಮಾರುಕಟ್ಟೆಯ ಸ್ಥಿತಿಸ್ಥಾಪಕತ್ವ, ಮಾರುಕಟ್ಟೆಯ ದರ ಮೊದಲಾದ ಸಂಗತಿಗಳನ್ನು



ಅವಲಂಬಿಸಿವೆ. ವಾತಾವರಣದಲ್ಲಿನ ಬದಲಾವಣೆ ಕೃಷಿಯ ಮೇಲಿನ ಒತ್ತಡಕ್ಕೂ ಕೂಡ ಕಾರಣವಾಗಬಲ್ಲದಾಗಿದೆ.

### ಸರಬರಾಜು ಸರಪಳಿ ನಿರ್ವಹಣೆಯ ಪ್ರಾಮುಖ್ಯತೆ

ಕೃಷಿ ಸರಬರಾಜು ಸರಪಳಿಯು ಆಹಾರ ಭದ್ರತೆ ಮತ್ತು ಸುಸ್ಥಿರ ಕೃಷಿ ಬೆಳವಣಿಗೆಯನ್ನು ಬೇರೆ ಬೇರೆ ಪಾಲದಾರರನ್ನು ಒಗ್ಗೂಡಿಸುವ ಮೂಲಕ ಖಾತರಿಪಡಿಸುತ್ತದೆ. ಪಾಲುದಾರರು ಎಂದರೆ ರೈತರು, ಹಸನುಗೊಳಿಸುವವರು, ಸಂಗ್ರಹಕಾರರು, ಸಗಟು ವ್ಯಾಪಾರಿಗಳು, ವಿತರಕರು, ಮಾರಾಟಗಾರರು ಮತ್ತು ಗ್ರಾಹಕರು ಎಲ್ಲರೂ ಸೇರುತ್ತಾರೆ. ರೈತರು ಈ ಸರಬರಾಜು ಸರಪಳಿಯನ್ನು ಧಾನ್ಯಸಂಗ್ರಹ ಮಾರುಕಟ್ಟೆ ಹಾಗೂ ಸರಕು ವಿತರಣೆಗಾಗಿ ಹೆಚ್ಚಾಗಿ ಅವಲಂಬಿಸಿರುತ್ತಾರೆ. ಸರಬರಾಜು ಸರಪಳಿಯ ನಿರ್ವಹಣೆ ಯಶಸ್ಸು ದಾಸ್ತಾನಿನ ಸಮಸ್ಯೆಗಳು, ಸಾಗಣೆಯ ಸಮಸ್ಯೆಗಳು, ಪ್ರಯೋಗಶೀಲತೆ – ಇವೆಲ್ಲವುಗಳಿಗೆ ಸರಿಯಾದ ಹಣ ಮತ್ತು ಮಾನವ ಸಂಪನ್ಮೂಲ ವಿನಿಯೋಗಿಸುವ ಜಾಣ್ಮೆಯನ್ನು ಅವಲಂಬಿಸಿದೆ.

### ಕೃಷಿ ಸರಬರಾಜು ಸರಪಳಿಯಲ್ಲಿ ಸಹಕಾರಿ ರಂಗದ ಪಾತ್ರ

ಸಹಕಾರಿ ರಂಗವು ತಾಂತ್ರಿಕ, ಆರ್ಥಿಕ ಮತ್ತು ನಿರ್ವಹಣಾ ರಂಗದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ರೈತರ,

* ಸಹ ಪ್ರಾಧ್ಯಾಪಕರು, ಸಿಂಬಯಾಸಿಸ್ ಸ್ಕೂಲ್ ಆಫ್ ಎಕನಾಮಿಕ್ಸ್, ಸಿಂಬಯಾಸಿಸ್ ಇಂಟರ್ ನ್ಯಾಷನಲ್ (ಡೀಮ್ಡ್ ಯೂನಿವರ್ಸಿಟಿ), ಪುಣೆ
ಇ-ಮೇಲ್ : snehakumari1201@gmail.com




Scanned with ACE Scanner



ಉತ್ಪಾದಕರ ಸಂಘಟನೆ (ಎಫ್‌ಪಿಓ) ಕ್ಲಸ್ಟರ್ ಆಧರಿತ ವ್ಯಾಪಾರಿ ಸಂಘಟನೆ (ಸಿಬಿಬಿಓ) ಮಾರುಕಟ್ಟೆ ಸೊಸೈಟಿಗಳು ಕೃಷಿ ಒಳಸುರಿಗಳ ಸಗಟು ಖರೀದಿ, ಕೃಷಿ ಸಲಹಾ ಸೌಲಭ್ಯ ಸಮೂಹ ಮಾರುಕಟ್ಟೆ ಮೊದಲಾದ ವೈವಿಧ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತವೆ. ಸಹಕಾರಿ ಸಂಘಗಳು ಸಾಲದ ಸೌಲಭ್ಯ, ಕೃಷಿಗೆ ಸೂಕ್ತ ಅಗತ್ಯ ಅಂಶಗಳು (ಬೀಜಗಳು, ರಸಗೊಬ್ಬರ, ಕೃಷಿಅಗತ್ಯ ರಾಸಾಯನಿಕಗಳು, ಕೃಷಿ ಸಾಮಗ್ರಿಗಳು ಮತ್ತು ಜೈವಿಕಗೊಬ್ಬರ) ಮೊದಲಾದವನ್ನು ಪಡೆಯಲು ಸಹಾಯ ಮಾಡುತ್ತವೆ.

### ಸಹಕಾರಿ ಸಂಗ್ರಹ ಮತ್ತು ಸರಬರಾಜು ಸರಪಳಿ

ಕೃಷಿ ಸಹಕಾರ ಸಂಘಗಳ ಮೇಲಿನ ಒತ್ತು ದೃಷ್ಟಿಕೋನದಲ್ಲಿ ಮಹತ್ತರ ಬದಲಾವಣೆಯನ್ನು ಬಂದಿದೆ. ಮಾರುಕಟ್ಟೆ ಮತ್ತು ಪರಿಷ್ಕರಣದ ಜೊತೆಗೆ ಉತ್ಪಾದನೆಗಿಂತ ಗುಣಾತ್ಮಕ ಉತ್ಪಾದನೆಗೆ ಮಹತ್ವ ಸಿಕ್ಕಿದೆ. ಕೃಷಿ ಸಹಕಾರಿ ಸಂಘಗಳು ಈಗ ಸಂಪನ್ಮೂಲಗಳ ಸೂಕ್ತ ನಿರ್ವಹಣೆ, ರೈತರಿಗೆ ಸಕಾಲದಲ್ಲಿ ಹಣ ಸಂದಾಯ, ತ್ಯಾಜ್ಯ ಪ್ರಮಾಣವನ್ನು ಮಿತಗೊಳಿಸುವುದು, ವ್ಯವಸ್ಥಿತವಾದ ಕ್ರಮಾಂಕ ನೀಡಿಕೆ, ವಿಂಗಡಣೆ, ಕೃಷಿ ಉತ್ಪನ್ನಗಳ ನಿರ್ವಹಣೆ ಎಲ್ಲವೂ ಉತ್ತಮ ಸರಬರಾಜು ಸರಪಳಿ ನಿರ್ಮಾಣಕ್ಕೆ ಕಾರಣವಾಗುತ್ತವೆ.




ಚಿತ್ರ 1 : ಸಹಕಾರಿ ಸಂಘಗಳ ಮೂಲಕ ಸರಬರಾಜು ಸರಪಳಿ ನಿರ್ವಹಣೆ


### ದಾಸ್ತಾನು ಮತ್ತು ಸರಬರಾಜು ಸರಪಳಿಯ ವ್ಯವಸ್ಥೆ

ಈಗಿನ ಮಹತ್ವದ ಬೆಳವಣಿಗೆಯಲ್ಲಿ ಸ್ವತಂತ್ರ ಭಾರತದ ಮೊದಲ ಸಹಕಾರಿ ಸಚಿವರಾಗಿರುವ ಶ್ರೀ ಅಮಿತ್ ಶಾ ಅವರ ಸಮರ್ಥ ನಾಯಕತ್ವದಲ್ಲಿ ಸಹಕಾರಿ ಚಳವಳಿಯು ವ್ಯಾಪಕ ಬೆಳವಣಿಗೆಯನ್ನು ಕಂಡಿದೆ. ಪ್ರಾಥಮಿಕ ಕೃಷಿ ಸಹಕಾರ ಸಾಲ ಸಂಘಗಳು ಈಗ ಬಹುಮುಖಿ ಆಯಾಮದ ಬೆಳವಣಿಗೆಯನ್ನು ಕಾಣಲಿದ್ದು ಬೇರೆ ಬೇರೆ ವಲಯಗಳನ್ನು ಪ್ರವೇಶಿಸಲಿವೆ. ಅವುಗಳಲ್ಲಿ ಮೀನುಗಾರಿಕೆ, ಡೈರಿ, ಗ್ರಾಮೀಣ ಪ್ರದೇಶದಲ್ಲಿ ಉಗ್ರಾಣಗಳ ನಿರ್ಮಾಣ, ಆಹಾರ ಧಾನ್ಯಗಳ ಕೊಳ್ಳುವಿಕೆ, ಕೃಷಿ ಸಾಮಗ್ರಿ (ಬೀಜ, ಗೊಬ್ಬರ) ಎಲ್.ಪಿ.ಜಿ/ಓ.ಎನ್.ಜಿ ಪೆಟ್ರೋಲ್ ವಿತರಣೆ, ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಗಳು, ಸಮಾನ ಸಹಕಾರಿ ಕೇಂದ್ರಗಳು, ನ್ಯಾಯ ಬೆಲೆ ಅಂಗಡಿಗಳು, ಸಮುದಾಯ ನೀರಾವರಿ, ವ್ಯಾಪಾರಿ ಸಂಬಂಧಿತ ಚಟುವಟಿಕೆಗಳು ಮುಂತಾದವು ಸೇರಿವೆ. ರೈತ ಸಹಕಾರಿ ಸಂಘಗಳು ಗುಣಮಟ್ಟಕ್ಕೆ ಒತ್ತು ನೀಡ ಬೇಕು ಇದಕ್ಕಾಗಿ ಪ್ರಯೋಗಶೀಲ ಉಪಕರಣಗಳು ಮತ್ತು ಮಾಹಿತಿ ನಿರ್ವಹಣೆ ಬಹಳ ಮುಖ್ಯವಾದ ಅಂಶಗಳಾಗಿವೆ.

ಕೃಷಿ ಸಹಕಾರ ಸಂಘಗಳು ಈಗ ಬಹುಸೇವಾ ಕೇಂದ್ರಗಳಾಗಿ ಮಾರ್ಪಟಿದ್ದು ಸಾಲ ಪಡೆಯುವ ಸಂದರ್ಭದಲ್ಲಿಯೇ ರೈತರು ತಮ್ಮ ಉತ್ಪನ್ನಗಳ ಮಾರುಕಟ್ಟೆಯ ಬಗ್ಗೆ ಕೂಡ ಯೋಜಿಸಬಹುದು. ಸಂಘಗಳು ದಾಸ್ತಾನು ಮತ್ತು ಸರಬರಾಜು ಕೇಂದ್ರಗಳಾಗಿ ಕೂಡ ಹಳ್ಳಿಗಳಲ್ಲಿ ಕಾರ್ಯ ನಿರ್ವಹಿಸುತ್ತವೆ. ಕಾಲ ಕಳೆದಂತೆ ಇವುಗಳು ಕೃಷಿ ಸಾಮಗ್ರಿ ಮತ್ತಿತರ ಅಂಶಗಳ್ಳು ಒದಗಿಸುವುದರ ಜೊತೆಗೆ ದಾಸ್ತಾನಿನ ಅನುಕೂಲವನ್ನು ಕೂಡ ನೀಡಲಿವೆ.



Scanned with ACE Scanner




ಇತ್ತೀಚಿನ ದಿನಗಳಲ್ಲಿ ಸಹಕಾರ ಸಂಘಗಳು ಕೃಷಿಕರಿಗೆ ಮನೆ ಬಾಗಿಲಿಗೆ ಸೂಕ್ತ ಕೃಷಿ ವಿಚಾರಗಳನ್ನು ತಿಳಿಸುವ ಮತ್ತು ದಾಸ್ತಾನಿನ ಅಗತ್ಯವನ್ನೂ ಕೂಡ ಒದಗಿಸುವ ಮೂಲಕ ಗುಣಮಟ್ಟದ ಉತ್ಪಾದನೆಗೆ ಕಾರಣವಾಗಿವೆ. ಗ್ರಾಹಕರನ್ನು ಗುರುತಿಸುವುದು, ವಿಂಗಡಣೆ ಮತ್ತು ಕ್ರಮ ನೀಡಿಕೆ ಮತ್ತು ರಕ್ಷಣೆ, ವಿತರಣೆ, ಸಾಗಣಿಕೆ ವ್ಯವಸ್ಥೆ, ಸಣ್ಣ ಮತ್ತು ಅತಿ ಸಣ್ಣ ಹಿಡಿವಳಿದಾರರಿಗೆ ಮಾಹಿತಿ, ಬೆಳೆಗೆ ಅಗತ್ಯ ಸರಬರಾಜು ಘಟಕ ಜೋಡಣೆ, ಪ್ಯಾಕಿಂಗ್ ವ್ಯವಸ್ಥೆ, ಸಾವಯವ ಬೆಳೆಗೆ ಅಗತ್ಯ ಸಾಮಗ್ರಿ ನೀಡಿಕೆ, ಸಂಘಟಿತ ಯೋಜನೆಗಳು, ಜೈವಿಕ ಉತ್ಪನ್ನ ಘಟಕಗಳು, ವ್ಯಾಕ್ಸಿಂಗ್ ವ್ಯವಸ್ಥೆ, ಬೆಳೆಗೆ ಅಗತ್ಯ ಸರಬರಾಜು ಘಟಕಗಳ ನಿರ್ವಹಣೆ ಇಂತಹ ಅನೇಕ ಸಂಗತಿಗಳಿಗೆ ಕೃಷಿ ಸಹಕಾರ ಸಂಘಗಳು ಸೌಕರ್ಯ ಒದಗಿಸುತ್ತಿವೆ.

### ಸರಬರಾಜು ಸರಪಳಿಯ ಸಮಸ್ಯೆಗಳ ನಿರ್ವಹಣೆ

ಸಹಕಾರಿ ಸಂಘಗಳು ಸರಬರಾಜು ಸರಪಳಿಯ ನಿರ್ವಹಣೆಯ ಜೊತೆಗೆ ವಿಪತ್ತುಗಳನ್ನೂ ಕೂಡ ನಿರ್ವಹಿಸ ಬೇಕಾಗುತ್ತದೆ. ಈ ಸಮಸ್ಯೆಗಳು ಗುಣಮಟ್ಟದ ವಿಚಾರದಲ್ಲಿ, ಮಾನವ ಸಂಪನ್ಮೂಲದ ಬಳಕೆಯಲ್ಲಿ, ಮಾರುಕಟ್ಟೆಯ ಏರಿಳಿತಗಳಲ್ಲಿ, ಹವಾಮಾನ ವೈಪರೀತ್ಯದಲ್ಲಿ, ಸಾಗಾಣಿಕೆಯ ವಿಳಂಬದಲ್ಲಿ, ಕಚ್ಚಾ ವಸ್ತುಗಳ ಪೂರೈಕೆಯಲ್ಲಿ, ದಕ್ಷತೆ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ, ಹಣಕಾಸು, ಪ್ಯಾಕಿಂಗ್, ಮಾರುಕಟ್ಟೆ ಮುಂತಾದ ಅಂಶಗಳಲ್ಲಿ ಉಂಟಾಗಬಹುದು. ಈ ಸಮಸ್ಯೆಗಳನ್ನು ಡಿಜಿಟಲೀಕರಣ ಮತ್ತು ದತ್ತಾಂಶಗಳ ನಿರ್ವಹಣೆಯ ಮೂಲಕ ಸಾಧಿಸ ಬಹುದು, ಸರಬರಾಜು ಸರಪಳಿಯಲ್ಲಿನ ದತ್ತಾಂಶಗಳ ಮೂಲಕ ಗಾತ್ರ, ಬಹುಮುಖ, ವೈವಿಧ್ಯ, ವೇಗ ಮೊದಲಾದ ಅಂಶಗಳನ್ನು ಸಹಕಾರಿ ಸಂಘಗಳು ನಿರ್ವಹಿಸಬಲ್ಲವು.

### ಸರಬರಾಜು ಸರಪಳಿ ನಿರ್ವಹಣೆಯ ಪೂರ್ವರಂಗ

ಸಹಕಾರಿ ಸಂಘಗಳು ಸರಬರಾಜು ಸರಪಳಿಯಲ್ಲಿ ಯಶಸ್ವಿ ಮಾದರಿಯನ್ನು ತರುವುದರ ಮೂಲಕ ಸಮಸ್ಯೆಗಳನ್ನು ದೂರ ಮಾಡ ಬಲ್ಲವು. ಇದು ನಿಯಂತ್ರಣ, ಮರು ಬಳಕೆ, ಮರುಪೂರಣ ಮೂರನ್ನೂ ಒಳಗೊಂಡಿದೆ. ಇದರಿಂದ ತ್ಯಾಜ್ಯ ಪ್ರಮಾಣದಲ್ಲಿ ಕುಸಿತ ಉಂಟಾಗುವುದು, ಪೂರ್ವರಂಗದಲ್ಲಿ ಗಟ್ಟಿತನವನ್ನು ತರುವ ಮೂಲಕ ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸಬಹುದಾಗಿದೆ.

### ಸಮಾರೋಪ


ಸಹಕಾರ ಸಚಿವಾಲಯವು ಇತ್ತೀಚೆಗೆ ಮೂರು ರಂಗಗಳಲ್ಲಿ ರಾಷ್ಟ್ರೀಯ ಮಟ್ಟದ ಸಹಕಾರ ಸಂಘಗಳನ್ನು ಸ್ಥಾಪಿಸಲು ಸೂಚನೆಯನ್ನು ಹೊರಡಿಸಿದೆ. ಗುಣಮಟ್ಟದ ಬೀಜಗಳ ಉತ್ಪಾದನೆಯ ಸಂಘ, ಕೃಷಿ ರಫ್ತು ಸಂಘ, ಸಾವಯವ ಸಂಬಂಧ ಮೂಡಿಸುವ ಸಂಘ ಇವುಗಳಲ್ಲಿ ಸೇರಿವೆ. ಈ ಸಹಕಾರಿ ಸಂಘಗಳನ್ನು ರೂಪಿಸಿ ಬೆಳೆಸಲು ದಕ್ಷ ಸರಬರಾಜು ಸರಪಳಿ ನಿರ್ವಹಣೆಯು ಅಗತ್ಯವಾಗಿದೆ. ಸ್ಥಾಪನೆ, ನಿರ್ವಹಣೆ ಮತ್ತು ಬೆಳವಣಿಗೆಯನ್ನು ಸದಸ್ಯ ಸಹಕಾರ ಸಂಘಗಳು ನಿರ್ವಹಿಸಬೇಕು. ಬೀಜ ಬಹುರಾಜ್ಯವ್ಯಾಪಿ ಸಹಕಾರಿ ಸಂಘವು ಸುಮಾರು ರೂ 500 ಕೋಟಿಗಳಷ್ಟು ಮೂಲಧನವನ್ನು ಹೊಂದಿರುತ್ತದೆ. ಉತ್ಪಾದನಾ ಸಂಘವು ಸರಬರಾಜು ಸರಪಳಿಯನ್ನು ದಕ್ಷಗೊಳಿಸುವ ಮೂಲಕ ಕೃಷಿ ಬೀಜಗಳ ಉತ್ಪಾದನೆ, ಪರಿಷ್ಕರಣೆ, ದಾಸ್ತಾನು, ವಿತರಣೆಯನ್ನು ಗಟ್ಟಿಗೊಳಿಸುವ ಪ್ರಯತ್ನವಾಗಿದ್ದರೆ ಸಾವಯವ ವಸ್ತುಗಳ ಸಂಘವು ಸಾವಯವ ಆಹಾರದ ಮಾರುಕಟ್ಟೆಯನ್ನು ಗಟ್ಟಿಗೊಳಿಸಲಿದೆ. ಪ್ರಮಾಣೀಕರಣ



Scanned with ACE Scanner

## ಕಚ್ಚಾ ವಸ್ತು ನಿರ್ವಹಣೆಯಿಂದ ಗುಣಮಟ್ಟ ವರ್ಧನೆಯವರೆಗೆ ಸಹಕಾರಿ ಸಂಘಗಳ ಯಶಸ್ವಿ ಪಯಣ

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ತಮ್ಮ ಜನಪ್ರಿಯವಾದ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ 'ವೆಂಕಟೇಶ್ವರ ಕೋ ಅಪರೇಟಿವ್ ಪವರ್ ಅಂಡ್ ಆಗ್ರೋ ಪ್ರೋಸೆಸಿಂಗ್ ಲಿಮಿಟೆಡ್'ನ ಪ್ರಸ್ತಾಪವನ್ನು ಮಾಡಿದರು. ಸದೃಢ ಸಾಂಸ್ಥಿಕ ಸ್ತರವನ್ನು ಹೊಂದಿರುವ ಇದು ರೈತರು ಮತ್ತು ನಿವೃತ್ತ ಸೈನಿಕರಿಂದ ರೂಪುಗೊಂಡಿದೆ. 2019ರಲ್ಲಿ ಶಿವಾಜಿ ದೋಲೆಯವರಿಂದ ಇದು ಸ್ಥಾಪಿತವಾಯಿತು. ಈಗ ಸುಮಾರು 20,000 ರೈತರನ್ನು ಸದಸ್ಯರಾಗಿ ಹೊಂದಿರುವ ಇದು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ತನ್ನ ಕಾರ್ಯ ಬಾಹುಳ್ಯವನ್ನು ಹೊಂದಿದೆ. ಈ ಸಂಸ್ಥೆಯು ಉತ್ಪಾದನೆ, ಪರಿಷ್ಕರಣೆ, ಮಾರುಕಟ್ಟೆ, ಕೃಷಿ ಉತ್ಪನ್ನಗಳ ರಫ್ತಿನಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡಿದೆ. ಸಹಕಾರಿ ಸಂಘವು ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನ ಅಜಂಗ್ ವದೇಲ್‌ನಲ್ಲಿ 528 ಎಕರೆಗಳಷ್ಟು ವಿಸ್ತಾರವಾದ ಕೃಷಿ ಭೂಮಿಯನ್ನು ಹೊಂದಿದ್ದು ಗೋಡಂಬಿ ಬೆಳೆ ನಿರ್ವಹಣೆಯಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡಿದೆ. ಗೋಡಂಬಿ ಬೆಳೆಯ ಸಂಸ್ಕರಣೆ ಮಾರುಕಟ್ಟೆಯ ಜೊತೆಗೆ ನಾಗಪುರದಲ್ಲಿ ಹಾಲು ಸಂಸ್ಕರಣ ಕೇಂದ್ರ, ಜರೇನಿಯಂ ಫಾರ್ಮಿಂಗ್, ಕೈಚೀಲ ಘಟಕದಲ್ಲಿ ಆಧುನಿಕತೆ, ಕೃಷಿ ಉಗ್ರಾಣ/ದಾಸ್ತಾನು, ರಾಸಾಯನಿಕ ಸಂಸ್ಕರಣ ಘಟಕಗಳು, ಮುತ್ತಿನ ಬೆಳೆ, ಹಣ್ಣು ಮತ್ತು ತರಕಾರಿ ರಫ್ತು, ಮೇಕೆ ಸಾಗಣಿಕೆ, ಪಶುಸಂಗೋಪನೆ ಮತ್ತು ರಫ್ತು ಮೊದಲಾದ ಚಟುವಟಿಕೆಗಳಲ್ಲಿ ಯಶಸ್ಸನ್ನು ಪಡೆದಿದೆ. ಆಧಾರ : www.venkateshwarapoweragro.com





## ಈಸ್ಟರ್ನ್ ಆಗ್ರೋ ಪ್ರೋಸೆಸಿಂಗ್ ಅಂಡ್ ಟೀ ವೇರ್ ಹೌಸಿಂಗ್ ಕೋ ಅಪರೇಟಿವ್ ಸೊಸೈಟಿ, ಅಸ್ಸಾಂ

1971ರಲ್ಲಿ ಗೋಪಾಲ ಚಂದ್ರ ಬೈಶ್ಯಾಯವರಿಂದ ಸ್ಥಾಪಿತವಾದ ಇದು ಸಾಸಿವೆ ಎಣ್ಣೆಯ ಸಾಗಣೆ ಸೌಲಭ್ಯವನ್ನು ಹೆಚ್ಚಿಸಲು ಸಾಸಿವೆ ಎಣ್ಣೆಯ ಪ್ಯಾಕೇಜ್ ಮೌಲ್ಯವರ್ಧನೆಗಾಗಿ ಪ್ರಯತ್ನಿಸುತ್ತಿದೆ. ಸೋಯಾ ರಿಫೈಂಡ್ ಆಯಿಲ್ ಪ್ಯಾಕಿಂಗ್ ಯೂನಿಟ್, ಅಸ್ಸಾಂ ಟೀ ಪ್ಯಾಕಿಂಗ್ ಯೂನಿಟ್ ಈ ಸಂಸ್ಥೆಯಿಂದ ರೂಪುಗೊಂಡಿದೆ. ಹರಾಜು ಕೇಂದ್ರಗಳಲ್ಲಿ ಇದು ಚಹಾ ದಾಸ್ತಾನು ವ್ಯವಸ್ಥೆಯನ್ನು ರೂಪಿಸಿದೆ. ಈ ಪ್ರಯತ್ನವು ವಿಶ್ವಾಸಾರ್ಹ ಬ್ರ್ಯಾಂಡ್ ನಿರ್ಮಾಣಕ್ಕೆ ಕಾರಣವಾಗಿದೆ. ಸಂಘವು ದಾಸ್ತಾನು ಮಳಿಗೆಗಳನ್ನು ಸ್ಥಾಪಿಸುವ ಮೂಲಕ ಸರಬರಾಜು ಸರಪಳಿಯನ್ನು ಬಲಗೊಳಿಸಿದೆ. ವಿವಿಧ ಪ್ರದೇಶಗಳಲ್ಲಿ ಉಗ್ರಾಣ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ, ವ್ಯಾಪಾರಿ ಕೇಂದ್ರಗಳನ್ನು ತೆರೆಯುವ ಮೂಲಕ ಗುಣಾತ್ಮಕ ಕೊಡುಗೆಯನ್ನು ನೀಡುತ್ತಿದೆ. ಆಧಾರ: easternagro.co.in

ಪ್ರಯೋಗಾಲಯ ಜಾಲದಿಂದ ಸಾವಯವ ಆಹಾರ ಮಾರುಕಟ್ಟೆಗೆ ಅನುಕೂಲವಾಗಲಿದೆ. ಸಂಘವು ತರಬೇತಿ ಮತ್ತು ಗುಣಮಟ್ಟ ಹೆಚ್ಚಳ ಯೋಜನೆಯ ಮೂಲಕ ಕೃಷಿ ಸರಬರಾಜು ಜಾಲವನ್ನು ಬಲಗೊಳಿಸಲಿದೆ. ರಫ್ತು ಸಂಘವು ಸುಮಾರು 29 ಕೋಟಿ ಸಹಕಾರಿ ಸಂಘದ ಸದಸ್ಯರಿಗೆ ಖರೀದಿ, ದಾಸ್ತಾನು, ಪರಿಷ್ಕರಣೆ, ಮಾರುಕಟ್ಟೆ, ಬ್ರ್ಯಾಡಿಂಗ್, ಪ್ಯಾಕಿಂಗ್ ಮೊದಲಾದವುಗಳ ಮೂಲಕ ನೆರವಾಗಲಿದೆ. ಮರುಪೂರಣ ಸರಬರಾಜು ಸರಪಳಿಯ ರೂಪಾಂತರವು ಸಹಕಾರ ಸಂಘಗಳಿಗೆ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಲಾಭಗಳನ್ನು ನೀಡಲಿದೆ. ಸಾಂಸ್ಥಿಕ ನೆರವು, ಸಂಸ್ಥೆಯ ಮರು ರೂಪಿಸುವಿಕೆ, ಸಂಪರ್ಕಜಾಲ ಮತ್ತು ಸಹಯೋಗ ನಿರ್ವಹಣೆ, ತಾಂತ್ರಿಕ ಅರಿವು, ಜ್ಞಾನ ಪ್ರಸರಣ, ಸೂಕ್ತ ಮೂಲಭೂತ ಸೌಕರ್ಯ, ಗುಣಮಟ್ಟದ ದಾಸ್ತಾನು, ಸಾಮರ್ಥ್ಯ ಹೆಚ್ಚಳ, ತರಬೇತಿ, ಪ್ರಸರಣ ಚಟುವಟಿಕೆಗಳು, ಮಾರುಕಟ್ಟೆಯ ಅರಿವು, ದತ್ತಾಂಶ ಪರಿಷ್ಕರಣೆ ಮತ್ತು ಅವಲೋಕನ ಮೊದಲಾದ ಸಂಗತಿಗಳು ಸಹಕಾರಿ ಸಂಘಗಳು ಉತ್ತಮ ಸರಬರಾಜು ಜಾಲ ವ್ಯವಸ್ಥೆಯನ್ನು ಹೊಂದಲು ಕಾರಣವಾಗಲಿವೆ. ಕೈಗಾರಿಕಾ ಸಹಯೋಗ ಮತ್ತು ಸರಬರಾಜು ಸರಪಳಿ ಎರಡೂ ಅಂಶಗಳು ಸಹಕಾರಿ ಚಳವಳಿಯನ್ನು ಮನರುತ್ಥಾನಗೊಳಿಸಲು ನೆರವಾಗಿದೆ.

ಉಪ ಉತ್ಪನ್ನಗಳ ಕುರಿತ ಅರಿವು ಹೆಚ್ಚಾದರೆ ಅವುಗಳ ಬಳಕೆ ಕೂಡ ಹೆಚ್ಚಾಗಲಿದೆ. ಮುಖ್ಯವಾಗಿ ಕೃಷಿ ಸರಬರಾಜು ಸರಪಳಿಯ ದಕ್ಷ ನಿರ್ವಹಣೆಯು ಹೇಗೆ ಸದಸ್ಯರು ಇತ್ತೀಚಿನ ಬೆಳವಣಿಗೆಯನ್ನು ಅರಿತು ಕ್ರಿಯಾಶೀಲರಾಗಿರುತ್ತಾರೆ ಎನ್ನುವುದನ್ನು ಅವಲಂಬಿಸಿದೆ.




Scanned with ACE Scanner

# ಸಾಲೇತರ ಸಹಕಾರಿಗಳಿಗಾಗಿ ಅಭಿವೃದ್ಧಿ ಮಾರ್ಗ

* ಡಾ. ಇಶಿತಾ ಜಿ. ತ್ರಿಪಾಠಿ
** ನಿತಿಶಾ ಮಾನ್

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತವು ತಳಮಟ್ಟದಲ್ಲಿ ಜನತಂತ್ರವನ್ನು ಪ್ರತಿನಿಧಿಸುವ ಆಂದೋಲನಕ್ಕೆ ನೆಲೆಯಾಗಿರುವುದು ಸಹಜ. ಭಾರತೀಯ ಆರ್ಥಿಕತೆಯ ದಾಖಲೆಗಳ ಪ್ರಕಾರ ಸಹಕಾರಿ ಸಂಸ್ಥೆಗಳು ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದಲೂ ಅಸ್ತಿತ್ವದಲ್ಲಿವೆ. ಭಾರತದಲ್ಲಿ 29 ಕೋಟಿ ಜನರ ಸದಸ್ಯತ್ವ ಹೊಂದಿರುವ 8.54 ಲಕ್ಷ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ ಎಂದು ಅಂದಾಜಿಸಲಾಗಿದೆ. ಭಾರತದ ವಿವಿಧ ರಾಜ್ಯಗಳಲ್ಲಿ ಸಹಕಾರಿಗಳ ವಿಕಾಸ ಮತ್ತು ಬೆಳವಣಿಗೆ ವಿಭಿನ್ನವಾಗಿದೆ. ಬೆಳವಣಿಗೆಗೆ ಉತ್ತೇಜನ ನೀಡಲು ಆಯಾ ರಾಜ್ಯ ಆಡಳಿತ ಯಂತ್ರವು ಅಳವಡಿಸಿಕೊಂಡ ವೈವಿಧ್ಯಮಯ ಕೇಂದ್ರೀಕೃತ ಪ್ರದೇಶಗಳು ಮತ್ತು ವಿಧಾನಗಳಿಂದಾಗಿ ರಾಜ್ಯಗಳಾದ್ಯಂತ ವ್ಯತ್ಯಾಸವು ಕಂಡುಬರುತ್ತದೆ. ಇದು ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ ಮತ್ತು ತೆಲಂಗಾಣದಂತಹ ರಾಜ್ಯಗಳಲ್ಲಿ ನೊಂದಾಯಿತ ಸಾಲೇತರ ಸಹಕಾರಿಗಳ ಸಂಖ್ಯೆಯಲ್ಲಿ ಪ್ರತಿಫಲಿಸುತ್ತದೆ, ಇದು ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ಒಡಿಶಾ, ಅಸ್ಸಾಂನಂತಹ ಇತರ ದೊಡ್ಡ ರಾಜ್ಯಗಳಿಗೆ ಹೋಲಿಸಿದರೆ ತುಲನಾತ್ಮಕವಾಗಿ ಹೆಚ್ಚಾಗಿದೆ.




**ಸಾಲೇತರ ಸಹಕಾರಿ ಸಂಸ್ಥೆಗಳ ಕಾರ್ಯ ವೈವಿಧ್ಯಮಯವಾಗಿವೆ, ಅವುಗಳ ವೈವಿಧ್ಯತೆ ವ್ಯಾಪಕತೆ ಕಾರಣ, ಎಲ್ಲಾ ಕ್ಷೇತ್ರಗಳ ಸಹಕಾರಗಳಿಗೆ ಅನ್ವಯಿಸುವ ಸಾರ್ವತ್ರಿಕ ಮಾದರಿಯ, 'ಒನ್ ಸೈಜ್-ಫಿಟ್ಸ್-ಆಲ್' ವಿಧಾನವು ಯಶಸ್ವಿಯಾಗದಿರಬಹುದು. ಸಾಲೇತರದ ಸಹಕಾರಿಗಳಿಗೆ ಅಭಿವೃದ್ಧಿ ಮಾರ್ಗ ತೆರೆಯುವಂತಾಗಲು ಜಾಗೃತಿ ಮೂಡಿಸುವಿಕೆ, ತರಬೇತಿ, ಮಾರ್ಗದರ್ಶನ, ತಾಂತ್ರಿಕ ಉನ್ನತೀಕರಣ ಮತ್ತು ಡಿಜಿಟಲೀಕರಣದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.**

ಸಹಕಾರಿ ಸಂಘಗಳ ಯಶಸ್ಸು ಅವುಗಳ ರಚನೆ ಮತ್ತು ಕಾರ್ಯನಿರ್ವಹಣೆಯಲ್ಲಿದೆ, ವಿಶೇಷವಾಗಿ ಸ್ವಯಂಪ್ರೇರಿತ ಭಾಗವಹಿಸುವಿಕೆ, ಸಮಾನ ಪ್ರಾತಿನಿಧ್ಯ, ವೃತ್ತಿಪರ ನಿರ್ವಹಣೆ ಮತ್ತು ಮಧ್ಯವರ್ತಿಗಳ ಅನುಪಸ್ಥಿತಿಯ ಕಾರಣದಿಂದ ಹೆಚ್ಚಿನ ಲಾಭದ ಪಾಲು - ಮುಂತಾದವು ಅವುಗಳ ಗುಣಲಕ್ಷಣಗಳಾಗಿವೆ. ಈ ಸಂದರ್ಭದಲ್ಲಿ, ಈ ಲೇಖನ ಸಾಲೇತರ ಸಹಕಾರಿ ಸಂಸ್ಥೆಗಳು ತಮ್ಮ ಪೋಷಣೆ, ಬೆಳವಣಿಗೆ, ಅಭಿವೃದ್ಧಿ ಮತ್ತು ಸ್ಪರ್ಧಾತ್ಮಕತೆಗಾಗಿ ಅನುಸರಿಸಬಹುದಾದ ಮಾರ್ಗಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ.

### ಭಾರತದಲ್ಲಿ ಸಹಕಾರಿ ವಿನ್ಯಾಸ

ಭಾರತದಲ್ಲಿ ಸಹಕಾರ ಸಂಘದ ಕಾಯಿದೆ, 1912; ಪರಸ್ಪರ ಸಹಾಯ ಸಹಕಾರ ಮಿತವ್ಯಯ ಸೊಸೈಟಿ ಕಾಯಿದೆ; ಮತ್ತು ಬಹು-ರಾಜ್ಯ ಸಹಕಾರ ಸಂಘಗಳ ಕಾಯಿದೆ, 2002 ಸಹಕಾರಿಗಳ ಕಾನೂನು ಚೌಕಟ್ಟನ್ನು ರೂಪಿಸುತ್ತದೆ. ದೇಶದಲ್ಲಿ

* ಹೆಚ್ಚುವರಿ ಅಭಿವೃದ್ಧಿ ಆಯುಕ್ತರು. ** ಉಪ ನಿರ್ದೇಶಕರು. ಅಭಿವೃದ್ಧಿ ಆಯುಕ್ತರ (ಎಂಎಸ್ಎಂಇ) ಕಾರ್ಯಾಲಯ.
* ಇಮೇಲ್ : igtripathy@gmail.com ** nitisha.mann@gov.in



Scanned with ACE Scanner




ಎರಡು ರೀತಿಯ ಸಹಕಾರಿ ರಚನೆಗಳಿವೆ, ಅಂದರೆ, ರಾಜ್ಯ ಸಹಕಾರ ಸಂಘಗಳು ಮತ್ತು ಬಹು-ರಾಜ್ಯ ಸಹಕಾರ ಸಂಘಗಳು. ಬಹು-ರಾಜ್ಯ ಸಹಕಾರಿ ಸಂಘಗಳು ಕೇಂದ್ರ ಸರ್ಕಾರದ ಅಡಿಯಲ್ಲಿ ಮತ್ತು ರಾಜ್ಯ ಸಹಕಾರ ಸಂಘಗಳು ರಾಜ್ಯ ಸರ್ಕಾರದ ಅಡಿಯಲ್ಲಿ ಬರುತ್ತವೆ. ಭಾರತದಲ್ಲಿನ ಸಹಕಾರಿ ಸಂಸ್ಥೆಗಳು ಪ್ರಾಥಮಿಕವಾಗಿ, ಬೇರೆ ಬೇರೆಯಾಗಿ, ಕೃಷಿ, ಡೈರಿ, ಸಾಲ ಮತ್ತು ಬ್ಯಾಂಕಿಂಗ್, ವಸತಿ, ಉತ್ಪಾದಕ ಸಹಕಾರಿ ಸಂಘಗಳು -ಇತ್ಯಾದಿಗಳಲ್ಲಿ ಕಾರ್ಯನಿರ್ವಹಿಸುತ್ತವೆ.

ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಒಡಿಶಾ ಮತ್ತು ಬಿಹಾರದಲ್ಲಿ ಸ್ವ-ಸಹಾಯ ಗುಂಪುಗಳು (ಎಸ್‌ಹೆಚ್‌ಜಿಎಸ್) ಹೆಚ್ಚು ಪ್ರಬಲವಾದ ಪಾತ್ರವನ್ನು ವಹಿಸುತ್ತವೆ. ಅನೌಪಚಾರಿಕವಾಗಿದ್ದರೂ, ಎಸ್‌ಹೆಚ್‌ಜಿಎಸ್‌ಗಳನ್ನು ಮೂಲಭೂತ ಸಹಕಾರಿ ಸಂಸ್ಥೆಗಳೆಂದು ಪರಿಗಣಿಸಬಹುದು, ಆದರೂ ಅವು ಸಣ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತವೆ ಮತ್ತು ಸಾಮಾನ್ಯವಾಗಿ ಮಹಿಳೆಯರಂತಹ ತುಲನಾತ್ಮಕವಾಗಿ ಅನನುಕೂಲಕರ ಗುಂಪುಗಳಿಗೆ ನೆರವಾಗುವತ್ತ ಹೆಚ್ಚು ಗಮನಹರಿಸುತ್ತವೆ. ಮತ್ತೊಂದೆಡೆ, ದೊಡ್ಡ-ಪ್ರಮಾಣದ ಸಹಕಾರಿಗಳು, ಉತ್ಪನ್ನಗಳು ಅಥವಾ ಕಾರ್ಯಗಳ ವಿಷಯದಲ್ಲಿ ವಾಣಿಜ್ಯಿಕವಾಗಿ ಹೆಚ್ಚು ಕೇಂದ್ರೀಕೃತವಾಗಿವೆ.

**ಜಾಗತೀಕರಣ**

ಜಾಗತೀಕರಣ ಸಹಕಾರಿಗಳ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ ಎಂದು ವ್ಯಾಪಕವಾಗಿ ನಂಬಲಾಗಿತ್ತು. ಆದಾಗ್ಯೂ, ಅಮುಲ್, ತೋಟಗಾರಿಕಾ ಉತ್ಪಾದಕರ ಸಹಕಾರ ಮಾರುಕಟ್ಟೆ ಮತ್ತು ಸಂಸ್ಕರಣಾ ಸೊಸೈಟಿ (ಹಾಪ್‌ಕಾಮ್ಸ್), ಭಾರತೀಯ ರೈತರ ರಸಗೊಬ್ಬರ ಸಹಕಾರಿ ಲಿಮಿಟೆಡ್ (ಇಫ್ಕೊ), ಒಡಿಶಾ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ, ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್), ಮತ್ತು ಕೇರಳ ಸಹಕಾರಿಗಳಂತಹ ಸಹಕಾರಿಗಳ ಯಶಸ್ಸು ಕೆಲವು ಮಿಲ್ಕ್ ಮಾರ್ಕೆಟಿಂಗ್ ಆಪರೇಟಿವ್ ಫೆಡರೇಶನ್ (ಕೆಸಿಎಂಎಂಎಫ್) ಈ ಊಹೆಯನ್ನು ತಪ್ಪು ಎಂದು ಸಾಬೀತುಪಡಿಸಿದೆ.

ಈ ಯಶಸ್ಸಿನ ಕಥೆಗಳ ಮೂಲಕ ಚಾಲನೆಯಲ್ಲಿರುವ ಸಾಮಾನ್ಯ ಎಳೆ ಬಹು-ಹಂತದ ವ್ಯವಸ್ಥೆಯ ಅಸ್ತಿತ್ವದ್ದಾಗಿದೆ, ಅದು ಬಲವಾದ ಪೂರೈಕೆ ಸರಪಳಿಯನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ.

ಅಮುಲ್, ಓಎಂಎಫ್‌ಇಡಿ (ಬಾಕ್ಸ್ 1 ಅನ್ನು ಉಲ್ಲೇಖಿಸಿ) ಅಥವಾ ಐಎಫ್‌ಎಫ್‌ಸಿಓ ಗಾಗಿ ಇರಲಿ, ಇ2ಇ (ಅಂತ್ಯದಿಂದ ಕೊನೆಯವರೆಗೆ) ಪೂರೈಕೆ ಏಕೀಕೃತ ಸರಪಳಿಯ ಕಚ್ಚಾ ವಸ್ತುಗಳ ಸಂಗ್ರಹಣೆ, ಉತ್ಪನ್ನದ ನಿರ್ದಿಷ್ಟತೆ, ಉತ್ಪಾದನೆ, ಗ್ರಾಹಕರಿಗೆ ಉತ್ಪನ್ನಗಳ ವೇಳಾಪಟ್ಟಿ, ವಿತರಣೆ ಮತ್ತು ವಿತರಣೆ ಕ್ಷೇತ್ರಗಳಲ್ಲಿನ ಉತ್ತಮ ಕಾರ್ಯ ನಿರ್ವಹಣೆಯೇ ಈ ಸಂಸ್ಥೆಗಳ ಯಶಸ್ಸಿನ ಬೆನ್ನೆಲುಬಾಗಿದೆ.

ಈ ಸಹಕಾರಿ ಸಂಸ್ಥೆಗಳ ಯಶಸ್ಸಿಗೆ ಉತ್ಪನ್ನ ಮಿಶ್ರಣದ ವೈವಿಧ್ಯತೆ, ವಿಧಾನಗಳು ಮತ್ತು ಒಳಹರಿವುಗಳ ತಾಂತ್ರಿಕ ಉನ್ನತೀಕರಣವನ್ನು ತಳಮಟ್ಟದಲ್ಲಿ ಅಥವಾ ಅವುಗಳ ಉತ್ಪಾದನಾ ಸೌಲಭ್ಯಗಳಲ್ಲಿ ಕೈಗೊಳ್ಳುವುದು, ಮಾರ್ಕೆಟಿಂಗ್ ಮತ್ತು ತಮ್ಮ ಅಸ್ತಿತ್ವವನ್ನು ವಿಸ್ತರಿಸುವುದರ ಮೇಲೆ






Scanned with ACE Scanner




ಕೇಂದ್ರೀಕರಿಸುವುದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತು ವೃತ್ತಿಪರ ನಿರ್ವಹಣೆ-ಕೂಡಾ ಕಾರಣವಾಗಿದೆ. ಅಭಿವೃದ್ಧಿ ಹೊಂದಲು, ಯಾವುದೇ ಘಟಕವು ತನ್ನ ಮಾರುಕಟ್ಟೆಯನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಬೇಕು, ಉತ್ತಮವಾಗಿ ನಿರ್ವಹಿಸಬೇಕು, ಆರ್ಥಿಕ ಕಾರ್ಯಸಾಧ್ಯತೆಯ ಕಡೆಗೆ ಕೆಲಸ ಮಾಡಬೇಕು ಮತ್ತು ದೀರ್ಘಾವಧಿಯ ದೃಷ್ಟಿಕೋನವನ್ನು ಹೊಂದಿರಬೇಕು ಎಂಬುದನ್ನು ಈ ಕಥೆಗಳು ಪುನರುಚ್ಚರಿಸುತ್ತವೆ. ಕೆಲವು ಕೃಷಿ-ಆಧರಿತ ಮತ್ತು ಡೈರಿ ಸಹಕಾರಿ ಸಂಘಗಳ ಅಪ್ರತಿಮ ಯಶಸ್ಸು, ಸಹಕಾರಿ ಸಂಸ್ಥೆಗಳು ಆಹಾರ ಸಂಸ್ಕರಣೆಯಲ್ಲಿ ಬಹಳಷ್ಟು ಕೊಡುಗೆಯನ್ನು ಹೊಂದಿವೆ ಎಂದು ಸೂಚಿಸುತ್ತವೆ, ಇದು ಭಾರತೀಯ ಆರ್ಥಿಕತೆಯಲ್ಲಿ ಉದಯೋನ್ಮುಖ ವಲಯವಾಗಿದೆ.

### ಮುಂದಿರುವ ಮಾರ್ಗ

ಸಾಲೇತರ ಸಹಕಾರಿ ಸಂಸ್ಥೆಗಳ ಕಾರ್ಯ ವೈವಿಧ್ಯಮಯವಾಗಿವೆ, ಅವುಗಳ ವೈವಿಧ್ಯತೆ ವ್ಯಾಪಕತೆ ಕಾರಣ, ಎಲ್ಲಾ ಕ್ಷೇತ್ರಗಳ ಸಹಕಾರಗಳಿಗೆ ಅನ್ವಯಿಸುವ ಸಾರ್ವತ್ರಿಕ ಮಾದರಿಯ, 'ಒನ್ ಸೈಜ್-ಫಿಟ್ಸ್-ಆಲ್' ವಿಧಾನವು ಯಶಸ್ವಿಯಾಗದಿರಬಹುದು. ಕೆಲವು ವಲಯಗಳಿಗೆ, ಹೆಚ್ಚು ಕೇಂದ್ರೀಕೃತ ವಿಧಾನ ಅಗತ್ಯವಾಗಬಹುದು. ಈ ಹಿನ್ನೆಲೆಯಲ್ಲಿ, 2023ರ ಜನವರಿಯಲ್ಲಿ ಪ್ರಧಾನಮಂತ್ರಿಯವರು ಐತಿಹಾಸಿಕ ನಿರ್ಧಾರವನ್ನು ಕೈಗೊಂಡರು, ಸಾವಯವ ಉತ್ಪನ್ನಗಳಿಗಾಗಿ ರಾಷ್ಟ್ರೀಯ ಮಟ್ಟದ ಸಹಕಾರ ಸಂಘವನ್ನು ಸ್ಥಾಪಿಸಲು ಮತ್ತು ಉತ್ತೇಜಿಸಲು ನಿರ್ಧರಿಸಲಾಯಿತು, ಇದು ಹೆಚ್ಚುತ್ತಿರುವ ಆರೋಗ್ಯ ಮತ್ತು ಪರಿಸರ ಪ್ರಜ್ಞೆಯೊಂದಿಗೆ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಸಾಲೇತರದ ಸಹಕಾರಿಗಳಿಗೆ ಅಭಿವೃದ್ಧಿ ಮಾರ್ಗ ತೆರೆಯುವಂತಾಗಲು ಜಾಗೃತಿ ಮೂಡಿಸುವಿಕೆ, ತರಬೇತಿ, ಮಾರ್ಗದರ್ಶನ, ತಾಂತ್ರಿಕ ಉನ್ನತೀಕರಣ ಮತ್ತು ಡಿಜಿಟಲೀಕರಣದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

#### 1. ಸಮ್ಮಿಳಿತ

ಭಾರತ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯವು ಉದ್ಯಮ್ ಪೋರ್ಟಲ್‌ನಲ್ಲಿ ಆನ್‌ಲೈನ್ ನೊಂದಣಿ ಮೂಲಕ ಎಂಎಸ್‌ಎಂಇಗಳಾಗಿ ನೊಂದಾಯಿಸಲು ಸಹಕಾರಿಗಳನ್ನು ಅನುಮತಿಸುತ್ತದೆ. ಇದು ಸಹಕಾರಿ ಸಂಸ್ಥೆಗಳಿಗೆ ಹಲವು ಮಾರ್ಗಗಳನ್ನು ತೆರೆಯುತ್ತದೆ. ಉದ್ಯಮ್ ಡಾಟಾ ಪ್ರಕಾರ, ಪೋರ್ಟಲ್‌ನಲ್ಲಿ 16,000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಎಂಎಸ್‌ಎಂಇಗಳಾಗಿ ನೊಂದಾಯಿಸಿಕೊಂಡಿವೆ. ಮಾಹಿತಿಯ ಹೆಚ್ಚಿನ ವಿಶ್ಲೇಷಣೆಯು ಆಹಾರ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದ ಎನ್‌ಐಸಿ ಕೋಡ್ 10 ರ ಅಡಿಯಲ್ಲಿ ಹೆಚ್ಚಿನ ಸಂಖ್ಯೆಯ ಸಹಕಾರಿಗಳನ್ನು ನೊಂದಾಯಿಸಲಾಗಿದೆ ಎಂದು ಬಹಿರಂಗಪಡಿಸುತ್ತದೆ. ಈ ಕೋಡ್ ಅಡಿಯಲ್ಲಿ ಸಹಕಾರಿ ಸಂಸ್ಥೆಗಳು ಸಂಗ್ರಹಣೆ, ವಿತರಣೆ, ಸಂಸ್ಕರಣೆ, ಉಗ್ರಾಣ, ಪ್ಯಾಕೇಜಿಂಗ್ ಇತ್ಯಾದಿಗಳಲ್ಲಿ ಮತ್ತಷ್ಟು ತೊಡಗಿಸಿಕೊಂಡಿವೆ.





Scanned with ACE Scanner

## ಒಡಿಶಾ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ಲಿಮಿಟೆಡ್ (ಓಎಂಎಫ್ಇಡಿ)

ಇದನ್ನು ಸಹಕಾರಿ ಸೊಸೈಟಿ ಕಾಯಿದೆ, 1962 ರ ಅಡಿಯಲ್ಲಿ ನೊಂದಾಯಿಸಲಾಗಿದೆ, ಓಎಂಎಫ್ಇಡಿಯ ಮುಖ್ಯ ಚಟುವಟಿಕೆಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಉತ್ತೇಜಿಸುವುದು, ಉತ್ಪಾದಿಸುವುದು, ಸಂಗ್ರಹಿಸುವುದು, ಸಂಸ್ಕರಣೆ ಮತ್ತು ಮಾರಾಟ ಮಾಡುವುದು ಸೇರಿವೆ. ರಾಜ್ಯದ ಗ್ರಾಮೀಣ ರೈತ ಸಮುದಾಯದ ಆರ್ಥಿಕ ಅಭಿವೃದ್ಧಿಯನ್ನು ಖಚಿತಪಡಿಸುವುದು ಇದರ ಉದ್ದೇಶವಾಗಿದೆ.

ಓಎಂಎಫ್ಇಡಿಯ ಸಾಮರ್ಥ್ಯವು ಅದರ ಸಮರ್ಥವಾಗಿ ನಿರ್ವಹಿಸಲಾದ ಪೂರೈಕೆ ಸರಪಳಿಯಲ್ಲಿದೆ, ಇದು ಅದರ ಪ್ರಸ್ತಾಪಿತ ಉದ್ದೇಶಿತ ಉದ್ದೇಶಗಳು ಮತ್ತು ಗ್ರಾಹಕರ ಅಗತ್ಯಗಳನ್ನು ಪೂರೈಸಲು ಅನುವು ಮಾಡಿಕೊಡುತ್ತದೆ. ಅಮುಲ್ ಮೂಲತಃ ಸ್ಥಾಪಿಸಿದ ಮೂರು ಹಂತದ ವ್ಯವಸ್ಥೆಯನ್ನು ಅನುಸರಿಸಿ, ಗ್ರಾಮ ಸಹಕಾರ ಸಂಘವು ಮೊದಲ ಹಂತವನ್ನು ಪ್ರತಿನಿಧಿಸುತ್ತದೆ. ಇದು ಒಂದು ಹಳ್ಳಿಯ ಹಾಲು ಉತ್ಪಾದಕರ ಸ್ವಯಂಪ್ರೇರಿತ ಸಂಘವಾಗಿದ್ದು, ಅವರು ಎರಡನೇ ಹಂತದ ಹತ್ತಿರದ ಜಿಲ್ಲಾ ಹಾಲು ಒಕ್ಕೂಟಕ್ಕೆ ಸಾಮೂಹಿಕ ಆಧಾರದ ಮೇಲೆ ಹಾಲನ್ನು ಮಾರಾಟ ಮಾಡಲು ಸಿದ್ಧರಿದ್ದಾರೆ. ಸಮಿತಿಯು ನಂತರ ಸಹಾಯಕರಾಗಿ ಕಾರ್ಯನಿರ್ವಹಿಸಲು ಇನ್ನೂ ಕೆಲವು ಜನರನ್ನು ಆಯ್ಕೆ ಮಾಡುತ್ತದೆ (ಹಾಲು ಪರೀಕ್ಷಕ, ಕಾರ್ಯದರ್ಶಿ, ಇತ್ಯಾದಿ.)

ಹಾಲು ಒಕ್ಕೂಟವು ಸಂಗ್ರಹಿಸಿದ ಹಾಲನ್ನು ತಮ್ಮ ಸಂಸ್ಕರಣಾ ಕೇಂದ್ರಗಳಿಗೆ ಸಾಗಿಸುತ್ತದೆ. ಹಾಲು ಒಕ್ಕೂಟಗಳು ಹಳ್ಳಿ ಸಮಾಜಗಳಿಗೆ ತಾಂತ್ರಿಕ ಒಳಹರಿವು (ಹೊಸ ವಿಧಾನಗಳು), ತರಬೇತಿ, ಮತ್ತು ಕೆಲವೊಮ್ಮೆ ಜಾನುವಾರು ಮೇವು ಮತ್ತು ಮೇವು ಇತ್ಯಾದಿಗಳನ್ನು ಸಹ ಒದಗಿಸುತ್ತವೆ.

ಮೂರನೇ ಹಂತವು ಹಾಲು ಒಕ್ಕೂಟವಾಗಿದೆ, ಇದು ಫೆಡರೇಶನ್ ಡೈರಿಯಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಸಂಸ್ಕರಣೆ, ಪ್ಯಾಕಿಂಗ್ ಮತ್ತು ಮಾರಾಟ ವ್ಯವಸ್ಥೆ ಒದಗಿಸುತ್ತದೆ. ಉತ್ಪನ್ನಗಳನ್ನು ಮಾರಾಟ ಮಾಡಿದ ನಂತರದ, ಯಾವುದೇ ವಿತ್ತೀಯ ಗಳಿಕೆಯನ್ನು ಪ್ರತಿ 7–10 ದಿನಗಳಿಗೊಮ್ಮೆ ಉತ್ಪಾದಕರಿಗೆ ಸರಬರಾಜು ಸರಪಳಿಯ ಮೂಲಕ ಪಾವತಿಸಲಾಗುತ್ತದೆ. ಫೆಡರೇಶನ್ ವಿವಿಧ ಹಾಲು ಸಂಘಟನೆಗಳು ಮತ್ತು ಒಡಿಶಾ ರಾಜ್ಯ ಸರ್ಕಾರದ ಪ್ರಾತಿನಿಧ್ಯವನ್ನು ಹೊಂದಿದೆ. ಉತ್ಪನ್ನಗಳನ್ನು ರಾಜ್ಯದಾದ್ಯಂತ ಓಎಂಎಫ್ಇಡಿಯ ಅಧಿಕೃತ ಚಿಲ್ಲರೆ ವ್ಯಾಪಾರಿಗಳು ಮಾರಾಟ ಮಾಡುತ್ತಾರೆ ಮತ್ತು ಓಎಂಎಫ್ಇಡಿಯ ಹಾಲಿನ ಹರಿವಿನ ಪೂರೈಕೆ ಸರಪಳಿಯಲ್ಲಿ ನಗರ ಗ್ರಾಹಕರದು ಕೊನೆಯ ಹಂತವಾಗಿದೆ.

1980 ರ ದಶಕದಲ್ಲಿ ಒಡಿಶಾದಲ್ಲಿ ಯಾವುದೇ ದೊಡ್ಡ ಪ್ರಮಾಣದ ಔಪಚಾರಿಕ ಡೈರಿ ಕ್ಷೇತ್ರವಿಲ್ಲದಿದ್ದಾಗ ಓಎಂಎಫ್ಇಡಿ ತನ್ನ ಅಸ್ತಿತ್ವವನ್ನು ಸಾಬೀತುಪಡಿಸಿತು ಮತ್ತು ಅಮುಲ್‌ನ ಅದ್ಭುತ ಯಶಸ್ಸು ಸಹಕಾರಿಗಳ ಸಾಮರ್ಥ್ಯವನ್ನು ಪ್ರದರ್ಶಿಸಿತು. ಸಣ್ಣ ಡೈರಿಗಳನ್ನು ಸ್ಥಾಪಿಸಲು ಸಂಪನ್ಮೂಲಗಳನ್ನು ಹೊಂದಿರದ ಆದರೆ ಮಾರಾಟ ಮಾಡಲು ಹೆಚ್ಚುವರಿ ಹಾಲನ್ನು ಹೊಂದಿರುವ ಎಲ್ಲಾ ಸಣ್ಣ ಡೈರಿ ರೈತರಿಗೆ ಓಎಂಎಫ್ಇಡಿ ಅವಕಾಶವನ್ನು ನೀಡಿತು. ಇದು ಅವರ ಆದಾಯದಲ್ಲಿ ಏರಿಕೆಗೆ ಕಾರಣವಾಯಿತು ಮತ್ತು ನಿಯಮಿತ ಪಾವತಿಗಳೊಂದಿಗೆ ಕಿರು ನಗದು–ಚಕ್ರವನ್ನು ಪ್ರೋತ್ಸಾಹಿಸಿತು.

ಡೈರಿ ರೈತ ಮತ್ತು ಕಟಕ್ ಹಾಲು ಒಕ್ಕೂಟದ ಸದಸ್ಯ ಅನಿಲ್ ಮೊಹಾಪಾತ್ರ ಅವರು ಸುಮಾರು 30 ವರ್ಷಗಳಿಂದ ಓಎಂಎಫ್ಇಡಿಗೆ ಹಾಲನ್ನು ಪೂರೈಸುತ್ತಿದ್ದಾರೆ. ಉತ್ತಮ ಗುಣಮಟ್ಟದ ಹಾಲಿಗೆ ಉತ್ತಮ ಬೆಲೆ ಸಿಗುವುದರಿಂದ ಹೈನುಗಾರಿಕೆಯ ಜಾನುವಾರುಗಳ ಮೇವು ಹಾಗೂ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ ಎನ್ನುತ್ತಾರೆ ಅವರು. ಜಾನುವಾರುಗಳ ಆರೋಗ್ಯ ಪರಿಶೀಲನೆ ಪಶುವೈದ್ಯರ ಭೇಟಿಯಿಂದ ನಿಯಮಿತವಾಗಿ ನಡೆದು ರೈತರಿಗೆ ಸಹಾಯವಾಗುತ್ತಿದೆ. ಖಚಿತವಾದ ಬೇಡಿಕೆ ಮತ್ತು ಪಾವತಿಗಳಿಂದಾಗಿ, ಹತ್ತಿರದ ಹಳ್ಳಿಗಳಲ್ಲಿನ ಹೆಚ್ಚಿನ ಕುಟುಂಬಗಳು ತಮ್ಮ ಆದಾಯಕ್ಕೆ ಪೂರಕವಾಗಿ ಹೈನುಗಾರಿಕೆಯನ್ನು ಪ್ರಾರಂಭಿಸಿವೆ ಎಂದು ಅವರು ಹೇಳಿದರು.

ಮೂಲಗಳು: 1. http://omfed.com/default.asp?lnk=home&
2. ಡೈರಿ ರೈತರೊಂದಿಗೆ ಲೇಖಕರ ಸಂದರ್ಶನಗಳು

ಸಾಮೂಹಿಕವಾಗಿ ಎಂಎಸ್ಎಂಇ ಗಳಿಗೆ ಗಣನೀಯವಾಗಿ ಪ್ರಯೋಜನವನ್ನು ನೀಡಿದ ಹಲವಾರು ಯೋಜನೆಗಳು ಕ್ಲಸ್ಟರ್ ಆಧರಿತ ಕಾರ್ಯಕ್ರಮಗಳಾಗಿವೆ. ಇಂತಹ ಯೋಜನೆಗಳು ಸಾಮಾನ್ಯ ಸೌಲಭ್ಯ ಕೇಂದ್ರಗಳು, ಪ್ರದರ್ಶನ ಕೇಂದ್ರಗಳು, ಸಂಸ್ಕರಣಾ ಕೇಂದ್ರಗಳು, ಮರುಬಳಕೆ/ಸಂಪನ್ಮೂಲ ಮರುಪಡೆಯುವಿಕೆ ಘಟಕಗಳು, ಪರೀಕ್ಷೆ ಮತ್ತು ಗುಣಮಟ್ಟದ ಉತ್ಪಾದನಾ ಕೇಂದ್ರಗಳು, ಮೂಲಸೌಕರ್ಯ ಅಭಿವೃದ್ಧಿ ಮತ್ತು ಕೌಶಲ್ಯ ಅಭಿವೃದ್ಧಿಯ ಗುರಿಯನ್ನು ಹೊಂದಿರುವ ಮೃದು ಮಧ್ಯಸ್ಥಿಕೆಗಳನ್ನು ಸ್ಥಾಪಿಸಲು ಹಣವನ್ನು ಒದಗಿಸುತ್ತದೆ. ಎಂಎಸ್ಎಂಇಗಳು ದೇಶೀಯ ಸಂಗ್ರಹಣೆ ಮತ್ತು ಮಾರುಕಟ್ಟೆ ಯೋಜನೆ ಮತ್ತು ಅಂತಾರಾಷ್ಟ್ರೀಯ ಸಹಕಾರ ಯೋಜನೆಯ ಮೂಲಕ ವ್ಯಾಪಾರೋದ್ಯಮ ಸಂಪರ್ಕಗಳನ್ನು ರಚಿಸುವ ವಿಷಯದಲ್ಲಿ ಸಹ ಪ್ರಯೋಜನ ಪಡೆಯುತ್ತವೆ. ಸಂಸ್ಕರಣೆ ಮತ್ತು ಉತ್ಪಾದನೆಯಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳು ಇಂತಹ ಮಧ್ಯಸ್ಥಿಕೆಗಳ ಮೂಲಕ ಉತ್ಪನ್ನದ ಹೆಚ್ಚಿದ ಪ್ರಮಾಣ ಮತ್ತು ಗುಣಮಟ್ಟದ ವಿಷಯದಲ್ಲಿ ನಿಜವಾಗಿಯೂ ಉತ್ತೇಜನವನ್ನು ಪಡೆಯಬಹುದು. ಎಂಎಸ್ಎಂಇಗಳಿಗೆ, ಉದ್ಯಮ್ ಬಹುತೇಕ 'ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ' ಎಂಬ ಅವಕಾಶದಂತಿದೆ. ಈ ಸನ್ನಿವೇಶದಲ್ಲಿ, ಅಧಿಕಾರಿಗಳು ಇತರ ಯಾವುದೇ ದಾಖಲಾತಿಗಳ ಬದಲಿಗೆ ಸಹಕಾರಿಗಳಿಗೆ ಮೂಲ ದಾಖಲೆಯಾಗಿ ಉದ್ಯಮ



Scanned with ACE Scanner

ಪ್ರಮಾಣೀಕರಣವನ್ನು ಪರಿಗಣಿಸಬಹುದು. ಇದು 'ಸರ್ಕಾರದ ಸಂಪೂರ್ಣ ವಿಧಾನ' ದೊಂದಿಗೆ ಸಹ ಇರುತ್ತದೆ. ಎಂಎಸ್‌ಎಂಇ ಸ್ಥಾನಮಾನವನ್ನು ಪಡೆಯುವ ಒಂದು ಪ್ರಮುಖ ಪ್ರಯೋಜನವೆಂದರೆ ಅವು ಆದ್ಯತಾ ವಲಯದ ಸಾಲದ ವ್ಯಾಪ್ತಿಗೆ ಒಳಪಡುವುದಾಗಿದೆ.

## 2. ಅರಿವು, ತರಬೇತಿ ಮತ್ತು ಮಾರ್ಗದರ್ಶನ

ಸಹಕಾರಿ ಕ್ಷೇತ್ರವು ಪೂರ್ಣ ಪ್ರಮಾಣದ ವೃತ್ತಿಜೀವನದ ಆಯ್ಕೆಯಾಗಿದೆ ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಅವರಿಗೆ ತರಬೇತಿ ನೀಡಬೇಕಾಗಿದೆ. ಸಾಮರ್ಥ್ಯ ವೃದ್ಧಿಗಾಗಿ ಭಾರತದಾದ್ಯಂತ ಸಹಕಾರಿ ಸಂಸ್ಥೆಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳು ಅಗತ್ಯವಾಗಿವೆ. ತಮ್ಮ ಸಿಬ್ಬಂದಿ/ ಕಾರ್ಮಿಕರ ಕೌಶಲ್ಯ ಉನ್ನತೀಕರಣಕ್ಕಾಗಿ ವಿವಿಧ ಸಚಿವಾಲಯಗಳು ಮತ್ತು ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಗಳು ನಡೆಸುತ್ತಿರುವ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸಹಕಾರಿಗಳನ್ನು ಸಹ ಸಂಪರ್ಕಿಸಬಹುದು. ಪ್ರಸ್ತುತ ಕ್ಲಸ್ಟರ್-ಮಟ್ಟದ ಯೋಜನೆಗಳಲ್ಲಿ ಮಾಡಲಾಗುತ್ತಿರುವ ಸಾಫ್ಟ್-ಸ್ಕಿಲ್ ಮಧ್ಯಸ್ಥಿಕೆಗಳು ಸಹ ಸಹಕಾರಿಗಳಿಗೆ ಪ್ರಯೋಜನಗಳನ್ನು ಒದಗಿಸುತ್ತವೆ.

ಒಂದೇ ರೀತಿಯ ರಂಗಗಳಲ್ಲಿ ಕಾರ್ಯನಿರ್ವಹಿಸುವ ದೊಡ್ಡ ಬಹು-ರಾಜ್ಯ ಸಹಕಾರಿಗಳಿಗೆ ಸಣ್ಣ ಸಹಕಾರಿಗಳಿಗೆ ಮಾನ್ಯತೆ ಭೇಟಿಗಳನ್ನು ಆಯೋಜಿಸುವುದು ಸಹ ಫಲಪ್ರದವಾಗಬಹುದು, ಇದೇ ರೀತಿಯ ಸಾಂಸ್ಥಿಕ ಮತ್ತು ಕಾರ್ಯಾಚರಣೆಯ ವ್ಯವಸ್ಥೆಗಳನ್ನು ಅನುಕರಿಸಲು ಸಹಾಯ ಮಾಡಬಹುದು. ದೊಡ್ಡ ಸಹಕಾರಿಯಿಂದ ಮಾರ್ಗದರ್ಶನದಿಂದ ಸಣ್ಣ ಸಹಕಾರಿಗಳು ಪ್ರಯೋಜನ ಪಡೆಯಬಹುದು. ಉದಾಹರಣೆಗೆ, ಒಂದು ಮಾರ್ಗದರ್ಶನ ಕಾರ್ಯಕ್ರಮವನ್ನು ಕಲ್ಪಿಸಬಹುದು, ಇದರಲ್ಲಿ ದೊಡ್ಡ ಸಹಕಾರಿ ಸಂಸ್ಥೆಗಳು ಇದೇ ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವ ರಾಜ್ಯ ಮಟ್ಟದ ಸಹಕಾರಿಗಳನ್ನು ಬಲಪಡಿಸಲು ತೀವ್ರವಾದ ಪಾಲುದಾರಿಕೆ, ಸಹಯೋಗ ಮತ್ತು ಸೃಜನಶೀಲ ಸಹಕಾರವನ್ನು ಒದಗಿಸಬಹುದು.

ಈ ನಿಟ್ಟಿನಲ್ಲಿ, ಭಾರತ ಸರ್ಕಾರವು (1) ರಾಷ್ಟ್ರೀಯ ಮಟ್ಟದ ಬಹು-ರಾಜ್ಯ ಸಹಕಾರಿ ಬೀಜ ಸಂಘಗಳ ರಚನೆಯನ್ನು ಘೋಷಿಸಿದೆ, ಇದು ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ, ಬ್ರ್ಯಾಂಡಿಂಗ್, ಲೇಬಲಿಂಗ್, ಪ್ಯಾಕೇಜಿಂಗ್, ಸಂಗ್ರಹಣೆ, ಮಾರುಕಟ್ಟೆ, ಮತ್ತು ಗುಣಮಟ್ಟದ ಬೀಜಗಳ ವಿತರಣೆ; ಕಾರ್ಯತಂತ್ರದ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಉನ್ನತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು (2) ಬಹು-ರಾಜ್ಯ ಸಹಕಾರಿ ಸಾವಯವ ಸಂಘಗಳು ಸಾವಯವ ಉತ್ಪನ್ನಗಳ ಒಟ್ಟುಗೂಡಿಸುವಿಕೆ, ಪ್ರಮಾಣೀಕರಣ, ಪರೀಕ್ಷೆ, ಸಂಗ್ರಹಣೆ, ಸಂಗ್ರಹಣೆ, ಸಂಸ್ಕರಣೆ, ಬ್ರ್ಯಾಂಡಿಂಗ್, ಲೇಬಲಿಂಗ್, ಪ್ಯಾಕೇಜಿಂಗ್, ಲಾಜಿಸ್ಟಿಕ್ ಸೌಲಭ್ಯಗಳು ಮತ್ತು ಮಾರುಕಟ್ಟೆಗಾಗಿ ಒಂದು ಜವಾಬ್ದಾರಿಯುತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

ಎಲ್ಲಾ ಹಂತಗಳಲ್ಲಿನ ಸಹಕಾರಿಗಳು ಸದಸ್ಯರಾಗಿ ಸೇರಲು ಅರ್ಹರಾಗಿರುವುದರಿಂದ, ಇದೇ ರೀತಿಯ ಕಾರ್ಯಗಳಲ್ಲಿ ತೊಡಗಿರುವವರು ಕೊಡುಗೆ ನೀಡಲು ಸಹಾಯ ಮಾಡಬಹುದು ಮತ್ತು ಸಂಪೂರ್ಣ ಮೌಲ್ಯ ಸರಪಳಿಯ ಭಾಗವಾಗಿರುವುದರಿಂದ ಪ್ರಯೋಜನ ಪಡೆಯಬಹುದು. ಇದು ಹಿಂದೆ ಉಲ್ಲೇಖಿಸಿದ ಯಶಸ್ಸಿನ ಕಥೆಗಳ ಪರಿಪೂರ್ಣ ಅನುಕರಣೆಯಾಗಿ ಕಂಡುಬರುತ್ತದೆ, ಇದರಲ್ಲಿ ಆಯ್ಕೆಮಾಡಿದ ವಲಯಗಳು (ಸಹಕಾರಿ ಸಂಸ್ಥೆಗಳು ಮೊದಲಿನ ಉಪಸ್ಥಿತಿ ಮತ್ತು ಅನುಭವವನ್ನು ಹೊಂದಿರುವಲ್ಲಿ) ಅಂತ್ಯದಿಂದ ಅಂತ್ಯ ಮಾದರಿ ಒಳಗೊಳ್ಳುತ್ತವೆ.

## 3. ತಂತ್ರಜ್ಞಾನ ಮತ್ತು ಡಿಜಿಟಲೀಕರಣ

ತಂತ್ರಜ್ಞಾನ, ಉತ್ಪಾದನೆ ಮತ್ತು ವ್ಯವಹಾರ ಮಾದರಿಗಳ ಉನ್ನತೀಕರಣದೊಂದಿಗೆ ಪ್ರಕ್ರಿಯೆಗಳ ಡಿಜಿಟಲೀಕರಣವನ್ನು ಶ್ರದ್ಧೆಯಿಂದ ಅನುಸರಿಸದಿದ್ದರೆ, ಸಹಕಾರಿ ಸಂಸ್ಥೆಗಳು ಸ್ಪರ್ಧಾತ್ಮಕವಾಗಿ ಉಳಿಯಲು ಸಾಧ್ಯವಾಗುವುದಿಲ್ಲ ಎಂಬುದು ಸಾಕಷ್ಟು ಸ್ಪಷ್ಟವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದಿಂದ ನೇರ ಸಬ್ಸಿಡಿಗಳಿಂದ ಹಿಡಿದು ಈ ಅನ್ವೇಷಣೆಗೆ ಬಳಸಬಹುದಾದ ವಿವಿಧ ಸಾಲ ಸೌಲಭ್ಯಗಳವರೆಗೆ ನೆರವು ಅನೇಕ ರೂಪಗಳಲ್ಲಿ ಲಭ್ಯವಿದೆ, ಭೌತಿಕ ಮೂಲಸೌಕರ್ಯಗಳನ್ನು ರಚಿಸುವಂತಹ ಕಠಿಣ ಮಧ್ಯಸ್ಥಿಕೆಗಳು, ಸಹಕಾರಿಗಳನ್ನು ಕ್ಲಸ್ಟರ್‌ಗಳಾಗಿ ಪರಿಗಣಿಸಿ ಅವುಗಳನ್ನು ಸಂಬಂಧಿತ ಕ್ಲಸ್ಟರ್ ಯೋಜನೆಗಳೊಂದಿಗೆ ಲಿಂಕ್ ಮಾಡುವ ಮೂಲಕ ಲಭ್ಯವಾಗುವಂತೆ ಮಾಡಬಹುದು.

## ಮುಕ್ತಾಯ

ಭಾರತೀಯ ಆರ್ಥಿಕತೆಯ ಬೆಳವಣಿಗೆಯ ಪಥದಿಂದ ಸಹಕಾರಿ ಸಂಸ್ಥೆಗಳು ತೆರೆಮರೆಯಲ್ಲಿವೆಯಾದರೂ, ಅಂತರ್ಗತ ಮತ್ತು ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವಲ್ಲಿ ಅವುಗಳ ಪ್ರಸ್ತುತತೆ ಪ್ರಶ್ನಾತೀತವಾಗಿದೆ.


ಸಹಕಾರಿ ಉದ್ಯಮದ ಅಭಿವೃದ್ಧಿಯಲ್ಲಿನ ಪ್ರಚಂಡ ಅಂತರ್ಗತ ಒಳಗೊಳ್ಳುವಿಕೆ ಭಾರತದ ಪ್ರಧಾನ ಮಂತ್ರಿಯವರಿಗೆ "ಸಹಕಾರಿ ಸಮೃದ್ಧಿ" ಸ್ಪಷ್ಟವಾದ ಕರೆಯನ್ನು ನೀಡಲು ಪ್ರೇರೇಪಿಸಿತು. ಸಹಕಾರ ಮತ್ತು ಸಹಕಾರಿ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುವ ಹೊಸ ಪ್ರತ್ಯೇಕ ಸಚಿವಾಲಯದ ರಚನೆಯು ಈ ಡಿಜಿಟಲೀಕರಣದ ಯುಗದಲ್ಲಿ ಸಮುದಾಯ-ನೇತೃತ್ವದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ಒತ್ತು ನೀಡಿರುವುದನ್ನು ಸೂಚಿಸುತ್ತದೆ. ಸಹಕಾರಿ ಉದ್ಯಮಗಳ ಬೆಳವಣಿಗೆಗೆ ಅಡೆತಡೆಗಳನ್ನು ನಿವಾರಿಸಲು ಮತ್ತು ಅಸ್ತಿತ್ವದಲ್ಲಿರುವ ಮತ್ತು ಉತ್ತಮವಾಗಿ ರಚನಾತ್ಮಕ ಸಹಕಾರಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಹಕಾರ ಸಚಿವಾಲಯದ ಸೂಕ್ತ ಮತ್ತು ಸಮಯೋಚಿತ ಮಧ್ಯಸ್ಥಿಕೆಗಳನ್ನು ನಿರೀಕ್ಷಿಸಲಾಗಿದೆ.

ಒಂದು ದೊಡ್ಡ, ಪೂರ್ವಭಾವಿ ಸದಸ್ಯತ್ವದ ನೆಲೆಗೆ ಸಾಕಷ್ಟು ಅವಕಾಶವಿರುವ ಪ್ರದೇಶಗಳಲ್ಲಿ ಬಹು-ರಾಜ್ಯ ಸಹಕಾರಿಗಳನ್ನು ರೂಪಿಸಲು ಹೆಚ್ಚು ಹೆಚ್ಚು ರಾಜ್ಯ ಸಹಕಾರಿಗಳನ್ನು ಲಿಂಕ್ ಮಾಡಬಹುದು ಅಥವಾ ಸಂಯೋಜಿಸಬಹುದಾದ ಕ್ರಿಯಾ ಯೋಜನೆಯನ್ನು ರೂಪಿಸುವ ಉತ್ತಮ ಚಿಂತನೆಯ ಕಾರ್ಯತಂತ್ರವು ಸಮರ್ಥನೀಯ ಬೆಳವಣಿಗೆಯನ್ನು ಖಚಿತಪಡಿಸುತ್ತದೆ.



Scanned with ACE Scanner

# 'ಮನದ ಮಾತು'




**ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 18.06.2023 ರಂದು ಮಾಡಿದ 'ಮನ್ ಕಿ ಬಾತ್' – 102 ನೇ ಸಂಚಿಕೆಯ ಕನ್ನಡ ಅವತರಣಿಕೆ**

ನನ್ನ ಪ್ರಿಯ ದೇಶವಾಸಿಗಳೇ, ನಮಸ್ಕಾರ, 'ಮನದ ಮಾತಿ'ಗೆ ಮತ್ತೊಮ್ಮೆ ನಿಮ್ಮೆಲ್ಲರಿಗೂ ಸ್ವಾಗತ. ಸಾಮಾನ್ಯವಾಗಿ, 'ಮನದ ಮಾತು' ಪ್ರತಿ ತಿಂಗಳ ಕೊನೆಯ ಭಾನುವಾರದಂದು ಪ್ರಸಾರವಾಗುತ್ತದೆ, ಆದರೆ, ಈ ಬಾರಿ ಅದು ಒಂದು ವಾರ ಮುಂಚಿತವಾಗಿ ಪ್ರಸಾರವಾಗುತ್ತಿದೆ. ನಾನು ಮುಂದಿನ ವಾರ ಅಮೆರಿಕಾದಲ್ಲಿ ಇರುತ್ತೇನೆ ಮತ್ತು ಅಲ್ಲಿ ಬಹಳ ವ್ಯಸ್ತವಾಗಿರುತ್ತೇನೆ ಎಂಬುದು ನಿಮಗೆಲ್ಲ ಗೊತ್ತು, ಹಾಗಾಗಿ ನಾನು ತೆರಳುವ ಮೊದಲು ನಿಮ್ಮೊಂದಿಗೆ ಮಾತನಾಡಬೇಕೆಂದು ಯೋಚಿಸಿದೆ. ಇದಕ್ಕಿಂತ ಉತ್ತಮವಾದದ್ದು ಇನ್ನೇನಿದೆ? ನಿಮ್ಮೆಲ್ಲರ ಆಶೀರ್ವಾದ, ನಿಮ್ಮ ಸ್ಫೂರ್ತಿ, ನನ್ನ ಶಕ್ತಿಯನ್ನು ಹೆಚ್ಚಿಸುತ್ತದೆ.

ಸ್ನೇಹಿತರೇ, ಪ್ರಧಾನಿಯ ರೂಪದಲ್ಲಿ ನಾನು ಒಳ್ಳೆಯ ಕೆಲಸ ಮಾಡಿದ್ದೇನೆ, ಎಂಥ ದೊಡ್ಡ ಕೆಲಸ ಮಾಡಿದ್ದೇನೆ ಎಂದು ಹಲವರು ಹೇಳುತ್ತಾರೆ. 'ಮನದ ಮಾತಿನ' ಅನೇಕ ಕೇಳುಗರು ತಮ್ಮ ಪತ್ರಗಳಲ್ಲಿ ತುಂಬಾ ಹೊಗಳುತ್ತಾರೆ. ಕೆಲವರು ಈ ಕೆಲಸ ಮಾಡಿದ್ದೇನೆ ಎಂದು ಹೇಳಿದರೆ, ಇನ್ನು ಕೆಲವರು ಆ ಕೆಲಸ ಮಾಡಿರುವುದಾಗಿ, ಇಂಥ ಒಳ್ಳೆಯ ಕಾರ್ಯ ಮಾಡಿದೆ ಎಂದು ಕೆಲವರು ಕೊಂಡಾಡಿದರೆ, ಇದನ್ನು ಅತ್ಯುತ್ತಮವಾಗಿ ಮಾಡಿದರು ಎನ್ನುತ್ತಾರೆ, ಆದರೆ, ನಾನು ಭಾರತದ ಸಾಮಾನ್ಯ ಮನುಷ್ಯನ ಪ್ರಯತ್ನಗಳು, ಕಠಿಣ ಪರಿಶ್ರಮ ಮತ್ತು ಅವರ ಇಚ್ಛಾಶಕ್ತಿಯನ್ನು ಕಂಡಾಗ, ಭಾವುಕನಾಗುತ್ತೇನೆ. ಅದು ದೊಡ್ಡ ಗುರಿಯೇ ಆಗಿರಲಿ, ಕಠಿಣ ಸವಾಲಾಗಿರಲಿ, ಭಾರತದ ಜನರ ಸಾಮೂಹಿಕ ಬಲ, ಸಾಮೂಹಿಕ ಶಕ್ತಿ, ಪ್ರತಿ ಸವಾಲಿಗೆ ಪರಿಹಾರವನ್ನು ನೀಡುತ್ತದೆ. ಎರಡು–ಮೂರು ದಿನಗಳ ಹಿಂದೆ, ದೇಶದ ಪಶ್ಚಿಮ ತೀರ ಭಾಗದಲ್ಲಿ ಎಷ್ಟು ದೊಡ್ಡ ಚಂಡಮಾರುತ ಅಪ್ಪಳಿಸಿತು ಎಂಬುದನ್ನು ನಾವು ನೋಡಿದ್ದೇವೆ. ಬಿರುಸಾದ ಗಾಳಿ, ಭಾರೀ ಮಳೆ. ಬಿಪಾರ್ಜೋಯ್ ಚಂಡಮಾರುತ ಕಛ್‌ನಲ್ಲಿ ಸಾಕಷ್ಟು ವಿನಾಶವನ್ನು ಉಂಟುಮಾಡಿತು, ಆದರೆ ಕಛ್ ಜನತೆ ಇಂತಹ ಅಪಾಯಕಾರಿ ಚಂಡಮಾರುತವನ್ನು ಧೈರ್ಯ ಮತ್ತು ಸನ್ನದ್ಧತೆ ಮೂಲಕ ಎದುರಿಸಿದ್ದು ಅಭೂತಪೂರ್ವವಾಗಿತ್ತು. ಎರಡು ದಿನಗಳ ನಂತರ, ಕಛ್ ಜನರು ತಮ್ಮ ಹೊಸ ವರ್ಷ ಆಷಾಢಿ ಬೀಜ್ ಆಚರಿಸಲಿದ್ದಾರೆ. ಕಾಕತಾಳೀಯವಾಗಿ ಕಛ್‌ನಲ್ಲಿ ಆಷಾಢಿ ಬೀಜ್ ಅನ್ನು ಮಳೆಯ ಆರಂಭದ ಸಂಕೇತವೆಂದು ಪರಿಗಣಿಸಲಾಗುತ್ತದೆ. ನಾನು ತುಂಬಾ ವರ್ಷಗಳಿಂದ ಕಛ್‌ಗೆ ಭೇಟಿ ನೀಡುತ್ತಿದ್ದೇನೆ, ಅಲ್ಲಿನ ಜನರ ಸೇವೆ ಮಾಡುವ ಸೌಭಾಗ್ಯವೂ ನನಗೆ ಲಭಿಸಿದೆ ಮತ್ತು ಇದಕ್ಕಾಗಿ ಕಛ್ ಜನತೆಯ ಸ್ಥೈರ್ಯ ಮತ್ತು ಜೀವನೋತ್ಸಾಹದ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಎರಡು ದಶಕಗಳ ಹಿಂದೆ ಸಂಭವಿಸಿದ ಭೀಕರ ಭೂಕಂಪದ ನಂತರ ಕಛ್ ಎಂದಿಗೂ ಚೇತರಿಸಿಕೊಳ್ಳುವುದಿಲ್ಲ ಎಂದು ಹೇಳಲಾಗುತ್ತಿದ್ದ, ಅದೇ ಜಿಲ್ಲೆ ಇಂದು ದೇಶದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಜಿಲ್ಲೆಗಳಲ್ಲಿ ಒಂದಾಗಿದೆ. ಬಿಪರ್ಜೋಯ್ ಚಂಡಮಾರುತದಿಂದ ಉಂಟಾದ ವಿನಾಶದಿಂದಲೂ ಕಛ್ ಜನತೆ ಬಹಳ ವೇಗವಾಗಿ ಹೊರಬರಲಿದ್ದಾರೆ ಎಂದು ನನಗೆ ವಿಶ್ವಾಸವಿದೆ.

ಸ್ನೇಹಿತರೇ, ನೈಸರ್ಗಿಕ ವಿಕೋಪಗಳ ಮೇಲೆ ಯಾರದ್ದೇ ನಿಯಂತ್ರಣ ಇರುವುದಿಲ್ಲ, ಆದರೆ, ಭಾರತವು ಕಳೆದ ಕೆಲ ವರ್ಷಗಳಲ್ಲಿ ಅಭಿವೃದ್ಧಿಪಡಿಸಿದ ವಿಪತ್ತು ನಿರ್ವಹಣೆಯ ಶಕ್ತಿಯು ಇಂದು ಒಂದು ಉದಾಹರಣೆಯಾಗಿ ಹೊರಹೊಮ್ಮುತ್ತಿದೆ. ನೈಸರ್ಗಿಕ ವಿಪತ್ತುಗಳನ್ನು ಎದುರಿಸಲು ಇರುವ ಉತ್ತಮ ಮಾರ್ಗವೆಂದರೆ – ಪ್ರಕೃತಿಯ ಸಂರಕ್ಷಣೆ. ಮಳೆಗಾಲದ ಇಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚುತ್ತದೆ. ಅದಕ್ಕಾಗಿಯೇ ಇಂದು ದೇಶವು 'ಕ್ಯಾಚ್ ದಿ ರೈನ್' ನಂತಹ ಅಭಿಯಾನಗಳ ಮೂಲಕ ಸಾಮೂಹಿಕ ಪ್ರಯತ್ನಗಳನ್ನು ಮಾಡುತ್ತಿದೆ. ಕಳೆದ ತಿಂಗಳು 'ಮನದ ಮಾತಿನಲ್ಲಿ ನಾವು ನೀರಿನ ಸಂರಕ್ಷಣೆಗೆ ಸಂಬಂಧಿಸಿದ ಸ್ಟಾರ್ಟ್‌ಅಪ್‌ಗಳ ಬಗ್ಗೆ ಚರ್ಚಿಸಿದ್ದೇವೆ. ಈ ಬಾರಿಯೂ ನನಗೆ ಪತ್ರ





Scanned with ACE Scanner

ಬರೆದು ನೀರಿನ ಪ್ರತಿ ಹನಿಯನ್ನೂ ಉಳಿಸಲು ಶತಪ್ರಯತ್ನ ಪಡುತ್ತಿರುವ ಇಂತಹ ಅನೇಕರ ಬಗ್ಗೆ ಹೇಳಿದ್ದಾರೆ. ಅಂತಹ ಸ್ನೇಹಿತರಲ್ಲಿ ಒಬ್ಬರು ಉತ್ತರಪ್ರದೇಶದ ಬಾಂದಾ ಜಿಲ್ಲೆಯ ತುಳಸಿರಾಮ್ ಯಾದವ್. ತುಳಸಿರಾಮ್ ಯಾದವ್ ಅವರು ಲುಕತರಾ ಗ್ರಾಮ ಪಂಚಾಯಿತಿಯ ಮುಖ್ಯಸ್ಥರು. ಬಾಂದಾ ಮತ್ತು ಬುಂದೇಲ್ಖಂಡ್ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಎಷ್ಟಿದೆ ಎಂದು ನಿಮಗೆ ಗೊತ್ತು. ಈ ಸವಾಲನ್ನು ಮೆಟ್ಟಿ ನಿಲ್ಲಲು ತುಳಸಿರಾಮ್ ಅವರು ಗ್ರಾಮಸ್ಥರ ಜೊತೆಗೂಡಿ 40ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದ್ದಾರೆ. ತುಳಸಿರಾಮ್ ಅವರು - ಗದ್ದೆಯ ನೀರು ಗದ್ದೆಗೆ, ಹಳ್ಳಿಯ ನೀರು ಹಳ್ಳಿಗೆ ಎಂಬುದನ್ನು ತಮ್ಮ ಅಭಿಯಾನದ ಧ್ಯೇಯವಾಕ್ಯವನ್ನಾಗಿ ಮಾಡಿಕೊಂಡಿದ್ದಾರೆ. ಇಂದು ಅವರ ಶ್ರಮದ ಫಲವೇ ಅವರ ಗ್ರಾಮದಲ್ಲಿ ಅಂತರ್ಜಲ ಮಟ್ಟ ಸುಧಾರಿಸುತ್ತಿದೆ. ಅದೇ ರೀತಿ ಉತ್ತರಪ್ರದೇಶ ಜನತೆ ಒಟ್ಟಾಗಿ ಹಾಪು ಜಿಲ್ಲೆಯ ಬತ್ತಿಹೋದ ನದಿಯನ್ನು ಪುನರುಜ್ಜೀವನಗೊಳಿಸಿದ್ದಾರೆ. ಬಹಳ ಹಿಂದೆ ನೀಮ್ ಹೆಸರಿನ ನದಿ ಇತ್ತು. ಸಮಯ ಸರಿದಂತೆ ಅದು ಕಣ್ಮರೆಯಾಗಿತ್ತು, ಆದರೆ ಅವಳು ಯಾವಾಗಲೂ ಸ್ಥಳೀಯ ನೆನಪುಗಳಲ್ಲಿ ಮತ್ತು ಜಾನಪದದಲ್ಲಿ ಆ ನದಿಯನ್ನು ನೆನಪಿಸಿಕೊಳ್ಳಲಾಗುತ್ತಿತ್ತು. ಅಂತಿಮವಾಗಿ, ಜನರು ತಮ್ಮ ಈ ನೈಸರ್ಗಿಕ ಸಂಪತ್ತನ್ನು ಪುನರುಜ್ಜೀವನಗೊಳಿಸಲು ನಿರ್ಧರಿಸಿದರು. ಜನರ ಸಾಂಘಿಕ ಪ್ರಯತ್ನದಿಂದ ಈಗ 'ನೀಮ್ ನದಿ' ಮತ್ತೆ ಜೀವ ತುಂಬಿ ಹರಿಯಲಾರಂಭಿಸಿದೆ. ನದಿಯ ಉಗಮ ಸ್ಥಾನವನ್ನು ಅಮೃತ ಸರೋವರ ಎಂಬ ಹೆಸರಿನಿಂದ ಅಭಿವೃದ್ಧಿಪಡಿಸಲಾಗುತ್ತಿದೆ.

ಸ್ನೇಹಿತರೇ, ಈ ನದಿಗಳು, ಕಾಲುವೆಗಳು, ಸರೋವರಗಳು ನೀರಿನ ಮೂಲಗಳು ಮಾತ್ರವಲ್ಲ, ಜೀವನದ ಬಣ್ಣಗಳು ಮತ್ತು ಭಾವನೆಗಳು ಸಹ ಅವುಗಳೊಂದಿಗೆ ಮಿಳಿತವಾಗಿವೆ.

ಕೆಲ ದಿನಗಳ ಹಿಂದಷ್ಟೇ ಮಹಾರಾಷ್ಟ್ರದಲ್ಲಿ ಇಂತಹದ್ದೇ ದೃಶ್ಯ ನೋಡುವ ಅವಕಾಶ ಲಭಿಸಿತ್ತು. ಈ ಪ್ರದೇಶವು ಬಹುತೇಕ ಬರಗಾಲದಿಂದಾವೃತವಾಗಿರುತ್ತದೆ. ಐದು ದಶಕಗಳಿಂದ ನಿರೀಕ್ಷೆ ನಂತರ ನೀಲವಂಡೆ ಅಣೆಕಟ್ಟಿನ ಕಾಲುವೆ ಕಾಮಗಾರಿ ಇಲ್ಲಿ ಈಗ ಪೂರ್ಣಗೊಳ್ಳುತ್ತಿದೆ. ಕೆಲ ದಿನಗಳ ಹಿಂದೆ ಪರೀಕ್ಷೆಗೆಂದು ಕಾಲುವೆಗೆ ನೀರು ಹರಿಸಲಾಗಿತ್ತು. ಈ ವೇಳೆ ತೆಗೆದಂತಹ ಚಿತ್ರಗಳು ನಿಜಕ್ಕೂ ಭಾವುಕರನ್ನಾಗಿಸುವಂಥವು. ಹೋಳಿ ಹಬ್ಬ-ದೀಪಾವಳಿ ಹಬ್ಬದಂತೆ ಗ್ರಾಮದ ಜನರು ಕುಣಿದು ಕುಪ್ಪಳಿಸಿದರು. ಸ್ನೇಹಿತರೇ, ನಿರ್ವಹಣೆಯ ವಿಷಯದ ಬಗ್ಗೆ ಮಾತನಾಡುತ್ತಿರುವಾಗ, ಇಂದು ನಾನು ಛತ್ರಪತಿ ಶಿವಾಜಿ ಮಹಾರಾಜರನ್ನು ನೆನಪಿಸಿಕೊಳ್ಳಬಯಸುತ್ತೇನೆ. ಛತ್ರಪತಿ ಶಿವಾಜಿ ಮಹಾರಾಜರ ಶೌರ್ಯದ ಜೊತೆಗೆ ಅವರ ಆಡಳಿತ ಮತ್ತು ಅವರ ನಿರ್ವಹಣಾ ಕೌಶಲ್ಯದಿಂದ ಕಲಿಯುವಂಥದ್ದು ಬಹಳಷ್ಟಿದೆ. ವಿಶೇಷವಾಗಿ ಹೇಳುವುದಾದರೆ, ಛತ್ರಪತಿ ಶಿವಾಜಿ ಮಹಾರಾಜರು ಜಲ ನಿರ್ವಹಣೆ ಮತ್ತು ನೌಕಾಪಡೆಗೆ ಸಂಬಂಧಿಸಿದಂತೆ ಮಾಡಿದ ಕಾರ್ಯಗಳು, ಇನ್ನೂ ಭಾರತೀಯ ಇತಿಹಾಸದ ಹೆಮ್ಮೆಯನ್ನು ವೃದ್ಧಿಸುತ್ತಿವೆ. ಅವರು ನಿರ್ಮಿಸಿದ ಜಲಾವೃತ ಕೋಟೆಗಳು ಸಮುದ್ರದ ಮಧ್ಯದಲ್ಲಿ ಶತಮಾನಗಳ ನಂತರವೂ ಹೆಮ್ಮೆಯಿಂದ ತಲೆಎತ್ತಿ ನಿಂತಿವೆ. ಈ ತಿಂಗಳ ಆರಂಭದಲ್ಲಿಯೇ ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ 350 ವರ್ಷಗಳು ಪೂರ್ಣಗೊಂಡಿವೆ. ಈ ಸಂದರ್ಭವನ್ನು ದೊಡ್ಡ ಹಬ್ಬವನ್ನಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರದ ರಾಯಗಡ ಕೋಟೆಯಲ್ಲಿ ಅದಕ್ಕೆ ಸಂಬಂಧಿಸಿದ ಅದ್ದೂರಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಹಲವು ವರ್ಷಗಳ ಹಿಂದೆ 2014 ರಲ್ಲಿ, ರಾಯಗಢಕ್ಕೆ ತೆರಳುವ ಮತ್ತು ಆ ಪುಣ್ಯಭೂಮಿಗೆ ನಮನ ಸಲ್ಲಿಸುವ ಸೌಭಾಗ್ಯ ನನಗೆ ಲಭಿಸಿತ್ತು ಎಂಬುದು ನನಗೆ ನೆನಪಿದೆ. ಈ ಸಂದರ್ಭದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ನಿರ್ವಹಣಾ ಕೌಶಲ್ಯವನ್ನು ತಿಳಿದುಕೊಳ್ಳುವುದು, ಅದರಿಂದ ಕಲಿಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದರಿಂದ ನಮ್ಮಲ್ಲಿ ನಮ್ಮ ಪರಂಪರೆಯ ಬಗ್ಗೆ ಹೆಮ್ಮೆಯ ಭಾವನೆ ಮೂಡುತ್ತದೆ ಮತ್ತು ಭವಿಷ್ಯಕ್ಕಾಗಿ ನಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಇದು ಪ್ರೇರಣೆಯೂ ದೊರೆಯುತ್ತದೆ.




ನನ್ನ ಪ್ರೀತಿಯ ದೇಶವಾಸಿಗಳೇ, ರಾಮಸೇತು ನಿರ್ಮಾಣಕ್ಕೆ ಸಹಾಯ ಮಾಡಲು ಮುಂದೆ ಬಂದ ರಾಮಾಯಣದ ಪುಟ್ಟ ಅಳಿಲಿನ ಬಗ್ಗೆ ನೀವು ಕೇಳಿರಬೇಕು. ನಾನು ಹೇಳುವುದರ ತಾತ್ಪರ್ಯವೇನೆಂದರೆ ಉದ್ದೇಶ ಸ್ಪಷ್ಟವಾಗಿದ್ದಾಗ, ಪ್ರಯತ್ನದಲ್ಲಿ ಪ್ರಾಮಾಣಿಕತೆ ಇದ್ದರೆ ಯಾವ ಗುರಿಯೂ ಕಷ್ಟವಾಗುವುದಿಲ್ಲ. ಭಾರತವೂ ಇಂದು ಈ ಉದಾತ್ತ ಉದ್ದೇಶದೊಂದಿಗೆ ಬಹು ದೊಡ್ಡ ಸವಾಲನ್ನು ಎದುರಿಸುತ್ತಿದೆ ಅದೇನೆಂದರೆ - ಟಿ.ಬಿ, ಇದನ್ನು ಕ್ಷಯರೋಗ ಎಂದೂ ಕರೆಯುತ್ತಾರೆ.



Scanned with ACE Scanner

2025 ರ ವೇಳೆಗೆ ಭಾರತವನ್ನು ಟಿ.ಬಿ. ಮುಕ್ತ ರಾಷ್ಟ್ರವನ್ನಾಗಿಸುವ ಸಂಕಲ್ಪಗೈಯ್ಯಲಾಗಿದೆ, ಈ ಗುರಿ ಖಂಡಿತ ಬಹಳ ದೊಡ್ಡದು. ಟಿ.ಬಿ.ಯ ವಿಷಯ ತಿಳಿದ ನಂತರ ಕುಟುಂಬಸ್ಥರೇ ದೂರ ಹೋಗುತ್ತಿದ್ದ ಒಂದು ಕಾಲವಿತ್ತು, ಇಂದಿನ ಕಾಲಘಟ್ಟದಲ್ಲಿ ಟಿ.ಬಿ. ರೋಗಿಗಳನ್ನು ಕುಟುಂಬದ ಸದಸ್ಯರನ್ನಾಗಿ ಮಾಡಿಕೊಳ್ಳುವ ಮೂಲಕ ಅವರಿಗೆ ಸಹಾಯ ಮಾಡಲಾಗುತ್ತಿದೆ. ಈ ಕ್ಷಯವನ್ನು ಮೂಲದಿಂದ ತೊಡೆದುಹಾಕಲು ನಿಕ್ಷಯ್ ಸ್ನೇಹಿತರು ಮುಂದಾಗಿದ್ದಾರೆ. ದೇಶದಲ್ಲಿ ಹೆಚ್ಚಿನ ಸಂಖ್ಯೆಯ ವಿವಿಧ ಸಾಮಾಜಿಕ ಸಂಸ್ಥೆಗಳು ನಿಕ್ಷಯ ಮಿತ್ರರಾಗಿದ್ದಾರೆ. ಹಳ್ಳಿಗಳಲ್ಲಿ ಪಂಚಾಯಿತ್ತಿಗಳಲ್ಲಿ ಸಾವಿರಾರು ಜನರು ಮುಂದೆ ಬಂದು ಟಿ.ಬಿ. ರೋಗಿಗಳನ್ನು ದತ್ತು ಪಡೆದಿದ್ದಾರೆ ಹಾಗೂ ಟಿಬಿ ರೋಗಿಗಳಿಗೆ ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಈ ಸಾರ್ವಜನಿಕ ಭಾಗವಹಿಸುವಿಕೆ ಈ ಅಭಿಯಾನದ ದೊಡ್ಡ ಶಕ್ತಿಯಾಗಿದೆ. ಈ ಭಾಗವಹಿಸುವಿಕೆಯಿಂದಾಗಿ ಇಂದು ದೇಶದಲ್ಲಿ 10 ಲಕ್ಷಕ್ಕೂ ಹೆಚ್ಚು ಟಿಬಿ ರೋಗಿಗಳನ್ನು ದತ್ತು ತೆಗೆದುಕೊಳ್ಳಲಾಗಿದೆ. ಸುಮಾರು 85 ಸಾವಿರ ನಿಕ್ಷಯ್ ಸ್ನೇಹಿತರು ಈ ಪುಣ್ಯದ ಕೆಲಸವನ್ನು ಸಹ ಮಾಡಿದ್ದಾರೆ. ನಾಡಿನ ಅನೇಕ ಸರಪಂಚ್‌ರು, ಗ್ರಾಮದ ಮುಖಂಡರೂ ಸಹ ತಮ್ಮ ಗ್ರಾಮಗಳಿಂದ ಟಿ.ಬಿ. ನಿರ್ಮೂಲನೆ ಮಾಡಿಯೇ ತೀರುತ್ತೇವೆ ಎಂಬ ಪಣ ತೊಟ್ಟಿದ್ದಾರೆ ಎಂಬುದು ನನಗೆ ಬಹಳ ಸಂತೋಷವೆನಿಸಿದೆ.

ನೈನಿತಾಲ್‌ನ ಹಳ್ಳಿಯೊಂದರ ನಿಕ್ಷಯ್ ಸ್ನೇಹಿತ ಶ್ರೀ ದಿಕರ್ ಸಿಂಗ್ ಮೇವಾರಿ ಅವರು ಆರು ಟಿಬಿ ರೋಗಿಗಳನ್ನು ದತ್ತು ಪಡೆದಿದ್ದಾರೆ. ಅದೇ ರೀತಿ, ಕಿನ್ನೌರ್‌ನ ಗ್ರಾಮ ಪಂಚಾಯತ್‌ನ ಮುಖ್ಯಸ್ಥರಾದ ಪ್ರಮುಖ ನಿಕ್ಷಯ್ ಮಿತ್ರ ಶ್ರೀ ಜ್ಞಾನ್ ಸಿಂಗ್, ತಮ್ಮ ಬ್ಲಾಕ್‌ನಲ್ಲಿ ಟಿಬಿ ರೋಗಿಗಳಿಗೆ ಅಗತ್ಯವಿರುವ ಎಲ್ಲ ಸಹಾಯವನ್ನು ಒದಗಿಸುವಲ್ಲಿ ತೊಡಗಿಸಿಕೊಂಡಿದ್ದಾರೆ. ಭಾರತವನ್ನು ಟಿ.ಬಿ ಮುಕ್ತಗೊಳಿಸುವ ಅಭಿಯಾನದಲ್ಲಿ ನಮ್ಮ ಮಕ್ಕಳು ಮತ್ತು ಯುವ ಸ್ನೇಹಿತರು ಕೂಡ ಹಿಂದೆ ಬಿದ್ದಿಲ್ಲ. ಹಿಮಾಚಲ ಪ್ರದೇಶದ ಊನಾದ 7 ವರ್ಷದ ಹೆಣ್ಣು ಮಗಳು ನಳಿನಿ ಸಿಂಗ್ ಅದ್ಭುತ ಕೆಲಸವನ್ನು ನೋಡಿ. ಅವಳು ತನ್ನ ಪಾಕೆಟ್ ಮನಿಯಿಂದ ಟಿ.ಬಿ. ರೋಗಿಗಳಿಗೆ ಸಹಾಯ ಮಾಡುತ್ತಿದ್ದಾಳೆ. ಮಕ್ಕಳು ಹುಂಡಿಯನ್ನು ಎಷ್ಟು ಇಷ್ಟಪಡುತ್ತಾರೆ ಎಂಬುದು ನಿಮಗೆ ತಿಳಿದಿದೆ, ಆದರೆ ಮಧ್ಯಪ್ರದೇಶದ ಕಟ್ನಿ ಜಿಲ್ಲೆಯ 13 ವರ್ಷದ ಮೀನಾಕ್ಷಿ ಮತ್ತು ಪಶ್ಚಿಮ ಬಂಗಾಳದ ಡೈಮಂಡ್ ಹಾರ್ಬರ್ನ 11 ವರ್ಷದ ಬರ್ಶ್ವ ಮುಖರ್ಜಿ ಇಬ್ಬರು ಬೇರೆಯೇ ರೀತಿಯ ಮಕ್ಕಳು. ಈ ಇಬ್ಬರೂ ಮಕ್ಕಳು ತಮ್ಮ ಹುಂಡಿಯ ಹಣವನ್ನು ಟಿ.ಬಿ. ಮುಕ್ತ ಭಾರತದ ಅಭಿಯಾನದಲ್ಲಿ ತೊಡಗಿಸಿದ್ದಾರೆ. ಈ ಎಲ್ಲಾ ಉದಾಹರಣೆಗಳು ಭಾವನಾತ್ಮಕವಾಗಿರುವುದ ಜೊತೆಗೆ, ತುಂಬಾ ಸ್ಫೂರ್ತಿದಾಯಕವಾಗಿವೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಉದಾತ್ತವಾಗಿ ಯೋಚಿಸುತ್ತಿರುವ ಈ ಎಲ್ಲ ಮಕ್ಕಳನ್ನು ನಾನು ಹೃತ್ಪೂರ್ವಕವಾಗಿ ಪ್ರಶಂಸಿಸುತ್ತೇನೆ.



ನನ್ನ ಪ್ರಿಯ ದೇಶವಾಸಿಗಳೇ, ಹೊಸ ವಿಚಾರಗಳನ್ನು ಸ್ವಾಗತಿಸಲು ಸದಾ ಸಿದ್ಧರಿರುವುದು ಭಾರತೀಯರಾದ ನಮ್ಮ ಸ್ವಭಾವ. ನಾವು ನಮ್ಮ ವಸ್ತುಗಳನ್ನು ಪ್ರೀತಿಸುತ್ತೇವೆ ಮತ್ತು ಹೊಸ ವಿಷಯಗಳನ್ನು ಅಳವಡಿಸಿಕೊಳ್ಳುತ್ತೇವೆ. ಇದಕ್ಕೊಂದು ಉದಾಹರಣೆ ಎಂದರೆ – ಜಪಾನಿನ ಮಿಯಾವಾಕಿ ತಂತ್ರಜ್ಞಾನ, ಯಾವುದೇ ಸ್ಥಳದ ಮಣ್ಣು ಫಲವತ್ತಾಗಿಲ್ಲದಿದ್ದರೆ, ಆ ಪ್ರದೇಶವನ್ನು ಮತ್ತೆ ಫಲವತ್ತಾಗಿಸಲು ಮಿಯಾವಾಕಿ ತಂತ್ರಜ್ಞಾನವು ಉತ್ತಮ ಮಾರ್ಗವಾಗಿದೆ. ಮಿಯಾವಾಕಿ ಅರಣ್ಯಗಳು ವೇಗವಾಗಿ ಹರಡುತ್ತವೆ ಮತ್ತು ಎರಡು ಮೂರು ದಶಕಗಳಲ್ಲಿ ಜೀವವೈವಿಧ್ಯದ ಕೇಂದ್ರವಾಗುತ್ತವೆ. ಈಗ ಇದು ಭಾರತದ ವಿವಿಧ ಭಾಗಗಳಲ್ಲಿ ಬಹಳ ವೇಗವಾಗಿ ಹರಡುತ್ತಿದೆ. ಕೇರಳದ ಶಿಕ್ಷಕ ಶ್ರೀ ರಾಫಿ ರಾಮನಾಥ್ ಅವರು ಈ ತಂತ್ರಜ್ಞಾನದಿಂದ ಒಂದು ಪ್ರದೇಶದ ಸಂಪೂರ್ಣ ಚಿತ್ರಣವನ್ನೇ ಬದಲಾಯಿಸಿದ್ದಾರೆ. ವಾಸ್ತವವಾಗಿ, ರಾಮನಾಥ್ ಅವರು ತಮ್ಮ ವಿದ್ಯಾರ್ಥಿಗಳಿಗೆ ಪ್ರಕೃತಿ ಮತ್ತು ಪರಿಸರದ ಬಗ್ಗೆ ವಿಸ್ತೃತವಾಗಿ ವಿವರಿಸಲು ಬಯಸಿದ್ದರು. ಇದಕ್ಕಾಗಿ ಅವರು ಗಿಡಮೂಲಿಕೆ ಉದ್ಯಾನವನ್ನೇ ಸಿದ್ಧಪಡಿಸಿದರು. ಅವರ ಉದ್ಯಾನ ಈಗ ಜೀವವೈವಿಧ್ಯ ವಲಯವಾಗಿ ಮಾರ್ಪಟ್ಟಿದೆ. ಅವರ ಈ ಯಶಸ್ಸು ಅವರನ್ನು ಇನ್ನಷ್ಟು ಪ್ರೇರೇಪಿಸಿತು. ಇದಾದ ನಂತರ ರಾಫೀಜಿಯವರು ಮಿಯಾವಾಕಿಯ ತಂತ್ರಜ್ಞಾನದಿಂದ ಮಿನಿ ಅರಣ್ಯವನ್ನು ಮಾಡಿ ಅದಕ್ಕೆ 'ವಿದ್ಯಾವನಂ' ಎಂದು ಹೆಸರಿಟ್ಟರು. ಒಬ್ಬ ಶಿಕ್ಷಕರು ಮಾತ್ರವೇ ಇಂತಹ ಸುಂದರವಾದ ಹೆಸರನ್ನು ಇಡಬಹುದು – 'ವಿದ್ಯಾವನಂ'. ರಾಮನಾಥಜಿಯವರ ಈ 'ವಿದ್ಯಾವನಂ'ನಲ್ಲಿ 115 ವಿಧದ 450ಕ್ಕೂ ಹೆಚ್ಚು ಮರಗಳನ್ನು ಚಿಕ್ಕ ಜಾಗದಲ್ಲಿ ನೆಟ್ಟಿದ್ದಾರೆ. ಅವರ ವಿದ್ಯಾರ್ಥಿಗಳು ಸಹ ಅವರ ನಿರ್ವಹಣೆಗೆ ಸಹಾಯ ಮಾಡುತ್ತಾರೆ. ಸಮೀಪದ ಶಾಲಾ ಮಕ್ಕಳು, ಸಾಮಾನ್ಯ ನಾಗರಿಕರು – ಈ ಸುಂದರ ಸ್ಥಳವನ್ನು ನೋಡಲು ಭಾರಿ ಸಂಖ್ಯೆಯಲ್ಲಿ ಬರುತ್ತಾರೆ. ಮಿಯಾವಾಕಿ ಅರಣ್ಯವನ್ನು ಯಾವುದೇ ಪ್ರದೇಶದಲ್ಲಿ ಹಾಗೂ ನಗರಗಳಲ್ಲಿಯೂ ಸಹ ಸುಲಭವಾಗಿ ಬೆಳೆಸಬಹುದು. ಕೆಲ



Scanned with ACE Scanner

ಸಮಯದ ಹಿಂದೆ ಗುಜರಾತಿನ ಕೆವಾಡಿಯ, ಏಕ್ತಾ ನಗರದಲ್ಲಿ ಮಿಯಾವಾಕಿ ಅರಣ್ಯವನ್ನು ಉದ್ಘಾಟಿಸಿದ್ದೆ. ಕಚ್‌ನಲ್ಲೂ 2001ರ ಭೂಕಂಪದಲ್ಲಿ ಮಡಿದವರ ನೆನಪಿಗಾಗಿ ಮಿಯಾವಾಕಿ ಶೈಲಿಯಲ್ಲಿ ಸ್ಮಾರಕ ವನವನ್ನು ನಿರ್ಮಿಸಲಾಗಿದೆ. ಕಚ್‌ನಂತಹ ಸ್ಥಳದಲ್ಲಿ ಇದರ ಯಶಸ್ಸು, ಅತ್ಯಂತ ಕಠಿಣವಾದ ನೈಸರ್ಗಿಕ ಪರಿಸರದಲ್ಲಿಯೂ ಈ ತಂತ್ರಜ್ಞಾನವು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ತೋರಿಸುತ್ತದೆ. ಅದೇ ರೀತಿ ಅಂಬಾಜಿ ಮತ್ತು ಪಾವಗಡದಲ್ಲೂ ಮಿಯಾವಾಕಿ ಪದ್ಧತಿಯಲ್ಲಿ ಸಸಿಗಳನ್ನು ನೆಡಲಾಗಿದೆ. ಲಕ್ನೋದ ಅಲಿಗಂಜ್‌ನಲ್ಲಿಯೂ ಮಿಯಾವಾಕಿ ಉದ್ಯಾನವನ್ನು ಸಿದ್ಧಪಡಿಸಲಾಗುತ್ತಿದೆ ಎಂದು ನನಗೆ ತಿಳಿದು ಬಂದಿದೆ. ಕಳೆದ ನಾಲ್ಕು ವರ್ಷಗಳಲ್ಲಿ, ಮುಂಬೈ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂತಹ 60 ಕ್ಕೂ ಹೆಚ್ಚು ಅರಣ್ಯಗಳಲ್ಲಿ ಕೆಲಸ ಮಾಡಲಾಗಿದೆ. ಈಗ ಈ ತಂತ್ರಜ್ಞಾನವು ಪ್ರಪಂಚದಾದ್ಯಂತ ಮೆಚ್ಚುಗೆ ಗಳಿಸುತ್ತಿದೆ. ಸಿಂಗಾಪುರ, ಪ್ಯಾರಿಸ್, ಆಸ್ಟ್ರೇಲಿಯಾ, ಮಲೇಶಿಯಾ ಮುಂತಾದ ಹಲವು ದೇಶಗಳಲ್ಲಿ ಇದನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಮಿಯಾವಾಕಿಯ ವಿಧಾನದ ಬಗ್ಗೆ ಕಲಿಯಲು ಪ್ರಯತ್ನಿಸುವಂತೆ ನಾನು ದೇಶವಾಸಿಗಳಿಗೆ, ವಿಶೇಷವಾಗಿ ನಗರವಾಸಿಗಳಲ್ಲಿ ಮನವಿ ಮಾಡುತ್ತೇನೆ. ಈ ಮೂಲಕ, ನಿಮ್ಮ ಭೂಮಿ ಮತ್ತು ಪ್ರಕೃತಿಯನ್ನು ಹಸಿರಾಗಿಸಲು ಮತ್ತು ಸ್ವಚ್ಛವಾಗಿಸಲು ನೀವು ಅಮೂಲ್ಯವಾದ ಕೊಡುಗೆಯನ್ನು ನೀಡಬಹುದಾಗಿದೆ.

ನನ್ನ ಪ್ರಿಯ ದೇಶವಾಸಿಗಳೇ, ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಕೆಲವೊಮ್ಮೆ ಹೆಚ್ಚುತ್ತಿರುವ ಪ್ರವಾಸೋದ್ಯಮದಿಂದಾಗಿ, ಇನ್ನು ಕೆಲವೊಮ್ಮೆ G-20 ರ ಅದ್ಭುತ ಆಯೋಜನೆಯಿಂದಾಗಿ. ಕಾಶ್ಮೀರದ 'ನಾದ್ರು' ದೇಶದ ಹೊರಗೂ ಹೇಗೆ ಇಷ್ಟವಾಗುತ್ತಿದೆ ಎಂದು ಕೆಲ ಸಮಯದ ಹಿಂದೆ ಮನದ ಮಾತಿನಲ್ಲಿ ನಾನು ಹೇಳಿದ್ದೆ. ಇದೀಗ ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಜನರು ಅದ್ಭುತವಾದ ಕೆಲಸವನ್ನು ಮಾಡಿದ್ದಾರೆ. ಬಾರಾಮುಲ್ಲಾದಲ್ಲಿ ಹಿಂದಿನಿಂದಲೂ ಬೇಸಾಯ ಮಾಡಲಾಗುತ್ತಿದ್ದರೂ, ಇಲ್ಲಿ ಹಾಲಿನ ಕೊರತೆಯಿತ್ತು. ಬಾರಾಮುಲ್ಲಾದ ಜನರು ಈ ಸವಾಲನ್ನು ಒಂದು




ಅವಕಾಶವಾಗಿ ತೆಗೆದುಕೊಂಡರು. ಹೆಚ್ಚಿನ ಸಂಖ್ಯೆಯ ಜನರು ಇಲ್ಲಿ ಹೈನುಗಾರಿಕೆಯನ್ನು ಪ್ರಾರಂಭಿಸಿದರು. ಇಲ್ಲಿನ ತಾಯಂದಿರು ಈ ಕಾರ್ಯದಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಉದಾಹರಣೆಗೆ ಸೋದರಿ ಇಶ್ರತ್ ನಬಿ. ಇಶ್ರತ್ ಒಬ್ಬ ಪದವೀಧರರಾಗಿದ್ದು ಮಿರ್ ಸಿಸ್ಟರ್ಸ್ ಡೈರಿ ಫಾರ್ಮ್ ಆರಂಭಿಸಿದ್ದಾರೆ. ಇವರ ಡೇರಿ ಫಾರಂನಿಂದ ಪ್ರತಿದಿನ ಸುಮಾರು 150 ಲೀಟರ್ ಹಾಲು ಮಾರಾಟವಾಗುತ್ತಿದೆ. ಇಂತಹ ಮತ್ತೊಬ್ಬ ಸ್ನೇಹಿತ ಸೋಪೋರ್ನ ವಸಿಂ ಅನಾಯತ್. ವಸಿಂ ಎರಡು ಡಜನ್‌ಗಿಂತಲೂ ಹೆಚ್ಚು ರಾಸುಗಳನ್ನು ಹೊಂದಿದ್ದಾರೆ ಮತ್ತು ಪ್ರತಿದಿನ ಇನ್ನೂರು ಲೀಟರ್‌ಗಿಂತಲೂ ಹೆಚ್ಚು ಹಾಲನ್ನು ಮಾರಾಟ ಮಾಡುತ್ತಾರೆ. ಮತ್ತೊಬ್ಬ ಯುವಕ ಅಬಿದ್ ಹುಸೇನ್ ಕೂಡ ಹೈನುಗಾರಿಕೆ ಮಾಡುತ್ತಿದ್ದಾರೆ. ಅವರ ಕೆಲಸವೂ ಸಾಕಷ್ಟು ಪ್ರಗತಿಯಲ್ಲಿದೆ. ಇಂಥವರ ಪರಿಶ್ರಮದಿಂದ ಬಾರಾಮುಲ್ಲಾದಲ್ಲಿ ನಿತ್ಯ 5.5 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಇಡೀ ಬಾರಾಮುಲ್ಲಾ ಹೊಸ ಶ್ವೇತ ಕ್ರಾಂತಿಗೆ ನಾಂದಿ ಹಾಡುತ್ತಿದೆ. ಕಳೆದ ಎರಡೂವರೆಯಿಂದ 3 ವರ್ಷಗಳಲ್ಲಿ ಇಲ್ಲಿ 500ಕ್ಕೂ ಹೆಚ್ಚು ಡೈರಿ ಘಟಕಗಳು ಆರಂಭಗೊಂಡಿವೆ. ಬಾರಾಮುಲ್ಲಾದ ಡೈರಿ ಉದ್ಯಮವು ನಮ್ಮ ದೇಶದ ಪ್ರತಿಯೊಂದು ಭಾಗವು ಸಾಧ್ಯತೆಗಳಿಂದ ತುಂಬಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಯಾವುದೇ ಪ್ರದೇಶದ ಜನರ ಸಾಮೂಹಿಕ ಇಚ್ಛಾಶಕ್ತಿ ಯಾವುದೇ ಗುರಿಯನ್ನು ಸಾಧಿಸಿ ತೋರಿಸಬಲ್ಲುದು.

ನನ್ನ ಪ್ರೀತಿಯ ದೇಶವಾಸಿಗಳೇ, ಈ ತಿಂಗಳು ಭಾರತಕ್ಕೆ ಕ್ರೀಡಾ ಪ್ರಪಂಚದಿಂದ ಅನೇಕ ಸಂತೋಷಕರ ಸುದ್ದಿಗಳು ಬಂದಿವೆ. ಭಾರತ ತಂಡವು ಮೊದಲಬಾರಿಗೆ ಮಹಿಳಾ ಜ್ಯೂನಿಯರ್ ಏಶಿಯಾ ಕಪ್ ಗೆದ್ದು ಭಾರತದ ತ್ರಿವರ್ಣ ಧ್ವಜದ ಗೌರವ ಹೆಚ್ಚಿಸಿದೆ. ಇದೇ ತಿಂಗಳು ನಮ್ಮ ಪುರುಷರ ಹಾಕಿ ತಂಡ ಕೂಡಾ ಜ್ಯೂನಿಯರ್ ಹಾಕಿ ಕಪ್ ತನ್ನದಾಗಿಸಿಕೊಂಡಿದೆ. ಇದರೊಂದಿಗೆ ನಮ್ಮ ಈ ಪಂದ್ಯಾವಳಿಯ ಇತಿಹಾಸದಲ್ಲಿ ಅತಿ ಹೆಚ್ಚು ಗೆಲುವು ದಾಖಲಿಸಿದ ತಂಡ ಎಂಬ ಹೆಗ್ಗಳಿಕೆಗೆ ಕೂಡಾ ನಾವು ಪಾತ್ರರಾಗಿದ್ದೇವೆ. ಜ್ಯೂನಿಯರ್ ಶೂಟಿಂಗ್ ವಿಶ್ವ ಕಪ್‌ನಲ್ಲಿ ಕೂಡಾ ನಮ್ಮ ಜ್ಯೂನಿಯರ್ ತಂಡ ಅದ್ಭುತಗಳನ್ನು ಮಾಡಿ ತೋರಿಸಿದೆ. ಭಾರತೀಯ ತಂಡವು ಈ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಈ ಪಂದ್ಯಾವಳಿಯಲ್ಲಿ ಒಟ್ಟು ಚಿನ್ನದ ಪದಕಗಳಲ್ಲಿ ಶೇಕಡಾ 20 ರಷ್ಟು ಪದಕಗಳು ಭಾರತಕ್ಕೆ ಸಂದಿವೆ. ಇದೇ ಜೂನ್ ತಿಂಗಳಿನಲ್ಲಿ ಇಪ್ಪತ್ತು ವರ್ಷದೊಳಗಿನವರ ಏಶಿಯ ಅಥ್ಲೆಟಿಕ್ಸ್ ಪಂದ್ಯಾವಳಿ ಕೂಡಾ ನಡೆಯಿತು. ಇದರಲ್ಲಿ ಭಾರತ ಪದಕ ಪಟ್ಟಿಯಲ್ಲಿ 45 ದೇಶಗಳ ಪೈಕಿ ಮೂರು ಸ್ಥಾನಗಳಲ್ಲಿ ಒಂದಾಗಿದೆ.

ಸ್ನೇಹಿತರೇ, ನಮಗೆ ಅಂತಾರಾಷ್ಟ್ರೀಯ ಕ್ರೀಡಾಕೂಟಗಳ ಬಗ್ಗೆ ತಿಳಿದು ಬರುತ್ತಿತ್ತಾದರೂ, ಅದರಲ್ಲಿ ಸಾಮಾನ್ಯವಾಗಿ ಭಾರತದ ಹೆಸರಿನ ಪ್ರಸ್ತಾವನೆ ಇರುತ್ತಿರಲಿಲ್ಲ. ಇಂದು ನಾನು ಕೇವಲ ಹಿಂದಿನ ಕೆಲವು ವಾರಗಳ ಯಶಸ್ಸಿನ ಬಗ್ಗೆ ಮಾತ್ರಾ ಹೇಳುತ್ತಿದ್ದೇನೆ, ಆದರೂ ಇದರ ಪಟ್ಟಿ ಇಷ್ಟು ದೊಡ್ಡದಾಗಿದೆ. ಇದು ನಮ್ಮ ಯುವಸಮುದಾಯದ ನಿಜವಾದ ಸಮರ್ಥವಾಗಿದೆ. ಇಂತಹ ಅನೇಕ ಕ್ರೀಡೆಗಳು ಮತ್ತು ಪಂದ್ಯಾವಳಿಗಳು ಇವೆ, ಇಂದು ಈ ಸ್ಪರ್ಧೆಗಳಲ್ಲಿ ಭಾರತ ಮೊದಲಬಾರಿಗೆ ತನ್ನ ಅಸ್ತಿತ್ವವನ್ನು ದಾಖಲಿಸುತ್ತಿದೆ. ಲಾಂಗ್



Scanned with ACE Scanner

ಜಂಪ್‌ನಲ್ಲಿ ಶ್ರೀಶಂಕರ್ ಮುರಳಿ ಅವರು ಪ್ಯಾರಿಸ್ ಡೈಮಂಡ್ ಲೀಗ್ ನಂತಹ ಪ್ರತಿಷ್ಠಿತ ಪಂದ್ಯಾವಳಿಯಲ್ಲಿ ದೇಶಕ್ಕೆ ಕಂಚಿನ ಪದಕ ತಂದುಕೊಟ್ಟರು. ಇದು ಈ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲ ಪದಕವಾಗಿದೆ. ಕಿರ್ಗಿಸ್ತಾನದಲ್ಲೂ ಹದಿನೇಳು ವರ್ಷದೊಳಗಿನವರ ಮಹಿಳಾ ಕುಸ್ತಿ ತಂಡವು ಯಶಸ್ಸು ಸಾಧಿಸಿದೆ. ನಾನು ದೇಶದ ಈ ಎಲ್ಲಾ ಕ್ರೀಡಾಪಟುಗಳಿಗೆ, ಅವರ ತಾಯಿತಂದೆಯರಿಗೆ ಮತ್ತು ಕೋಚ್‌ಗಳಿಗೆ ಈ ಪ್ರಯತ್ನಗಳಿಗಾಗಿ ಅಭಿನಂದಿಸುತ್ತಿದ್ದೇನೆ.

ಸ್ನೇಹಿತರೇ, ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ದೇಶದ ಈ ಯಶಸ್ಸಿನ ಹಿಂದೆ ರಾಷ್ಟ್ರ ಮಟ್ಟದ ನಮ್ಮ ಕ್ರೀಡಾಪಟುಗಳ ಕಠಿಣ ಶ್ರಮ ಅಡಗಿರುತ್ತದೆ. ಇಂದು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಒಂದು ಹೊಸ ಉತ್ಸಾಹದೊಂದಿಗೆ ಕ್ರೀಡೆಗಳನ್ನು ಆಯೋಜಿಸಲಾಗುತ್ತಿದೆ. ಇದರಿಂದ ಕ್ರೀಡಾಪಟುಗಳಿಗೆ ಆಟವಾಡುವ, ಗೆಲ್ಲುವ ಮತ್ತು ಸೋಲಿನಿಂದ ಕಲಿಯುವ ಅವಕಾಶ ದೊರೆಯುತ್ತದೆ. ಈ ನಡುವೆ ಉತ್ತರ ಪ್ರದೇಶದಲ್ಲಿ ಖೇಲೋ ಇಂಡಿಯಾ ಯೂನಿವರ್ಸಿಟಿಗೇಮ್ಸ್ ಆಯೋಜಿಸಲಾಗಿತ್ತು. ಇದರಲ್ಲಿ ಯುವಜನತೆ ಅತ್ಯಂತ ಉತ್ಸಾಹ ಮತ್ತು ಹುರುಪಿನಿಂದ ಪಾಲ್ಗೊಂಡಿದ್ದು ಕಂಡುಬಂದಿತು. ಈ ಕ್ರೀಡೆಗಳಲ್ಲಿ ನಮ್ಮ ಯುವಜನತೆ ಹನ್ನೊಂದು ದಾಖಲೆಗಳನ್ನು ಮುರಿದರು. ಈ ಕ್ರೀಡಾಕೂಟದಲ್ಲಿ ಪಂಜಾಬ್ ವಿಶ್ವವಿದ್ಯಾಲಯ, ಅಮೃತ್ ಸರ್‌ನ ಗುರು ನಾನಕ್ ದೇವ್ ವಿಶ್ವ ವಿದ್ಯಾಲಯ ಮತ್ತು ಕರ್ನಾಟಕದ ಜೈನ್ ವಿಶ್ವವಿದ್ಯಾಲಯಗಳು ಪದಕ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಇದ್ದವು.


ಸ್ನೇಹಿತರೇ, ಈ ಪಂದ್ಯಾವಳಿಗಳ ಪ್ರಮುಖ ಅಂಶವೆಂದರೆ, ಇವುಗಳ ಕಾರಣದಿಂದ ಅನೇಕ ಯುವ ಕ್ರೀಡಾಪಟುಗಳ ಅನೇಕ ಸ್ಫೂರ್ತಿದಾಯಕ ಕತೆಗಳು ಬೆಳಕಿಗೆ ಬರುತ್ತವೆ. ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ರೋಯಿಂಗ್ ಸ್ಪರ್ಧೆಯಲ್ಲಿ ಅಸ್ಸಾಂನ ಕಾಟನ್ ವಿಶ್ವವಿದ್ಯಾಲಯ ಅನ್ಯತಮ್ ರಾಜ್ ಕುಮಾರ್ ಇಂತಹ ಪಂದ್ಯಾವಳಿಯಲ್ಲಿ ಪಾಲ್ಗೊಂಡ ಮೊದಲ ವಿಶೇಷ ಚೇತನ ಕ್ರೀಡಾಪಡು ಎನಿಸಿದರು. ಬರ್ಕತುಲ್ಲಾ ವಿಶ್ವವಿದ್ಯಾಲಯದ ನಿಧಿ ಪವೈಯಾ ಅವರು ಮೊಣಕಾಲಿನ ಗಂಭೀರ ಗಾಯದ ನಡುವೆಯೂ ಶಾಟ್ ಪುಟ್‌ನಲ್ಲಿ ಚಿನ್ನದ ಪದಕ ಗಳಿಸುವುದರಲ್ಲಿ ಯಶಸ್ವಿಯಾದರು. ಕಣಕಾಲಿನಲ್ಲಾದ ಗಾಯದಿಂದಾಗಿ ಕಳೆದ ವರ್ಷ ಬೆಂಗಳೂರಿನಲ್ಲಿ ನಿರಾಶೆ ಹೊಂದಿದ್ದ ಸಾವಿತ್ರೀಬಾಯಿ ಫುಲೆ ಪುಣೆ ವಿಶ್ವವಿದ್ಯಾಲಯದ ಶುಭಂ ಭಂಡಾರೆ ಅವರು ಈ ಬಾರಿ ಸ್ಟೀಪಲ್ ಚೇಸ್‌ನಲ್ಲಿ ಸ್ವರ್ಣ ಪದಕ ವಿಜೇತರಾದರು. ಬರ್ದ್ವಾನ್ ವಿಶ್ವವಿದ್ಯಾಲಯದ ಸರಸ್ವತಿ ಕುಂಡೂ ಅವರು ತಮ್ಮ ಕಬಡ್ಡಿ ತಂಡದ ನಾಯಕಿಯಾಗಿದ್ದಾರೆ. ಅವರು ಅನೇಕ ಕಷ್ಟಗಳನ್ನು ದಾಟಿ ಈ ಹಂತ ತಲುಪಿದ್ದಾರೆ. ಅತ್ಯುತ್ತಮ ಪ್ರದರ್ಶನ ನೀಡುವ ಅನೇಕ ಕ್ರೀಡಾಪಟುಗಳಿಗೆ ಟಾಪ್ ಸ್ಕೀಮ್‌ನಿಂದ ಕೂಡಾ ಸಾಕಷ್ಟು ಸಹಾಯ ದೊರೆಯುತ್ತಿದೆ. ನಮ್ಮ ಕ್ರೀಡಾಪಟುಗಳು ಎಷ್ಟು ಆಡುತ್ತಾರೋ ಅಷ್ಟೇ ಅರಳುತ್ತಾರೆ.

ನನ್ನ ಪ್ರೀತಿಯ ದೇಶವಾಸಿಗಳೇ, ಜೂನ್ ತಿಂಗಳ 21 ಇನ್ನೇನು ಬಂದೇ ಬಿಟ್ಟಿತು. ಈ ಬಾರಿ ಕೂಡಾ ವಿಶ್ವದ ಮೂಲೆ ಮೂಲೆಗಳಲ್ಲಿ ಜನರು ಅಂತಾರಾಷ್ಟ್ರೀಯ ಯೋಗ ದಿನಕ್ಕಾಗಿ ಉತ್ಸಾಹದಿಂದ ಎದುರು ನೋಡುತ್ತಿದ್ದಾರೆ. ಈ ವರ್ಷದ ಯೋಗ ದಿನದ ಘೋಷವಾಕ್ಯ – ಯೋಗ ಫಾರ್ ವಸುಧೈವ ಕುಟುಂಬಕಂ – ಅಂದರೆ ಒಂದು ವಿಶ್ವ ಒಂದು ಕುಟುಂಬ ಎಂಬ ರೂಪದಲ್ಲಿ ಎಲ್ಲರ ಯೋಗಕ್ಷೇಮಕ್ಕಾಗಿ ಯೋಗ ಎಂಬುದಾಗಿದೆ. ಎಲ್ಲರನ್ನೂ ಒಂದುಗೂಡಿಸುವ ಮತ್ತು ಎಲ್ಲರೊಂದಿಗೆ ಮುನ್ನಡೆಯುವ ಯೋಗದ ಭಾವನೆಯನ್ನು ಇದು ವ್ಯಕ್ತಪಡಿಸುತ್ತದೆ. ಪ್ರತಿ ಬಾರಿಯಂತೆಯೇ ಈ ಬಾರಿ ಕೂಡಾ ದೇಶದ ಮೂಲೆ ಮೂಲೆಗಳಲ್ಲಿ, ಯೋಗ ಸಂಬಂಧಿತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.






Scanned with ACE Scanner



ಸ್ನೇಹಿತರೇ, ಈ ಬಾರಿ ನನಗೆ ನ್ಯೂಯಾರ್ಕ್‌ನ ವಿಶ್ವ ಸಂಸ್ಥೆಯ ಮುಖ್ಯ ಕಾರ್ಯಾಲಯದಲ್ಲಿ ನಡೆಯುವ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗಿಯಾಗುವ ಅವಕಾಶ ದೊರೆಯಲಿದೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಯೋಗ ದಿನಕ್ಕೆ ಸಂಬಂಧಿಸಿದಂತೆ ಅಪಾರ ಉತ್ಸಾಹ ಕಂಡುಬರುತ್ತಿದೆ.




ಸ್ನೇಹಿತರೇ, ನೀವೆಲ್ಲರೂ ನಿಮ್ಮ ಜೀವನದಲ್ಲಿ ಯೋಗವನ್ನು ಖಂಡಿತವಾಗಿಯೂ ಅಳವಡಿಸಿಕೊಳ್ಳಿ, ಇದನ್ನು ನಿಮ್ಮ ದೈನಂದಿನ ಚಟುವಟಿಕೆಗಳ ಒಂದು ಭಾಗವನ್ನಾಗಿ ಮಾಡಿಕೊಳ್ಳಿ ಎನ್ನುವುದು ನಿಮ್ಮಲ್ಲಿ ನನ್ನ ಮನವಿ. ಒಂದುವೇಳೆ ನೀವು ಇನ್ನೂ ಯೋಗಾಭ್ಯಾಸದಲ್ಲಿ ತೊಡಗಿಕೊಳ್ಳದೇ ಇದ್ದಲ್ಲಿ, ಮುಂಬರುವ ಇದೇ 21 ರಂದು ಈ ಸಂಕಲ್ಪಕ್ಕಾಗಿ ಅತ್ಯುತ್ತಮ ಅವಕಾಶವಿದೆ. ಯೋಗದಲ್ಲಂತೂ ಹೆಚ್ಚಿನ ಸಿದ್ಧತೆಗಳು ಅಗತ್ಯವಿರುವುದಿಲ್ಲ. ನೀವು ಯೋಗವನ್ನು ಜೀವನದಲ್ಲಿ ಅಳವಡಿಸಿಕೊಂಡಿರಾದರೆ ಎಷ್ಟು ದೊಡ್ಡ ಬದಲಾವಣೆಯಾಗುತ್ತದೆ ಎಂದು ನೀವೇ ನೋಡಬಹುದು.

ನನ್ನ ಪ್ರೀತಿ ದೇಶವಾಸಿಗಳೇ, ನಾಡಿದ್ದು ಅಂದರೆ ಜೂನ್ 20 ರಂದು ಐತಿಹಾಸಿಕ ರಥಯಾತ್ರೆಯ ದಿನವಾಗಿದೆ. ಇಡಿ ವಿಶ್ವದಲ್ಲಿ ಈ ರಥಯಾತ್ರೆಗೆ ಒಂದು ವಿಶೇಷ ಮಾನ್ಯತೆಯಿದೆ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಅತ್ಯಂತ ಸಂಭ್ರಮ ಸಡಗರದಿಂದ ಭಗವಾನ್ ಜಗನ್ನಾಥನ ರಥಯಾತ್ರೆ ಹೊರಡುತ್ತದೆ. ಒಡಿಶಾದ ಪುರಿಯಲ್ಲಿ ನಡೆಯಲಿರುವ ರಥಯಾತ್ರೆಯಂತೂ ಅತ್ಯಂತ ಅದ್ಭುತವಾಗಿರುತ್ತದೆ. ನಾನು ಗುಜರಾತ್‌ನಲ್ಲಿದ್ದಾಗ, ಅಹಮದಾಬಾದ್‌ನಲ್ಲಿ ನಡೆಯುವ ವಿಶಾಲ ರಥಯಾತ್ರೆಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯುತ್ತಿತ್ತು. ಈ ರಥಯಾತ್ರೆಗಳಲ್ಲಿ ದೇಶಾದ್ಯಂತ, ಪ್ರತಿಯೊಂದು ಸಮಾಜ, ಪ್ರತಿಯೊಂದು ವರ್ಗದ ಜನರು ಸೇರುವ ರೀತಿ ನಿಜಕ್ಕೂ ಅತ್ಯಂತ ಅನುಕರಣೀಯವಾಗಿರುತ್ತದೆ. ಈ ಶ್ರದ್ಧೆಯೊಂದಿಗೆ ಏಕ್ ಭಾರತ್ ಶ್ರೇಷ್ಠ್ ಭಾರತ್



Scanned with ACE Scanner

ನ ಪ್ರತಿಬಿಂಬವೂ ಇರುತ್ತದೆ. ಈ ಪಾವನ ಪುಣ್ಯದ ಸಂದರ್ಭದಲ್ಲಿ ನಿಮ್ಮೆಲ್ಲರಿಗೂ ನನ್ನ ಅನೇಕಾನೇಕ ಶುಭ ಹಾರೈಕೆಗಳು. ಭಗವಾನ್ ಜಗನ್ನಾಥ ದೇಶವಾಸಿಗಳೆಲ್ಲರಿಗೂ ಉತ್ತಮ ಆರೋಗ್ಯ, ಸುಖ, ಸಮೃದ್ಧಿ ದೊರೆಯುವಂತೆ ಆಶೀರ್ವದಿಸಲಿ ಎನ್ನುವುದು ನನ್ನ ಹಾರೈಕೆ.

ಸ್ನೇಹಿತರೇ, ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವ ಹಬ್ಬಗಳ ಬಗ್ಗೆ ಮಾತನಾಡುವಾಗ, ದೇಶದ ರಾಜಭವನಗಳಲ್ಲಿ ನಡೆಯುವ ಆಸಕ್ತಿದಾಯಕ ಕಾರ್ಯಕ್ರಮಗಳ ಬಗ್ಗೆ ಕೂಡಾ ನಾನು ಉಲ್ಲೇಖಿಸುತ್ತೇನೆ. ಈಗ ದೇಶದಲ್ಲಿ ರಾಜಭವನಗಳು ಸಾಮಾಜಿಕ ಮತ್ತು ಅಭಿವೃದ್ಧಿ ಕಾರ್ಯಗಳೊಂದಿಗೆ ಗುರುತಿಸಿಕೊಳ್ಳಲಾಗುತ್ತಿದೆ. ಇಂದು ನಮ್ಮ ರಾಜಭವನ, ಕ್ಷಯರೋಗ ಮುಕ್ತ ಭಾರತ ಅಭಿಯಾನದ, ಸಹಜ ಕೃಷಿ ಸಂಬಂಧಿತ ಅಭಿಯಾನದ ರೂವಾರಿಯಾಗುತ್ತಿದೆ. ಈ ಹಿಂದೆ ಗುಜರಾತ್, ಗೋವಾ, ತೆಲಂಗಾಣಾ, ಮಹಾರಾಷ್ಟ್ರ, ಸಿಕ್ಕಿಂ ಯಾವುದೇ ರಾಜ್ಯವಿರಲಿ, ತಮ್ಮ ತಮ್ಮ ಸಂಸ್ಥಾಪನಾ ದಿನದಂದು ಬೇರೆ ಬೇರೆ ರಾಜಭವನಗಳು ಉತ್ಸಾಹದಿಂದ ಆಚರಿಸಿರುವುದು ಒಂದು ಉದಾಹರಣೆಯಾಗಿದೆ. ಏಕ್ ಭಾರತ್ ಶ್ರೇಷ್ಠ ಭಾರತ್‌ನ ಚೈತನ್ಯವನ್ನು ಸಶಕ್ತಗೊಳಿಸುವ ಒಂದು ಅದ್ಭುತ ಮೆಟ್ಟಿಲಾಗಿದೆ.

ಸ್ನೇಹಿತರೇ, ಭಾರತ ಪ್ರಜಾಪ್ರಭುತ್ವದ ಮಾತೆ, ನಾವು ಪ್ರಜಾಪ್ರಭುತ್ವದ ಆದರ್ಶಗಳನ್ನು ಸರ್ವಶ್ರೇಷ್ಠವೆಂದು ಭಾವಿಸುತ್ತೇವೆ. ನಮ್ಮ ಸಂವಿಧಾನವನ್ನು ಸರ್ವಶ್ರೇಷ್ಠವೆಂದು ಭಾವಿಸುತ್ತೇವೆ. ಆದ್ದರಿಂದಲೇ ನಾವು ಜೂನ್ 25 ನೇ ತಾರೀಖನ್ನು ಎಂದಿಗೂ ಮರೆಯಲಾಗುವುದಿಲ್ಲ. ಇಂದೇ ದಿನದಂದು ನಮ್ಮ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಲಾಗಿತ್ತು. ಇದು ಭಾರತದ ಇತಿಹಾಸದಲ್ಲಿ ಒಂದು ಕರಾಳ ಕಾಲ. ಲಕ್ಷಾಂತರ ಜನರು ತುರ್ತುಪರಿಸ್ಥಿತಿಯನ್ನು ಪೂರ್ಣ ಸಾಮರ್ಥ್ಯದಿಂದ ಎದುರಿಸಿದರು. ಪ್ರಜಾಪ್ರಭುತ್ವದ ಬೆಂಬಲಿಗರನ್ನು ಎಷ್ಟೊಂದು ನೋವು, ಹಿಂಸೆಗೆ ಒಳಪಡಿಸಲಾಯಿತೆಂದರೆ, ಅದನ್ನು ನೆನೆದರೆ ಇಂದಿಗೂ ಮನಸ್ಸು ನಡುಗುತ್ತದೆ. ಈ ದೌರ್ಜನ್ಯಗಳ ಬಗ್ಗೆ, ಪೊಲೀಸರು ಮತ್ತು ಆಡಳಿತ ನೀಡದ ಶಿಕ್ಷೆಗಳ ಬಗ್ಗೆ ಅನೇಕ ಪುಸ್ತಕಗಳನ್ನು ಬರೆಯಲಾಗಿದೆ. ಸಂಘರ್ಷ್ ಮೇ ಗುಜರಾತ್ ಹೆಸರಿನ ಒಂದು ಪುಸ್ತಕ ಬರೆಯುವ ಒಂದು ಅವಕಾಶ ನನಗೂ ದೊರೆತಿತ್ತು. ಕೆಲವು ದಿನಗಳ ಹಿಂದಷ್ಟೇ ತುರ್ತು ಪರಿಸ್ಥಿತಿಯ ಬಗ್ಗೆ ಬರೆದ ಮತ್ತೊಂದು ಪುಸ್ತಕ ನನಗೆ ದೊರೆಯಿತು ಅದರ ಹೆಸರು – Torture of Political Prisoners in India. ತುರ್ತುಪರಿಸ್ಥಿತಿಯಲ್ಲಿ ಸಮಯದಲ್ಲಿ ಪ್ರಕಟವಾದ ಈ ಪುಸ್ತಕದಲ್ಲಿ ಅಂದಿನ ಸರ್ಕಾರ ಪ್ರಭಾಪ್ರಭುತ್ವದ ರಕ್ಷಕರೊಂದಿಗೆ ಎಷ್ಟು ಕ್ರೂರವಾಗಿ ನಡೆದುಕೊಂಡಿತ್ತು ಎಂಬುದನ್ನು ವಿವರಿಸಲಾಗಿದೆ. ಈ ಪುಸ್ತಕದಲ್ಲಿ ಹಲವಾರು ಕೇಸ್ ಸ್ಟಡೀಸ್ ಇವೆ, ಬಹಳಷ್ಟು ಚಿತ್ರಗಳೂ ಇವೆ. ನಾವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಸಮಯದಲ್ಲಿ, ದೇಶದ ಸ್ವಾತಂತ್ರ್ಯವನ್ನು ಅಪಾಯಕ್ಕೆ ದೂಡುವ ಇಂತಹ ಅಪರಾಧಗಳನ್ನು ನಾವು ಖಂಡಿತವಾಗಿಯೂ ಅವಲೋಕನ ಮಾಡಬೇಕೆಂದು ನಾನು ಹೇಳುತ್ತೇನೆ. ಇದರಿಂದ ಇಂದಿನ ಯುವ ಪೀಳಿಗೆಗೆ ಪ್ರಜಾಪ್ರಭುತ್ವದ ಅರ್ಥ ಮತ್ತು ಮಹತ್ವವನ್ನು ಅರ್ಥ ಮಾಡಿಕೊಳ್ಳಲು ಇನ್ನೂ ಸುಲಭವಾಗುತ್ತದೆ.

ನನ್ನ ಪ್ರೀತಿಯ ದೇಶವಾಸಿಗಳೇ, ಮನ್ ಕಿ ಬಾತ್, ಮನದ ಮಾತು ಎನ್ನುವುದು ಬಣ್ಣ ಬಣ್ಣದ ಮುತ್ತಿನ ಮಣಿಗಳಿಂದ ಪೋಣಿಸಿದ ಒಂದು ಸುಂದರ ಹಾರವಾಗಿದೆ. ಇದರಲ್ಲಿರುವ ಪ್ರತಿಯೊಂದು ಮುತ್ತಿನ ಮಣಿಯೂ ತನ್ನದೇ ಆದ ರೀತಿಯಲ್ಲಿ ವಿಶೇಷವಾಗಿದೆ ಮತ್ತು ಅಮೂಲ್ಯವಾಗಿದೆ. ಈ ಕಾರ್ಯಕ್ರಮದ ಪ್ರತಿಯೊಂದು ಆವೃತ್ತಿಯೂ ಅತ್ಯಂತ ಜೀವಂತಿಕೆಯಿಂದ ಕೂಡಿದೆ. ಸಾಮೂಹಿಕತೆಯ ಭಾವನೆಯೊಂದಿಗೆ ಸಮಾಜದೆಡೆಗೆ ನಮ್ಮ ಕರ್ತವ್ಯ ಮತ್ತು ಸೇವೆ ಭಾವನೆಯನ್ನು ಇದು ನಮ್ಮಲ್ಲಿ ಉಂಟು ಮಾಡುತ್ತದೆ. ನಾವು ಹೆಚ್ಚಾಗಿ ಕೇಳಿರದ, ಓದಿರದ ವಿಷಯಗಳ ಬಗ್ಗೆ ಇಲ್ಲಿ ಮುಕ್ತವಾಗಿ ಚರ್ಚಿಸಲಾಗುತ್ತದೆ. ಮನ್ ಕಿ ಬಾತ್‌ನಲ್ಲಿ ಯಾವುದಾದರೊಂದು ವಿಷಯ ಪ್ರಸ್ತಾಪವಾದ ನಂತರ, ಅನೇಕ ದೇಶವಾಸಿಗಳಲ್ಲಿ ಹೊಸದೊಂದು ಪ್ರೇರಣೆ ದೊರೆತಿರುವುದನ್ನು ನಾವು ಆಗಾಗ್ಗೆ ನೋಡುತ್ತಿದ್ದೇವೆ. ಇತ್ತೀಚೆಗಷ್ಟೇ, ನನಗೆ ದೇಶದ ಪ್ರಸಿದ್ಧ ಶಾಸ್ತ್ರೀಯ ನೃತ್ಯಪಟು ಆನಂದಾ ಶಂಕರ್ ಜಯಂತ್ ಅವರಿಂದ ಒಂದು ಪತ್ರ ಬಂದಿದೆ. ನಾವು ಕತೆ ಹೇಳುವ ಕುರಿತಂತೆ ಮಾತನಾಡಿದ್ದ ಸಂಚಿಕೆಯ ಕುರಿತು ತಮ್ಮ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ. ಆ ಕಾರ್ಯಕ್ರಮದಲ್ಲಿ ನಾವು ಈ ರಂಗದಲ್ಲಿ ತೊಡಗಿಸಿಕೊಂಡಿರುವಂತಹ ಜನರ ಪ್ರತಿಭೆಯನ್ನು ಗುರುತಿಸಿದ್ದೆವು. 'ಮನದ ಮಾತಿನ' ಆ ಕಾರ್ಯಕ್ರಮದಿಂದ ಪ್ರೇರಣೆ ಪಡೆದ ಆನಂದಾ ಶಂಕರ್ ಜಯಂತ್ ಅವರು ಕುಟ್ಟಿ ಕಹಾನಿ ಸಿದ್ಧ ಪಡಿಸಿದ್ದಾರೆ. ಇದು ಮಕ್ಕಳಿಗಾಗಿ ಬೇರೆ ಬೇರೆ ಭಾಷೆಗಳ ಕತೆಗಳ ಅತ್ಯುತ್ತಮ ಸಂಗ್ರಹವಾಗಿದೆ. ಇದು ನಮ್ಮ ಮಕ್ಕಳ ಸಂಸ್ಕೃತಿಯ ಬಾಂಧವ್ಯವನ್ನು ಮತ್ತಷ್ಟು ಬಲಿಷ್ಠ ಮತ್ತು ಆಳವಾಗಿಸುವ ಕಾರಣದಿಂದ ಈ ಪ್ರಯತ್ನ ಬಹಳ ಉತ್ತಮವಾಗಿದೆ. ಇವರು ಈ ಕತೆಗಳ ಕೆಲವು ಆಸಕ್ತಿದಾಯ ವಿಡಿಯೊಗಳನ್ನು ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್ಲೋಡ್ ಮಾಡಿದ್ದಾರೆ. ನಾನು ಆನಂದಾ ಶಂಕರ್ ಜಯಂತ್ ಅವರ ಈ ಪ್ರಯತ್ನ ಕುರಿತು ವಿಶೇಷವಾಗಿ ಮಾತನಾಡಿರುವುದು ಏಕೆಂದರೆ, ಯಾವ ರೀತಿ ದೇಶವಾಸಿಗಳ ಉತ್ತಮ ಕೆಲಸಗಳು ಉಳಿದವರಿಗೆ ಯಾವರೀತಿ ಪ್ರೇರಣೆಯಾಗುತ್ತದೆ ಎಂದು ನೋಡಿ ನನಗೆ ಬಹಳ ಆನಂದವಾಯಿತು. ಇದರಿಂದ ಅವರು ತಮ್ಮ ಕೌಶಲ್ಯದಿಂದ ದೇಶ ಮತ್ತು ಸಮಾಜಕ್ಕೆ ಏನನ್ನಾದರೂ ಒಳಿತನ್ನು ಮಾಡುವ ಪ್ರಯತ್ನ ಮಾಡುತ್ತಾರೆ. ಇದೇ ತಾನೇ ದೇಶದ ಪ್ರಗತಿಯಲ್ಲಿ ಹೊಸ ಶಕ್ತಿ ತುಂಬುತ್ತಿರುವ ನಮ್ಮ ಭಾರತೀಯರ ಸಾಮೂಹಿಕ ಸಾಮರ್ಥ್ಯ.

ನನ್ನ ಪ್ರೀತಿಯ ದೇಶವಾಸಿಗಳೇ, ಈ ಬಾರಿಯ ಮನ್ ಕಿ ಬಾತ್ ಅನ್ನು ಇಲ್ಲಿಗೆ ನಿಲ್ಲಿಸುತ್ತಿದ್ದೇನೆ. ಮುಂದಿನ ಬಾರಿ, ಹೊಸ ವಿಷಯಗಳೊಂದಿಗೆ ನಿಮ್ಮನ್ನು ಮತ್ತೆ ಭೇಟಿಯಾಗುತ್ತೇನೆ. ಮಳೆಗಾಲದ ಸಮಯವಾದ್ದರಿಂದ ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಮತೋಲಿತ ಆಹಾರ ಸೇವಿಸಿ ಮತ್ತು ಆರೋಗ್ಯದಿಂದಿರಿ. ಅಂದಹಾಗೆ ಖಂಡಿತವಾಗಿಯೂ ಯೋಗ ಮಾಡಿ. ಅನೇಕ ಶಾಲೆಗಳಲ್ಲಿ ಈಗ ಬೇಸಿಗೆ ರಜ ಮುಗಿಯುತ್ತಾ ಬಂದಿದೆ. ಶಾಲೆಯಲ್ಲಿ ನೀಡಿರುವ ಹೋಂವರ್ಕ್ ಅನ್ನು ಕೊನೆಯ ದಿನದವರೆಗೆ ಬಾಕಿ ಉಳಿಸಿಕೊಳ್ಳಬೇಡಿ, ಕೆಲಸ ಮುಗಿಸಿ ಮತ್ತು ನಿಶ್ಚಿಂತರಾಗಿರಿ ಎಂದು ನಾನು ವಿದ್ಯಾರ್ಥಿಗಳಿಗೆ ಹೇಳುತ್ತೇನೆ. ಅನೇಕಾನೇಕ ಧನ್ಯವಾದ.



Scanned with ACE Scanner

# ಅಭಿವೃದ್ಧಿ ಮಾರ್ಗಸೂಚಿ

## ವಿಶ್ವದ ಅತಿದೊಡ್ಡ ಧಾನ್ಯ ಶೇಖರಣಾ ಯೋಜನೆ

ಸಹಕಾರಿ ವಲಯದಲ್ಲಿ 'ವಿಶ್ವದ ಅತಿದೊಡ್ಡ ಧಾನ್ಯ ಸಂಗ್ರಹ ಶೇಖರಣಾ ಯೋಜನೆ' ಜಾರಿಗೆ ತರಲು ಅನುಕೂಲವಾಗುವಂತೆ ಅಂತರ ಸಚಿವಾಲಯ ಸಮಿತಿಯೊಂದನ್ನು (ಐಎಂಸಿ) ರಚಿಸಲಾಗಿದೆ ಹಾಗೂ ಯೋಜನೆ ಅನುಷ್ಠಾನಕ್ಕೆ ಅದಕ್ಕೆ ಅಗತ್ಯವಾದ ಅಧಿಕಾರವನ್ನು ನೀಡಲಾಗಿದೆ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯ ಮತ್ತು ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯದ ವಿವಿಧ ಯೋಜನೆಗಳ ಸಂಯೋಜನೆಯಿಂದ ಇದನ್ನು ರೂಪಿಸಲಾಗುತ್ತದೆ.


ಯೋಜನೆಯನ್ನು ಕಾಲಮಿತಿಯೊಳಗೆ ಮತ್ತು ವೃತ್ತಿಪರ ರೀತಿಯಲ್ಲಿ ಏಕರೂಪ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳಲು, ಸಹಕಾರ ಸಚಿವಾಲಯವು ದೇಶದ ವಿವಿಧ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ಕನಿಷ್ಠ 10 ಆಯ್ದ ಜಿಲ್ಲೆಗಳಲ್ಲಿ ಪ್ರಾಯೋಗಿಕ ಯೋಜನೆಯನ್ನು ಜಾರಿಗೆ ತರಲಿದೆ. ಪ್ರಾಯೋಗಿಕ ಯೋಜನೆಯ ವಿವಿಧ ಪ್ರಾದೇಶಿಕ ಅವಶ್ಯಕತೆಗಳ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ಇದು ಒದಗಿಸುತ್ತದೆ, ಅದರಿಂದ ಒದಗುವ ಮಾಹಿತಿಯನ್ನು ಯೋಜನೆಯನ್ನು ರಾಷ್ಟ್ರವ್ಯಾಪಿ ಅನುಷ್ಠಾನ ಮಾಡಲು ಸೂಕ್ತವಾಗಿ ಅಳವಡಿಸಿಕೊಳ್ಳಲಾಗುವುದು.


ಸಹಕಾರ ಸಚಿವರ ಅಧ್ಯಕ್ಷತೆಯ ಅಂತರ ಸಚಿವಾಲಯ ಸಮಿತಿಯಲ್ಲಿ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು, ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವರು ಮತ್ತು ಸಂಬಂಧಪಟ್ಟ ಕಾರ್ಯದರ್ಶಿಗಳನ್ನು ಸದಸ್ಯರಾಗಿರುತ್ತಾರೆ. ಆಯ್ದ 'ಕಾರ್ಯಸಾಧ್ಯ' ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಲ್ಲಿ (ಪಿಎಸಿಎಸ್) ಕೃಷಿ ಮತ್ತು ಸಂಬಂಧಿತ ಉದ್ದೇಶಗಳಿಗಾಗಿ ಗೋದಾಮುಗಳು ಮತ್ತು ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ. ಅನುಮೋದಿತ ವೆಚ್ಚಗಳು ಮತ್ತು ನಿಗದಿತ ಗುರಿಗಳ ಒಳಗೆ ಇದನ್ನು ಮಾಡಲಾಗುತ್ತದೆ. ಆಯಾ ಸಚಿವಾಲಯಗಳ ಗುರುತಿಸಲಾದ ಯೋಜನೆಗಳ ಅಡಿಯಲ್ಲಿ ಒದಗಿಸಲಾದ ಲಭ್ಯವಿರುವ ವೆಚ್ಚಗಳನ್ನು ಬಳಸಿಕೊಂಡು ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಯೋಜನೆಯು ಗೋದಾಮು, ಕಸ್ಟಮ್ ಬಾಡಿಗೆ ಕೇಂದ್ರ, ಸಂಸ್ಕರಣಾ ಘಟಕಗಳು ಸೇರಿದಂತೆ ವಿವಿಧ ರೀತಿಯ ಕೃಷಿ ಮೂಲಸೌಕರ್ಯಗಳನ್ನು ಸ್ಥಾಪಿಸುವುದನ್ನು ಒಳಗೊಂಡಿದೆ. ಪಿಎಸಿಎಸ್ ಮಟ್ಟದಲ್ಲಿ, ಅವುಗಳನ್ನು ವಿವಿಧೋದ್ದೇಶ ಸೊಸೈಟಿಗಳಾಗಿ ಪರಿವರ್ತಿಸಲಾಗುತ್ತದೆ. ಪಿಎಸಿಎಸ್ ಮಟ್ಟದಲ್ಲಿ ಮೂಲಸೌಕರ್ಯಗಳ ಸೃಷ್ಟಿ ಮತ್ತು ಆಧುನೀಕರಣವು ಸಾಕಷ್ಟು ಸಂಗ್ರಹಣಾ ಸಾಮರ್ಥ್ಯವನ್ನು ಸೃಷ್ಟಿಸುವ ಮೂಲಕ ಆಹಾರ ಧಾನ್ಯ ವ್ಯರ್ಥವನ್ನು ತಗ್ಗಿಸುತ್ತದೆ, ದೇಶದ ಆಹಾರ ಭದ್ರತೆಯನ್ನು ಬಲಪಡಿಸುತ್ತದೆ ಮತ್ತು ರೈತರು ತಮ್ಮ ಬೆಳೆಗಳಿಗೆ ಉತ್ತಮ ಬೆಲೆಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ಭಾರತೀಯ ಆರ್ಥಿಕತೆಯ ಕೃಷಿ ಮತ್ತು ಗ್ರಾಮೀಣ ಚಿತ್ರಣವನ್ನು ಪರಿವರ್ತಿಸುವಲ್ಲಿ ತಳಮಟ್ಟದಲ್ಲಿ ಪಿಎಸಿಎಸ್ ನಿರ್ವಹಿಸುವ ಪ್ರಮುಖ ಪಾತ್ರವನ್ನು ಗಮನದಲ್ಲಿಟ್ಟುಕೊಂಡು ಮತ್ತು ಕೊನೆಯ ಮೈಲಿವರೆಗೆ ತಮ್ಮ ಆಳವಾದ ವ್ಯಾಪ್ತಿಯನ್ನು ಸದುಪಯೋಗಪಡಿಸಿಕೊಳ್ಳಲು, ಈ ಉಪಕ್ರಮವನ್ನು ಇತರ ಕೃಷಿ ಮೂಲಸೌಕರ್ಯಗಳೊಂದಿಗೆ ಪಿಎಸಿಎಸ್ ಮಟ್ಟದಲ್ಲಿ ವಿಕೇಂದ್ರೀಕೃತ ಶೇಖರಣಾ ಸಾಮರ್ಥ್ಯವನ್ನು ಸ್ಥಾಪಿಸಲು ಕೈಗೊಳ್ಳಲಾಗಿದೆ. ಇದು ದೇಶದ ಆಹಾರ ಭದ್ರತೆಯನ್ನು ಬಲಪಡಿಸುತ್ತದೆ. ಜೊತೆಗೆ ಪಿಎಸಿಎಸ್‌ಗಳು ತಮ್ಮನ್ನು ಚೈತನ್ಯದಾಯಕ ಆರ್ಥಿಕ ಕಾಯಗಳಾಗಿ ಪರಿವರ್ತಿಸಲು ಅನುವು ಮಾಡಿಕೊಡುತ್ತದೆ.

(ಮೂಲ : ಪಿಐಬಿ)

## ವಿಶ್ವದ ಅತಿ ದೊಡ್ಡ ಧಾನ್ಯ ಸಂಗ್ರಹ ಯೋಜನೆ

### ಯೋಜನೆಯ ಲಾಭಗಳು





- ಯೋಜನೆ ಬಹುರೂಪಿ ಉದ್ದೇಶಗಳನ್ನುಹೊಂದಿವೆ. ಪ್ರಾಥಮಿಕ ಕೃಷಿಪತ್ತಿನ ಸಂಘಗಳ ಮಟ್ಟದಲ್ಲಿ ಗೋದಾಮುಗಳ ಸ್ಥಾಪನೆಗೆ ಅವಕಾಶ – ತನ್ಮೂಲಕ ದೇಶದಲ್ಲಿ ಕೃಷಿ ಉತ್ಪನ್ನ ದಾಸ್ತಾನು ಸೌಕರ್ಯ ಕೊರತೆ ನಿವಾರಣೆ ಉದ್ದೇಶ. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ಈ ಮುಂದಿನ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹ ನೀಡುತ್ತದೆ.
    * ಸರ್ಕಾರಿ ಏಜೆನ್ಸಿ / ಭಾರತದ ಆಹಾರ ನಿಗಮಗಳಿಗಾಗಿ. ಧಾನ್ಯ ಖರೀದಿ ಕೇಂದ್ರಗಳಾಗಿ ಕಾರ್ಯ ನಿರ್ವಹಣೆ
    * ನ್ಯಾಯಬೆಲೆ ಅಂಗಡಿಗಳಾಗಿ ಕಾರ್ಯನಿರ್ವಹಣೆ
    * ಕಸ್ಟಮ್ ಹೈರಿಂಗ್ ಕೇಂದ್ರ ಸ್ಥಾಪನೆ
    * ಕೃಷಿ ಉತ್ಪನ್ನಗಳನ್ನು ಸ್ವಚ್ಛಗೊಳಿಸಿ, ಆರಿಸಿ, ವರ್ಗೀಕರಿಸುವುದೂ ಒಳಗೊಂಡಂತೆ ಸಾರ್ವತ್ರಿಕ ಪ್ರಕ್ರಿಯೆ ಘಟಕ ಸ್ಥಾಪನೆ
- ಸ್ಥಳೀಯ ಮಟ್ಟದಲ್ಲಿ ವಿಕೇಂದ್ರೀಕೃತ ದಾಸ್ತಾನು ಸಾಮರ್ಥ್ಯ ಸೃಷ್ಟಿ. ಆ ಮೂಲಕ ಆಹಾರ ಧಾನ್ಯ ಹಾಳಾಗುವುದು ತಪ್ಪುತ್ತದೆ. ದೇಶದ ಆಹಾರ ಭದ್ರತೆ ಕ್ರಮ ಬಲಗೊಳ್ಳುತ್ತದೆ.
- ರೈತರಿಗೆ ವಿವಿಧ ರೀತಿಯ ಆಯ್ಕೆ ಒದಗಣೆ. ಇದರಿಂದ ರೈತರು ಹತಾಶೆಯ ಮಾರಾಟಕ್ಕಿಳಿಯುವುದು ತಪ್ಪುತ್ತದೆ. ರೈತರಿಗೆ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ಸಾಧ್ಯವಾಗುತ್ತದೆ.
- ಖರೀದಿ ಕೇಂದ್ರಗಳಿಗೆ ತರುವಾಗ ತಗಲುವ ಸಾಗಾಟ ವೆಚ್ಚ ಅಪಾರ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ದಾಸ್ತಾನು, ಗೋದಾಮುಗಳಿಂದ ಮತ್ತೆ ನ್ಯಾಯಬೆಲೆ ಅಂಗಡಿಗಳಿಗೆ ಧಾನ್ಯ ಸಾಗಿಸುವ ಸಾಗಾಟ ವೆಚ್ಚ ತಪ್ಪುತ್ತದೆ.
- 'ಸಂಪೂರ್ಣ ಸರ್ಕಾರ' ಉಪಕ್ರಮದಿಂದಾಗಿ ಈ ಯೋಜನೆ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ತಮ್ಮ ವ್ಯಾಪಾರ ಚಟುವಟಿಕೆಗಳಲ್ಲಿ ವೈವಿಧ್ಯತೆ ತಂದುಕೊಂಡು ಬಲಗೊಳ್ಳಲು ನೆರವಾಗುತ್ತದೆ ಮತ್ತು ಸಂಘದ ರೈತ ಸದಸ್ಯರ ಆದಾಯ ಹೆಚ್ಚಲೂ ಕಾರಣವಾಗುತ್ತದೆ.



Scanned with ACE Scanner

## ನಿಮಗೆ ತಿಳಿದಿದೆಯೇ?

**ಸಹಕಾರಿ ಎಂದರೇನು?**

ಸಹಕಾರದ ಪರಿಕಲ್ಪನೆಯು ಸಾಮಾನ್ಯ ಆರ್ಥಿಕ ಅಗತ್ಯಗಳನ್ನು ಹೊಂದಿರುವ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ಗುಂಪನ್ನು ರೂಪಿಸುತ್ತದೆ, ಅವರು ತಮ್ಮ ಸಂಪನ್ಮೂಲಗಳನ್ನು – ಮಾನವ ಮತ್ತು ವಸ್ತು ಎರಡನ್ನೂ ಒಟ್ಟುಗೂಡಿಸಲು ಸ್ವಯಂಪ್ರೇರಣೆಯಿಂದ ಒಪ್ಪುತ್ತಾರೆ ಮತ್ತು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಅವರು ನಿರ್ವಹಿಸುವ ಉದ್ಯಮದ ಮೂಲಕ ಪರಸ್ಪರ ಲಾಭಕ್ಕಾಗಿ ಅದನ್ನು ಬಳಸುತ್ತಾರೆ.

ಸಹಕಾರವು ಜೀವನದ ಕೆಲವು ಮೌಲ್ಯಗಳನ್ನು ಆಧರಿಸಿದ ಆರ್ಥಿಕ ಸಂಘಟನೆಯ ಒಂದು ರೂಪವಾಗಿದೆ. ಇದು ನಿಯಂತ್ರಣದ ಸಮಾನತೆ, ಅವಕಾಶ ಮತ್ತು ವಿತರಣೆಯ ಸಮಾನತೆಯನ್ನು ಆಧರಿಸಿದ ಮಾನವರ ಸ್ವಯಂಪ್ರೇರಿತ ಮತ್ತು ಪ್ರಜಾಸತ್ತಾತ್ಮಕ ಸಂಘವಾಗಿದೆ. ಇದಲ್ಲದೆ, ಇದು ಉತ್ಪಾದಕರು ಮತ್ತು ಗ್ರಾಹಕರ ಸಾಮಾನ್ಯ ಹಿತಾಸಕ್ತಿಗಳನ್ನು ಉತ್ತೇಜಿಸುತ್ತದೆ. ಎಲ್ಲಾ ಆರ್ಥಿಕ ಕಾಳಜಿಯ ವ್ಯವಹಾರಗಳ ಏಕೈಕ ಉದ್ದೇಶ ಲಾಭ ಮತ್ತು ಲಾಭ ಗಳಿಕೆಗಾಗಿ ನಡೆಯುವುದಾಗಿದೆ. ಆದರೆ, ಸಹಕಾರವು ಲಾಭ ಗಳಿಸುವ ಏಕೈಕ ಉದ್ದೇಶಹೊಂದದೆ ತನ್ನ ಸದಸ್ಯರಿಗೆ ಸೇವೆಗಳನ್ನು ಒದಗಿಸುತ್ತದೆ.

**ಸಹಕಾರ ಸಂಘದ ಸಾಂವೈಧಾನಿಕ ನಿಬಂಧನೆಗಳು ಯಾವುವು?**

1. ಭಾರತದ ಸಂವಿಧಾನದ ಅನುಚ್ಛೇದ 19 (1) (ಸಿ) ಹೀಗೆ ಹೇಳುತ್ತದೆ – ಎಲ್ಲಾ ನಾಗರಿಕರು ಸಂಘಗಳು ಅಥವಾ ಒಕ್ಕೂಟಗಳನ್ನು [ಅಥವಾ ಸಹಕಾರಿ ಸಂಘಗಳು] ರಚಿಸುವ ಹಕ್ಕನ್ನು ಹೊಂದಿರುತ್ತಾರೆ.

2. ರಾಜ್ಯ ನೀತಿಯ ನಿರ್ದೇಶಕ ತತ್ವಗಳು 43 ಬಿ – ಸಹಕಾರಿ ಸಂಘಗಳ ಉತ್ತೇಜನ. – ಸಹಕಾರಿ ಸಂಘಗಳ ಸ್ವಯಂಪ್ರೇರಿತ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ನಿರ್ವಹಣೆಯನ್ನು ಉತ್ತೇಜಿಸಲು ಸರ್ಕಾರ ಪ್ರಯತ್ನಿಸಬೇಕು.

3. ಭಾರತದ ಸಂವಿಧಾನದ ಭಾಗ IXB ಸಹಕಾರಿ ಸಂಘಗಳಿಗೆ ಸಾಂವೈಧಾನಿಕ ಸ್ಥಾನಮಾನವನ್ನು ನೀಡುತ್ತದೆ ಮತ್ತು ಅವುಗಳು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ನಿಬಂಧನೆಗಳನ್ನು ಒಳಗೊಂಡಿರುತ್ತವೆ.




**ಸಹಕಾರ ಸಂಘ ಎಂದರೇನು?**

1. ಸಹಕಾರಿ ಮೌಲ್ಯಗಳು ಮತ್ತು ತತ್ವಗಳಿಗೆ ಅನುಗುಣವಾಗಿ ಜಂಟಿ ಮಾಲಿಕತ್ವದ ಮತ್ತು ಪ್ರಜಾಸತ್ತಾತ್ಮಕ ನಿಯಂತ್ರಣ ಉದ್ಯಮದ ಮೂಲಕ ರೂಪುಗೊಂಡ, ಸಮಾಜದ ದುರ್ಬಲ ವರ್ಗದ ವ್ಯಕ್ತಿಗಳ ಸಾಮಾನ್ಯ ಸಾಮಾಜಿಕ–ಆರ್ಥಿಕ ಮತ್ತು ಸಾಂಸ್ಕೃತಿಕ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಪೂರೈಸುವ ಸ್ವಾಯತ್ತ ಮುಕ್ತ ಮತ್ತು ಸ್ವಯಂಪ್ರೇರಿತ ಸಂಘವಾಗಿದೆ.

**ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಎಂದರೇನು?**

ಮಾಹಿತಿ ಆಧರಿತ ನಿರ್ಧಾರದ ಬೆಂಬಲ ವ್ಯವಸ್ಥೆಯನ್ನು ಹೊಂದುವುದು ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಅನ್ನು ನಿರ್ಮಿಸುವುದರ ಹಿಂದಿನ ಪ್ರಾಥಮಿಕ ಗುರಿ ಮತ್ತು ಉದ್ದೇಶವಾಗಿದೆ.

- ಕ್ಷೇತ್ರಗಳಲ್ಲಿ ಚಟುವಟಿಕೆಗಳ ತಳಮಟ್ಟದ ವ್ಯಾಪ್ತಿ ಮತ್ತು ಸಮನ್ವಯವನ್ನು ಬಲಪಡಿಸುವ ಮೂಲಕ ದೇಶದಲ್ಲಿ ಸಹಕಾರಿ ಆಂದೋಲನವನ್ನು ಹೊಸ ಮಟ್ಟಕ್ಕೆ ಕೊಂಡೊಯ್ಯುವುದು.
- ಆರ್ಥಿಕ ಅಭಿವೃದ್ಧಿಯ ಸಹಕಾರಿ ಆಧಾರಿತ ಅಂತರ್ಗತ ಮತ್ತು ಸುಸ್ಥಿರ ಮಾದರಿಯನ್ನು ಉತ್ತೇಜಿಸುವುದು.
- ಕಾರ್ಯಾಚರಣೆ ಪ್ರಕ್ರಿಯೆಗಳನ್ನು ಸುಗಮಗೊಳಿಸುವುದು.

ಮೂಲ : ಸಹಕಾರ ಸಚಿವಾಲಯ



Scanned with ACE Scanner



ಸಂಬಂಧಿಸಿದಂತೆ ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಯಾವಾಗಲೂ ಮುಂದಿರಬೇಕು ಎಂದು ಪ್ರಧಾನ ಮಂತ್ರಿಗಳು ಕರೆ ನೀಡಿದರು.

ಪ್ರಾಥಮಿಕ ಹಂತದ ಮುಖ್ಯ ಸಹಕಾರ ಸಂಘಗಳು ಅಥವಾ ಪ್ರಾಥಮಿಕ ಕೃಷಿ ಪತ್ತಿನ [illegible] ಸಂಘಗಳು (ಪಿಎ[illegible]ಸ್)ಪಾರದರ್ಶಕತೆಗೆ [illegible]ವಾಗಲಿವೆ. ಈಗಾ[illegible] 60,000 ಕ್ಕೂ ಹೆಚ್ಚು [illegible] ಗಣಕೀಕರಣ ನಡೆದಿ[illegible] ಸಹಕಾರಿ ಸಂಸ್ಥೆಗ[illegible] ಲಭ್ಯವಿರುವ ತಂತ್ರ[illegible]ನವನ್ನು ಸಂಪೂರ್ಣ[illegible]ಳ್ಳಬೇಕು, ಸಹಕಾ[illegible] ಸಂಘಗಳು ಕೋರ್ [illegible] ಮತ್ತು ಡಿಜಿಟಲ್ ವಹಿವಾಟಿನ ಸ್ವೀಕಾರದಿಂದ ರಾಷ್ಟ್ರ[illegible] ಲಾಭವಾಗಲಿದೆ ಎಂದು ತಿಳಿಸಿದರು.

ಆಹಾರ ಭದ್ರತೆಯು ಗೋಧಿ ಮತ್ತು ಅಕ್ಕಿಗೆ ಸೀಮಿತವಾಗಿಲ್ಲ ಎಂದು ತಿಳಿಸಿದ ಪ್ರಧಾನ ಮಂತ್ರಿಗಳು, ಖಾದ್ಯ ತೈಲ, ಬೇಳೆಕಾಳುಗಳು, ಮೀನಿನ ಆಹಾರ ಮತ್ತು ಸಂಸ್ಕರಿಸಿದ ಆಹಾರ ಇತ್ಯಾದಿಗಳ ಆಮದಿನ ಮೇಲೆ ಭಾರತವು ಸರಿಸುಮಾರು 2 ರಿಂದ 2.5 ಲಕ್ಷ ಕೋಟಿ ರೂ. ವ್ಯಯಿಸುತ್ತಿದೆ. ಸಹಕಾರಿ ಸಂಸ್ಥೆಗಳು ಈ ದಿಕ್ಕಿನಲ್ಲಿ ಕೆಲಸ ಮಾಡಲು ಮತ್ತು ರೈತರು ಖಾದ್ಯ ತೈಲ ಉತ್ಪಾದನೆಯಲ್ಲಿ ದೇಶವನ್ನು ಆತ್ಮನಿರ್ಭರ ಮಾಡಬೇಕೆಂದು ಕರೆ ನೀಡಿದರು.

ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಜಲಮೂಲಗಳ ಬಳಿ ವಾಸಿಸುವ ಗ್ರಾಮಸ್ಥರು ಮತ್ತು ರೈತರಿಗೆ ಹೆಚ್ಚುವರಿ ಆದಾಯದ ಸಾಧನವಾಗಿದೆ. ಮೀನುಗಾರಿಕೆ ಕ್ಷೇತ್ರದಲ್ಲಿ 25 ಸಾವಿರಕ್ಕೂ ಹೆಚ್ಚು ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಮೀನು ಸಂಸ್ಕರಣೆ, ಮೀನು ಒಣಗಿಸುವುದು, ಮೀನು ಕ್ಯೂರಿಂಗ್, ಮೀನು ಸಂಗ್ರಹಣೆ, ಮೀನು ಕ್ಯಾನಿಂಗ್, ಮೀನು ಸಾಗಣೆ ಮುಂತಾದ ಕೈಗಾರಿಕೆಗಳನ್ನು ಬಲಪಡಿಸಲಾಗಿದೆ. ಕಳೆದ 9 ವರ್ಷಗಳಲ್ಲಿ ಒಳನಾಡು ಮೀನುಗಾರಿಕೆ ಕೂಡ ದ್ವಿಗುಣಗೊಂಡಿದೆ. ಈ ಅಭಿಯಾನಕ್ಕೆ ಸಹಕಾರಿ ಕ್ಷೇತ್ರವು ಕೊಡುಗೆ ನೀಡುವ ಅಗತ್ಯ ಇದೆ ಎಂದು ಒತ್ತಿ ಹೇಳಿದರು. ಮೀನು ಸಾಕಣೆಯಂತಹ ಅನೇಕ ಹೊಸ ಕ್ಷೇತ್ರಗಳಲ್ಲಿ ಪಿಎಸಿಗಳ ಪಾತ್ರವು ವಿಸ್ತರಿಸುತ್ತಿದೆ ಮತ್ತು ದೇಶಾದ್ಯಂತ 2 ಲಕ್ಷ ಹೊಸ ವಿವಿಧೋದ್ದೇಶ ಸಂಘಗಳನ್ನು ರಚಿಸುವ ನಿಟ್ಟಿನಲ್ಲಿ ಸರ್ಕಾರವು ಕಾರ್ಯನಿರ್ವಹಿಸುತ್ತಿದೆ. ಇದರೊಂದಿಗೆ ಸಹಕಾರಿ ಸಂಸ್ಥೆಗಳ ಶಕ್ತಿಯು ಈ ವ್ಯವಸ್ಥೆಯಿಂದ ಹೊರಗುಳಿದಿರುವ ಹಳ್ಳಿಗಳು ಮತ್ತು ಪಂಚಾಯತ್‌ಗಳಿಗೂ ತಲುಪಲಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿದರು.

ರಾಸಾಯನಿಕ ಮುಕ್ತ ಬೇಸಾಯವನ್ನು ಪ್ರೋತ್ಸಾಹಿಸುವ ಮತ್ತು ಪರ್ಯಾಯ ರಸಗೊಬ್ಬರಗಳ ಬಳಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಇತ್ತೀಚಿನ ಪಿಎಂ-ಪ್ರಣಾಮ್ ಯೋಜನೆಗೆ ಸಹಕಾರಿ ಸಂಘಗಳ ಬೆಂಬಲವೂ ಬೇಕು ಎಂದು ಒತ್ತಿ ಹೇಳಿದರು. ಕೃಷಿಯಲ್ಲಿ ರಾಸಾಯನಿಕಗಳನ್ನು ಬಳಸದಂತೆ ಪ್ರತಿ ಜಿಲ್ಲೆಯಲ್ಲಿ 5 ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವಂತೆ ಸಹಕಾರಿ ಸಂಘಗಳಿಗೆ ತಿಳಿಸಿದರು.

'ತ್ಯಾಜ್ಯವನ್ನು ಸಂಪತ್ತಾಗಿ' ಪರಿವರ್ತಿಸಲು ದೇಶಾದ್ಯಂತ ಕೆಲಸ ಮಾಡುತ್ತಿರುವ ಗೋಬರ್ಧನ್ ಯೋಜನೆಯಡಿ ಹಸುವಿನ ಸಗಣಿ ಮತ್ತು ತ್ಯಾಜ್ಯವನ್ನು ವಿದ್ಯುತ್ ಮತ್ತು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸುವ ಘಟಕಗಳ ಬೃಹತ್ ಜಾಲವನ್ನು ಸರ್ಕಾರವು ಸಿದ್ಧಪಡಿಸುತ್ತಿದೆ. ದೇಶದಲ್ಲಿ ಇದುವರೆಗೆ 50ಕ್ಕೂ ಹೆಚ್ಚು ಬಯೋಗ್ಯಾಸ್ ಸ್ಥಾವರಗಳನ್ನು ಹಲವು ಕಂಪನಿಗಳು ನಿರ್ಮಿಸಿವೆ, ಸಹಕಾರ ಸಂಘಗಳು ಮುಂದೆ ಬಂದು ಗೋಬರ್ಧನ್ ಘಟಕಗಳಿಗೆ ಬೆಂಬಲ ನೀಡುವಂತೆ ಕೋರಿದರು.

ದಾಸ್ತಾನು ವಿಷಯದ ಬಗ್ಗೆಯೂ ಪ್ರಧಾನಿ ಮಾತನಾಡಿದರು. ಶೇಖರಣಾ ಸೌಲಭ್ಯಗಳ ಕೊರತೆಯು ಬಹಳ ಹಿಂದಿನಿಂದಲೂ ಆಹಾರ ಭದ್ರತೆಗೆ ದೊಡ್ಡ ಸವಾಲಾಗಿದೆ. ನಾವು ಉತ್ಪಾದಿಸುವ ಧಾನ್ಯದಲ್ಲಿ ಶೇ 50ಕ್ಕಿಂತ ಕಡಿಮೆ ಪ್ರಮಾಣದಷ್ಟನ್ನು ಮಾತ್ರ ಸಂಗ್ರಹಿಸಲು ಸಾಧ್ಯವಾಗುತ್ತಿದೆ. ಕೇಂದ್ರ ಸರ್ಕಾರವು ವಿಶ್ವದ ಅತಿದೊಡ್ಡ ದಾಸ್ತಾನು ಯೋಜನೆಯನ್ನು ಹೊರತಂದಿದೆ ಮತ್ತು ಕಳೆದ ಹಲವು ದಶಕಗಳಲ್ಲಿದ್ದ ಒಟ್ಟು 1400 ಲಕ್ಷ ಟನ್‌ಗಳಿಗೆ ಹೋಲಿಸಿದರೆ ಮುಂದಿನ ಐದು ವರ್ಷಗಳಲ್ಲೆ 700 ಲಕ್ಷ ಟನ್ ಸಂಗ್ರಹಣಾ ಸಾಮರ್ಥ್ಯವನ್ನು ರಚಿಸಲು ಯೋಜಿಸಲಾಗಿದೆ ಎಂದು ಅವರು ಹೇಳಿದರು.

ನವ ಭಾರತದಲ್ಲಿ ಸಹಕಾರಿ ಸಂಸ್ಥೆಗಳು ದೇಶದ ಆರ್ಥಿಕ ಮೂಲದ ಪ್ರಬಲ ಮಾಧ್ಯಮವಾಗಲಿವೆ ಎಂದು ವಿಶ್ವಾಸ ವ್ಯಕ್ತ ಪಡಿಸಿದ ಪ್ರಧಾನ ಮಂತ್ರಿಗಳು ಸಹಕಾರಿ ಸಂಸ್ಥೆಗಳು ಸಾಮಾಜಿಕ ನೀತಿ ಮತ್ತು ರಾಷ್ಟ್ರೀಯ ನೀತಿಯ ವಾಹಕಗಳಾಗಬೇಕು ಎಂದು ಕರೆ ನೀಡಿದರು.

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಶ್ರೀ ಅಮಿತ್ ಶಾ, ಕೇಂದ್ರ ಸಹಕಾರ ರಾಜ್ಯ ಸಚಿವ ಶ್ರೀ ಬಿ ಎಲ್ ವರ್ಮಾ, ಏಶಿಯಾ ಪೆಸಿಫಿಕ್ ಇಂಟರ್ನ್ಯಾಷನಲ್ ಕೋಆಪರೇಟಿವ್ ಅಲೈಯನ್ಸ್ ಅಧ್ಯಕ್ಷ ಡಾ ಚಂದ್ರಪಾಲ್ ಸಿಂಗ್ ಯಾದವ್ ಮತ್ತು ಭಾರತ ರಾಷ್ಟ್ರೀಯ ಸಹಕಾರ ಒಕ್ಕೂಟದ ಅಧ್ಯಕ್ಷ ಶ್ರೀ ದಿಲೀಪ್ ಸಂಘಾನಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಮೂಲ : ಪಿಐಬಿ**

Scanned with ACE Scanner

Yojana(Kannada) July 2023 Date of Publication 3rd July 2023 Date of Posting 10th/15th July 2023 ISSN 0971-87
"Registered" Reg.No.RNP/KA/BGS/2269/2022-2024 Total No.of Pages : 72+4 Cover Pages Regd.No. RNI 43034/19
"Licensed to Post without Pre-payment" License No. PMG BG/WPP/388/2022-2024 YOJANA Kannada Monthly Posted at Bengaluru PSO BG-5600


# ಪ್ರಕಾಶನ ವಿಭಾಗದ ಪುಸ್ತಕಗಳು




ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯ

ಖರೀದಿಸಲು
ಸಂಪರ್ಕಿಸಬೇಕಾದ ವಿಳಾಸ

## ಯೋಜನಾ – ಕನ್ನಡ

ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034.
ದೂರವಾಣಿ : 080–25537244
E-mails : kannada-yojana@gov.in
yojanakannada@yahoo.com
Website : www.publicationsdivision.nic.in


Printed & Published by **Anupama Bhatnagar,** Director General, Publications Division, Ministry of Information & Broadcasting
Published at Publications Division 1st Floor, 'F' Wing, Kendriya Sadana, Koramangala, Bengaluru-560 034. Ph : 080 2553 7244
Designed & Printed at Omkar Offset Printers, No. 3/3, 1st Main Road, New Tharagupet, Bengaluru - 560 002. Ph : 080 2670 8186
Chief Editior: Manogyan Rani Pal, Editor : Yashwant Shehnai

Scanned with ACE Scanner